ಗುರುವಾರ, ಏಪ್ರಿಲ್ 21, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕಹಳೆ...

ಅಮೃತ್‌ಸರದ ಸ್ವರ್ಣಮಂದಿರದಲ್ಲಿ ಬುಧವಾರ ಸಿಖ್ ಗುರು ತೇಜ್ ಬಹದ್ದೂರ್ ಜಯಂತಿ ಆಚರಣೆಯಲ್ಲಿ ಭಕ್ತರು ಧಾರ್ಮಿಕ ಧ್ವಜ ಹಿಡಿದು, ಕಹಳೆ ಮೊಳಗಿಸಿದರು

FOREVERMARK
TRADITIONAL SETTING COLLECTION

A LITTLE MODERN. A LITTLE TRADITIONAL.
A LOT LIKE YOU.

DE BEERS
FOREVERMARK
A DIAMOND IS FOREVER

FOREVERMARK.COM

Bengaluru: De Beers Forevermark Boutique: JP Nagar, 29908600/01 • De Beers Forevermark Boutique: Whitefield, Phoenix Market City, 7625035227 • Dickenson Road: Joyalukkas, 25093916 - Malabar Gold & Diamonds, 41283916 • HSR Layout: Neelkanth Jewellers, 46963800 • Jayanagar: C. Krishniah Chetty & Sons, 9108178103 - GRT Jewellers, 26651515 - Joyalukkas, 26634448 - Malabar Gold & Diamonds, 40689916 • Koramangala: Malabar Gold & Diamonds, 45522916 - Senco Gold and Diamonds, 41141197 • Lavelle Road: Apranje Jewellers, 22121819 - PMJ Jewels, 7022603885 • Main Guard Cross Road: C. Krishniah Chetty & Sons, 9686101869 • Malleshwaram: C. Krishniah Chetty Jewellers on Margosa, 9845187406 - GRT Jewellers, 23460096 • M.G. Road: Joyalukkas, 25589916 - Malabar Gold & Diamonds , 69129916 • Residency Cross Road, Next to Mayo Hall: Abaran Timeless Jewellery, 25328600 - Richmond Road: Neelkanth Jewellers, 22278846 • West of Chord Road, Opp. ISKCON Temple: Abaran Timeless Jewellery, 23598600 | Mangalore: Falnir Road: TDF - The Diamond Factory, 9972548543 • KSR Road: SL Shet Jewellers and Diamond House, 0824 2440085 | Mysuru: Temple Road: Tholasi Jewels, 0821 4191926

© Forevermark Limited 2021. Forevermark™, ◇®, De Beers are Trade Marks of The De Beers Group.

ಗುರುವಾರ, ಏಪ್ರಿಲ್ 21, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 110 | ಪುಟ 18

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಆಳ-ಅಗಲ: ಹುಬ್ಬಳ್ಳಿ-ಧಾರವಾಡ ಪಾಲಿಕೆ ವಿಭಜನೆಗೆ ಕೂಗು

ಅಪಘಾತ ಸ್ಥಳದಲ್ಲೇ ಆರು ಸ್ನೇಹಿತರ ಸಾವು 5

ಗುಜರಾತ್‌ಗೆ ಇಂದು ಬ್ರಿಟನ್ ಪ್ರಧಾನಿ 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
57,037 ▲	17,136 ▲	₹54,280 (ಬೆಂಗಳೂರು) ▼	₹72,200 (ಬೆಂಗಳೂರು) ▼	76.30 ▲

ಕೋರ್ಟ್ ಸೂಚನೆ ಬಳಿಕವೂ ಜಹಾಂಗೀರ್‌ಪುರಿಯಲ್ಲಿ 90 ನಿಮಿಷ ಕಾರ್ಯಾಚರಣೆ

‘ಸುಪ್ರೀಂ’ ಆದೇಶಕ್ಕೆ ಜಗ್ಗದೆ ನೆಲಸಮ

ಪ್ರಜಾವಾಣಿ ವಾರ್ತೆ

ನವದೆಹಲಿ: ಇದೇ 16ರಂದು ಹಿಂಸಾಚಾರ ನಡೆದ ಜಹಾಂಗೀರ್‌ಪುರಿಯ ಮಸೀದಿಯ ಆವರಣ ಗೋಡೆ ಮತ್ತು ಸುತ್ತಲೂ ಇದ್ದ ಕೆಲವು ಕಟ್ಟಡಗಳನ್ನು ಉತ್ತರ ದೆಹಲಿ ಮಹಾನಗರಪಾಲಿಕೆಯು (ಎನ್‌ಡಿಎಂಸಿ) ಬುಲ್ಡೋಜರ್ ಬಳಸಿ ಬುಧವಾರ ನೆಲಸಮ ಮಾಡಿದೆ.

ಬಿಜೆಪಿ ಆಳ್ವಿಕೆ ಇರುವ ಉತ್ತರ ಪ್ರದೇಶ, ಮಧ್ಯಪ್ರದೇಶ ಮತ್ತು ಗುಜರಾತ್‌ನಲ್ಲಿ ಇದೇ ರೀತಿಯ ಕಾರ್ಯಾಚರಣೆ ಈ ಹಿಂದೆ ನಡೆದಿತ್ತು. ಎನ್‌ಡಿಎಂಸಿಯಲ್ಲಿ ಬಿಜೆಪಿ ಆಳ್ವಿಕೆ ಇದೆ. ಜಹಾಂಗೀರ್‌ಪುರಿ ಮುಸ್ಲಿಮರೇ ಹೆಚ್ಚಾಗಿರುವ ಪ್ರದೇಶ.

ಜಹಾಂಗೀರ್‌ಪುರಿ ಪ್ರದೇಶದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಸುಪ್ರೀಂ ಕೋರ್ಟ್ ಆದೇಶ ನೀಡಿದ ನಂತರವೂ 90 ನಿಮಿಷ ಕಾರ್ಯಾಚರಣೆ ಮುಂದುವರಿಯಿತು.

ಗುರುವಾರದವರೆಗೆ ಯಥಾಸ್ಥಿತಿ ಕಾಯ್ದುಕೊಳ್ಳಿ, ಗುರುವಾರ ಪ್ರಕರಣವನ್ನು ವಿಚಾರಣೆಗೆ ಎತ್ತಿಕೊಳ್ಳಲಾಗುವುದು ಎಂದು ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ನೇತೃತ್ವದ ಪೀಠವು ಆದೇಶ ನೀಡಿತು. ಕೋರ್ಟ್ ಆದೇಶದ ಬಳಿಕವೂ ನೆಲಸಮ ಕಾರ್ಯಾಚರಣೆಯನ್ನು ನಿಲ್ಲಿಸಿಲ್ಲ ಎಂಬುದನ್ನು ಅರ್ಜಿದಾರರ ಪರ ವಕೀಲ ದುಷ್ಯಂತ್ ದವೆ ಅವರು ಪೀಠದ ಗಮನಕ್ಕೆ ತಂದರು.

‘ಕೋರ್ಟ್ ಆದೇಶವು ಅಧಿಕೃತವಾಗಿ ಸಿಕ್ಕಿಲ್ಲ. ಹಾಗಾಗಿ, ನೆಲಸಮ ಕಾರ್ಯಾಚರಣೆ ನಿಲ್ಲಿಸಲಾಗದು ಎಂದು ಅಧಿಕಾರಿಗಳು ಹೇಳಿದ್ದಾರೆ. ಪೊಲೀಸ್ ಆಯುಕ್ತರು, ಮೇಯರ್ ಮತ್ತು ಎನ್‌ಡಿಎಂಸಿ ಆಯುಕ್ತರಿಗೆ ರಿಜಿಸ್ಟ್ರಾರ್ ಮೂಲಕ ಆದೇಶ ತಲುಪಿಸಬೇಕು’ ಎಂದು ದವೆ ಹೇಳಿದರು.

ಆದೇಶವನ್ನು ಸಂಬಂಧಪಟ್ಟವರಿಗೆ ತಕ್ಷಣ ತಲುಪಿಸುವಂತೆ ಮುಖ್ಯ ನ್ಯಾಯಮೂರ್ತಿ ಅವರು ಕೋರ್ಟ್‌ನ ರಿಜಿಸ್ಟ್ರಾರ್‌ಗೆ ಸೂಚಿಸಿದರು.

ಅದಕ್ಕೂ ಮೊದಲು, ಒತ್ತುವರಿ ತೆರವು ಕಾರ್ಯಾಚರಣೆಗೆ 5ರಿಂದ 15 ದಿನಗಳ ನೋಟಿಸ್ ನೀಡಬೇಕು. ಆದರೆ, ಜಹಾಂಗೀರ್‌ಪುರಿ ಕಾರ್ಯಾಚರಣೆಗೆ ಮುನ್ನ ಯಾವುದೇ ನೋಟಿಸ್ ನೀಡಲಾಗಿಲ್ಲ. ಹಾಗಾಗಿ, ಈ ಕಾರ್ಯಾಚರಣೆಯು ಸಂವಿಧಾನಬಾಹಿರ ಮತ್ತು ಅಕ್ರಮ ಎಂದು ದವೆ ವಾದಿಸಿದ್ದರು.

ಹನುಮ ಜಯಂತಿ ಮೆರವಣಿಗೆ ಸಂದರ್ಭದಲ್ಲಿ ಶನಿವಾರ ಹಿಂಸಾಚಾರ ನಡೆದ ಸ್ಥಳದಲ್ಲಿಯೇ ಕಟ್ಟಡ ಧ್ವಂಸ ಕಾರ್ಯಾಚರಣೆ ನಡೆದಿದೆ. ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗ ದಳವು ಸಂಘಟಿಸಿದ್ದ ಮೆರವಣಿಗೆ ಸಂದರ್ಭದಲ್ಲಿ ಸಂಘರ್ಷ ಏರ್ಪಟ್ಟಿತ್ತು. ಈ ಮೆರವಣಿಗೆಗೆ ಅನುಮತಿ ಪಡೆದಿರಲಿಲ್ಲ ಎಂದು ಪೊಲೀಸರು ಹೇಳಿದ್ದಾರೆ.

ಉತ್ತರ ಪ್ರದೇಶ, ಗುಜರಾತ್ ಮತ್ತು ಮಧ್ಯಪ್ರದೇಶದಲ್ಲಿ ರಾಮ ನವಮಿ ಮೆರವಣಿಗೆ ಸಂದರ್ಭದಲ್ಲಿ ಹಿಂಸಾಚಾರ ನಡೆದ ಸ್ಥಳಗಳಲ್ಲಿ ಕೂಡ ಇದೇ ರೀತಿಯ ನೆಲಸಮ ಕಾರ್ಯಾಚರಣೆಯನ್ನು ಅಲ್ಲಿನ ನಗರ ಸ್ಥಳೀಯ ಸಂಸ್ಥೆಗಳು ನಡೆಸಿವೆ.

ಜಹಾಂಗೀರ್‌ಪುರಿಯಲ್ಲಿ ಬೆಳಿಗ್ಗೆ 10 ಗಂಟೆಯ ಹೊತ್ತಿಗೆ ಕಾರ್ಯಾಚರಣೆ ಆರಂಭಿಸಲಾಯಿತು. ಭಾರಿ ಪೊಲೀಸ್ ಬಂದೋಬಸ್ತ್‌ನಲ್ಲಿ ಕಾರ್ಯಾಚರಣೆ ನಡೆಯಿತು. ಕಟ್ಟಡ ತೆರವಿಗೆ ಮುನ್ನ ಪೊಲೀಸರು ಪಥಸಂಚಲನವನ್ನೂ ನಡೆಸಿದರು. ಪರಿಸ್ಥಿತಿಯ ಮೇಲೆ ನಿಗಾ ಇರಿಸಲು ಡ್ರೋನ್ ಅನ್ನು ಕೂಡ ಬಳಸಲಾಗಿತ್ತು.

ಮಂಗಳವಾರವೇ ಕಾರ್ಯಾಚರಣೆ ಆರಂಭಿಸಲು ಎನ್‌ಡಿಎಂಸಿ ಬಯಸಿತ್ತು. ಆದರೆ, ಪೊಲೀಸ್ ಸಿಬ್ಬಂದಿ ಲಭ್ಯವಾಗದ ಕಾರಣ ಕಾರ್ಯಾಚರಣೆಯನ್ನು ಬುಧವಾರಕ್ಕೆ ಮುಂದೂಡಬೇಕಾಯಿತು ಎಂದು ಎನ್‌ಡಿಎಂಸಿ ಮೇಯರ್ ಹೇಳಿದ್ದಾರೆ.

ಮತ್ತೊಂದು ಸುದ್ದಿ 8

ಜಹಾಂಗೀರ್‌ಪುರಿಯಲ್ಲಿ ನಡೆದ ನೆಲಸಮ ಕಾರ್ಯಾಚರಣೆ

> ಕಾನೂನುಬಾಹಿರ ತೆರವು ಕಾರ್ಯಾಚರಣೆಗಳ ಮೂಲಕ ಕಾನೂನುಗಳು ಮತ್ತು ಸಂವಿಧಾನವನ್ನು ನೆಲಸಮ ಮಾಡಲಾಗಿದೆ. ಕನಿಷ್ಠ, ಸುಪ್ರೀಂ ಕೋರ್ಟ್ ಮತ್ತು ಅದರ ಆದೇಶವನ್ನಾದರೂ ನೆಲಸಮ ಮಾಡಬಾರದು
> **ಬೃಂದಾ ಕಾರಟ್,** ಸಿಪಿಎಂ ನಾಯಕಿ

> ಇದು ಸಾಂವಿಧಾನಿಕ ಮೌಲ್ಯಗಳ ನೆಲಸಮ. ಇದು ಬಡವರು ಮತ್ತು ಅಲ್ಪಸಂಖ್ಯಾತರ ಮೇಲೆ ಸರ್ಕಾರ ನಡೆಸಿದ ಹಲ್ಲೆ. ಬಿಜೆಪಿಯವರು ಮೊದಲು ತಮ್ಮ ಹೃದಯದಲ್ಲಿನ ದ್ವೇಷವನ್ನು ನೆಲಸಮ ಮಾಡಿಕೊಳ್ಳಬೇಕು
> **ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

> ದೇಶದೆಲ್ಲೆಡೆ ದಂಗೆಗಳು ನಡೆಯುತ್ತಿವೆ. ಬಿಜೆಪಿಯೇ ಈ ದಂಗೆಗಳನ್ನು ಮಾಡಿಸುತ್ತಿದೆ. ಬಿಜೆಪಿಯ ಕೇಂದ್ರ ಕಚೇರಿಯನ್ನು ನೆಲಸಮ ಮಾಡಿಬಿಡಿ, ದಂಗೆಗಳು ನಿಂತುಹೋಗುತ್ತವೆ
> **ಅತಿಶಿ ಮರ್ಲೇನಾ,** ಎಎಪಿ ನಾಯಕಿ

> ಅಪರಾಧ ಮತ್ತು ಸಂಚಿನ ಆಧಾರದಲ್ಲಿ ಕ್ರಮ ಕೈಗೊಳ್ಳಲಾಗಿದೆಯೇ ಹೊರತು ಜಾತಿ ಮತ್ತು ಸಮುದಾಯದ ಆಧಾರದಲ್ಲಿ ಅಲ್ಲ. ತಪ್ಪಿತಸ್ಥರನ್ನು ಅವರು ಮಾಡಿದ ಅಪರಾಧದ ಆಧಾರದಲ್ಲಿ ಬಂಧಿಸಲಾಗಿದೆ. ಜಾತಿಯ ಆಧಾರದಲ್ಲಿ ಅಲ್ಲ
> **ಮುಖ್ತಾರ್ ಅಬ್ಬಾಸ್ ನಕ್ವಿ,** ಕೇಂದ್ರ ಸಚಿವ

‘ಕೆಡಹುವ ಕೆಲಸ ಬೇಡ’

ಜಮೀಯತ್ ಉಲೇಮಾ ಎ ಹಿಂದ್ ಮತ್ತೊಂದು ಅರ್ಜಿಯನ್ನು ಸಲ್ಲಿಸಿದೆ. ಅಪರಾಧ ತನಿಖೆಯ ಭಾಗವಾಗಿ ಆರೋಪಿಗಳ ಕಟ್ಟಡಗಳನ್ನು ಕೆಡಹುವ ಕ್ರಮವನ್ನು ಕೈಬಿಡಬೇಕು ಎಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಸೂಚನೆ ನೀಡಬೇಕು ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ರಾಮನವಮಿ ಆಚರಣೆಯ ಸಂದರ್ಭದಲ್ಲಿ ಮಧ್ಯ ಪ್ರದೇಶದಲ್ಲಿ ನಡೆದ ಹಿಂಸಾಚಾರದ ಆರೋಪಿಗಳ ಕಟ್ಟಡಗಳನ್ನು ಇತ್ತೀಚೆಗೆ ನೆಲಸಮ ಮಾಡಲಾಗಿತ್ತು. ಆರೋಪಿಗಳ ಕಟ್ಟಡ ಧ್ವಂಸ ಮಾಡುವುದಕ್ಕೆ ಅಪರಾಧ ಕಾನೂನಿನಲ್ಲಿ ಅವಕಾಶವೇ ಇಲ್ಲ ಎಂದು ಅರ್ಜಿಯಲ್ಲಿ ವಾದಿಸಲಾಗಿದೆ.

‘ಕಮಿಷನ್ ದಂಧೆ ಕಡಿವಾಣಕ್ಕೆ ಉನ್ನತ ಸಮಿತಿ’

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ‘ಅಭಿವೃದ್ಧಿ ಕಾಮಗಾರಿಗಳ ಗುತ್ತಿಗೆಯಲ್ಲಿ ಭ್ರಷ್ಟಾಚಾರ, ಕಮಿಷನ್ ದಂಧೆಗೆ ಕಡಿವಾಣ ಹಾಕಲು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಒಳಗೊಂಡ ಉನ್ನತಮಟ್ಟದ ಸಮಿತಿ ರಚಿಸಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

‘ನಿವೃತ್ತ ನ್ಯಾಯಮೂರ್ತಿಗಳ ಜತೆಗೆ, ಆರ್ಥಿಕ, ತಾಂತ್ರಿಕ ತಜ್ಞರು ಸಮಿತಿಯಲ್ಲಿ ಇರುತ್ತಾರೆ. ಆರಂಭದಲ್ಲಿ ₹ 50 ಕೋಟಿಗೂ ಅಧಿಕ ವೆಚ್ಚದ ಕಾಮಗಾರಿಗಳ ಮೇಲೆ ನಿಗಾವಹಿಸಲಿದೆ. ಕಾಮಗಾರಿಯ ಕ್ರಿಯಾಯೋಜನೆ, ಅಂದಾಜು ಮೊತ್ತ, ನಿಗದಿತ ವೆಚ್ಚಗಳನ್ನು ಪರಿಶೀಲಿಸಿ 15 ದಿನಗಳ ಒಳಗೆ ಅನುಮೋದನೆ ನೀಡಲಿದೆ’ ಎಂದು ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಈ ಸಮಿತಿಯು ಅನುಮೋದನೆ ನೀಡಿದ ನಂತರವೇ ಕಾಮಗಾರಿ ಆರಂಭಿಸಬೇಕು. ಕಾರ್ಯಭಾರದ ಹೊರೆ ಹೆಚ್ಚಾದರೆ ಮತ್ತೊಂದು ಪರ್ಯಾಯ ಸಮಿತಿಗೆ ಅನುಮತಿ ನೀಡಲಾಗುವುದು. ಕಡಿಮೆ ಮೊತ್ತದ ಕಾಮಗಾರಿಗಳಿಗೆ ಜಿಲ್ಲಾ ಮಟ್ಟದಲ್ಲಿ ಸಮಿತಿ ರಚಿಸುವ ಕುರಿತು ಮುಂದಿನ ದಿನಗಳಲ್ಲಿ ನಿರ್ಧರಿಸಲಾಗುವುದು’ ಎಂದು ಅವರು ಸುಳಿವು ನೀಡಿದರು.

ಮೌಖಿಕ ಆದೇಶಕ್ಕೆ ಅಧಿಕಾರಿಗಳೇ ಹೊಣೆ: ‘ನಗರ, ಗ್ರಾಮೀಣ ಪ್ರದೇಶ ಸೇರಿ ಯಾವುದೇ ಕಾಮಗಾರಿ ಕೈಗೊಂಡರೂ ಕಾರ್ಯಾದೇಶ ಕಡ್ಡಾಯ. ಗುತ್ತಿಗೆದಾರ ಸಂತೋಷ್ ಪಾಟೀಲ ಪ್ರಕರಣ ಒಂದು ಪಾಠ’ ಎಂದು ಹೇಳಿದರು.

3D ನೇ ಪುಟ ನೋಡಿ

ಮಾಹಿತಿ ಆಯುಕ್ತರಾಗಿ ಮೂವರ ನೇಮಕ

ಬೆಂಗಳೂರು: ಕರ್ನಾಟಕ ರಾಜ್ಯ ಮಾಹಿತಿ ಆಯೋಗಕ್ಕೆ ಮೂವರು ಆಯುಕ್ತರನ್ನು ನೇಮಕ ಮಾಡಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಆದೇಶ ಹೊರಡಿಸಿದ್ದಾರೆ.

ಸಾರಿಗೆ ಇಲಾಖೆ ನಿವೃತ್ತ ಅಧಿಕಾರಿ ಮೈಸೂರಿನ ಎಚ್.ಸಿ.ಸತ್ಯನ್ ಮತ್ತು ನಿವೃತ್ತ ಐಎಎಸ್ ಅಧಿಕಾರಿ ಎಸ್.ಬಿ.ಬೊಮ್ಮನಹಳ್ಳಿ ಅವರನ್ನು ಬೆಂಗಳೂರು ಕೇಂದ್ರ ಕಚೇರಿಯ ಮಾಹಿತಿ ಆಯುಕ್ತರನ್ನಾಗಿ ಮತ್ತು ಉದ್ಯಮಿ ರವೀಂದ್ರ ಗುರುನಾಥ್ ಡಾಕಪ್ಪ ಅವರನ್ನು ಕಲಬುರಗಿ ವಿಭಾಗದ ಮಾಹಿತಿ ಆಯುಕ್ತರನ್ನಾಗಿ ನೇಮಕ ಮಾಡಲಾಗಿದೆ.

ಒಳ ಪುಟಗಳು

ಬ್ಯಾಂಕ್ ವಹಿವಾಟು ಪತ್ತೆಗೆ ಮುಂದಾದ ಸಿಐಡಿ 6

ಹುಬ್ಬಳ್ಳಿ ಗಲಭೆ: ದೂರುದಾರನ ವಿರುದ್ಧವೂ ಎಫ್‌ಐಆರ್ 6

ಹಣದುಬ್ಬರ ದರ ಏರಿಕೆ ಅತಿಯಾಗಿಲ್ಲ: ನಿರ್ಮಲಾ ಸೀತಾರಾಮನ್ 11

‘ಕಮಿಷನ್ ಇಲ್ಲ: ಭಿಕ್ಷೆ ಬೇಡಿ ಮಠ ಕಟ್ಟುತ್ತೇವೆ’ 5

ಚಿನಕುರಳಿ

ಪ್ರಕಾಶ್ ಶೆಟ್ಟಿ

ಗುಣಮಟ್ಟ ಪರಿಶೀಲನೆಗೆ ತಜ್ಞರ ಸಮಿತಿ ನೇಮಿಸಿಲ್ಲ: ಹೆದ್ದಾರಿ ಪ್ರಾಧಿಕಾರ

ತುಮಕೂರು ರಸ್ತೆ: ತಜ್ಞರ ಸಮಿತಿ ವರದಿ ಇಲ್ಲದೇ ಮೇಲ್ಸೇತುವೆ ಬಂದ್?

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಬಹುತೇಕ ಜಿಲ್ಲೆಗಳಿಗೆ ಸಂಪರ್ಕ ಕಲ್ಪಿಸುವ ತುಮಕೂರು ರಸ್ತೆ ಮೇಲ್ಸೇತುವೆ (ಶಿವಕುಮಾರ ಸ್ವಾಮೀಜಿ ಮೇಲ್ಸೇತುವೆ) ಸುರಕ್ಷತೆ ಮತ್ತು ಗುಣಮಟ್ಟ ಪರಿಶೀಲನೆಗೆ ಯಾವುದೇ ತಜ್ಞರ ಸಮಿತಿಯನ್ನೂ ನೇಮಿಸಿಲ್ಲ!

ಹೌದು... ಹೀಗೆಂದು ಸ್ವತಃ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ತಿಳಿಸಿದೆ. ಸುರಕ್ಷತೆ ಮತ್ತು ಗುಣಮಟ್ಟ ಸಂಬಂಧ ತಜ್ಞರ ಸಮಿತಿ ನೀಡಿದ್ದ ವರದಿಯ ದೃಢೀಕೃತ ಪ್ರತಿ ನೀಡುವಂತೆ ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷದ ಎಲ್. ಜೀವನ್ ಮಾಹಿತಿ ಹಕ್ಕು ಕಾಯ್ದೆಯಡಿ ಕೇಳಿದ್ದರು.

ಇದಕ್ಕೆ ಉತ್ತರ ನೀಡಿರುವ ಎನ್‌ಎಚ್‌ಎಐ ಪ್ರಾದೇಶಿಕ ಕಚೇರಿಯ ಯೋಜನಾ ನಿರ್ದೇಶಕ ಎ.ಕೆ.ಜನ್‌ಬಾಜ್, ‘ಈ ರೀತಿಯ ಯಾವುದೇ ಸಮಿತಿಯನ್ನೂ ನೇಮಿಸಿಲ್ಲ’ ಎಂದು ತಿಳಿಸಿದ್ದಾರೆ.

ಪ್ರತಿ ಮಳೆಗಾಲದ ಬಳಿಕ ಸಾಮಾನ್ಯವಾಗಿ ಮೇಲ್ಸೇತುವೆ ಸ್ಥಿತಿಗತಿ ಪರಿಶೀಲನೆಯನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ನಡೆಸುತ್ತಾರೆ. ಅದರಂತೆ ಜ.25ರಂದು ಪರಿಶೀಲನೆ ನಡೆಸುತ್ತಿದ್ದಾಗ ಈ ದೋಷ ಪತ್ತೆಯಾಗಿ 56 ದಿನಗಳ ಕಾಲ ವಾಹನ ಸಂಚಾರ ನಿರ್ಬಂಧಿಸಲಾಗಿತ್ತು. ಎಲ್ಲಾ ವಾಹನಗಳು ಮೇಲ್ಸೇತುವೆ ಕೆಳಗಿನ ರಸ್ತೆಯಲ್ಲೇ ಸಂಚರಿಸಬೇಕಿದ್ದರಿಂದ ವಾಹನಗಳು ಗಂಟೆಗಟ್ಟಲೆ ದಟ್ಟಣೆಯಲ್ಲಿ ಸಿಲುಕುತ್ತಿದ್ದವು.

ಈ ವಿಷಯವನ್ನು ಕಳೆದ ವಿಧಾನಸಭೆ ಅಧಿವೇಶನದಲ್ಲಿ ಜೆಡಿಎಸ್ ಶಾಸಕ ಆರ್.ಮಂಜುನಾಥ್ ಪ್ರಸ್ತಾಪಿಸಿದ್ದರು. ಇದಕ್ಕೆ ಉತ್ತರ ನೀಡಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ‘ಈ ಮೇಲ್ಸೇತುವೆಯ 102 ಮತ್ತು 103ನೇ ಕಂಬಗಳ ವ್ಯಾಪ್ತಿಯಲ್ಲಿ ಮೇಲ್ಸೇತುವೆ ಮೇಲೆ ಭಾರಿ ವಾಹನಗಳ ಸಂಚಾರಕ್ಕೆ ಸುರಕ್ಷಿತವಲ್ಲ ಎಂದು ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ವರದಿ ನೀಡಿದೆ’ ಎಂದು ತಿಳಿಸಿದ್ದರು.

‘ಮೇಲ್ಸೇತುವೆ ಕಳಪೆ ಕಾಮಗಾರಿಯಿಂದ ಕೂಡಿದ್ದು, ದೋಷದಿಂದ ಕೂಡಿರುವ ಕಂಬಗಳ ಮರು ನಿರ್ಮಾಣಕ್ಕೆ ಸಲಹೆ ನೀಡಿದೆ’ ಎಂದು ಹೇಳಿದ್ದರು.

ಹಲವು ಅನುಮಾನ: ‘ಆ ವರದಿ ನೀಡುವಂತೆ ಪ್ರಾಧಿಕಾರದ ಪ್ರಾದೇಶಿಕ ಕಚೇರಿಗೆ ನಾವು ಅರ್ಜಿ ಸಲ್ಲಿಸಿದ್ದೆವು. ಆದರೆ ತಜ್ಞರ ಸಮಿತಿಯನ್ನೇ ನೇಮಿಸಿಲ್ಲ ಎಂಬ ಉತ್ತರ ಬಂದಿದೆ. ಇದನ್ನು ನೋಡಿದರೆ ಹಲವು ಅನುಮಾನಗಳು ವ್ಯಕ್ತವಾಗುತ್ತಿವೆ’ ಎಂದು ಕೆಆರ್‌ಎಸ್ ಪಕ್ಷದ ಪ್ರಧಾನ ಕಾರ್ಯದರ್ಶಿ ಸಿ.ಎನ್. ದೀಪಕ್ ಹೇಳಿದರು.

‘ಸಂಚಾರ ನಿರ್ಬಂಧಿಸಲು ತಾಂತ್ರಿಕ ಕಾರಣಗಳೇನು, ಸೇತುವೆಯ ಸ್ಥಿತಿಗತಿ ಏನು ಎಂಬುದನ್ನು ತಿಳಿದುಕೊಳ್ಳುವ ಪ್ರಯತ್ನ ನಮ್ಮದಾಗಿತ್ತು. ಸಮಿತಿಯನ್ನೇ ನೇಮಿಸಿಲ್ಲ, ವರದಿಯೂ ಇಲ್ಲ ಎಂಬ ಉತ್ತರ ಬಂದಿದೆ. ಕಳಪೆ ಕಾಮಗಾರಿ ವಿಷಯ ಗಂಭೀರವಾಗಿ ಇರುವುದರಿಂದ ವರದಿ ಇದ್ದರೂ ಎನ್‌ಎಚ್‌ಎಐ ಮುಚ್ಚಿಡುತ್ತಿರಬಹುದು ಅಥವಾ ಸುಳ್ಳು ಹೇಳಿ ಜನರಿಗೆ ಮೋಸ ಮಾಡುತ್ತಿರಬಹುದು. ಒಟ್ಟಾರೆ ಎಲ್ಲವೂ ಅಸ್ಪಷ್ಟ. ಜನ ಮಾತ್ರ ಸಂಚಾರ ದಟ್ಟಣೆಯಲ್ಲಿ ಸಿಲುಕಿ ಪರದಾಡುವುದು ಮತ್ತು ಸುಂಕ ಕಟ್ಟುವುದು ಮುಂದುವರಿದಿದೆ’ ಎಂದರು.

ಸದ್ಯಕ್ಕಿಲ್ಲ ಸಂಚಾರಕ್ಕೆ ಅವಕಾಶ

ಬೆಂಗಳೂರಿನಿಂದ ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕ, ಮಧ್ಯಕರ್ನಾಟಕ, ಕರಾವಳಿ ಹಾಗೂ ಮಲೆನಾಡಿನ ಪ್ರಮುಖ ಜಿಲ್ಲೆಗಳನ್ನು ಸಂಪರ್ಕಿಸುವ ರಸ್ತೆಯ ಮೇಲ್ಸೇತುವೆ ಇದಾಗಿದೆ. ಸದ್ಯ ಲಘು ವಾಹನಗಳ ಸಂಚಾರಕ್ಕೆ ಮಾತ್ರ ಅವಕಾಶ ಇದ್ದು, ಭಾರಿ ವಾಹನಗಳ ಸಂಚಾರಕ್ಕೆ ಸದ್ಯಕ್ಕೆ ಮುಕ್ತವಾಗುವ ಲಕ್ಷಣ ಕಾಣಿಸುತ್ತಿಲ್ಲ.

‘ಈ ವಿಷಯದ ಬಗ್ಗೆ ಪ್ರಾಧಿಕಾರದ ಕೇಂದ್ರ ಕಚೇರಿಗೆ ಮಾಹಿತಿ ರವಾನಿಸಿದ್ದೇವೆ. ಸೇತುವೆ ದುರಸ್ತಿ ಕಾಮಗಾರಿ ಯಾವಾಗ ಮುಗಿಯಲಿದೆ, ಭಾರಿ ವಾಹನಗಳ ಸಂಚಾರ ಯಾವಾಗ ಆರಂಭವಾಗಲಿದೆ ಎಂಬುದರ ಬಗ್ಗೆ ಕೇಂದ್ರ ಕಚೇರಿಯೇ ನಿರ್ಧಾರ ಕೈಗೊಳ್ಳಲಿದೆ. ಸ್ಥಳೀಯವಾಗಿ ನಾವು ಏನನ್ನೂ ಹೇಳಲು ಸಾಧ್ಯವಿಲ್ಲ’ ಎಂದು ಎನ್‌ಎಚ್‌ಎಐ ಪ್ರಾದೇಶಿಕ ಕಚೇರಿಯ ಹಿರಿಯ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ಸ್ಪಷ್ಟಪಡಿಸಿದರು.

ಪಿಎಸ್‌ಐ: ಸಿಐಡಿ ಎದುರು ಅಭ್ಯರ್ಥಿಗಳು ಹಾಜರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 545 ಪಿಎಸ್‌ಐ ನೇಮಕಾತಿ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಹೆಸರಿರುವ 50 ಅಭ್ಯರ್ಥಿಗಳು ಸಿಐಡಿ ಅಧಿಕಾರಿಗಳ ಎದುರು ಬುಧವಾರ ಹಾಜರಾದರು.

ಪಿಎಸ್‌ಐ ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮದ ಬಗ್ಗೆ ತನಿಖೆ ನಡೆಸುತ್ತಿರುವ ಸಿಐಡಿ ಅಧಿಕಾರಿಗಳು, ವಿಚಾರಣೆಗೆ ಬರುವಂತೆ ಅಭ್ಯರ್ಥಿಗಳಿಗೆ ಸೂಚಿಸಿದ್ದರು.

ರಾಜ್ಯದ ವಿವಿಧ ಜಿಲ್ಲೆಗಳ ನಿವಾಸಿಗಳಾಗಿರುವ ಅಭ್ಯರ್ಥಿಗಳು ನಗರದ ಕಾರ್ಲಟನ್ ಕಟ್ಟಡದಲ್ಲಿರುವ ಸಿಐಡಿ ಕಚೇರಿಗೆ ಹಾಜರಾದರು. ಬೆಳಿಗ್ಗೆ 10 ಗಂಟೆಯಿಂದ ಸಂಜೆಯವರೆಗೂ ಅಭ್ಯರ್ಥಿಗಳ ವಿಚಾರಣೆ ನಡೆಯಿತು.

ಮಧ್ಯಾಹ್ನ 1 ಗಂಟೆ ಸುಮಾರಿಗೆ 45 ಅಭ್ಯರ್ಥಿಗಳು ಮಾತ್ರ ವಿಚಾರಣೆಗೆ ಬಂದಿದ್ದರು. ಉಳಿದ ಐವರು ಗೈರಾಗಬಹುದೆಂದು ಅಧಿಕಾರಿಗಳು ಭಾವಿಸಿದ್ದರು. ಆದರೆ, ಐವರು ತಡವಾಗಿ ಕಚೇರಿಗೆ ಬಂದು ದಾಖಲೆ ಹಾಜರುಪಡಿಸಿದರು. ಇಬ್ಬರು ಪ್ರವೇಶ ಪತ್ರ ಕಳೆದುಕೊಂಡಿರುವುದಾಗಿ ಅಧಿಕಾರಿಗಳಿಗೆ ತಿಳಿಸಿದ್ದಾರೆಂದು ಗೊತ್ತಾಗಿದೆ.

‘ಅಭ್ಯರ್ಥಿಗಳ ಪ್ರವೇಶ ಪತ್ರ ಹಾಗೂ ಓಎಂಆರ್ ಕಾರ್ಬನ್ ಪ್ರತಿಗಳನ್ನು ಪರಿಶೀಲಿಸಲಾಗಿದೆ. ಅಗತ್ಯವಾದ ಹೇಳಿಕೆ ಪಡೆಯಲಾಗಿದೆ. ಎಲ್ಲ ಪ್ರಕ್ರಿಯೆಯನ್ನು ವಿಡಿಯೊ ಚಿತ್ರೀಕರಣ ಮಾಡಿಕೊಳ್ಳಲಾಗಿದೆ. ಅಗತ್ಯಬಿದ್ದರೆ ಮತ್ತೊಮ್ಮೆ ವಿಚಾರಣೆಗೆ ಕರೆಯಿಸುವುದಾಗಿ ಹೇಳಿ ಅಭ್ಯರ್ಥಿಗಳನ್ನು ವಾಪಸು ಕಳುಹಿಸಲಾಗಿದೆ’ ಎಂದು ಸಿಐಡಿ ಮೂಲಗಳು ಹೇಳಿವೆ.

ಮಾಹಿತಿ ಸಂಗ್ರಹ

ಪಿಎಸ್‌ಐ ಲಿಖಿತ ಪರೀಕ್ಷೆಗಳು ನಡೆದಿದ್ದ ರಾಜ್ಯದ ಎಲ್ಲ ಪರೀಕ್ಷಾ ಕೇಂದ್ರಗಳ ಬಗ್ಗೆ ಸಿಐಡಿ ಅಧಿಕಾರಿಗಳು ಮಾಹಿತಿ ಸಂಗ್ರಹಿಸುತ್ತಿದ್ದಾರೆ. ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿ ಹಾಗೂ ಪರೀಕ್ಷೆಯಲ್ಲಿ ಕೆಲಸ ಮಾಡಿದ್ದ ಸಿಬ್ಬಂದಿ ವಿವರ ಕಲೆಹಾಕುತ್ತಿದ್ದಾರೆ.

‘ಪರೀಕ್ಷಾ ಕೇಂದ್ರಗಳಲ್ಲೇ ಅಭ್ಯರ್ಥಿಗಳು ಅಕ್ರಮ ಎಸಗಿರುವ ಅನುಮಾನ ದಟ್ಟವಾಗಿದೆ. ಹೀಗಾಗಿ, ಪರೀಕ್ಷಾ ಕೇಂದ್ರಗಳ ಬಗ್ಗೆ ಮಾಹಿತಿ ಸಂಗ್ರಹಿಸಲು ಪ್ರತ್ಯೇಕ ತಂಡ ರಚಿಸಲಾಗಿದೆ’ ಎಂದು ಸಿಐಡಿ ಮೂಲಗಳು ಹೇಳಿವೆ.

ಡಿಕನ್ಸನ್ ರಸ್ತೆಯಲ್ಲಿ ಜೋಸ್ ಅಲುಕ್ಕಾಸ್ ಮಳಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಮುಖ ಚಿನ್ನಾಭರಣ ಕಂಪನಿಯಾಗಿರುವ ಜೋಸ್ ಅಲುಕ್ಕಾಸ್ ನಗರದ ಡಿಕನ್ಸನ್ ರಸ್ತೆಯಲ್ಲಿ ಶನಿವಾರ ಹೊಸ ಮಳಿಗೆ ತೆರೆಯಲಿದೆ. ಈ ಮಳಿಗೆಯಲ್ಲಿ ಬಿಐಎಸ್ ಹಾಲ್‌ಮಾರ್ಕ್ ಇರುವ ಚಿನ್ನದ ಆಭರಣಗಳು ಹಾಗೂ ಅಂತರರಾಷ್ಟ್ರೀಯ ಪ್ರಯೋಗಾಲಯಗಳಿಂದ ಪ್ರಮಾಣಪತ್ರ ಪಡೆದಿರುವ ವಜ್ರಗಳು ಇರಲಿವೆ ಎಂದು ಕಂಪನಿ ತಿಳಿಸಿದೆ.

ಆಕರ್ಷಕ ವಿನ್ಯಾಸದ ಪ್ಲಾಟಿನಂ ಆಭರಣಗಳು, ಮಳಿಗೆ ಆರಂಭದ ಕೆಲವು ವಿಶೇಷ ಕೊಡುಗೆಗಳು ಇರಲಿವೆ. ₹ 35 ಸಾವಿರ ಮೌಲ್ಯದ ಚಿನ್ನಾಭರಣ ಖರೀದಿಸುವವರಿಗೆ ಚಿನ್ನದ ನಾಣ್ಯವನ್ನು ಉಚಿತವಾಗಿ ನೀಡಲಾಗುತ್ತದೆ. ಹಳೆಯ 22 ಕ್ಯಾರಟ್ ಚಿನ್ನದ ಆಭರಣಗಳನ್ನು ಬಿಐಎಸ್ ಹಾಲ್‌ಮಾರ್ಕ್ ಇರುವ ಆಭರಣಗಳೊಂದಿಗೆ, ವಜ್ರದೊಂದಿಗೆ ನಷ್ಟವಿಲ್ಲದೆ ವಿನಿಮಯ ಮಾಡಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ. ಇಷ್ಟೇ ಅಲ್ಲದೆ, ವಜ್ರದ ಮೇಲೆ ಶೇ 20ರಷ್ಟು, ಪ್ಲಾಟಿನಂ ಮೇಲೆ ಶೇ 7ರಷ್ಟು ರಿಯಾಯಿತಿ ಇರಲಿದೆ.

BANGALORE TURF CLUB LTD
Post Box No. 5038, Race Course Road, Bangalore-560001,
Email:secretary@btcraces.com, EPABX:22262391/2/3,
Extn:482,225,480, CIN: U99999KA1962PLC001449

TENDER NOTICE - 20.04.2022

Sealed Tenders are invited separately for operation of Food stalls & Security Services in the Bangalore Turf Club Ltd premises:
(1) Canteen - Public & Club House (Veg & Non Veg)
(2) Security Services Details are available on website www.bangaloreraces.com
Last date for receipt of Tender is on Saturday, 30th April 2022 at 4.00 PM

Date : 20.04.2022 SD/- ADMINISTRATOR

23ಕ್ಕೆ ಸುವರ್ಣ ಮಹೋತ್ಸವ

ಬೆಂಗಳೂರು: 'ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ 50 ವರ್ಷಗಳನ್ನು ಪೂರೈಸಿರುವ ನೆನಪಿನಲ್ಲಿ ಬ್ಯಾಂಕಿನ ಸುವರ್ಣ ಮಹೋತ್ಸವ ಸಮಾರಂಭವನ್ನು ಇದೇ 23ರಂದು ಅರಮನೆ ಮೈದಾನದ ಕಿಂಗ್ಸ್ ಕೋರ್ಟ್‌ನಲ್ಲಿ ಹಮ್ಮಿಕೊಳ್ಳಲಾಗಿದೆ' ಎಂದು ಬ್ಯಾಂಕಿನ ಅಧ್ಯಕ್ಷ ಎಚ್.ಸಿ.ಗೋಪಾಲ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಕೋವಿಡ್‌ಕಾರಣದಿಂದ ಕಾರ್ಯಕ್ರಮ ವಿಳಂಬವಾಯಿತು. ಸುವರ್ಣ ಮಹೋತ್ಸವವನ್ನು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಉದ್ಘಾಟಿಸಲಿದ್ದಾರೆ' ಎಂದರು.

'ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ಸ್ಮರಣ ಸಂಚಿಕೆ ಬಿಡುಗಡೆ ಮಾಡಲಿದ್ದು, ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ನೂತನ ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಸಚಿವ ಎಸ್.ಟಿ.ಸೋಮಶೇಖರ್ ಬ್ಯಾಂಕಿನ ಸಾಕ್ಷ್ಯಚಿತ್ರ ಬಿಡುಗಡೆ ಮಾಡಲಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಸನ್ಮಾನಿತರಿಗೆ ನೆನಪಿನ ಕಾಣಿಕೆ ವಿತರಿಸಲಿದ್ದಾರೆ' ಎಂದು ಹೇಳಿದರು.

ನಗರದ ಪ್ರೆಸ್‌ಕ್ಲಬ್‌ನಲ್ಲಿ ಬುಧವಾರ ನಡೆದ 'ನೆಟ್ಟಕಲ್ಲಪ್ಪ ಸಭಾಂಗಣ'ದ (ನವೀಕರಿಸಿದ) ಉದ್ಘಾಟನಾ ಕಾರ್ಯಕ್ರಮದಲ್ಲಿ (ಎಡದಿಂದ) ಶಾಸಕ ರಿಜ್ವಾನ್ ಅರ್ಷದ್, ಪತ್ರಕರ್ತ ಪಿ.ರಾಮಯ್ಯ, ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್‌ನ ಜಂಟಿ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್.ತಿಲಕ್ ಕುಮಾರ್, ಪತ್ರಕರ್ತ ಟಿ.ಜೆ.ಎಸ್.ಜಾರ್ಜ್, ಸಂಸದ ಪಿ.ಸಿ.ಮೋಹನ್, ಬೆಂಗಳೂರು ಪ್ರೆಸ್‌ಕ್ಲಬ್ ಅಧ್ಯಕ್ಷ ಸದಾಶಿವ ಶೆಣೈ, ಪ್ರಧಾನ ಕಾರ್ಯದರ್ಶಿ ಎಚ್.ವಿ.ಕಿರಣ್ ಹಾಗೂ ಇತರರು ಪಾಲ್ಗೊಂಡಿದ್ದರು

—ಪ್ರಜಾವಾಣಿ ಚಿತ್ರ

ಸುದ್ದಿ 2 ನಿಮಿಷ

ಎಸಿಬಿ ಬಲೆಗೆ ಇನ್‌ಸ್ಪೆಕ್ಟರ್

ಬೆಂಗಳೂರು: ಗ್ಯಾಸ್ ಪೈಪ್‌ಲೈನ್ ಕಾಮಗಾರಿ ನಿರ್ವಹಿಸುವ ಗುತ್ತಿಗೆದಾರರಿಂದ ₹20 ಸಾವಿರ ಲಂಚ ಪಡೆಯುತ್ತಿದ್ದ ಚಿಕ್ಕಜಾಲ ಸಂಚಾರ ಠಾಣೆಯ ಇನ್‌ಸ್ಪೆಕ್ಟರ್ ಹಂಸವೇಣಿ ಅವರನ್ನು ಭ್ರಷ್ಟಾಚಾರ ನಿಗ್ರಹ ದಳದ(ಎಸಿಬಿ) ಅಧಿಕಾರಿಗಳು ಬುಧವಾರ ಬಂಧಿಸಿದ್ದಾರೆ.

ಜಕ್ಕೂರು ವಾರ್ಡ್‌ನ ಟೆಲಿಕಾಂ ಲೇಔಟ್‌ನಲ್ಲಿ ನೆಲದಡಿ ಪೈಪ್‌ಲೈನ್ ಅಳವಡಿಕೆ ಕಾಮಗಾರಿ ನಿರ್ವಹಿಸುವ ಗುತ್ತಿಗೆಯನ್ನು ಶ್ರೀರಾಮಪುರ ನಿವಾಸಿ ಪಡೆದುಕೊಂಡಿದ್ದರು. ಆರಂಭಿಸಿದ್ದ ಕಾಮಗಾರಿ ನಿಲ್ಲಿಸಲು ತಿಳಿಸಿದ್ದ ಇನ್‌ಸ್ಪೆಕ್ಟರ್ ಹಂಸವೇಣಿ, ಕಾಮಗಾರಿ ಗುತ್ತಿಗೆ ಪಡೆದಿರುವ ಬಗ್ಗೆ ದಾಖಲೆಗಳನ್ನು ಸಲ್ಲಿಸಲು ಸೂಚಿಸಿದ್ದರು.

ದಾಖಲೆಗಳನ್ನು ಸಲ್ಲಿಸಿದಾಗ ಕಾಮಗಾರಿ ಮುಂದುವರಿಸಲು ಒಟ್ಟಾರೆ ₹50 ಸಾವಿರ ಲಂಚ ನೀಡುವಂತೆ ಅದೇ ಠಾಣೆಯ ಸಿಬ್ಬಂದಿ ಗಂಗರಾಜು ಮತ್ತು ಅಮುಲ್ ಅವರು ಬೇಡಿಕೆ ಇಟ್ಟಿದ್ದರು. ಹಂಸವೇಣಿ ಅವರು ಬುಧವಾರ ಲಂಚ ಪಡೆಯುವಾಗ ಎಸಿಬಿ ಅಧಿಕಾರಿಗಳು ದಾಳಿ ನಡೆಸಿ ಹಣದ ಸಮೇತ ಬಂಧಿಸಿದ್ದಾರೆ.

ಅರ್ಥ ಕಳೆದುಕೊಳ್ಳುತ್ತಿರುವ ವಿಮರ್ಶೆ: ಬಾಬು ಕೃಷ್ಣಮೂರ್ತಿ

ಬೆಂಗಳೂರು: 'ವಿಮರ್ಶೆಯಲ್ಲಿ ತಮಗೆ ಬೇಕಾದವರ ಸಾಹಿತ್ಯವನ್ನು ಹಾಡಿ ಹೊಗಳುವ ಕೆಲಸ ನಡೆಯುತ್ತಿದೆ. ಪೂರ್ವಗ್ರಹ ವಿಮರ್ಶೆ ಮಾಡಲಾಗುತ್ತಿದ್ದು, ಇತ್ತೀಚಿನ ದಿನಗಳಲ್ಲಿ ವಿಮರ್ಶಾ ಕ್ಷೇತ್ರ ಅರ್ಥ ಕಳೆದುಕೊಳ್ಳುತ್ತಿದೆ' ಎಂದು ಲೇಖಕ ಬಾಬು ಕೃಷ್ಣಮೂರ್ತಿ ಬೇಸರ ವ್ಯಕ್ತಪಡಿಸಿದರು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ನಗರದಲ್ಲಿ ಬುಧವಾರ ಆಯೋಜಿಸಿದ್ದ ಪುಸ್ತಕಗಳ ಬಿಡುಗಡೆ ಮತ್ತು ಸ್ವಾತಂತ್ರ್ಯದ ಅಮೃತಮಹೋತ್ಸವದ ಗೋಷ್ಠಿಯಲ್ಲಿ ಮಾತನಾಡಿದರು. 'ಎಸ್.ಎಲ್.ಭೈರಪ್ಪ ಅವರ ಕೃತಿಗಳಲ್ಲಿ ನಿಜವಾದ ಮೌಲ್ಯಗಳಿದ್ದರೂ ಅಪಹಾಸ್ಯ ಮಾಡಲಾಗುತ್ತಿದೆ. ಟೀಕೆ ಮಾಡಲಿ. ಆದರೆ, ಅಪಹಾಸ್ಯ ಒಳ್ಳೆಯದಲ್ಲ' ಎಂದರು.

'ಸ್ವಾತಂತ್ರ್ಯ ಹೋರಾಟವನ್ನು ಹಿಂದಿನಿಂದಲೂ ಉತ್ತರ ಭಾರತಕ್ಕೆ ಸೀಮಿತಗೊಳಿಸಲಾಗಿದೆ. ದೇಶದ ಇತಿಹಾಸದಲ್ಲಿ ದಕ್ಷಿಣ ಭಾರತಕ್ಕೆ ಸಿಗಬೇಕಿದ್ದ ಮಾನ್ಯತೆ ಸಿಕ್ಕಿಲ್ಲ. ಅಖಂಡ ಭಾರತಕ್ಕೆ ಈ ಭಾಗದ ಕೊಡುಗೆ ಏನೆಂಬ ಮಾಹಿತಿ ದೇಶವ್ಯಾಪಿಯಾಗಿಲ್ಲ' ಎಂದರು.

ವಿದ್ವಾಂಸ ಪ್ರಧಾನ ಗುರುದತ್ತ, 'ಅನುವಾದಕರನ್ನು ಎರಡನೇ ದರ್ಜೆಯ ವ್ಯಕ್ತಿಗಳಾಗಿ ಕಾಣಲಾಗುತ್ತದೆ. ಈ ಪ್ರವೃತ್ತಿ ಹೋಗಬೇಕು. ಅನುವಾದಕರ ಮೇಲೆ ದೊಡ್ಡ ಜವಾಬ್ದಾರಿ ಇರುತ್ತದೆ. ಶಬ್ದ ಜೋಡಣೆಯಲ್ಲಿ ಎಡವಿದರೆ ಅಭಾಸವಾಗುತ್ತದೆ.' ಎಂದರು. ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷ ಅಜಕ್ಕಳ ಗಿರೀಶ ಭಟ್ ಇದ್ದರು. ಪ್ರಾಧಿಕಾರ ಹೊರತಂದಿರುವ 20 ಪುಸ್ತಕಗಳನ್ನು ಬಾಬು ಕೃಷ್ಣಮೂರ್ತಿ ಬಿಡುಗಡೆ ಮಾಡಿದರು.

ಐಎಫ್‌ಎಂಎಸ್‌ನಲ್ಲಿ ವಿವರ ನಮೂದಿಸಿದ ಬಿಬಿಎಂಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿ.ಸಿ. ಬಿಲ್‌ಗಳ ಪಾವತಿಗೆ ಸಂಬಂಧಿಸಿದ ದಾಖಲಾತಿಗಳನ್ನು ಸಮಗ್ರ ಹಣಕಾಸು ನಿರ್ವಹಣೆ ವ್ಯವಸ್ಥೆಯಲ್ಲಿ (ಐಎಫ್‌ಎಂಎಸ್) ಅಪ್‌ಲೋಡ್ ಮಾಡಿರದ ಬಗ್ಗೆ 'ಪ್ರಜಾವಾಣಿ'ಯಲ್ಲಿ ವರದಿ ಪ್ರಕಟವಾದ ಬಳಿಕ ಎಚ್ಚೆತ್ತುಕೊಂಡಿರುವ ಬಿಬಿಎಂಪಿ ಅಧಿಕಾರಿಗಳು, ಯಾರಿಗೆ ಬಿಲ್ ಪಾವತಿಸಲಾಗಿದೆ ಎಂಬ ವಿವರಗಳನ್ನು ವೆಬ್‌ಸೈಟ್‌ನಲ್ಲಿ ಬುಧವಾರ ನಮೂದಿಸಿದ್ದಾರೆ.

ಬಿಬಿಎಂಪಿಯು 2022ರ ಏಪ್ರಿಲ್ 1ರ ನಂತರ ಪಾವತಿ ಮಾಡಿರುವ ಕೆಲವು ಬಿಲ್‌ಗಳಿಗೆ ಸಂಬಂಧಿಸಿದಂತೆ ಯಾವುದೇ ದಾಖಲಾತಿಗಳನ್ನು ಐಎಫ್‌ಎಂಎಸ್‌ನಲ್ಲಿ (https://accounts.bbmpgov.in/vsswb/#) ಅಪ್‌ಲೋಡ್ ಮಾಡದ ಬಗ್ಗೆ 'ಪ್ರಜಾವಾಣಿ'ಯ ಬುಧವಾರದ ಸಂಚಿಕೆಯಲ್ಲಿ 'ಪಾವತಿ ತಂತ್ರಾಂಶದಲ್ಲಿ ದಾಖಲಾತಿ ನಾಪತ್ತೆ!' ಎಂಬ ಶೀರ್ಷಿಕೆಯಡಿ ವರದಿಯನ್ನು ಪ್ರಕಟಿಸಿತ್ತು.

ಕೆಲವು ಡಿ.ಸಿ ಬಿಲ್‌ಗಳನ್ನು ಯಾರಿಗೆ ಪಾವತಿಸಲಾಗಿದೆ, ಬಿಲ್ಲಿನ ಪ್ರತಿ, ಅದಕ್ಕೆ ಎಷ್ಟು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಪಾವತಿಸಲಾಗಿದೆ... ಮುಂತಾದ ಯಾವುದೇ ವಿವರಗಳೂ ಐಎಫ್‌ಎಂಎಸ್‌ನಲ್ಲಿ ಮಂಗಳವಾರ ಲಭ್ಯ ಇರಲಿಲ್ಲ. ಇದು ಹಲವು ಅನುಮಾನಗಳಿಗೆ ಕಾರಣವಾಗಿತ್ತು.

ಐಎಫ್‌ಎಂಎಸ್ ಅನ್ನು ಪರಿಶೀಲಿಸಿದಾಗ, ಡಿ.ಸಿ ಬಿಲ್‌ಗಳನ್ನು ಯಾರಿಗೆ ಪಾವತಿಸಲಾಗಿದೆ ಎಂಬ ವಿವರಗಳನ್ನು ನಮೂದಿಸಿರುವುದು ಹಾಗೂ ₹4.5 ಲಕ್ಷ ಮೊತ್ತದ ಕೆಲವು ಬಿಲ್‌ಗಳಿಗೆ ಸಂಬಂಧಿಸಿ ಒಂಟಿ ಮನೆಯ ಫೋಟೊ ಅಪ್‌ಲೋಡ್ ಮಾಡಿರುವುದು ಕಂಡು ಬಂತು. ಆದರೆ, ಅಪ್‌ಲೋಡ್ ಮಾಡಲಾದ ಬಹುತೇಕ ಫೋಟೋಗಳಲ್ಲೂ ಒಂಟಿ ಮನೆಯ ಒಂದು ಭಾಗವನ್ನಷ್ಟೇ ತೋರಿಸಲಾಗಿದೆ. ಕೆಲವು ಬಿಲ್‌ಗಳಿಗೆ ಸಂಬಂಧಿಸಿ ಹಳೆಯ ಫೋಟೋಗಳನ್ನು ಅಪ್‌ಲೋಡ್ ಮಾಡಲಾಗಿದೆ.

ಅನೇಕ ಡಿ.ಸಿ.ಬಿಲ್‌ಗಳಿಗೆ ಸಂಬಂಧಿಸಿದ ವಿವರಗಳು ಈಗಲೂ ಅಪೂರ್ಣವಾಗಿಯೇ ಇವೆ.

ಬಿಲ್ ಪಾವತಿಯಲ್ಲಿ ಪಾರದರ್ಶಕತೆ ತರಲು ಐಎಫ್‌ಎಂಎಸ್ ರೂಪಿಸಲಾಗಿದೆ. ಈ ವ್ಯವಸ್ಥೆ ಜಾರಿಗೆ ಬಂದ ಬಳಿಕವೂ ಅಧಿಕಾರಿಗಳು ಪಾರದರ್ಶಕತೆ ಕಾಯ್ದುಕೊಳ್ಳದಿರುವುದಕ್ಕೆ ಟೀಕೆ ವ್ಯಕ್ತವಾಗಿದೆ.



ಐಎಫ್‌ಎಂಎಸ್‌ನಲ್ಲಿ ವಿವರಗಳಿಲ್ಲದಿರುವುದು



ಬಿಲ್ ಪಾವತಿ ವಿವರ ಸೇರಿಸಿರುವುದು

ವರದಿ ಪರಿಣಾಮ

ಮಂಗನ ಕಾಯಿಲೆ: ಮಹಿಳೆ ಸಾವು

ಕಾರವಾರ: ಸಿದ್ದಾಪುರ ತಾಲ್ಲೂಕಿನ ಹಲಗೇರಿಯ ಜಾನಕಿ ವೀರಭದ್ರ ಹೆಗಡೆ (85) ಎಂಬುವವರು ಮಂಗನಕಾಯಿಲೆಯಿಂದ (ಕೆ.ಎಫ್.ಡಿ) ಮೃತಪಟ್ಟಿದ್ದಾರೆ.

ಅವರಿಗೆ ಏ.14ರಂದು ಸೋಂಕು ದೃಢಪಟ್ಟಿತ್ತು. ಸಿದ್ದಾಪುರ ತಾಲ್ಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿದ ಬಳಿಕ ಏ.16ರಂದು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಕಳೆದ ವರ್ಷ ಉತ್ತರ ಕನ್ನಡದಲ್ಲಿ ಕೆ.ಎಫ್.ಡಿ. ಸಾವಿನ ಪ್ರಕರಣ ಇರಲಿಲ್ಲ.

1,342 ಮರಗಳ ಹನನಕ್ಕೆ ಹೈಕೋರ್ಟ್ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಮೆಟ್ರೊ ಮಾರ್ಗದ (ಎರಡನೇ ಹಂತದ 2–ಬಿ) ಕಾಮಗಾರಿಗೆ ಅಡ್ಡಿಯಾಗಿರುವ 1,342 ಮರಗಳನ್ನು ಕಡಿಯಲು ಹೈಕೋರ್ಟ್, ಬಿಎಂಆರ್‌ಸಿಎಲ್‌ಗೆ ಅನುಮತಿ ನೀಡಿದೆ.

ಮರ ಕಡಿಯುವುದಕ್ಕೆ ಆಕ್ಷೇಪಿಸಿ 'ಬೆಂಗಳೂರು ಎನ್ವಿರಾನ್‌ಮೆಂಟ್ ಟ್ರಸ್ಟ್' ಮತ್ತು ದತ್ತಾತ್ರೇಯ ದೇವರೆ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಪ್ರದೀಪ್ ನಾಯಕ್, 'ಮರಗಳ ಅಧಿಕಾರಿಯು ತಜ್ಞರ ಸಮಿತಿಯ ಭಾಗವಾಗಿರಬಾರದು. ಆದರೆ, ಇಲ್ಲಿ ಮರಗಳನ್ನು ಕಡಿಯಲು ಅಧಿಕೃತ ಅನುಮತಿ ನೀಡಿರುವ ಅಧಿಕಾರಿಯು ಮರಗಳ ಸಮಿತಿಯಲ್ಲೂ ಸ್ಥಾನ ಪಡೆದಿದ್ದಾರೆ. ಆದ್ದರಿಂದ, ಅಧಿಕಾರಿ ಭಾಗವಾಗಿರುವ ಮರ ತಜ್ಞರ ಸಮಿತಿ ಹಾಗೂ ಮರ ಅಧಿಕಾರಿ ನೀಡುವ ಒಪ್ಪಿಗೆ ಆಧರಿಸಿ ಮರ ತೆರವು ಅಥವಾ ಸ್ಥಳಾಂತರ ಮಾಡಬಾರದು' ಎಂದು ಆಕ್ಷೇಪಿಸಿದರು.

ಇದಕ್ಕೆ ಸರ್ಕಾರದ ಹೆಚ್ಚುವರಿ ವಕೀಲ ವಿಜಯಕುಮಾರ್ ಎ. ಪಾಟೀಲ, 'ಮರಗಳ ತಜ್ಞರ ಸಮಿತಿಯ ವರದಿಯಲ್ಲಿ ಸಮಸ್ಯೆಯಿದ್ದರೆ ಒಪ್ಪಿಕೊಳ್ಳಬಹುದು. ಆದರೆ, ಅರ್ಜಿದಾರರ ಈ ರೀತಿಯ ಆಕ್ಷೇಪ ಸರಿಯಲ್ಲ' ಎಂದರು.

ಬಿಎಂಆರ್‌ಸಿಎಲ್ ಪರ ಹಿರಿಯ ವಕೀಲ ಉದಯ್ ಹೊಳ್ಳ ಅವರು, '2022ರ ಮಾರ್ಚ್ 8ರ ಮರ ತಜ್ಞರ ಸಮಿತಿಯ ವರದಿಯನ್ನು ಆಧರಿಸಿ ಕಸ್ತೂರಿ ನಗರ ಮತ್ತು ಕೆಂಪಾಪುರದ ಹೊರವರ್ತುಲ ರಸ್ತೆಯಲ್ಲಿನ ಮೆಟ್ರೊ ಮಾರ್ಗದಲ್ಲಿ ಬರುವ ಮರಗಳ ಸ್ಥಳಾಂತರ ಮತ್ತು ತೆರವು ನಡೆಯಬೇಕಿದೆ. ನಮ್ಮ ಮೆಟ್ರೊ ಯೋಜನೆ ವಿಳಂಬದಿಂದಾಗಿ, ಪ್ರತಿ ದಿನಕ್ಕೆ ₹2 ಕೋಟಿ ನಷ್ಟ ಉಂಟಾಗುತ್ತಿದೆ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಮೆಟ್ರೊ ರೈಲು ಮಾರ್ಗದ ಕಾಮಗಾರಿಗೆ ಅಡ್ಡಿಯಾಗಿರುವ ಮರಗಳನ್ನು ತೆರವುಗೊಳಿಸಲು ತಜ್ಞರ ಸಮಿತಿ ಶಿಫಾರಸಿನಂತೆ, ಒಟ್ಟು 1,600 ಮರಗಳನ್ನು ಕಡಿಯಬೇಕಾಗಿದ್ದು, 160 ಮರಗಳನ್ನು ಸ್ಥಳಾಂತರಿಸಬೇಕಿದೆ.

ಮರಗಳ ರಕ್ಷಣೆಯ ಸಾಧ್ಯತೆ ಮತ್ತು ಅದಕ್ಕೆ ಅನುಸರಿಸಬೇಕಾದ ಕಾರ್ಯವಿಧಾನ ಹಾಗೂ ಮಾರ್ಗಸೂಚಿಗಳನ್ನು ರೂಪಿಸಲು ತಜ್ಞರ ಸಮಿತಿ ರಚಿಸುವಂತೆ 2019ರ ಏಪ್ರಿಲ್‌ನಲ್ಲಿ ಹೈಕೋರ್ಟ್, ಸರ್ಕಾರಕ್ಕೆ ನಿರ್ದೇಶಿಸಿತ್ತು.

ಪರೀಕ್ಷೆ ಬರೆಯಲು ಷರತ್ತುಬದ್ಧ ಅನುಮತಿ

ಬೆಂಗಳೂರು: ಎಂಟನೇ ತರಗತಿ ಓದುತ್ತಿರುವ ಹುಡುಗಿಯನ್ನು ಪೋಷಕರ ಅನುಮತಿ ಇಲ್ಲದೆ ಪ್ರೀತಿ, ಪ್ರೇಮದ ನೆಪದಲ್ಲಿ ಮನೆಯಿಂದ ಹೊರಗೆ ಕರೆದುಕೊಂಡು ಹೋಗಿ ಸುತ್ತಾಡಿಸಿಕೊಂಡು ಬಂದ ಆರೋಪದಡಿ ನ್ಯಾಯಾಂಗ ಬಂಧನದಲ್ಲಿರುವ ದ್ವಿತೀಯ ಪಿಯು ವಿದ್ಯಾರ್ಥಿಗೆ ಪರೀಕ್ಷೆ ಬರೆಯಲು ಅನುಕೂಲವಾಗುವಂತೆ ಹೈಕೋರ್ಟ್ ಮಧ್ಯಂತರ ಜಾಮೀನು ನೀಡಿದೆ.

'ಎರಡು ವಾರಗಳ ಹಿಂದೆ ಮನೆಯಲ್ಲಿ ಅಪ್ಪ-ಅಮ್ಮ ಇಲ್ಲದ ವೇಳೆ ತಂಗಿಯ ಇಚ್ಛೆಗೆ ವಿರುದ್ಧವಾಗಿ ಆರೋಪಿಗಳು ಆಕೆಯನ್ನು ಹೊರಗೆ ಕರೆದುಕೊಂಡು ಹೋಗಿ ಸುತ್ತಾಡಿಸಿಕೊಂಡು ಬಂದಿದ್ದಾರೆ' ಎಂದು ಸಂತ್ರಸ್ತೆಯ ಅಕ್ಕ ಇದೇ 14ರಂದು ಪೊಲೀಸರಿಗೆ ದೂರು ಸಲ್ಲಿಸಿದ್ದರು. ಈ ದೂರಿನ ಅನ್ವಯ ಪೊಲೀಸರು ಇಬ್ಬರು ಆರೋಪಿಗಳನ್ನು ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ–2012ರ (ಪೋಕ್ಸೊ) ಕಾಯ್ದೆ ಅಡಿಯಲ್ಲಿ ಬಂಧಿಸಿದ್ದರು.

ಮೊದಲ ಆರೋಪಿ ದ್ವಿತೀಯ ಪಿಯು ವಿದ್ಯಾರ್ಥಿ. 'ಇದೇ 22ರಿಂದ ಪರೀಕ್ಷೆ ಆರಂಭವಾಗುತ್ತಿದ್ದು ನನಗೆ ಪರೀಕ್ಷೆ ಬರೆಯಲು ಅನುವಾಗುವಂತೆ ಜಾಮೀನು ನೀಡಬೇಕು' ಎಂದು ಕೋರಿದ್ದರು.

ಈ ಅರ್ಜಿಯನ್ನು ಬುಧವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ಆರೋಪಿಗೆ ಷರತ್ತುಬದ್ಧ ಮಧ್ಯಂತರ ಜಾಮೀನು ನೀಡಿದೆ.

ಷರತ್ತುಗಳು: ಒಂದು ಲಕ್ಷ ರೂಪಾಯಿ ಮೊತ್ತದ ಭದ್ರತೆಯ ಬಾಂಡ್ ನೀಡಬೇಕು. ಪರೀಕ್ಷೆ ಮುಗಿದ ನಂತರ ಅಂದರೆ, ಮೇ 11ರ ಸಂಜೆ 6 ಗಂಟೆಗೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಆರೋಪಿ ಸ್ವಯಂ ಹಾಜರಾಗಿ ಶರಣಾಗಬೇಕು. ಪರೀಕ್ಷೆ ಬರೆಯಲು ಕಾಲೇಜು ಆಡಳಿತ ಮಂಡಳಿ ಅನುಮತಿ ನೀಡಬೇಕು. ಆರೋಪಿ ವಾಸ ಮಾಡುವ ವ್ಯಾಪ್ತಿ ಪ್ರದೇಶದ ಪೊಲೀಸ್ ಠಾಣೆಗೆ ತೆರಳಿ ಪ್ರತಿದಿನ ಸಂಜೆ 6 ಗಂಟೆಗೆ ಸಹಿ ಮಾಡಬೇಕು. ಸಾಕ್ಷಿ ನಾಶಕ್ಕೆ ಪ್ರಯತ್ನಿಸಬಾರದು. ಕೋರ್ಟ್ ಅನುಮತಿ ಇಲ್ಲದೆ ವ್ಯಾಪ್ತಿ ಪ್ರದೇಶ ಬಿಟ್ಟು ಹೊರಗೆ ಹೋಗಬಾರದು. ಷರತ್ತುಗಳನ್ನು ಉಲ್ಲಂಘಿಸಿರುವುದು ಕಂಡು ಬಂದರೆ ಪ್ರಾಸಿಕ್ಯೂಷನ್ ಕೋರ್ಟ್‌ಗೆ ಆಕ್ಷೇಪಣೆ ಸಲ್ಲಿಸಬಹುದು ಎಂದು ತಿಳಿಸಲಾಗಿದೆ.

ನಗರದಲ್ಲಿ ಇಂದು

ನಟರಾಜ ಹುಳಿಯಾರ್ ಮತ್ತು ರವಿಕುಮಾರ್ ಬಾಗಿ ಸಂಪಾದಿಸಿರುವ 'ಬಾರುಕೋಲು' ಪುಸ್ತಕ ಬಿಡುಗಡೆ: ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಅತಿಥಿ–ವಕೀಲ ರವಿವರ್ಮ ಕುಮಾರ್, ಆಯೋಜನೆ–ಪಲ್ಲವ ಪ್ರಕಾಶನ, ಸ್ಥಳ–ವಿರೋಧ ಪಕ್ಷದ ನಾಯಕರ ಗೃಹ ಕಚೇರಿ, ಕುಮಾರಕೃಪ ರಸ್ತೆ, ಗಾಂಧಿ ಭವನ ಪಕ್ಕ, ಬೆಳಿಗ್ಗೆ 9

ನೂತನ ಪದಾಧಿಕಾರಿಗಳ ಪ್ರತಿಜ್ಞಾ ವಿಧಿ ಸ್ವೀಕಾರ ಸಮಾರಂಭ: ಪ್ರಮಾಣ ವಚನ ಬೋಧನೆ–ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಅತಿಥಿ ಪತ್ರಕರ್ತ ಪಿ.ರಾಮಯ್ಯ, ಅಧ್ಯಕ್ಷತೆ–ಶಿವಾನಂದ ತಗಡೂರು, ಆಯೋಜನೆ–ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಸ್ಥಳ–ನಯನ ರಂಗಮಂದಿರ, ಕನ್ನಡ ಭವನ, ಬೆಳಿಗ್ಗೆ 10

ಬಸವರಾಜ ಹೊರಟ್ಟಿ

ಎನ್‌ಎಂಐಎಂಎಸ್ ಡೀಮ್ಡ್ ವಿಶ್ವವಿದ್ಯಾಲಯದ ಘಟಿಕೋತ್ಸವ: ಅತಿಥಿಗಳು–ಮೀನಾಕ್ಷಿ ಶ್ರೀನಿವಾಸನ್, ಭರತ್ ಸಂಘ್ವಿ, ರಮೇಶ್ ಭಟ್, ಮೀನಾ ಚಿಂತಮನೇನಿ,ರಾಜೇಂದ್ರ ನರಗುಂದ್ಕರ್, ಸ್ಥಳ–ಸತ್ಯಸಾಯಿ ಸಂಸ್ಕೃತ ಸದನಂ, ಫೋರಂ ಮಾಲ್ ಹತ್ತಿರ, ಹೊಸೂರು ರಸ್ತೆ, ಬೆಳಿಗ್ಗೆ 11

ಯಕ್ಷ ಯುಗಾದಿ: 'ಕೃಷ್ಣಾರ್ಜುನ ಕಾಳಗ' ಯಕ್ಷಗಾನ ಪ್ರದರ್ಶನ, ಆಯೋಜನೆ–ಬೆಂಗಳೂರು ವಕೀಲರ ಸಾಹಿತ್ಯ ಪರಿಷತ್ತು, ಯಕ್ಷಾಭಿಮಾನಿ ವಕೀಲರ ಬಳಗ, ಸ್ಥಳ–ಸಿಟಿ ಸಿವಿಲ್ ಕೋರ್ಟ್ ಆವರಣ, ಮಧ್ಯಾಹ್ನ 2

ಟಿಇಡಿ ಕಾರ್ಯಕ್ರಮದ ಕರ್ಟನ್ ರೈಸರ್: ಅತಿಥಿಗಳು–ಎಂ.ಆರ್.ಜಯರಾಂ, ಎಂ.ಸಾಯಿಬಾಬಾ, ಕೆ.ಕೆ.ರೈನಾ, ಆಯೋಜನೆ ಮತ್ತು ಸ್ಥಳ–ರಾಮಯ್ಯ ವಿಶ್ವವಿದ್ಯಾಲಯ, ಜ್ಞಾನಗಂಗೋತ್ರಿ ಕ್ಯಾಂಪಸ್, ನ್ಯೂ ಬಿಇಎಲ್ ರಸ್ತೆ, ಮಧ್ಯಾಹ್ನ 3

'ಸಾರ್ವಜನಿಕರೆಡೆಗೆ ಸರ್ಕಾರಿ ಸೇವೆಗಳನ್ನು ಸಮರ್ಪಕವಾಗಿ ಕೊಂಡೊಯ್ಯುವ ವಿಧಾನಗಳು' ಸಂವಾದ: ಅತಿಥಿಗಳು–ವಿಕ್ರಂ ಕೆ.ಛಂದ್, ಕೆ.ಜೈರಾಜ್, ಆಯೋಜನೆ–ಬೆಂಗಳೂರು ರಾಜಕೀಯ ಕ್ರಿಯಾ ಸಮಿತಿ (ಬಿ.ಪ್ಯಾಕ್), ಸೇಂಟ್ ಜೋಸೆಫ್ ಕಾಲೇಜು, ಸ್ಥಳ–ಡೆ ನೋಬಿಲ್ ಹಾಲ್, ಸೇಂಟ್ ಜೋಸೆಫ್ ಕಾಲೇಜು, ಲ್ಯಾಂಗ್‌ಫೋರ್ಡ್ ರಸ್ತೆ, ಸಂಜೆ 4

84ನೇ ಶ್ರೀರಾಮನವಮಿ ಉತ್ಸವ ಮತ್ತು ಅಂತರರಾಷ್ಟ್ರೀಯ ಸಂಗೀತೋತ್ಸವ: ಸಂಗೀತ ಕಾರ್ಯಕ್ರಮ–ರಾಮಕೃಷ್ಣನ್ ಮೂರ್ತಿ, ಎಚ್.ಕೆ.ವೆಂಕಟರಾಂ, ಎನ್.ಸಿ.ಭಾರದ್ವಾಜ್, ಜಿ.ಗುರುಪ್ರಸನ್ನ, ಆಯೋಜನೆ–ಶ್ರೀರಾಮಸೇವಾ ಮಂಡಳಿಯ ರಾಮನವಮಿ ಉತ್ಸವ ಟ್ರಸ್ಟ್, ಸ್ಥಳ–ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಮೈದಾನ, ಸಂಜೆ 5ರಿಂದ

'ಆತ್ಮತೃಷ–22' ವಾರ್ಷಿಕ ಟೆಕ್ನೋ ಸಾಂಸ್ಕೃತಿಕ ಉತ್ಸವದ ಉದ್ಘಾಟನೆ: ಅತಿಥಿಗಳು–ಎಂ.ಆರ್.ದೊರೆಸ್ವಾಮಿ, ಪ್ರಕಾಶ್ ಬೆಳವಾಡಿ, ಡಿ.ಜವಾಹರ್, ಜೆ.ಸೂರ್ಯಪ್ರಸಾದ್, ಆಯೋಜನೆ ಮತ್ತು ಸ್ಥಳ–ಪಿಇಎಸ್ ವಿಶ್ವವಿದ್ಯಾಲಯ, ಮುಖ್ಯ ಸಭಾಂಗಣ, ಎಂ.ಆರ್.ಡಿ ಕಟ್ಟಡ, ಆರ್.ಆರ್.ಕ್ಯಾಂಪಸ್, ಸಂಜೆ 5

ರಾಜ್‌ಕುಮಾರ್ ಅಭಿಮಾನಿ ಪುರಸ್ಕಾರ ಪ್ರದಾನ: ಎಸ್.ಜಿ.ಸಿದ್ಧರಾಮಯ್ಯ, ಪುರಸ್ಕೃತರು–ರಂಗಸ್ವಾಮಿ, ಎನ್.ವೆಂಕಟಾಚಲಪತಿ, ಅಧ್ಯಕ್ಷತೆ–ಸಿ.ಕೆ.ರಾಮೇಗೌಡ, ಅತಿಥಿ–ಶಿವಾನಂದ ಶೆಟ್ಟಿ, ಆಯೋಜನೆ–ಸಂಸ್ಕೃತಿ ಸೌರಭ ಟ್ರಸ್ಟ್, ಸ್ಥಳ–ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5



ಎಸ್.ಜಿ.ಸಿದ್ಧರಾಮಯ್ಯ

ರೈತರ ಸಮಾವೇಶ: ಆಯೋಜನೆ–ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ, ಅತಿಥಿ–ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಸ್ಥಳ–ನ್ಯಾಷನಲ್ ಕಾಲೇಜು ಮೈದಾನ, ಬಸವನಗುಡಿ, ಮಧ್ಯಾಹ್ನ 12

ಕೇಜ್ರಿವಾಲ್

'ಜಾನಪದ ಜನಸಾಮಾನ್ಯರ ಅನುಭವಾಮೃತ' ಉಪನ್ಯಾಸ: ಗೌರಮ್ಮ, ಅತಿಥಿಗಳು–ಎಂ.ಸಿ.ನರೇಂದ್ರ, ಅಧ್ಯಕ್ಷತೆ–ಜಗದೀಶ್ ರೆಡ್ಡಿ, ಆಯೋಜನೆ ಮತ್ತು ಸ್ಥಳ–ಕನ್ನಡ ಯುವಜನ ಸಂಘ, ವಿಲ್ಸನ್ ಗಾರ್ಡನ್, ಸಂಜೆ 6.30

ಶ್ರೀಕೃಷ್ಣ ವಿಜಯ ನಾಟಕ ಪ್ರದರ್ಶನ: ಆಯೋಜನೆ–ಯಲ್ಲಮ್ಮ ದೇವಿ ಸಾಂಸ್ಕೃತಿಕ ನಾಟಕ ಮಂಡಳಿ, ಸ್ಥಳ–ಯಲ್ಲಮ್ಮ ದೇವಸ್ಥಾನ, ಕೆಂಗೇರಿ, ರಾತ್ರಿ 8

ಮೂರನೇ ವರ್ಷದ ಚಿರಸ್ಮರಣೆ

ಡಾ|| ಎಸ್. ಆರ್. ನಾಗರಾಜ ರೆಡ್ಡಿ
ಛೇರ್ಮನ್: ಜೆ.ಆರ್. ಗ್ರೂಪ್ ಆಫ್ ಕಂಪನೀಸ್

ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷವಾಯಿತು,
ನಿಮ್ಮ ಇರುವಿಕೆಯ ನೆನಪಿನ ನಿಶಬ್ದದ ಕಣ್ಣೀರಿನ ಹನಿಯಲ್ಲಿ, ನಿಮ್ಮ ಸ್ವರ್ಗೀಯ
ನೆನಪು ಸದಾ ವಸಂತ, ನಿಮ್ಮ ಸ್ಮರಣೆಯೇ ನಮ್ಮ ಜೀವನದ ದಾರಿದೀಪ.

ಸದಾ ಸ್ಮರಿಸುವ
ಧರ್ಮಪತ್ನಿ ಶ್ರೀಮತಿ ಕೆ. ಜೆ. ಯಶೋದ ಮತ್ತು ಮಕ್ಕಳು, ಶ್ರೀಮತಿ. ರತ್ನಮ್ಮ. ಕೆ,
ಡಾ|| ಕೆ. ಜೆ. ಪುರುಷೋತ್ತಮ್, ಡಾ|| ಕೆ. ಜೆ. ಚಂದ್ರಶೇಖರ್,
ಕುಟುಂಬದವರು, ಬಂಧುಗಳು ಮತ್ತು ಮಿತ್ರರು.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Walk-in

tangent
Requires Urgently
Field Executives
Two Wheeler Required (for Address Verification)
Work Place: Bangalore and Hosur
Data Entry Operators
Walk-In For Interview
From Monday – Saturday
Between 10.00 A.m – 05.00 P.m
98452 99200
98807 00625
No.02, 3rd Cross, 'B' Street, East Link Rd, Near Big Bazzar, Malleshwaram, B'lore-03

Teachers/ Professors

BEST TEACHERS for CBSE SCHOOL, PEENYA-DASARAHALLI for all classes. Walk-in: 23.04.2022. Food & Salary. 9449835744, 9535601743.

Marketing & Sales

POSITION: SENIOR Sales Executive Bike is Must Preference to insurance background candidates. Salary: 20,000+ Plus incentive Job Location: Bangalore Send CV to richard.emmanuel@letstransport.team / 7259837095

BUSINESS

Business Offers

Finance

NRI'S INVESTMENT And Finance Available On Low Interest Against Properties,Land & Building,Sites,Flats, Converted& Agriculture Lands Call: 7411265189

Business to Business

Finance

WANTED INVESTOR 12Cr, 16 Flats Buy Back After 48 Months 10Cr with Flat: 8892501007/9606701007

PERSONAL

Change of Name

14816545Y HAV SHAKIL AHMED 2ATC My MOTHER Name records TD BIBI Instead of EIDO BIBI Notary KV MANI Bangalore

JC671777X SUB/MT RAMSHEKHAR SINGH ASC CENTRE & COLLEGE My DAUGHTER Name records SHIWANI KUMARI Instead of SHIVANI KUMARI Notary KV MANI Bangalore

RANI W/O 14824693Y HAV/MT TRINADHA RAO DAMU R/A KORASAVADA PATHAPATNAM SRIKAKULAM A.P MY NAME RANI TO DAMU RANI Notary KV MANI Bangalore

I, PARAMESHWARA KARANTH S/o NARAYANA KARANTH NARAYANA R/o 26, Subramanyapura Main Road, Near Anthonys Church UTTARAHALLI Bangaluru-560061 have changed my name to PARAMESHWARA NARAYANA KARANTH for all purposes.

JC673303P NB/SUB SARVENDRA KUMAR SINGH 2ATC My DAUGHTER Name records AMISHA SINGH Instead of AMISHA KUMARI SINGH Notary KV MANI Bangalore

14825417H HAV SARVESH KUMAR 2ATC My FATHER Name records BINDRA PRASSAD Instead of BINDRA PRASAD Notary KV MANI Bangalore

14825417H HAV SARVESH KUMAR 2ATC My MOTHER Name records BISHUNA DEVI Instead of JAY DEVI Notary KV MANI Bangalore

WE, VENKATESH BABU. S and Hema Venkatesh Babu. S residing at #167, Sri Gurukrupa, 1st cross, Welfare Town Ship, Gadag - 582101 have changed our Daughter's name from YASHASWINI to SHALINI vide affidavit dated 19/04/2022 before notary M.M. Hiremath, Gadag.

MATRIMONIAL

Wedding Arrangements

Cards

WEDDING CARDS WITH PRINTING AT FACTORY RATES AT YOUR DOORSTEP (ALL INDIAN LANGUAGES). Call: 9880324530

REAL ESTATE SELLING

House

Nagarabhavi

NAGARABAVI 40X42 E/S Corner House Near BDA Complex 30X40 East Site Near Ambedkar College: 9449121380

PUBLIC NOTICE

BUNTS' SANGHA RNS VIDYANIKETHAN
Vijayanagar, Bangalore-40.
Phone : 080-23398922/23399635
info@bsrnsv.com
info@buntsanghablr.com
TENDER NOTIFICATION
Invites EOI from the contractors / suppliers having sound Technical & financial capacity for time bound works for the following :
1. Construction of new class rooms in BSRNS-1 campus
2. Interior / Partition work for class rooms
3. Furniture & Fixtures
The value of work approx. 60 lakhs. Interested parties may submit the quotations within 7 days . For further details please contact :
Bunts' Sangha RNS Vidyanikethan
Sd/- Convener

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH DECCAN HERALD
ಪ್ರಜಾವಾಣಿ ಕ್ಲಾಸಿಫೈಡ್ಸ್
SELL, RENT, BUY PROPERTY
THROUGH PROPERTY CLASSIFIEDS ADS IN DECCAN HERALD & PRAJAVANI NEWS PAPER

BOOK YOUR CLASSIFIEDS ADS ONLINE
WWW.DHCLASSIFIEDS.COM
FOR MORE INFORMATION
CONTACT 9880856233 | 9886213331
Email: santhoshkumar@deccanherald.co.in

‘2ಎ ಮೀಸಲಾತಿಗಾಗಿ ಇಂದಿನಿಂದ ಧರಣಿ’

ಪ್ರಜಾವಾಣಿ ವಾರ್ತೆ

ಕೂಡಲಸಂಗಮ: ‘ಪಂಚಮಸಾಲಿ ಸಮಾಜಕ್ಕೆ 2‘ಎ’ ಮೀಸಲಾತಿ, ಎಲ್ಲ ಲಿಂಗಾಯತರಿಗೆ ಒಬಿಸಿ ಮೀಸಲಾತಿ ಕಲ್ಪಿಸುವಂತೆ ಆಗ್ರಹಿಸಿ ಕೂಡಲಸಂಗಮದ ಸಂಗಮೇಶ್ವರ ದೇವಾಲಯ ಆವರಣದಲ್ಲಿ ಗುರುವಾರ ಬೆಳಿಗ್ಗೆ 8ರಿಂದ ಸಂಜೆ 5ರವರೆಗೆ ನಿರಂತರ ಧರಣಿ ಹಮ್ಮಿಕೊಳ್ಳಲಾಗಿದೆ’ ಎಂದು ಕೂಡಲಸಂಗಮದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

‘ಸಮಾಜವು ಸರ್ಕಾರಕ್ಕೆ ಕೊಟ್ಟ ಗಡುವು ಮುಗಿದ ಹಿನ್ನೆಲೆಯಲ್ಲಿ ಧರಣಿ ಹಮ್ಮಿಕೊಂಡಿದೆ. ಬೆಳಿಗ್ಗೆ 8ಕ್ಕೆ ಪಂಚಮಸಾಲಿ ಪೀಠದಿಂದ ಪಾದಯಾತ್ರೆಯ ಮೂಲಕ ದೇವಾಲಯಕ್ಕೆ ತೆರಳಿ ಸಂಗಮನಾಥನ ದರ್ಶನ ಪಡೆದು, ಬಸವಣ್ಣನ ಐಕ್ಯಸ್ಥಳದಲ್ಲಿ ಪ್ರಾರ್ಥನೆ ಸಲ್ಲಿಸಿ ಧರಣಿ ಆರಂಭಿಸಲಾಗುವುದು’ ಎಂದು ಬುಧವಾರ ಹೇಳಿದರು. ‘ಮೀಸಲಾತಿ ಹೋರಾಟ ಸಮಿತಿ ಅಧ್ಯಕ್ಷ ಬಸವನಗೌಡ ಪಾಟೀಲ ಯತ್ನಾಳ ಧರಣಿ ಸತ್ಯಾಗ್ರಹದ ನೇತೃತ್ವ ವಹಿಸುವರು. ಅಧ್ಯಕ್ಷತೆಯನ್ನು ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಟ್ರಸ್ಟ್ ರಾಷ್ಟ್ರೀಯ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ ವಹಿಸುವರು. ಸಚಿವ ಸಿ. ಸಿ. ಪಾಟೀಲ, ಶಾಸಕರಾದ ಅರವಿಂದ ಬೆಲ್ಲದ, ಸಿದ್ದು ಸವದಿ ಮುಂತಾದವರು ಭಾಗವಹಿಸುವರು’ ಎಂದರು.

ಸರ್ಕಾರ ಇದಕ್ಕೂ ಸ್ಪಂದಿಸದೇ ಇದ್ದರೆ ಮುಂದಿನ ದಿನಗಳಲ್ಲಿ ತಾಲ್ಲೂಕು, ಜಿಲ್ಲಾ ಕೇಂದ್ರಗಳಲ್ಲಿ ಧರಣಿ ಮಾಡುತ್ತೇವೆ

ಬಸವಜಯ ಮೃತ್ಯುಂಜಯ ಸ್ವಾಮೀಜಿ, ಲಿಂಗಾಯತ ಪಂಚಮಸಾಲಿ ಪೀಠ, ಕೂಡಲಸಂಗಮ

ಹೊಸ ವೈದ್ಯಕೀಯ ಉಪಕರಣಗಳನ್ನು ಡಾ. ಕೆ. ಸುಧಾಕರ್ ವೀಕ್ಷಿಸಿದರು

‘ಮಲ್ಲೇಶ್ವರ:100 ಹಾಸಿಗೆಗಳ ತಾಯಿ–ಶಿಶು ಆಸ್ಪತ್ರೆ ಶೀಘ್ರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೆ.ಸಿ.ಜನರಲ್ ಆಸ್ಪತ್ರೆಯಲ್ಲೂ 100 ಹಾಸಿಗೆಗಳ ತಾಯಿ-ಶಿಶು ಆಸ್ಪತ್ರೆ ನಿರ್ಮಿಸಲಾಗುವುದು’ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು.

ನಿರ್ಮಾಣ್ ಹಾಗೂ ಓಪನ್ ಟೆಕ್ಸ್ಟ್ ನೆರವಿನೊಂದಿಗೆ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ತುರ್ತು ನಿಗಾ ಘಟಕದ ಉನ್ನತೀಕರಣ ಹಾಗೂ ಹೊಸ ವೈದ್ಯಕೀಯ ಉಪಕರಣಗಳ ಅಳವಡಿಸುವ ಕಾರ್ಯಕ್ರಮದಲ್ಲಿ ಅವರು ಈ ವಿಷಯ ತಿಳಿಸಿದರು.

‘ವಾಣಿ ವಿಲಾಸ ತಾಯಿ-ಶಿಶು ಆಸ್ಪತ್ರೆಯ ಮಾದರಿಯಲ್ಲೇ ಈ ಆಸ್ಪತ್ರೆ ನಿರ್ಮಾಣವಾಗಲಿದೆ. ಖಾಸಗಿ ಸಂಸ್ಥೆಗಳು ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ 10 ಹಾಸಿಗೆಗಳ ಐಸಿಯು ವ್ಯವಸ್ಥೆ ಕಲ್ಪಿಸಿವೆ. ಅದಕ್ಕೆ ಬೇಕಿರುವ ಉಪಕರಣಗಳನ್ನೂ ನೀಡಿವೆ’ ಎಂದರು. ‘ನಗರದ ನಾಲ್ಕು ದಿಕ್ಕುಗಳಲ್ಲಿ ಕನಿಷ್ಠ 500 ಹಾಸಿಗೆ ಸಾಮರ್ಥ್ಯ ಇರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ಖಾಸಗಿ ಮತ್ತು ಸರ್ಕಾರದ ಸಹಭಾಗಿತ್ವದ ಮಾದರಿಯಲ್ಲಿ ನಿರ್ಮಿಸಲಾಗುವುದು. ಆಸ್ಪತ್ರೆ ನಿರ್ಮಾಣಕ್ಕೆ ಜಾಗಗಳನ್ನು ಗುರುತಿಸಿ ಶೀಘ್ರದಲ್ಲೇ ಶಿಲಾನ್ಯಾಸ ನೆರವೇರಿಸಲಾಗುವುದು’ ಎಂದರು.

‘ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ ನಿರೀಕ್ಷಿತ ಬದಲಾವಣೆಯಾಗಿಲ್ಲ’

‘ನಗರದ ಹೃದಯಭಾಗದಲ್ಲಿರುವ ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ ನಿರೀಕ್ಷಿತ ಬದಲಾವಣೆಗಳು ಕಂಡು ಬಂದಿಲ್ಲ’ ಎಂದು ಡಾ.ಕೆ. ಸುಧಾಕರ್ ಅಸಮಾಧಾನ ವ್ಯಕ್ತಪಡಿಸಿದರು.

‘ರೋಗಿಗಳನ್ನು ಕುಟುಂಬದ ಸದಸ್ಯರಂತೆ ಆರೈಕೆ ಮಾಡುವ ಅಗತ್ಯವಿದೆ. ಜಯದೇವ, ವಾಣಿ ವಿಲಾಸ ಮೊದಲಾದ ಆಸ್ಪತ್ರೆಗಳಲ್ಲಿ ಖಾಸಗಿಗಿಂತ ಹೆಚ್ಚು ಗುಣಮಟ್ಟದ ಸೇವೆ ದೊರೆಯುತ್ತಿದೆ. ಇದೇ ರೀತಿ ಕೆ.ಸಿ.ಜನರಲ್ ಆಸ್ಪತ್ರೆಯಲ್ಲೂ ಏಕೆ ಸೇವೆ ದೊರೆಯುತ್ತಿಲ್ಲ ಎನ್ನುವುದನ್ನು ಯೋಚಿಸಬೇಕಾಗಿದೆ’ ಎಂದರು.

ಕೆಟ್ಟ ವ್ಯಸನಗಳ ‘ತ್ಯಜಿಸಿದ’ ವಿದ್ಯಾರ್ಥಿಗಳು

‘ವಿಶ್ವ ಯಕೃತ್ತು ದಿನ’ದ ನಿಮಿತ್ತ ಮಣಿಪಾಲ್ ಹಾಸ್ಪಿಟಲ್ಸ್ ಸಮೂಹವು ‘ಪಿವಿ ಬ್ರ್ಯಾಂಡ್ ಸ್ಪಾಟ್’ ಸಹಯೋಗದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಧೂಮಪಾನ ಮತ್ತು ಮದ್ಯಪಾನದಿಂದ ದೂರ ಉಳಿಯುವುದಾಗಿ ಪ್ರತಿಜ್ಞೆಯನ್ನು ಸ್ವೀಕರಿಸಿದರು. ‘ಡಂಪ್ ದ ಡ್ಯಾಮೇಜ್’ ಶೀರ್ಷಿಕೆಯ ಈ ಕಾರ್ಯಕ್ರಮವು ಯಶವಂತಪುರ, ಓಲ್ಡ್ ಏರ್‌ಪೋರ್ಟ್ ರಸ್ತೆ, ಸರ್ಜಾಪುರ ರಸ್ತೆಯಲ್ಲಿರುವ ಮಣಿಪಾಲ್ ಹಾಸ್ಪಿಟಲ್ ಸಮೂಹದ ಆಸ್ಪತ್ರೆಗಳಲ್ಲಿ ನಡೆಯಿತು. ವಿದ್ಯಾರ್ಥಿಗಳು ಮದ್ಯದ ಬಾಟಲ್‌ಗಳು ಮತ್ತು ಸಿಗರೇಟ್ ಪ್ಯಾಕ್‌ಗಳನ್ನು ಸಾಂಕೇತಿಕವಾಗಿ ಕಸದ ತೊಟ್ಟಿಗೆ ಎಸೆದರು.

‘ಚಿಕಿತ್ಸೆಗಿಂತಲೂ ರೋಗ ಬರದಂತೆ ತಡೆಯುವುದು ಉತ್ತಮ ಕ್ರಮ. ಈ ಕಾರ್ಯಕ್ರಮವು ಯುವಜನರಲ್ಲಿ ಜಾಗೃತಿಯನ್ನು ಮೂಡಿಸುವಲ್ಲಿ ಯಶಸ್ವಿಯಾಗಿದೆ. ಯುವಜನರು ಕೆಟ್ಟ ವ್ಯಸನಗಳನ್ನು ತ್ಯಜಿಸುವ ಮೂಲಕ ಮಾದರಿ ನಡೆ ಅನುಸರಿಸಿದ್ದಾರೆ’ ಎಂದು ಮಣಿಪಾಲ್ ಹಾಸ್ಪಿಟಲ್ಸ್ ಸಮೂಹದ ಸಿಒಒ ಕಾರ್ತಿಕ್ ರಾಜ್‌ಗೋಪಾಲ್ ಅವರು ಹೇಳಿದರು.

‘ಯುವಜನರು ಬದಲಾವಣೆಯ ಹರಿಕಾರರು. ಇದೇ ಕಾರಣಕ್ಕೆ ಕಾರ್ಯಕ್ರಮದಲ್ಲಿ ಅವರನ್ನು ತೊಡಗಿಸಿಕೊಳ್ಳಲಾಗಿದೆ’ ಎಂದು ಸರ್ಜಾಪುರ ರಸ್ತೆಯ ಘಟಕದ ನಿರ್ದೇಶಕ ಡಾ. ಸುಜಾ ವಿನಯ್ ಅವರು ಹೇಳಿದರು. ಈ ಘಟಕದಲ್ಲಿ ‘ಸಮಗ್ರವಾಗಿ ಯಕೃತ್ತು ಆರೈಕೆ ಕಾರ್ಯಕ್ರಮ’ವನ್ನು ಆರಂಭಿಸಲಾಗಿದೆ ಎಂದು ತಿಳಿಸಿದರು.

ಓಲ್ಡ್ ಏರ್‌ಪೋರ್ಟ್ ರಸ್ತೆ ಘಟಕದ ನಿರ್ದೇಶಕ ಡಾ.ಮನೀಶ್ ರೈ ಅವರು, ‘ಟ್ರಾನ್ಸ್‌ಪ್ಲಾಂಟ್ ಕೇಂದ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅಂಗ ಕಸಿ ನಡೆಸಲಾಗಿದೆ. ನಾವು ಜೀವ ಉಳಿಸುವ ಕ್ರಮವಾಗಿ ಯಕೃತ್ತು ಸಮಸ್ಯೆ ತಡೆಯುವ ಕ್ರಮಗಳಿಗೆ ಒತ್ತು ನೀಡುತ್ತೇವೆ’ ಎಂದು ಹೇಳಿದರು.

ಯಶವಂತಪುರ ಘಟಕದ ನಿರ್ದೇಶಕ ಕರ್ನಲ್ ರಾಹುಲ್ ತಿವಾರಿ ಅವರು, ‘ಕಾರ್ಯಕ್ರಮದಲ್ಲಿ 180 ವಿದ್ಯಾರ್ಥಿಗಳು ಭಾಗವಹಿಸಿದ್ದು, ಕೆಟ್ಟ ವ್ಯಸನ ಕೈಬಿಡುವುದರ ಕುರಿತು ಪ್ರತಿಜ್ಞೆ ಸ್ವೀಕರಿಸಿದ್ದಾರೆ. ಇದು, ಇಂತದೇ ಕ್ರಮ ಕೈಗೊಳ್ಳಲು ಅವರ ಪೋಷಕರಿಗೂ ಉತ್ತೇಜನ ನೀಡಲಿದೆ’ ಎಂದರು.

ಮಣಿಪಾಲ್ ಆಸ್ಪತ್ರೆ ಸಮೂಹದ ಯಶವಂತಪುರ (ಮೇಲೆ), ಓಲ್ಡ್ ಏರ್‌ಪೋರ್ಟ್ ರಸ್ತೆ (ಮಧ್ಯ) ಮತ್ತು ಸರ್ಜಾಪುರ ರಸ್ತೆ (ಕೆಳಗೆ) ಘಟಕಗಳಲ್ಲಿ ನಡೆದ ‘ಡಂಪ್ ದ ಡ್ಯಾಮೇಜ್’ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದ್ದರು

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಎಂಜಿನಿಯರಿಂಗ್ ಶಿಕ್ಷಣದಲ್ಲಿ ಪ್ಲಂಬಿಂಗ್ ಕೋರ್ಸ್

ನವದೆಹಲಿ (ಪಿಟಿಐ): ಎಂಜಿನಿಯರಿಂಗ್, ವಾಸ್ತುಶಿಲ್ಪ ಶಿಕ್ಷಣ ಸಂಸ್ಥೆಗಳಲ್ಲಿ ‘ಪ್ಲಂಬಿಂಗ್’ ಅನ್ನು ಕೋರ್ಸ್ ಆಗಿ ಪರಿಚಯಿಸಲು ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ) ಮತ್ತು ಭಾರತೀಯ ಪ್ಲಂಬಿಂಗ್ ಅಸೋಸಿಯೇಷನ್ ಒಪ್ಪಂದ ಮಾಡಿಕೊಂಡಿವೆ.

ಎಐಸಿಟಿಇ ಅಧ್ಯಕ್ಷ ಅನಿಲ್ ಡಿ.ಸಹಸ್ರಬುದ್ಧೆ ಮತ್ತು ಐಪಿಎ ರಾಷ್ಟ್ರೀಯ ಅಧ್ಯಕ್ಷ ಗುರ್‌ಮಿಟ್ ಸಿಂಗ್ ಒಪ್ಪಂದಕ್ಕೆ ಸಹಿ ಹಾಕಿದರು. ಶೇ 80ರಷ್ಟು ಭೌತಿಕ, ಶೇ 20 ಪ್ರಾಯೋಗಿಕ ಅಧ್ಯಯನ ಇರುವಂತೆ ಒಟ್ಟು 50 ಗಂಟೆ ಅವಧಿಯ ಕೋರ್ಸ್ ರೂಪಿಸಲಾಗುತ್ತದೆ.

ಪಠ್ಯದಲ್ಲಿ ರಾಮಾಯಣ, ಭಗವದ್ಗೀತೆ ಬದಲು ನೈತಿಕ ಶಿಕ್ಷಣ:ಬಿ.ಸಿ.ನಾಗೇಶ್

ಕೋರ (ತುಮಕೂರು): ‘ಪಠ್ಯದಲ್ಲಿ ರಾಮಾಯಣ, ಭಗವದ್ಗೀತೆ ಅಳವಡಿಸುವ ಮಾತಿಲ್ಲ. ಅದರ ಬದಲು ನೈತಿಕ ಶಿಕ್ಷಣ ಅಳವಡಿಸಲಾಗುವುದು’ ಎಂದು ಶಿಕ್ಷಣ ಸಚಿವ ಬಿ.ಸಿ ನಾಗೇಶ್ ಸ್ಪಷ್ಟಪಡಿಸಿದ್ದಾರೆ.

ಬುಧವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ನೈತಿಕ ಶಿಕ್ಷಣದಲ್ಲಿ ದೇವರ ಪೂಜೆ ಹೇಗೆ ಮಾಡೊದು ಹೇಳಿ ಕೊಡುವುದಿಲ್ಲ. ಜೀವನಕ್ಕೆ ಬೇಕಾದ ಶಿಕ್ಷಣ, ಮೌಲ್ಯಗಳನ್ನು ಅಳವಡಿಸುತ್ತೇವೆ’ ಎಂದರು.

ಕುರಾನ್ ಮತ್ತು ಬೈಬಲ್‌ನಲ್ಲಿರುವ ನೈತಿಕತೆ ವಿಚಾರಗಳನ್ನು ಪಠ್ಯದಲ್ಲಿ ಸೇರಿಸುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಯಾವುದರಲ್ಲಿ ನೈತಿಕ ಶಿಕ್ಷಣ ಇದೆಯೋ ಅದನ್ನು ಸೇರಿಸುತ್ತೇವೆ. ಆದರೆ, ಯಾರು ಶೇ 95ರಷ್ಟು ಇರುತ್ತಾರೊ ಅವರಿಗೆ ಬೇಕಾಗಿರುವುದನ್ನು ಕೊಡುತ್ತೇವೆಯೇ ಹೊರತು ಕೇವಲ ಶೇ 5ರಷ್ಟಿರುವ ಜನರಿಗೆ ಬೇಕಾದ್ದನ್ನು ಕೊಡಲು ಸಾಧ್ಯವಿಲ್ಲ. ಒಂದು ವೇಳೆ ಹಾಗೆ ಮಾಡಿದರೆ ಶೇ 95ರಷ್ಟು ಜನ ಎದ್ದು ಹೋಗುತ್ತಾರೆ’ ಎಂದು ಸಮರ್ಥಿಸಿಕೊಂಡರು. ‘ನಾವು, ನೀವು ಓದುವಾಗ ನೈತಿಕ ಶಿಕ್ಷಣ ಇತ್ತು. ಇತ್ತೀಚೆಗೆ ಅದು ತಪ್ಪಿ ಹೋಗಿದೆ.ರಾಮಾಯಣ, ಮಹಾಭಾರತ ನಡೆದಿದೆಯೋ, ಇಲ್ಲವೊ ಗೊತ್ತಿಲ್ಲ.ಆದರೆ. ಅವು ಇಂದಿಗೂ ಹಳ್ಳಿಗಳಲ್ಲಿ ಪ್ರೇರಣೆಯಾಗಿದೆ. ಅದನ್ನು ಮುಂದಿನ ಪೀಳಿಗೆಗೆ ಏಕೆ ಕೊಡಬಾರದು. ಆ ರೀತಿಯ ನೈತಿಕ ಶಿಕ್ಷಣ ಪಠ್ಯದಲ್ಲಿ ಸೇರಿಸುತ್ತಿದ್ದೇವೆ’ ಎಂದರು

ಕೆನರು ಬ್ಯಾಂಕ್ Canara Bank — Together We Can
ಆಸ್ತಿ ಮತ್ತು ಭವನ ವಿಭಾಗ, ವೃತ್ತ ಕಚೇರಿ, ನಂ. 86, ಎಂ.ಜಿ.ರಸ್ತೆ, ಬೆಂಗಳೂರು–560001. ದೂ.: 25310039/25310038

ಪ್ರಸ್ತಾವನೆಗಾಗಿ ವಿನಂತಿ ಆಹ್ವಾನ ಸೂಚನೆ (ಆರ್‌ಎಫ್‌ಪಿ)

ಬೆಂಗಳೂರು ವೃತ್ತ ಕಚೇರಿಯ ಅಡಿಯಲ್ಲಿ ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಬ್ಯಾಂಕಿನ ಮಾಲೀಕತ್ವದ ಕಟ್ಟಡಗಳಲ್ಲಿ ಆನ್–ಗ್ರಿಡ್ ರೂಫ್ ಟಾಪ್ ಸೌರ ವಿದ್ಯುತ್ ಉತ್ಪಾದನಾ ವ್ಯವಸ್ಥೆಯ ಪೂರೈಕೆ, ಸ್ಥಾಪನೆ, ಪರೀಕ್ಷೆ ಮತ್ತು ಕಾರ್ಯಾರಂಭಗೊಳಿಸುವಿಕೆ

ಕೆನರಾ ಬ್ಯಾಂಕ್ ಬೆಂಗಳೂರು ವೃತ್ತ ಕಚೇರಿಯು ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಬ್ಯಾಂಕಿನ ಮಾಲೀಕತ್ವದ ...
https://canarabank.com/tenders.aspx ... www.eprocure.gov.in ...
ಸ್ಥಳ : ಬೆಂಗಳೂರು, ದಿನಾಂಕ : 20–04–2022

ಅಪರೂಪದ ಕಾಯಿಲೆಗಳಿಗೆ ರಾಷ್ಟ್ರೀಯ ನೀತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪರೂಪದ ರೋಗಗಳಿಗೆ ಚಿಕಿತ್ಸೆ ನೀಡುವ ನಿಟ್ಟಿನಲ್ಲಿ, 'ಅಪರೂಪದ ಕಾಯಿಲೆಗಳಿಗೆ ರಾಷ್ಟ್ರೀಯ ನೀತಿ- 2021'ರ ಕುರಿತು ಅಧಿಸೂಚನೆ ಹೊರಡಿಸಲಾಗಿದೆ ಎಂದು ಕೇಂದ್ರ ಸರ್ಕಾರವು ಹೈಕೋರ್ಟ್‌ಗೆ ತಿಳಿಸಿದೆ.

'ಲೈಸೊಸೋಮಲ್ ಸ್ಟೋರೇಜ್ ಡಿಸಾರ್ಡರ್ (ಎಲ್ಎಸ್‌ಡಿ) ಕಾಯಿಲೆಯಿಂದ ಬಳಲುತ್ತಿರುವ ಮಕ್ಕಳ ಚಿಕಿತ್ಸೆಗೆ ನೆರವು ಕಲ್ಪಿಸಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗೆ ನಿರ್ದೇಶಿಸಬೇಕು' ಎಂದು ಕೋರಿ 'ಲೈಸೊಸೋಮಲ್ ಸ್ಟೋರೇಜ್ ಡಿಸಾರ್ಡರ್ಸ್ ಸೊಸೈಟಿ ಆಫ್ ಇಂಡಿಯಾ' ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಕೇಂದ್ರ ಸರ್ಕಾರದ ಪರ ವಕೀಲ ಎಂ.ಎನ್.ಕುಮಾರ್, 'ಲೈಸೊಸೋಮಲ್ ಸೇರಿದಂತೆ ಅಪರೂಪದ ಕಾಯಿಲೆಗಳಿಂದ ಬಳಲುತ್ತಿರುವವರಿಗೆ ಚಿಕಿತ್ಸೆ ಕಲ್ಪಿಸಲು ಹೊಸ ಆರೋಗ್ಯ ನೀತಿ ರೂಪಿಸಲಾಗಿದೆ. ಈ ಕುರಿತಂತೆ 2021ರ ಏಪ್ರಿಲ್ 21ರಂದು ಕೇಂದ್ರ ಸರ್ಕಾರ ಅಧಿಸೂಚನೆ ಹೊರಡಿಸಿದೆ' ಎಂದು ತಿಳಿಸಿದರು. ಇದನ್ನು ದಾಖಲಿಸಿಕೊಂಡ ನ್ಯಾಯಪೀಠ ವಿಚಾರಣೆಯನ್ನು ಜುಲೈಗೆ ಮುಂದೂಡಿದೆ.

ರಾಜ್ಯ ಸರ್ಕಾರದ ಪರ ವಕೀಲರು, 'ರಾಜ್ಯದಲ್ಲಿ ಎಲ್ಎಸ್‌ಡಿಯಿಂದ ಬಳಲುತ್ತಿರುವವರಿಗೆ ಚಿಕಿತ್ಸೆ ಒದಗಿಸಲು ರಾಜ್ಯ ಸರ್ಕಾರ ಅನುದಾನ ನೀಡಿದೆ. ಅವಶ್ಯಕತೆ ಇರುವವರು ತಮ್ಮ ಮಾಹಿತಿ ಹಂಚಿಕೊಂಡು, ಆರೋಗ್ಯ ನೀತಿಯಡಿ ಚಿಕಿತ್ಸೆ ಪಡೆಯಬಹುದಾಗಿದೆ' ಎಂದು ತಿಳಿಸಿದರು.

ಉಬರ್ ಸೇವಾ ಶುಲ್ಕ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಬರ್ ಕಂಪನಿಯು ಬೆಂಗಳೂರಿನಲ್ಲಿ ತನ್ನ ಕ್ಯಾಬ್ ಸೇವಾ ಶುಲ್ಕವನ್ನು ಶೇಕಡ 10ರಷ್ಟು ಹೆಚ್ಚಿಸಿದೆ. ಇಂಧನ ಬೆಲೆಯು ಹೆಚ್ಚಳವಾಗಿರುವ ಕಾರಣ ಕಂಪನಿ ಈ ತೀರ್ಮಾನ ಕೈಗೊಂಡಿದೆ.

'ಇಂಧನ ಬೆಲೆಯಲ್ಲಿ ಈಗ ಆಗಿರುವ ಏರಿಕೆಯು ಕಳವಳಕ್ಕೆ ಕಾರಣವಾಗಿದೆ. ಈ ಏರಿಕೆಯ ಪರಿಣಾಮವನ್ನು ಚಾಲಕರು ನಿಭಾಯಿಸುವಂತೆ ಆಗಲು ಬೆಂಗಳೂರಿನಲ್ಲಿ ಶುಲ್ಕವನ್ನು ಹೆಚ್ಚಿಸಲಾಗುತ್ತಿದೆ' ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

ಮುಂದಿನ ದಿನಗಳಲ್ಲಿ ಇಂಧನ ಬೆಲೆಯ ಏರಿಳಿತಗಳನ್ನು ಗಮನಿಸಲಾಗುತ್ತದೆ. ಅಗತ್ಯ ಕ್ರಮವನ್ನು ಕೈಗೊಳ್ಳಲಾಗುತ್ತದೆ ಎಂದು ಉಬರ್ ಇಂಡಿಯಾ ಕಂಪನಿಯ ಅಧಿಕಾರಿ ನಿತೀಶ್ ಭೂಷಣ್ ಅವರು ಮಾಹಿತಿ ನೀಡಿದ್ದಾರೆ.

'ಗುಜರಾತ್: ವಿದ್ಯುನ್ಮಾನ ಲೊಕೊಮೋಟಿವ್ ಘಟಕ ಸ್ಥಾಪನೆ'

ದಹೋದ್, ಗುಜರಾತ್ (ಪಿಟಿಐ): ಬುಡಕಟ್ಟು ಜನಾಂಗ ಹೆಚ್ಚಿರುವ ಗುಜರಾತ್‌ನ ದಹೋದ್ ಜಿಲ್ಲೆಯಲ್ಲಿ ₹20,000 ಕೋಟಿ ಹೂಡಿಕೆಯೊಂದಿಗೆ ವಿದ್ಯುನ್ಮಾನ ಲೊಕೊಮೋಟಿವ್ ಘಟಕ ಸ್ಥಾಪನೆ ಮಾಡಲಾಗುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಘೋಷಣೆ ಮಾಡಿದ್ದಾರೆ.

ಇಲ್ಲಿ ಬುಡಕಟ್ಟು ಜನರನ್ನು ಉದ್ದೇಶಿಸಿ ಅವರು ಮಾತನಾಡಿದರು.

	ಬಿ.ಎಸ್.ನಾರಾಯಣನ್ ಬಿನ್ ಲೇಟ್ ಟಿ.ಸುಂದರರಾಜನ್, ಭದ್ರಮ್ಮ ಕೋಂ ಲೇಟ್ ಚಿಕ್ಕೀರಯ್ಯ, ಮುನಿಯಪ್ಪ ಬಿನ್ ಲೇಟ್ ಚಿಕ್ಕ ಈರಯ್ಯ, ಸಿ.ಚೂಡಯ್ಯ ಬಿನ್ ಲೇಟ್ ಚಿಕ್ಕ ಈರಯ್ಯ, ಸಿ.ವೆಂಕಟೇಶ್ ಬಿನ್ ಲೇಟ್ ಚಿಕ್ಕ ಈರಯ್ಯ, ಸಿ.ವೆಂಕಟೇಶ್ ಬಿನ್ ಲೇಟ್ ಚಿಕ್ಕ ಈರಯ್ಯ, ಕೆ.ಎಸ್. ಮುನಿರಾಜು ಬಿನ್ ಸಿದ್ದಲಿಂಗಪ್ಪ, ಲಕ್ಷ್ಮಮ್ಮ ಕೋಂ ನಾಗಪ್ಪ, ನಾರಾಯಣ ಬಿನ್ ಸುಂದರ್ ರಾಜ್, ಹನುಮಕ್ಕ ಕೋಂ ಈರಪ್ಪ, ಕೃಷ್ಣಮ್ಮ ಕೋಂ ಮುನಿಗಿರಿಯಪ್ಪ, ನಾಗರಾಜು ಬಿನ್ ಮುನಿಗಿರಿಯಪ್ಪ, ಪ್ರಕಾಶ್ ಬಿನ್ ಮುನಿಗಿರಿಯಪ್ಪ, ಮುನಿ ಆಂಜಿನಪ್ಪ ಬಿನ್ ಬುಡ್ಡಮ್ಮ, ಮುನಿರಾಜು ಬಿನ್ ಬೈರಪ್ಪ, ನಂಜುಂಡಪ್ಪ ಉ॥ ಚಿಕ್ಕಪ್ಪಯ್ಯ ಬಿನ್ ದ್ಯಾವಪ್ಪ				
300.	ಲಕ್ಷ್ಮೀದೇವಮ್ಮ ಕೋಂ ಲೇ ದೊಡ್ಡ ಆಂಜಿನಪ್ಪ	136/1	1-00	-	1-00
301.	ನಾಗರಾಜು ಬಿನ್ ಚೀಲಪ್ಪ	136/2	0-39	-	0-39
302.	ಮುನೇಗೌಡ ಬಿನ್ ಲೇಟ್ ಚಿಕ್ಕಮುನಿಶಾಮಪ್ಪ	136/3	1-25	0-01	1-24
303.	ಮುನಿಕೃಷ್ಣಮ್ಮ ಕೋಂ ಬಿ.ಎಂ.ಮುನಿರಾಜು, ಬಿ.ಎಂ. ಮುನಿರಾಜು ಬಿನ್ ಲೇಟ್ ಮುನಿಶಾಮಪ್ಪ	136/4	1-20.12	0-00.12	1-20
304.	ಚಿಕ್ಕನರಸಪ್ಪ ಬಿನ್ ಲೇಟ್ ಪಿಳ್ಳಕೆಂಚಪ್ಪ, ಚಿದಾನಂದಮೂರ್ತಿ ಬಿನ್ ಚಿಕ್ಕನರಸಪ್ಪ, ನವೀನ್ ಕುಮಾರ್.ಸಿ. ಬಿನ್ ಚಿಕ್ಕನರಸಪ್ಪ	136/5	1-30.08	0-00.08	1-30
305.	ಮುನೇಗೌಡ ಬಿನ್ ಚಿಕ್ಕಮುನಿಶಾಮಪ್ಪ	136/6	0-16	-	0-16
306.	ಮಧುಮತಿ ಕೋಂ ಎಲ್.ಜೆ.ದೇವರಾಜು	136/7	1-03.12	0-00.12	1-03
307.	ಜಯರಾಮ ಬಿನ್ ಚೀಲಪ್ಪ	136/8	0-39	-	0-39
308.	ಲಕ್ಷ್ಮಮ್ಮ ಕೋಂ ಲೇಟ್ ಚಿಕ್ಕ ಆಂಜಿನಪ್ಪ	136/9	1-00	-	1-00
309.	ರಮೇಶ.ಕೆ.ಎಂ ಬಿನ್ ಲೇಟ್ ಮುನಿಆಂಜಿನಪ್ಪ	136/10	1-20	-	1-20
310.	ಮಹಾತ್ಮ ಎಮ್.ಪಿ. ಬಿನ್ ಪಟಾಲಪ್ಪ	136/11	1-00.12	0-00.12	1-00
311.	ಮುನಿಶ್ಯಾಮೇಗೌಡ ಬಿನ್ ಲೇಟ್ ಮುನಿಆಂಜಿನಪ್ಪ	136/12	0-31.04	0-01.04	0-30
312.	ಗಾಯಿತ್ರಮ್ಮ ಕೋಂ ಚಿಕ್ಕಮುನಿಚಿನ್ನಪ್ಪ	136/13	0-10	-	0-10
313.	ನಂಜೇಗೌಡ ಬಿನ್ ಲೇಟ್ ಮುನಿಶಾಮಪ್ಪ	137/1	2-37	0-02	2-35
314.	ಆಂಜಿನಮ್ಮ ಕೋಂ ಕ್ಯಾತೇಗೌಡ	137/2	2-38	0-03	2-35
315.	ದೇವರಾಜು – ನಂಜೇಗೌಡ	137/3	1-22	0-02	1-20
316.	ಸುರೇಶ್ ಕುಮಾರ್ – ನಂಜೇಗೌಡ	137/4	1-21	0-01	1-20
317.	ಮುನೇಗೌಡ ಬಿನ್ ಮುನಿಶಾಮಿ, ನಾಗರಾಜು.ಕೆ.ಎಂ ಬಿನ್ ಮುನಿಶಾಮಪ್ಪ ವು॥ ಚಿಕ್ಕಮುನಿಶಾಮಪ್ಪ, ಕೆ.ಎಂ. ಆಂಜಿನಪ್ಪ ಬಿನ್ ಮುನಿಶಾಮಪ್ಪ ವು॥ ಚಿಕ್ಕಮುನಿಶಾಮಪ್ಪ, ಕೆ.ಎಂ.ಸುಬ್ಬಣ್ಣ ಬಿನ್ ಮುನಿಶಾಮಪ್ಪ ವು॥ ಚಿಕ್ಕಮುನಿಶಾಮಪ್ಪ, ಕೆ.ಎಂ.ಚನ್ನಪ್ಪ ಬಿನ್ ಮುನಿಶಾಮಪ್ಪ ವು॥ ಚಿಕ್ಕಮುನಿಶಾಮಪ್ಪ, ಕೆ.ಎಂ.ಮೂರ್ತಿ ಬಿನ್ ಮುನಿಶಾಮಪ್ಪ ವು॥ ಚಿಕ್ಕಮುನಿಶಾಮಪ್ಪ	138	5-38	-	5-38
318.	ಅಮ್ಮಯ್ಯಮ್ಮ ಕೋಂ ಲೇಟ್ ಆಂಜಿನಪ್ಪ	139/1	2-37	-	2-37
319.	ಮುನಿಶಾಮೇಗೌಡ ಬಿನ್ ಲೇಟ್ ಹನುಮಂತರಾಯಪ್ಪ, ಮಂಜುಳ ಕೋಂ ಲೇಟ್ ತಮ್ಮೇಗೌಡ, ಆಂಜಿನಪ್ಪ ಬಿನ್ ಲೇಟ್ ಭದ್ರಪ್ಪ	139/2	2-39	-	2-39
320.	ಮುನಿಆಂಜನಪ್ಪ ಬಿನ್ ಮುನಿಶಾಮಪ್ಪ, ಶ್ರೀನಾಥ್ ಬಿನ್ ಮುನಿಆಂಜಿನಪ್ಪ	140/1	3-00	-	3-00
321.	ಪದ್ಮಮ್ಮ ಕೋಂ ಬಿ.ಹೆಚ್.ಪಟಾಲಪ್ಪ, ರಾಧಮ್ಮ ಕೋಂ ಅಶ್ವತ್ಥನಾರಾಯಣ	140/2	3-34	0-20	3-14
322.	ಪಿಳ್ಳಣ್ಣ ಬಿನ್ ಮುನಿಶಾಮಪ್ಪ ಉ ಚೀಲಪ್ಪ	140/3	2-35	0-25	2-10
323.	ನಲ್ಲಪ್ಪ ಬಿನ್ ಲೇಟ್ ಗುಂಡಪ್ಪ	140/4	2-00	-	2-00
324.	ಸಾವಿತ್ರಮ್ಮ ಬಿನ್ ಲೇಟ್ ಆಂಜಿನಪ್ಪ, ಲೋಕೇಶ್ ಎ ಬಿನ್ ಲೇಟ್ ಆಂಜಿನಪ್ಪ, ರಮೇಶ್ ಎ ಬಿನ್ ಲೇಟ್ ಆಂಜಿನಪ್ಪ	140/5	1-10	0-10	1-00
325.	ಲೋಕೇಶ್ ಮತ್ತು ರಮೇಶ್ ಬಿನ್ ಆಂಜಿನಪ್ಪ	140/6	3-34	0-20	3-14
326.	ಕರಿಯಪ್ಪ, ಪೆರುಮಯ್ಯ, ಕೋನಪ್ಪ ಬಿನ್ ಚನ್ನರಾಯಪ್ಪ, ಕೆ.ಆಂಜಿನಪ್ಪ ಬಿನ್ ಕೋನಪ್ಪ, ದೊಡ್ಡಪಾಪ್ಪಣ್ಣ	141/1	0-30	-	0-30
327.	ನಾರಾಯಣಪ್ಪ ಬಿನ್ ಲಕ್ಷ್ಮಯ್ಯ	141/2	0-34	-	0-34
328.	ನಾರಾಯಣಪ್ಪ ಬಿನ್ ಲಕ್ಷ್ಮಯ್ಯ	141/4	0-30	-	0-30
329.	ಕೃಷ್ಣಪ್ಪ ಬಿನ್ ಲೇಟ್ ಕರಿಯಪ್ಪ	141/5	0-18	-	0-18
330.	ಸರೋಜಮ್ಮ ಬಿನ್ ಪೆರಮಕ್ಕ	141/6	0-20	-	0-20
331.	ಭಾನು ಶೇಷಾದ್ರಿ ಕೋಂ ಲೇಟ್ ಎಸ್.ಶೇಷಾದ್ರಿ	141/7	0-35	-	0-35
332.	ಚಿಕ್ಕಪಾಪಣ್ಣ ಬಿನ್ ಪೆರುಮಯ್ಯ	141/8	0-31	-	0-31
333.	ಅರ್ಚನ ಕೋಂ ವಿಕಾಸ್	141/9	0-18	-	0-18
334.	ಜಯಲಕ್ಷ್ಮಮ್ಮ ಬಿನ್ ಪೆರುಮಕ್ಕ	141/10	0-20	-	0-20
335.	ಮುನಿರಾಜು ಬಿನ್ ಮೈ.ಗಾ.ತಂದೆ ನಂಜಪ್ಪ, ಮಂಜುನಾಥ್ ಬಿನ್ ಮೈ.ಗಾ.ತಂದೆ ನಂಜಪ್ಪ	141/11	2-01	-	2-01
336.	ಆರ್.ಶ್ರೀನಿವಾಸಮೂರ್ತಿ ಬಿನ್ ಲೇಟ್ ಕೆ.ಸಿ.ರಾಮಾಂಜಿನಪ್ಪ	142/1ಎ1	0-20	-	0-20
337.	ಆರ್.ಶ್ರೀನಿವಾಸಮೂರ್ತಿ ಬಿನ್ ಲೇಟ್ ಕೆ.ಸಿ.ರಾಮಾಂಜಿನಪ್ಪ	142/1ಎ2	0-14	-	0-14
338.	ರತ್ನಮ್ಮ ಕೋಂ ಲೇಟ್ ಬಸವರಾಜು	142/1ಬಿ	0-15	-	0-15
339.	ಚಿಕ್ಕಪ್ಪಯ್ಯ ಬಿನ್ ಲೇಟ್ ಮುನಿಗಯ್ಯ	142/2	0-20	-	0-20
340.	ಬಚ್ಚಮ್ಮ ಕೋಂ ಲೇ ಮುನಿಶಾಮಪ್ಪ	142/3	0-09	-	0-09
341.	ಕೆ.ಎಂ.ವೆಂಕಟೇಶ ಬಿನ್ ಮುನಿಯಪ್ಪ	142/4	0-04	-	0-04
342.	ಮುನಿಮಾರಪ್ಪ ಬಿನ್ ಮುನಿಗಿರಿಯಪ್ಪ, ಶ್ಯಾಮಲ ಕೋಂ ಮುನಿಮಾರಪ್ಪ	142/5	0-13	-	0-13
343.	ಅಮರವತಿ ಬಿನ್ ಲೇಟ್ ಕೃಷ್ಣಪ್ಪ	143/1	0-20	-	0-20
344.	ಎಸ್.ನಾಗರಾಜು ಬಿನ್ ಲೇಟ್ ಸೋತೇಗೌಡ	143/2	1-08	-	1-08
345.	ತಮ್ಮೇಗೌಡ ಬಿನ್ ಲೇ ಭದ್ರಪ್ಪ, ಆಂಜಿನಪ್ಪ ಬಿನ್ ಲೇ ಭದ್ರಪ್ಪ, ಮಂಜುಳ ಕೋಂ ಲೇಟ್ ತಮ್ಮೇಗೌಡ, ಆಂಜಿನಪ್ಪ ಬಿನ್ ಲೇಟ್ ಭದ್ರಪ್ಪ	143/3	0-22	-	0-22
346.	ಮುನಿಶಾಮೇಗೌಡ ಬಿನ್ ಲೇಟ್ ಹನುಮಂತರಾಯಪ್ಪ	143/7	0-22	-	0-22
347.	ಪ್ರಕಾಶ್ ಬಿನ್ ಲೇಟ್ ಕೃಷ್ಣಪ್ಪ	143/4	0-11	-	0-11
348.	ಕೋಮಲ.ಎನ್ ಕೋಂ ಪೆರುಮಣ್ಣ	143/5	0-11	-	0-11
349.	ನಾಗವೇಣಿ ಕೋಂ ಬಾಬು	143/6	0-11	-	0-11
350.	ಮೈಲಾರಪ್ಪ ಬಿನ್ ಲೇಟ್ ಆವಲಪ್ಪ	144/1	1-18	-	1-18
351.	ಅವಲಮೂರ್ತಿ ಬಿನ್ ದೊಡ್ಡಮುನಿಶಾಮಪ್ಪ	144/2	1-18	-	1-18
352.	ಆಂಜಿನಮ್ಮ ಕೋಂ ಕ್ಯಾತೇಗೌಡ	145/1	1-07.08	-	1-07.08
353.	ಅಪ್ಪಯ್ಯ ಎಸ್ ಬಿನ್ ಲೇಟ್ ಸೊಣ್ಣಪ್ಪ	145/2	1-07.08	-	1-07.08
354.	ಪ್ರವೀಣ್ ಕುಮಾರ್.ಕೆ.ಪಿ ಬಿನ್ ಪಾಪೇಗೌಡ	159	1-00	-	1-00
355.	ಬಿ.ರಾಂಬಾಬು ಉ॥ ರಾಮ್ ಬಾಬು ಬಿನ್ ಗುರಪ್ಪ	160/1	0-08.08	-	0-08.08
356.	ಸುಧಾ ಎ ಕೋಂ ಸಿ.ಕೃಷ್ಣಪ್ಪ	160/2	0-34.08	-	0-34.08
357.	ಮೈಲಾರಪ್ಪ ಬಿನ್ ಚಿಕ್ಕಮುನಿಶಾಮಪ್ಪ, ರಾಜೇಗೌಡ ಬಿನ್ ಚಿಕ್ಕಮುನಿಶಾಮಪ್ಪ	161/1	2-00	-	2-00
358.	ದೊಡ್ಡಮಾಲೂರಪ್ಪ, ಚಿಕ್ಕಮಾಲೂರಪ್ಪ, ವೆಂಕಟರಮಣಪ್ಪ, ನಾರಾಯಣಪ್ಪ, ಮಾಲೂರಪ್ಪ ಬಿನ್ ದೊಡ್ಡಮಾಲೂರಪ್ಪ, ಬೀರಮ್ಮ ಕೋಂ ದೊಡ್ಡಮಾಲೂರಪ್ಪ, ಮುನೀರಪ್ಪ ಬಿನ್ ದೊಡ್ಡಮಾಲೂರಪ್ಪ, ಮಂಜುನಾಥ ಬಿನ್ ದೊಡ್ಡಮಾಲೂರಪ್ಪ, ಕಲಾ ಕೋಂ ಲೇಟ್ ಆಂಜನಮೂರ್ತಿ	161/2	3-34	0-04	3-30
359.	ಜಲಜಾಕ್ಷಿ ಕೋಂ ಲೇಟ್ ಗೋಪಾಲಗೌಡ	163/1	2-10	-	2-10
360.	ಆಂಜನೇಗೌಡ ಬಿನ್ ಚಿಕ್ಕಾಂಜಿನಪ್ಪ	163/2	1-00	-	1-00
361.	ಎಸ್.ಅಪ್ಪಯ್ಯ ಬಿನ್ ಲೇಟ್ ಸೊಣ್ಣಪ್ಪ	163/3	0-24	-	0-24
362.	ಮಂಜಮ್ಮ ಬಿನ್ ಚಿಕ್ಕಾಂಜಿನಪ್ಪ	163/4	0-20	-	0-20
363.	ಎಸ್.ನಾಗರಾಜು ಬಿನ್ ಲೇಟ್ ಟಿ.ಶ್ಯಾಮಣ್ಣ	163/5	0-20	-	0-20
364.	ಕಮಲ ಕೋಂ ಲೇಟ್ ಚಿಕ್ಕರಾಮೇಗೌಡ	163/6	0-15	-	0-15
365.	ಸತ್ಯನಾರಾಯಣಗೌಡ ಬಿನ್ ಚಿಕ್ಕಾಂಜಿನಪ್ಪ	163/7	0-16	0-01	0-15
366.	ಆಂಜನಪ್ಪ ಬಿನ್ ದಾಸಪ್ಪ	164	1-30	0-04	1-26
367.	ರಾಮಪ್ಪ ಬಿನ್ ಮುನಿಸಂಜೀವಪ್ಪ, ಪಾಪೇಗೌಡ ಉ ಮುನಿಆಂಜಿನಪ್ಪ ಬಿನ್ ನಂಜೇಗೌಡ	165/1	3-34.08	0-04.08	3-30
368.	ಎನ್.ಜಗನ್ನಾಥ ಗೌಡ್ ಬಿನ್ ಲೇಟ್ ಎನ್.ಸಶಿವಣ್ಣಗೌಡ್, ಜಯಶ್ರೀ ಜಗನ್ನಾಥ ಗೌಡ್ ಕೋಂ ಎನ್.ಜಗನ್ನಾಥ ಗೌಡ್	165/2	1-10.12	0-00.12	1-10
369.	ಪಾಪೇಗೌಡ ಉ॥ ಮುನಿಆಂಜಿನಪ್ಪ ಬಿನ್ ನಂಜೇಗೌಡ	165/3	1-10.12	0-00.12	1-10
370.	ಎಮ್.ಚಂದ್ರೇಗೌಡ ಬಿನ್ ಲೇಟ್ ಮುಕುಂದಪ್ಪ	166/1	1-30	0-01	1-29
371.	ಮಾಣಿಕ್ಕಮ್ಮ ಕೋಂ ಮುನಿವೆಂಕಟಪ್ಪ	166/2	1-31	0-01	1-30
372.	ಸಂಜೇಗೌಡ ಬಿನ್ ಕೆ.ಎಸ್.ರಾಮಪ್ಪ, ರಾಜಮ್ಮ ಬಿನ್ ಬಿ.ರಾಮಣ್ಣ, ಗೋವಿಂದರಾಜು ಬಿನ್ ಲೇಟ್ ಕೆ.ಎಸ್. ರಾಮಪ್ಪ	166/3	2-02	0-02	2-00
373.	ಹೊಟ್ಟಪ್ಪ ಬಿನ್ ಜುಂಜಪ್ಪ, ರಾಜಮ್ಮ ಕೋಂ ಹೊಟ್ಟಪ್ಪ	167/1	2-32	-	2-32
374.	ಚನ್ನಕೇಶವಮೂರ್ತಿ ಬಿನ್ ಲೇಟ್ ಮುನಿವೆಂಕಟಪ್ಪ, ಶ್ರೀನಿವಾಸಮೂರ್ತಿ	167/2	2-06	-	2-06
375.	ಗೋವಿಂದರಾಜು ಬಿನ್ ಚಿಕ್ಕ ಆಂಜಿನಪ್ಪ	168/1	3-13	-	3-13
376.	ಸುಜಾತಮ್ಮ ಕೋಂ ಮುನೇಗೌಡ	168/2	1-00	-	1-00
377.	ಮುನಿಯಪ್ಪ ಬಿನ್ ಲೇಟ್ ಮುನಿಶಾಮಪ್ಪ	168/3	0-20	-	0-20
378.	ಎಂ.ಕೃಷ್ಣಪ್ಪ, ಮುನಿಶಾಮಪ್ಪ, ಲಕ್ಷ್ಮಮ್ಮ ಕೋಂ ಲೇಟ್ ಸುಬ್ಬಣ್ಣ, ಮುನಿಶಾಮಪ್ಪ ಬಿನ್ ಲೇಟ್ ಚಿಕ್ಕವೆಂಕಟಪ್ಪ	347	4-04	0-20	3-24
379.	ಮಹದೇವಮ್ಮ ಕೋಂ ಲೇಟ್ ನಾರಾಯಣಸ್ವಾಮಿ	362/1	0-22	0-02	0-20
380.	ಆನಂದ.ಎಂ ಬಿನ್ ಮುನಿಯಪ್ಪ	362/2	0-20	-	0-20
381.	ರಾಮಪ್ಪ ಬಿನ್ನೋಗಪ್ಪ	362/3	1-03	0-02	1-01
382.	ಜಿ.ಜಯರಾಮರೆಡ್ಡಿ ಬಿನ್ ಹೆಚ್.ಗುರುಮೂರ್ತಿ	363	2-04	0-02	2-02
383.	ಜಿ.ಜಯರಾಮರೆಡ್ಡಿ ಬಿನ್ ಹೆಚ್.ಗುರುಮೂರ್ತಿ	364	2-03	0-02	2-01
384.	ಮೊಹಮದ್ ಮುಸ್ತಫಾ ಬಿನ್ ಲೇಟ್ ಚಂದಾಪಟೇಲಾ	365	2-14	0-10	2-04
385.	ಸರ್ಕಾರಕ್ಕೆ ಮುಟ್ಟುಗೋಲು	366	2-24	0-18	2-06
386.	ಮಾರೇಗೌಡ, ಆನಂದ, ಅರುಣ್ ಕುಮಾರ್	367	3-37	-	3-37
387.	ರಾಮಚಂದ್ರಪ್ಪ ಬಿನ್ ಲಕ್ಷ್ಮಯ್ಯ	368/1	1-00	-	1-00
388.	ಭಗವಂತಪ್ಪ ಬಿನ್ ಲೇಟ್ ಲಕ್ಷ್ಮಯ್ಯ	368/2	1-00	-	1-00
389.	ಕೃಷ್ಣಪ್ಪ ಬಿನ್ ಲೇಟ್ ಲಕ್ಷ್ಮಯ್ಯ	368/3	0-39	-	0-39
390.	ಪಾಪೇಗೌಡ ಬಿನ್ ಲೇಟ್ ಲಕ್ಷ್ಮಯ್ಯ	368/4	1-00	-	1-00
391.	ಮಂಜುಳ ಕೋಂ ತಾಯಪ್ಪ	369/1	1-37	-	1-37
392.	ಮಂಜುಳ ಕೋಂ ಮೂರ್ತಿ	369/2	2-00	-	2-00
393.	ಮಂಜುಳ ಕೋಂ ತಾಯಪ್ಪ	370	3-33	0-05	3-28
394.	ಸೌಭಾಗ್ಯಲಕ್ಷ್ಮೀ ಕೋಂ ಕೆಂಪಣ್ಣ	371/1	1-36	0-05	1-31
395.	ಸೌಭಾಗ್ಯಲಕ್ಷ್ಮೀ ಕೋಂ ಕೆಂಪಣ್ಣ	371/2	1-37	0-05	1-32
396.	ರಾಮಚಂದ್ರ ಬಿನ್ ಲಕ್ಷ್ಮಯ್ಯ	372/1	1-39	0-03	1-36
397.	ರಾಮಯ್ಯ ಬಿನ್ ಲೇಟ್ ಮಾರಪ್ಪ	372/2	0-36	0-01	0-35
398.	ಪವಿತ್ರ ಎಂ ಕೋಂ ಬೈರೇಗೌಡ.ಎ	372/3	1-05	0-02	1-03
399.	ಕೆ.ವಿ.ರಾಮಾಂಜಿನಪ್ಪ ಬಿನ್ ಲೇಟ್ ವೀರಪ್ಪ, ಕೆ.ವಿ.ರಾಮಾಂಜಿನಪ್ಪ ಬಿನ್ ಲೇಟ್ ವೀರಪ್ಪ, ಕೆ.ಆರ್. ಮಂಜುನಾಥ ಬಿನ್ ಕೆ.ವಿ.ರಾಮಾಂಜಿನಪ್ಪ, ಕೆ.ಆರ್. ಮಂಜುನಾಥ ಬಿನ್ ಕೆ.ವಿ.ರಾಮಾಂಜಿನಪ್ಪ, ಕೆ.ಆರ್.ನಾಗರಾಜು ಬಿನ್ ಕೆ.ವಿ.ರಾಮಾಂಜಿನಪ್ಪ, ಕೆ.ಆರ್.ನಾಗರಾಜು ಬಿನ್ ಕೆ.ವಿ.ರಾಮಾಂಜಿನಪ್ಪ	373	3-38	0-01	3-37
400.	ಚಂದ್ರಮ್ಮ ಕೋಂ ಲೇಟ್ ಸಿ.ರಾಜಶೇಖರ್	374/1	0-38	-	0-38
401.	ಸೋಣ್ಣಪ್ಪ ಬಿನ್ ಆಂಜಿನಪ್ಪ, ಎ.ಕೃಷ್ಣಪ್ಪ ಬಿನ್ ಆಂಜಿನಪ್ಪ, ಬಿ.ಎಂ.ಆಂಜನೇಯ ಮೂರ್ತಿ ಬಿನ್ ಲೇಟ್ ಹೆಚ್. ಮುನಿಶಾಮಪ್ಪ	374/2	3-04	0-01	3-03
	ಒಟ್ಟು		790-13¾	205-03¾	585-10
ಗ್ರಾಮ: ನಾಗದೇನಹಳ್ಳಿ ಹೋಬಳಿ: ಕಸಬಾ ತಾಲ್ಲೂಕು:ದೊಡ್ಡಬಳ್ಳಾಪುರ ಜಿಲ್ಲೆ:: ಬೆಂಗಳೂರು ಗ್ರಾಮಾಂತರ					
1.	ಎಲ್.ಎಂ.ಗೌರಮ್ಮ ಕೋಂ ಎನ್.ಶಿವರಾಂ	10/2	1-06.08	0-03	1-03.08
2.	ಎಲ್.ಎಂ.ಗೌರಮ್ಮ ಕೋಂ ಎನ್.ಶಿವರಾಂ	10/4	0-25.08	-	0-25.08
3.	ವೈ.ವಿ.ಶ್ರೀನಿವಾಸ್ ಬಿನ್ ವೈ.ವೆಂಕಟಗಿರಿಯಪ್ಪ	10/5	0-25.08	-	0-25.08
4.	ವೈ.ವಿ.ಶ್ರೀನಿವಾಸ್ ಬಿನ್ ವೈ.ವೆಂಕಟಗಿರಿಯಪ್ಪ	10/6	1-03.08	-	1-03.08
5.	ಎನ್.ಎಂ.ಬಸವಪ್ರಕಾಶ್ ಬಿನ್ ಲೇಟ್ ಎನ್.ಮರಿಬಸವಯ್ಯ, ಎನ್.ಎಂ.ಮಂಜುನಾಥ್ ಬಿನ್ ಲೇಟ್ ಎನ್.ಮರಿಬಸವಯ್ಯ, ಎನ್.ಎಂ.ಉದಯಶಂಕರ್ ಬಿನ್ ಲೇಟ್ ಎನ್.ಮರಿಬಸವಯ್ಯ	11/1	1-03	0-01	1-02
6.	ಎನ್.ಬಿ.ಮುನೇಗೌಡ ಬಿನ್ ಭಚ್ಚಣ್ಣ	11/2	4-27	0-05	4-22
7.	ಎನ್.ಎ.ವೆಂಕಟೇಗೌಡ ಬಿನ್ ಎಲ್.ಎನ್.ಆಂಜನಪ್ಪ	11/3	3-00	0-10.08	2-29.08
8.	ಎನ್.ಎ.ವೇಣುಗೋಪಾಲ್ ಬಿನ್ ಎಲ್.ಎನ್.ಆಂಜನಪ್ಪ	11/4	1-16	0-07.08	1-08.08
9.	ಶಶಿಕಲಾ ಕೋಂ ಲೇಟ್ ವಿ.ಸುಬ್ಬಗೌಡ	11/5	1-00	-	1-00
10.	ಆಂಜಿನಮ್ಮ ಕೋಂ ಕೃಷ್ಣಪ್ಪ	11/6	0-21	-	0-21
11.	ಸರ್ಕಾರಿ, ತಮ್ಮಣ್ಣಪ್ಪ ಬಿನ್ ಭಗವಂತಪ್ಪ, ಮುನೇಗೌಡ ಬಿನ್ ಲೇಟ್ ಬಜಪ್ಪ, ಪುಟ್ಟಣ್ಣ ಬಿನ್ ಬೈರೇಗೌಡ, ಮುಖಿಶಾಮಪ್ಪ ಬಿನ್ ಗುನ್ನಪ್ಪ, ನಾರಾಯಣಮ್ಮ ಕೋಂ ಲೇಟ್ ನಾರಾಯಣಪ್ಪ	16	7-13	7-13	-
12.	ಸರ್ಕಾರಿ ಗೋಮಾಳ, ಸಂಜೀವಮ್ಮ ಕೋಂ ಲೇಟ್ ಮಾರಣ್ಣ, ನಾರಾಯಣಮ್ಮ ಕೋಂ ಲೇಟ್ ನಾರಾಯಣಪ್ಪ, ಎನ್.ಎಸ್.ನಾಗರಾಜು ಬಿನ್ ಲೇಟ್ ಸುಬ್ಬಣ್ಣ, ಎನ್.ಎಸ್. ಆಂಜಿನಪ್ಪ ಬಿನ್ ಲೇಟ್ ಸುಬ್ಬಣ್ಣ, ಎನ್.ಬಿ.ನಾಗರಾಜು ಬಿನ್ ಭಗವಂತಪ್ಪ, ಜಯಮ್ಮ ಕೋಂ ಲೇ ಎನ್.ಬಿ.ನಂಜೇಗೌಡ	17	10-23	10-23	-
13.	ಸರ್ಕಾರಿ ಗೋಮಾಳ, ಎನ್.ಎಸ್.ಆಂಜಿನಪ್ಪ ಬಿನ್ ಸುಬ್ಬಣ್ಣ, ಮುನಿಯಪ್ಪ ಬಿನ್ ಮುನಿಶಾಮಪ್ಪ, ನರಸಿಂಹಯ್ಯ ಬಿನ್ ಪೂಜಪ್ಪ, ಆಂಜಿನಮ್ಮ ಕೋಂ ಹನುಮಂತರಾಯಪ್ಪ, ಹನುಮಂತೇಗೌಡ ಬಿನ್ ಹನುಮಂತರಾಯಪ್ಪ, ಅಕ್ಕಯ್ಯಮ್ಮ ಕೋಂ ಲೇಟ್ ನರಸಿಂಹಯ್ಯ, ನಾಗರಾಜ ಎನ್.ಎ. ಬಿನ್ ಲೇಟ್ ಅಕ್ಕಲಪ್ಪ, ಎನ್.ಟಿ.ಹನುಮೇಗೌಡ ಬಿನ್ ತಾಯಪ್ಪ, ಪಿಳ್ಳಯ್ಯ ಬಿನ್ ಮುನಿಶಾಮಯ್ಯ, ಬೈರೇಗೌಡ ಬಿನ್ ಪುಟ್ಟಣ್ಣ, ಜೋಗಪ್ಪ ಬಿನ್ ಆಂಜಿನಪ್ಪ, ಗುಳ್ಳಪ್ಪ ಬಿನ್ ಮುನಿಶಾಮಪ್ಪ, ಚಿಕ್ಕಬಚ್ಚಪ್ಪ ಬಿನ್ ವೆಂಕಟಪ್ಪ, ಮಾರಕ್ಕ ಬಿನ್ ಓಬಪ್ಪ, ಯಶೋಧಮ್ಮ ಕೋಂ ಲೇಟ್ ಎಂ.ಜಯರಾಮಯ್ಯ, ಮಂಜುಳ ಕೋಂ ಶ್ರೀರಾಮ್, ಮುನಿಯಪ್ಪ ಬಿನ್ ಪೂಜಪ್ಪ, ಮುನಿಶಾಮಪ್ಪ ಬಿನ್ ಗುನ್ನಪ್ಪ, ತಮ್ಮಣ್ಣಪ್ಪ ಬಿನ್ ಚಿಕ್ಕನಂಜಪ್ಪ, ಮುದ್ದಪ್ಪ ಬಿನ್ ಮುತ್ಯಾಲಪ್ಪ, ಭಾಗ್ಯಮ್ಮ ಕೋಂ ಲೇಟ್ ನಾರಾಯಣಚಾರ್	18	12-21	12-21	-
14.	ಸರ್ಕಾರಿ ಗೋಮಾಳ, ಎನ್.ಸೋಮಣ್ಣ ಬಿನ್ ನರಸಿಂಹಯ್ಯ, ಮಾರಕ್ಕ ಕೋಂ ಓಬಪ್ಪ, ಎನ್.ಎ.ನಾರಾಯಣಸ್ವಾಮಿ ಬಿನ್ ಆಂಜಿನಪ್ಪ, ಎನ್.ಎಂ.ಭಗವಂತಪ್ಪ ಬಿನ್ ಮುನಿಶಾಮಪ್ಪ, ಕೃಷ್ಣಪ್ಪ ಬಿನ್ ಮುನಿಶಾಮಯ್ಯ, ನಂಜುಂಡಪ್ಪ ಬಿನ್ ಮುನಿಶಾಮಯ್ಯ, ಆಂಜಿನಮ್ಮ ಕೋಂ ಹನುಮಂತರಾಯಪ್ಪ, ಹನುಮಂತೇಗೌಡ ಬಿನ್ ಹನುಮಂತರಾಯಪ್ಪ, ಮುನಿರಾಜು ಬಿನ್ ಲೇಟ್ ಮುನಿಪಾಪಣ್ಣ, ದೇವಿರಮ್ಮ ಕೋಂ ಲೇಟ್ ಎನ್.ಟಿ.ಆಂಜಿನಪ್ಪ, ಎನ್.ಟಿ.ಹನುಮೇಗೌಡ ಬಿನ್ ತಾಯಪ್ಪ, ರಾಮಕ್ಕ ಕೋಂ ಓಬಪ್ಪ, ನಾರಾಯಣಚಾರ್ ಬಿನ್ ರಾಮಾಚಾರ್, ರಾಮಪ್ಪ ಬಿನ್ ಕೂರ್ಲಚನ್ನಪ್ಪ, ಪಿಳ್ಳಯ್ಯ ಬಿನ್ ಮುನಿಶಾಮಯ್ಯ, ನಾರಾಯಣಚಾರ್ ಬಿನ್ ರಾಮಾಚಾರ್, ಬಿ.ಎನ್.ಸುಮಿತ್ರ ಕೋಂ ಲೇಟ್ ಎನ್.ಅಶ್ವತ್ಥನಾರಾಯಣ	19	13-36	13-36	-
15.	ಆಂಜಿನಮ್ಮ ಕೋಂ ಎ.ನರಸಿಂಹಮೂರ್ತಿ	20/1	3-22.08	0-02.12	3-19.12
16.	ಆನಂದಮ್ಮ ಬಿನ್ ಲೇಟ್ ಪುಟ್ಟಣ್ಣ, ಸಂಜೀವಮ್ಮ ಬಿನ್ ಲೇಟ್ ಪುಟ್ಟಣ್ಣ	20/2	2-30.04	0-00.04	2-30
17.	ಹರಿಣಿ.ಸಿ. ಕೋಂ ಆರ್.ಕಿರಣ್ ಕುಮಾರ್	87/1	1-15	-	1-15
18.	ಸಿ.ಚನ್ನಕೇಶವಮೂರ್ತಿ ಬಿನ್ ಲೇಟ್ ಎನ್.ವಿ.ಚನ್ನರಾಯಪ್ಪ	87/2	1-14	-	1-14
19.	ಸಿ.ಚನ್ನಕೇಶವಮೂರ್ತಿ ಬಿನ್ ಲೇಟ್ ಎನ್.ವಿ.ಚನ್ನರಾಯಪ್ಪ	87/3	1-14	-	1-14
20.	ಕಾಡಿಯಾಲ ವೆಂಕಟರತ್ನಂ ಬಿನ್ ಲೇಟ್ ಸತ್ಯನಾರಾಯಣ	89	4-06	0-08	3-38
21.	ಬಿ.ಜಿ.ಕಿರಣ್ ಕುಮಾರ್ ಬಿನ್ ಎನ್.ಕೆ.ಜಯಂತ್	90/1	0-25	-	0-25
22.	ಸುಜಾತ ಕೋಂ ಎನ್.ಶಿವಣ್ಣ	90/2	1-02.12	-	1-02.12
23.	ಸುಜಾತ ಕೋಂ ಎನ್.ಶಿವಣ್ಣ	90/3	1-02.12	-	1-02.12
24.	ಸುಜಾತ ಕೋಂ ಎನ್.ಶಿವಣ್ಣ	90/4	1-11.08	0-09	1-02.08
25.	ಹರಿಣಿ.ಸಿ – ಆರ್.ಕಿರಣ್ ಕುಮಾರ್	91/1	1-00	-	1-00
26.	ಚನ್ನಕೃಷ್ಣಪ್ಪ ಬಿನ್ ಲೇಟ್ ಎನ್.ವಿ.ಮುನಿಶಾಮಪ್ಪ	91/2	1-00	-	1-00
27.	ಸಂಜೀವಮ್ಮ ಕೋಂ ಎನ್.ಬಿ.ಆಂಜಿನಪ್ಪ	91/3	1-00	-	1-00
28.	ಚನ್ನಕೃಷ್ಣಪ್ಪ ಬಿನ್ ಲೇಟ್ ಎನ್.ವಿ.ಮುನಿಶಾಮಪ್ಪ	91/4	1-00	-	1-00
29.	ರಾಮಕ್ಕ ಕೋಂ ಚನ್ನಪ್ಪ, ತಮ್ಮಣ್ಣಪ್ಪ ಬಿನ್ ಹನುಮಂತರಾಯಪ್ಪ, ಎನ್.ಎಸ್.ನಾಗರಾಜು ಬಿನ್ ಸುಬ್ಬಣ್ಣ, ಎನ್.ಎಸ್.ಆಂಜಿನಪ್ಪ ಬಿನ್ ಸುಬ್ಬಣ್ಣ, ಎನ್.ಎ.ನಾರಾಯಣಸ್ವಾಮಿ ಬಿನ್ ಲೇಟ್ ಆಂಜಿನಪ್ಪ, ಸಂಜೀವಮ್ಮ ಕೋಂ ಲೇಟ್ ಮಾರಣ್ಣ	92	6-19	0-10	6-09
30.	ಜಿ.ವಿಶ್ವನಾಥ್ ಬಿನ್ ಪಟೇಲ್ ನಾಗಪ್ಪ, ಜಿ.ಪಿ.ಸವಿತ ಬಿನ್ ಲೇಟ್ ಜಿ.ಕೆ.ಪರಮೇಶ್ವರಪ್ಪ, ಸಾವಿತ್ರಮ್ಮ ಕೋಂ ಲೇಟ್ ಜಿ.ಎನ್.ಬಸವರಾಜಪ್ಪ, ಜಿ.ಬಿ.ಭಾರತಿ ಬಿನ್ ಲೇಟ್ ಜಿ.ಎನ್.ಬಸವರಾಜಪ್ಪ, ಜಿ.ಬಿ.ಶಿವಕುಮಾರ್ ಬಿನ್ ಲೇಟ್ ಜಿ.ಎನ್.ಬಸವರಾಜಪ್ಪ, ಜಿ.ಬಿ.ಸುಧಾ ಬಿನ್ ಲೇಟ್ ಜಿ.ಎನ್.ಬಸವರಾಜಪ್ಪ	93/1	1-37.04	0-00.12	1-36.08
31.	ಜಯಮ್ಮ ಕೋಂ ನಂಜೇಗೌಡ	93/2	1-22.04	0-00.04	1-22
32.	ಎನ್.ಆಶಾ ಕೋಂ ಸುರೇಶ್	93/3	0-25.08	-	0-25.08
33.	ತಿಮ್ಮರಾಯಪ್ಪ, ಚಿಕ್ಕಬಚ್ಚಪ್ಪ, ಮಂಜುನಾಥ ಬಿನ್ ಲೇಟ್ ದೊಡ್ಡಬಚ್ಚಪ್ಪ ಉರುಫ್ ಬಚ್ಚಪ್ಪ, ಮುನಿರಾಜು ಬಿನ್ ಲೇಟ್ ದೊಡ್ಡಬಚ್ಚಪ್ಪ ಉರುಫ್ ಬಚ್ಚಪ್ಪ	94	2-05	0-05	2-00
34.	ಪಿ.ಶಂಕರೇಗೌಡ ಬಿನ್ ಲೇಟ್ ಪುಟ್ಟಣ್ಣ	95/1	1-00	-	1-00
35.	ಆನಂದಗೌಡ ಎನ್ ಬಿನ್ ಎಂ.ನಂಜೇಗೌಡ	95/2	1-06	0-06	1-00
36.	ಸರ್ಕಾರಿ	98	2-00	2-00	-
37.	ಕೋದಂಡರಾಮದೇವರು, ರತ್ನಮ್ಮ ಕೋಂ ಲೇಟ್ ಎನ್. ರಾಮಾಂಜಿನಪ್ಪ, ಶಿವಣ್ಣ ಬಿನ್ ಸಿ.ಎಂ.ನಾರಾಯಣಪ್ಪ, ಎನ್.ಸಿ.ಜಯರಾಮಪ್ಪ ಬಿನ್ ಚಿಕ್ಕ ಆಂಜಿನಪ್ಪ, ಸಿ.ನಾರಾಯಣಸ್ವಾಮಿ ಬಿನ್ ಲೇಟ್ ಚನ್ನಪ್ಪ, ವಿನೋದ್ ಕುಮಾರ್ ಬಿನ್ ಲೇಟ್ ನರಸಿಂಹಮೂರ್ತಿ	99	5-03	0-05	4-38
	ಒಟ್ಟು		**104-02¾**	**48-07**	**55-35¾**

ಘೋಷ್ವಾರೆ

ಕ್ರ.ಸಂ.	ಗ್ರಾಮದ ಹೆಸರು	ವಿಸ್ತೀರ್ಣ		
		ಐನು ಎ–ಗು	ಖರಾಬು ಎ–ಗು	ಬಾಕಿ ಎ–ಗು
1	ಆದಿನಾರಾಯಣಹೊಸಹಳ್ಳಿ	136-31	42-24½	94-06½
2	ಕೊನಘಟ್ಟ	790-13¾	205-03¾	585-10
3	ನಾಗದೇನಹಳ್ಳಿ	104-02¾	48-07	55-35¾
	ಒಟ್ಟು	**1031-07½**	**295-35¼**	**735-12¼**

ಈ ಮೇಲ್ಕಂಡ ಜಮೀನಿನ ಖಾತೆದಾರರು/ಅನುಭವದಾರರು/ಹಿತಾಸಕ್ತರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಕರ್ನಾಟಕ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ವಿಧಿ 28(2)ರ ಮೇರೆಗೆ ಅಧಿಸೂಚಿತ ಖಾತೆದಾರರಿಗೆ/ಅನುಭವದಾರರಿಗೆ ತಿಳುವಳಿಕೆ ನೋಟೀಸುಗಳನ್ನು ಹೊರಡಿಸಿ ಜಾರಿ ಮಾಡಲಾಗಿದೆ ಹಾಗೂ ನೋಂದಾಯಿತಿ ಅಂಚೆ ಮೂಲಕ ರವಾನಿಸಲಾಗಿತ್ತು. ಕೆಲವು ಭೂಮಾಲೀಕರ ವಿಳಾಸ ತಿಳಿದುಬಂದಿಲ್ಲವಾದ್ದರಿಂದ ಅಂಚೆ ಲಕೋಟೆಗಳ ಮೇಲೆ ಅಂಚೆ ಇಲಾಖೆಯವರು ಷರಾ ಬರೆದು ಈ ಕಛೇರಿಗೆ ಹಿಂದಿರುಗಿಸಿರುತ್ತಾರೆ. ಮೇಲ್ಕಂಡ ಜಮೀನಿನ ಖಾತೆದಾರರು/ಹಕ್ಕುದಾರರುಗಳು ಈ ಪ್ರಕಟಣೆಯನ್ನು ಕೆ.ಐ.ಎ.ಡಿ. ಕಾಯ್ದೆ 1966ರ ವಿಧಿ 28(2)ರ ಮೇರೆಗೆ ತಿಳುವಳಿಕೆ ನೋಟೀಸು ಎಂದು ಪರಿಗಣಿಸತಕ್ಕದ್ದು.

ಪ್ರಸ್ತುತ ಭೂಸ್ವಾಧೀನ ಪ್ರಕ್ರಿಯೆಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಭೂಮಾಲೀಕರು/ಹಿತಾಸಕ್ತಿ ಉಳ್ಳವರು ತಮ್ಮ ಆಕ್ಷೇಪಣೆಗಳನ್ನು ರಾಜ್ಯಪತ್ರದಲ್ಲಿ ಈ ಪ್ರಕಟಣೆಗೊಂಡ 30 ದಿನಗಳೊಳಗಾಗಿ ಅಗತ್ಯ ದಾಖಲೆಗಳೊಂದಿಗೆ ಖುದ್ದಾಗಿ ಅಥವಾ ಅವರ ಪರವಾಗಿ ಅಧಿಕಾರ ಪಡೆದವರು ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ. ಅವಧಿ ಮೀರಿ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂಬುದಾಗಿ ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರಲಾಗಿದೆ. ಮೇಲ್ಕಂಡ ಗ್ರಾಮಗಳ ಜಮೀನುಗಳ ವಿಚಾರಣೆಯನ್ನು ಕೆಳಕಂಡ ದಿನಾಂಕಗಳಂದು ನಿಗದಿಪಡಿಸಲಾಗಿದೆ.

ಕ್ರ. ಸಂ.	ಗ್ರಾಮದ ಹೆಸರು	ಸರ್ವೆ ನಂಬರ್	ಗೆಜೆಟ್ ಕ್ರ.ಸಂ.	ವಿಚಾರಣಾ ದಿನಾಂಕ ಮತ್ತು ಸಮಯ
		ಇಂದ–ವರೆಗೆ	ಇಂದ–ವರೆಗೆ	
1	ಆದಿನಾರಾಯಣ ಹೊಸಹಳ್ಳಿ	67/1–75/17	1–50	25.04.2022 ಬೆಳಿಗ್ಗೆ 11.00 ಗಂಟೆಗೆ
		77/1–115/4	51–86	26.04.2022 ಬೆಳಿಗ್ಗೆ 11.00 ಗಂಟೆಗೆ
2	ಕೊನಘಟ್ಟ	60ರ ಪೈಕಿ–74/3	1–50	27.04.2022 ಬೆಳಿಗ್ಗೆ 11.00 ಗಂಟೆಗೆ
		74/4 – 82/12	51–100	28.04.2022 ಬೆಳಿಗ್ಗೆ 11.00 ಗಂಟೆಗೆ
		82/13–94/4	101–150	29.04.2022 ಬೆಳಿಗ್ಗೆ 11.00 ಗಂಟೆಗೆ
		95–104/6	151–200	04.05.2022 ಬೆಳಿಗ್ಗೆ 11.00 ಗಂಟೆಗೆ
		104/7–118	201–250	05.05.2022 ಬೆಳಿಗ್ಗೆ 11.00 ಗಂಟೆಗೆ
		119–136/1	251–300	06.05.2022 ಬೆಳಿಗ್ಗೆ 11.00 ಗಂಟೆಗೆ
		136/2–144/1	301–350	09.05.2022 ಬೆಳಿಗ್ಗೆ 11.00 ಗಂಟೆಗೆ
		144/2–374/2	351–401	10.05.2022 ಬೆಳಿಗ್ಗೆ 11.00 ಗಂಟೆಗೆ
3	ನಾಗದೇನಹಳ್ಳಿ	10/2–99	1–37	11.05.2022 ಬೆಳಿಗ್ಗೆ 11.00 ಗಂಟೆಗೆ

ಮೇಲ್ಕಂಡ ದಿನಾಂಕದಂದು ದಾಖಲಾತಿಗಳೊಂದಿಗೆ ಲಿಖಿತವಾಗಿ ಅಥವಾ ಖುದ್ದಾಗಿ ಹಾಜರಾಗಿ ಸಲ್ಲಿಸಲು ಸೂಚಿಸಿದೆ.

ಸಹಿ/– ವಿಶೇಷ ಭೂಸ್ವಾಧೀನಾಧಿಕಾರಿ–2,
ಕೆಐಎಡಿಬಿ, ಬೆಂಗಳೂರು.

ವಾಸಾಸಂಇ/ಉನಿ–ಸಿ.ಪಿ/173/ಎಂಸಿಎ/2022–23

ಸಹಾಯವಾಣಿಗೆ ಮೊರೆ ಹೋದ ಪಿಯುಸಿ ವಿದ್ಯಾರ್ಥಿಗಳು

‘ಸಾಮೂಹಿಕ ತೇರ್ಗಡೆ’ಗೆ ಮನವಿ!

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ‘ಚೈಲ್ಡ್‌ಲೈನ್’ ಮಕ್ಕಳ ಸಹಾಯವಾಣಿಗೂ ಕರೆ
- ಶಿಕ್ಷಕರಿಂದ ಆಪ್ತ ಸಮಾಲೋಚನೆಗೆ ಸಲಹೆ

ಬೆಂಗಳೂರು: ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ಒಂದು ದಿನ ಬಾಕಿ ಇರುವಂತೆ, ಆತಂಕಭರಿತರಾಗಿರುವ ಕೆಲವು ವಿದ್ಯಾರ್ಥಿಗಳು ‘ಸಾಮೂಹಿಕ’ವಾಗಿ ಎಲ್ಲರನ್ನೂ ಪಾಸ್ ಮಾಡುವಂತೆ ಪದವಿಪೂರ್ವ ಶಿಕ್ಷಣ ಇಲಾಖೆಯ ಸಹಾಯವಾಣಿಗೆ ಕರೆ ಮಾಡಿ ಮನವಿ ಮಾಡುತ್ತಿದ್ದಾರೆ!

ಪರೀಕ್ಷೆಗೆ ಸಂಬಂಧಿಸಿದ ಮಾಹಿತಿ ಹಂಚಿಕೊಳ್ಳಲು ಇಲಾಖೆ ಸಹಾಯವಾಣಿಯನ್ನು ಆರಂಭಿಸಿದೆ. ಈ ಸಹಾಯವಾಣಿಗೆ ಕರೆ ಮಾಡುತ್ತಿರುವ ಕೆಲವು ವಿದ್ಯಾರ್ಥಿಗಳು, ಪರೀಕ್ಷೆ ಇಲ್ಲದೆ ಎಲ್ಲರನ್ನೂ ಪಾಸ್ ಮಾಡುವಂತೆ ಬೇಡಿಕೆ ಮುಂದಿಡುತ್ತಿದ್ದಾರೆ ಎಂದು ಕೇಂದ್ರದ ಉಸ್ತುವಾರಿ ವಹಿಸಿಕೊಂಡಿರುವ ಸಿಬ್ಬಂದಿ ತಿಳಿಸಿದರು.

‘ಕೋವಿಡ್ ಕಾರಣದಿಂದ ಕಳೆದ ವರ್ಷ ಪ್ರಥಮ ಪಿಯುಸಿ ಪರೀಕ್ಷೆ ನಡೆದಿಲ್ಲ. ಹೀಗಾಗಿ, ಎಲ್ಲ ವಿದ್ಯಾರ್ಥಿಗಳಿಗೆ ದ್ವಿತೀಯ ಪಿಯುಸಿಗೆ ಪ್ರವೇಶ ನೀಡಲಾಗಿತ್ತು. ಹೀಗಾಗಿ, ಕೆಲವು ವಿದ್ಯಾರ್ಥಿಗಳು ಪರೀಕ್ಷೆ ಎದುರಿಸುವ ಆತ್ಮವಿಶ್ವಾಸವನ್ನೇ ಕಳೆದುಕೊಂಡಿದ್ದಾರೆ. ಅಂಥ ಕೆಲವು ವಿದ್ಯಾರ್ಥಿಗಳು ಪರೀಕ್ಷೆಯ ಪ್ರಶ್ನೆ ಪತ್ರಿಕೆ ಹೇಗಿರಬಹುದೆಂಬ ಬಗ್ಗೆ ಗಾಬರಿಗೊಂಡಿದ್ದಾರೆ. ಕೆಲವರು ಪರೀಕ್ಷೆ ರದ್ದುಪಡಿಸಿ, ಎಲ್ಲರನ್ನೂ ಉತ್ತೀರ್ಣಗೊಳಿಸುವಂತೆ ಮನವಿ ಮಾಡುತ್ತಿದ್ದಾರೆ’ ಎಂದೂ ಸಿಬ್ಬಂದಿ ತಿಳಿಸಿದರು.

ಈ ಬಾರಿ ವಿದ್ಯಾರ್ಥಿ ಸ್ನೇಹಿ ಪರೀಕ್ಷಾ ವ್ಯವಸ್ಥೆ ಅಳವಡಿಸಿಕೊಂಡಿದ್ದೇವೆ. ಪ್ರಶ್ನೆಪತ್ರಿಕೆಯಲ್ಲಿ ಆಯ್ಕೆಗೆ ಹೆಚ್ಚಿನ ಅವಕಾಶಗಳು ಇರಲಿದೆ. ಹೀಗಾಗಿ, ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ ಪರೀಕ್ಷೆ ಬರೆಯಬಹುದು

ಬಿ.ಸಿ. ನಾಗೇಶ್, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ

‘ಪರೀಕೆಗೆ ತಯಾರಿ ನಡೆಸುತ್ತಿರುವ ಕೆಲವು ವಿದ್ಯಾರ್ಥಿಗಳು ಮಕ್ಕಳ ಸಹಾಯವಾಣಿಗೂ (ಚೈಲ್ಡ್ ಲೈನ್-1098) ಕರೆ ಮಾಡುತ್ತಿದ್ದಾರೆ. ಈ ರೀತಿ ಕರೆ ಮಾಡಿದ 18 ವರ್ಷದ ವಿದ್ಯಾರ್ಥಿಯೊಬ್ಬ, ವಾರ್ಷಿಕ ಪರೀಕ್ಷೆಯ ದಿನಗಳು ಘೋಷಣೆಯಾದ ಬಳಿಕ ತೀವ್ರ ಆತಂಕಗೊಂಡಿರುವ ಬಗ್ಗೆ ಹೇಳಿಕೊಂಡಿದ್ದಾನೆ. ಅದನ್ನು ಕೇಳಿಸಿಕೊಂಡ ಸಹಾಯವಾಣಿ ಕೇಂದ್ರದ ಆಪ್ತ ಸಮಾಲೋಚಕರು ಅಚ್ಚರಿಗೊಂಡಿದ್ದಾರೆ!

‘ಕೋವಿಡ್ ಸಾಂಕ್ರಾಮಿಕ ರೋಗ ವಿದ್ಯಾರ್ಥಿಗಳ ಮೇಲೆ ಗಂಭೀರ ಪರಿಣಾಮ ಬೀರಿದೆ. ವಿದ್ಯಾರ್ಥಿಗಳಿಗೆ ಅವರ ಭಾವನೆಗಳನ್ನು ಹಂಚಿಕೊಳ್ಳಲು ಗೆಳೆಯರೇ ಇಲ್ಲದಂಥ ಸ್ಥಿತಿ ನಿರ್ಮಾಣ ಆಗಿದೆ. ಪರೀಕ್ಷೆಯನ್ನು ಎದುರಿಸುವುದಕ್ಕೂ ಮೊದಲು ಅವರ ಜೊತೆ ಶಿಕ್ಷಕರು ಆಪ್ತಸಮಾಲೋಚನೆ ನಡೆಸಿ, ಆತ್ಮವಿಶ್ವಾಸ ತುಂಬಬೇಕು. ಪೋಷಕರು ಕೂಡಾ ಮಕ್ಕಳ ಆರೈಕೆ ವಿಚಾರದಲ್ಲಿ ಎಚ್ಚರಿಕೆ ವಹಿಸಬೇಕು’ ಎಂದು ಮಕ್ಕಳ ಹಕ್ಕುಗಳ ಹೋರಾಟಗಾರ ನಾಗಸಿಂಹ ಜಿ. ರಾವ್ ಹೇಳಿದರು.

ಬಿಜೆಪಿ ಜೊತೆ ಮೈತ್ರಿ ಇಲ್ಲವೆಂದು ಆಣೆಗೆ ಸಿದ್ಧರಿದ್ದೀರಾ; ಸಿದ್ದರಾಮಯ್ಯ ಸವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಿಮ್ಮದು ಜಾತ್ಯತೀತತೆಗೆ ಬದ್ಧವಾಗಿರುವ ಪಕ್ಷ ಎಂದು ಹೇಳುತ್ತಲೇ ಬಂದಿದ್ದೀರಿ. ಹಾಗಿದ್ದರೆ, ಮುಂದಿನ ದಿನಗಳಲ್ಲಿ ಬಿಜೆಪಿ ಜೊತೆ ಚುನಾವಣಾಪೂರ್ವ ಇಲ್ಲವೇ ಚುನಾವಣೋತ್ತರ ಮೈತ್ರಿ ಮಾಡಿಕೊಳ್ಳುವುದಿಲ್ಲವೆಂದು ಘೋಷಿಸಲು ಸಿದ್ಧ ಇದ್ದೀರಾ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರನ್ನು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಕೆಣಕಿದ್ದಾರೆ.

‘ಮಿಸ್ಟರ್ ಸುಳ್ಳುರಾಮಯ್ಯ’ ಎಂದು ನಾಲ್ಕು ಪ್ರಶ್ನೆಗಳನ್ನು ಕೇಳಿದ್ದ ಕುಮಾರಸ್ವಾಮಿಗ ಅವರಿಗೆ ಸರಣಿ ಟ್ವೀಟ್‌ಗಳ ಮೂಲಕ ಸಿದ್ದರಾಮಯ್ಯ ತಿರುಗೇಟು ನೀಡಿದ್ದಾರೆ. ‘ವಚನಭಂಗದ ನಿಮ್ಮ ಇತಿಹಾಸ ಕಂಡ ಜನತೆ ನಿಮ್ಮನ್ನು ನಂಬಲಾರರು. ಜನರಲ್ಲಿ ನಂಬಿಕೆ ಹುಟ್ಟಿಸಲು ಬಿಜೆಪಿ ಜೊತೆ ಮೈತ್ರಿ ಮಾಡಿಕೊಳ್ಳುವುದಿಲ್ಲ ಎಂದು ತಂದೆ ಎಚ್.ಡಿ. ದೇವೇಗೌಡರ ಮೇಲೆ ಆಣೆ ಮಾಡಲು ಸಿದ್ಧರಿದ್ದೀರಾ’ ಎಂದು ಸವಾಲು ಹಾಕಿದ್ದಾರೆ.

‘ಬಿಜೆಪಿ ಜೊತೆ ಎಂದೆಂದೂ ಮೈತ್ರಿ ಮಾಡಿಕೊಳ್ಳುವುದಿಲ್ಲ ಎಂದು ಘೋಷಿಸಿ ಬಿಟ್ಟರೆ ನಿಮ್ಮ ಪಕ್ಷ ಬಿಜೆಪಿಯ ‘ಬಿ- ಟೀಮ್’ ಎಂಬ ಆರೋಪ ಸುಳ್ಳು ಎಂದು ಸಾಬೀತು ಮಾಡಿದಂತಾಗುತ್ತದೆ’ ಎಂದಿರುವ ಸಿದ್ದರಾಮಯ್ಯ, ‘ಆಗ ನಿಮ್ಮ ಪಕ್ಷದ ಹೆಸರು ಕೂಡಾ ಅರ್ಥಪೂರ್ಣವಾಗುತ್ತದೆ’ ಎಂದು ಹೇಳಿದ್ದಾರೆ.

‘ದೇಶದಲ್ಲಿ ನಡೆಯುತ್ತಿರುವ ಜಾತ್ಯತೀತತೆ ಮತ್ತು ಕೋಮುವಾದದ ನಡುವಿನ ನಿರ್ಣಾಯಕ ಹೋರಾಟದಲ್ಲಿ ನಾವೆಲ್ಲಿ ನಿಂತಿದ್ದೇವೆ ಎನ್ನುವುದನ್ನು ಜನತೆಗೆ ತಿಳಿಸಬೇಕಾದ ಹೊಣೆಗಾರಿಕೆ ನಮ್ಮ ಮೇಲಿದೆ. ನಿತ್ಯ ನನ್ನ ವಿರುದ್ದ ನಂಜುಕಾರುತ್ತಿರುವ ಕುಮಾರಸ್ವಾಮಿಯವರೇ ನೀವೆಲ್ಲಿ ನಿಂತಿದ್ದೀರಿ ಎಂದು ಮೊದಲು ಹೇಳಿ’ ಎಂದೂ ಪ್ರಶ್ನಿಸಿದ್ದಾರೆ.

ಪ್ರಧಾನ ವೈಜ್ಞಾನಿಕ ಸಲಹೆಗಾರರಾಗಿ ಅಜಯ್ ಕುಮಾರ್



ಅಜಯ್‌ಕುಮಾರ್

ನವದೆಹಲಿ: ಭಾರತದ ಪ್ರಮುಖ ಭೌತ ಶಾಸ್ತ್ರಜ್ಞರಲ್ಲಿ ಒಬ್ಬರಾದ, ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ಪ್ರಾಧ್ಯಾಪಕ ಅಜಯ್ ಕುಮಾರ್ ಸೂದ್ ಅವರನ್ನು ಕೇಂದ್ರ ಸರ್ಕಾರದ ಪ್ರಧಾನ ವೈಜ್ಞಾನಿಕ ಸಲಹೆಗಾರರನ್ನಾಗಿ ನೇಮಕ ಮಾಡಿ ಬುಧವಾರ ಆದೇಶ ಹೊರಡಿಸಲಾಗಿದೆ.

ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆ ಕುರಿತ ಪ್ರಧಾನಮಂತ್ರಿ ಸಲಹಾ ಮಂಡಳಿಯ ಸದಸ್ಯರಾಗಿರುವ ಸೂದ್, ಖ್ಯಾತ ಜೀವಶಾಸ್ತ್ರಜ್ಞ ಕೆ.ವಿಜಯರಾಘವನ್ ಅವರ ಉತ್ತರಾಧಿಕಾರಿಯಾಗಿ 3 ವರ್ಷಗಳ ಅವಧಿಗೆ ನೇಮಕ ಗೊಂಡಿದ್ದಾರೆ. ಸೂದ್ ಅವ ರನ್ನು ಪ್ರಧಾನ ವೈಜ್ಞಾನಿಕ ಸಲಹೆಗಾರರನ್ನಾಗಿ ನೇಮಿಸಲು ಸಂಪುಟದ ನೇಮಕಾತಿ ಸಮಿತಿ ಅನುಮೋದನೆ ನೀಡಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ನ್ಯಾನೊತಂತ್ರಜ್ಞಾನ ಸಂಶೋಧನೆಯಲ್ಲಿ ಹೆಸರು ಗಳಿಸಿರುವ ಸೂದ್ ಅವರು ಪ್ರಸ್ತುತ ಐಐಎಸ್‌ಸಿಯಲ್ಲಿ ಭೌತವಿಜ್ಞಾನ ಗೌರವ ಪ್ರಾಧ್ಯಾಪಕರಾಗಿದ್ದಾರೆ.

‘500 ಎಕರೆಗೆ ದಾಖಲೆ ಕೊಟ್ಟರೆ ಅರ್ಧದಷ್ಟು ದಾನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾನು 500 ಎಕರೆ ಜಮೀನು ಹೊಂದಿರುವುದಾಗಿ ಆರೋಪ ಮಾಡಿರುವ ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ್ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡುತ್ತೇನೆ’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದ್ದಾರೆ.

‘ನನ್ನ ವಿರುದ್ಧ ಆರೋಪ ಮಾಡಿರುವ ನಿಮಗೆ ಕಾನೂನೇ ಉತ್ತರ ಕೊಡುತ್ತದೆ. ಕಾನೂನಿನ ಆ ಕಬಂಧ ಬಾಹುಗಳಿಂದ ನೀವು ಮತ್ತು ನಿಮ್ಮ ಜೀ ಹುಜೂರ್ ನಾಯಕರೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ’ ಎಂದು ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ನೀವು ಮಾಡಿರುವ ಸುಳ್ಳು ಆರೋಪಕ್ಕೆ ಸಾರ್ವಜನಿಕವಾಗಿ ಕ್ಷಮೆ ಯಾಚಿಸಬೇಕು. ನನ್ನ ಬಳಿ ಇದೆ ಎಂದು ಹೇಳಲಾದ 500 ಎಕರೆಗೆ ಭೂಮಿಗೆ ದಾಖಲೆಗಳನ್ನು ತಂದು ಕೊಟ್ಟರೆ, ತಂದು ಕೊಟ್ಟ ಪುಣ್ಯಾತ್ಮನಿಗೆ ಅರ್ಧದಷ್ಟು ದಾನವಾಗಿ ಕೊಟ್ಟು ಬಿಡುತ್ತೇನೆ’ ಎಂದೂ ರವಿ ಅವರು ಸವಾಲು ಹಾಕಿದ್ದಾರೆ.

‘ಮಹಾನ್ ಸುಳ್ಳುಗಾರ ಲಕ್ಷ್ಮಣ ಮಾಧ್ಯಮಗಳ ಮುಂದೆ ಕುಳಿತು ಸತ್ಯಹರಿಶ್ಚಂದ್ರನಂತೆ ಮಾತನಾಡುತ್ತಾರೆ. ಇವರು ತಮ್ಮದೇ ಪಕ್ಷದ ನಾಯಕರ ಬೇನಾಮಿ ಆಸ್ತಿ ಬಗ್ಗೆ ಹೇಳುವ ಬದಲು ನನ್ನ ಹೆಸರು ಹೇಳಿದ್ದಾರೆ. ನಿಮ್ಮ ಪಕ್ಷದ ನಾಯಕರು ಹೊಲದಲ್ಲಿ ಗುದ್ದಲಿ, ಪಿಕಾಸಿ ಹಿಡಿದು ಕೂಲಿ ನಾಲಿ ಮಾಡಿ ಕೋಟಿಗಟ್ಟಲೆ ಆಸ್ತಿ ಸಂಪಾದಿಸಿದ್ದಾರೆಯೇ’ ಎಂದೂ ರವಿ ಅವರು ಪ್ರಶ್ನಿಸಿದ್ದಾರೆ.

ಪಟಾಲಮ್ಮ ಜಾತ್ರೆ

ರಾಜಾನುಕುಂಟೆ ಸಮೀಪದ ಅದ್ದಿಗಾನಹಳ್ಳಿಯಲ್ಲಿ ಪಟಾಲಮ್ಮ ದೇವಿಯ ಜಾತ್ರಾ ಮಹೋತ್ಸವ ಬುಧವಾರ ವಿಜೃಂಭಣೆಯಿಂದ ನಡೆಯಿತು.

ಉಮಾಕಾಂತಗೆ ಅನಂತಶ್ರೀ ಪ್ರಶಸ್ತಿ



ಶಿರಸಿ: ಸಿದ್ದಾಪುರದ ಅನಂತ ಯಕ್ಷಕಲಾ ಪ್ರತಿಷ್ಠಾನವು ಯಕ್ಷಗಾನ ಕ್ಷೇತ್ರದ ಮೇರು ಕಲಾವಿದರಿಗೆ ನೀಡುವ ‘ಅನಂತ ಶ್ರೀ ಪ್ರಶಸ್ತಿ’ಯನ್ನು ತಾಳಮದ್ದಲೆ ಅರ್ಥದಾರಿ ಉಮಾಕಾಂತ ಭಟ್ಟ ಕೆರೆಕೈ ಅವರಿಗೆ ಘೋಷಿಸಿದೆ. ಪ್ರಶಸ್ತಿಯು ₹3,000 ನಗದು, ಫಲಕ, ಪತ್ರ ಒಳಗೊಂಡಿರಲಿದೆ. ಪ್ರತಿಷ್ಠಾನ ನೀಡುವ 11ನೇ ಪ್ರಶಸ್ತಿ ಇದಾಗಿದೆ. ಏ.30 ರಂದು ಶಿರಸಿ ಸಮೀಪದ ವರ್ಗಸರದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರತಿಷ್ಠಾನದ ಕಾರ್ಯದರ್ಶಿ ಕೇಶವ ಹೆಗಡೆ ಕೊಳಗಿ ತಿಳಿಸಿದ್ದಾರೆ.

ನಂದಿಬೆಟ್ಟದಲ್ಲಿ ಅರಳಿದ ರೋಸ್‌ಪಿಂಕ್ ಲಿಲ್ಲಿ

● ಡಿ.ಜಿ.ಮಲ್ಲಿಕಾರ್ಜುನ

ಶಿಡ್ಲಘಟ್ಟ: ಈ ಬಾರಿ ಬಿರು ಬಿಸಿಲು ಹೆಚ್ಚಾಗಿದೆ. ಬಿಸಿಲಿನ ಝಳಕ್ಕೆ ಮನುಷ್ಯರಲ್ಲದೇ ಪಶು ಪಕ್ಷಿ ಕ್ರಿಮಿ ಕೀಟಗಳು ತತ್ತರಿಸುತ್ತಿವೆ. ಹುಲ್ಲುಗರಿಕೆಗಳು ಒಣಗಿ ನಿಂತಿವೆ. ನಂದಿಬೆಟ್ಟ ಶ್ರೇಣಿಗಳೆಲ್ಲ ಒಣಗಿದ ಬಣ್ಣವನ್ನು ಪ್ರದರ್ಶಿಸುತ್ತಿವೆ. ಕಳೆದ ಮೂರ್ನಾಕು ದಿನಗಳ ಹಿಂದೆಯಷ್ಟೇ ಮೊದಲ ಮಳೆಯ ಸಿಂಚನವಾಗಿದೆ. ಮೊದಲ ಮಳೆಯಲ್ಲಿ ನೆನೆದ ನಂದಿಬೆಟ್ಟದಲ್ಲಿ ನಿಸರ್ಗ ತನ್ನ ರಮಣೀಯತೆಯನ್ನು ಪ್ರದರ್ಶಿಸಿದೆ.

ಮೊದಲ ಮಳೆಗೆ ಅರಳಿ ನಿಂತ ರೋಸ್ ಪಿಂಕ್ ಲಿಲ್ಲಿ ಹೂಗಳಿಂದಾಗಿ ನಂದಿಬೆಟ್ಟವು ಗುಲಾಬಿ ಬಣ್ಣದ ಹೊದಿಕೆಯನ್ನು ಹೊದ್ದ ಹಾಗೆ ಕಂಗೊಳಿಸುತ್ತಿದೆ. ಗುಲಾಬಿ ಬಣ್ಣದ ರೋಸ್ ಪಿಂಕ್ ಲಿಲ್ಲಿ ಹೂಗಳನ್ನು ಮೈಮೇಲೆಲ್ಲಾ ಅರಳಿಸಿಕೊಂಡ ನಂದಿಬೆಟ್ಟ ಒಂದು ಬೃಹತ್ ಹೂಗುಚ್ಛದಂತೆ ಕಂಡುಬರುತ್ತಿದೆ.

ನಂದಿಬೆಟ್ಟದಲ್ಲಿ ಮೊದಲ ಮಳೆಗೆ ಅರಳಿರುವ ರೋಸ್ ಪಿಂಕ್ ಲಿಲ್ಲಿ ಹೂವು

ನಂದಿಬೆಟ್ಟಕ್ಕೆ ಹೊಸ ಕಳೆ ಕೊಟ್ಟಿರುವ ಈ ಹೂವಿನ ವೈಜ್ಞಾನಿಕ ಹೆಸರು ಜೆಫೈರಾಂಥಸ್ ಕ್ಯಾರಿನೇಟ. ‘ಜಫೈರೆಸ್’ ಎಂಬುದು ಗ್ರೀಕ್‌ನ ಗಾಳಿ ದೇವತೆಯ ಹೆಸರು. ಆಂಥೋಸ್ (ಗ್ರೀಕ್ ಪದ) ಅಂದರೆ ಹೂವು. ಇವೆರಡೂ ಸೇರಿ ಜೆಫೈರಾಂಥಸ್ ಆಗಿದೆ. 15 ರಿಂದ 30 ಸೆಂ.ಮೀ ಎತ್ತರದ ಕಾಂಡದಲ್ಲಿ ಸುಮಾರು ಮೂರು ಸೆಂ.ಮೀ ವ್ಯಾಸದ ಆರು ದಳಗಳ ಸುಂದರ ಗುಲಾಬಿ ಬಣ್ಣದ ಹೂಗಳು ಅರಳುತ್ತವೆ. ಹೂವಿನೊಳಗಿನಿಂದ ಹಳದಿ ಬಣ್ಣದ ಕೇಸರಗಳು ಹೊರಚಾಚಿದ್ದು ನೋಡಲು ಮೋಹಕವಾಗಿರುತ್ತವೆ.

ಇದರ ಮೂಲ ದಕ್ಷಿಣ ಅಮೆರಿಕ. ಆದರೆ ಹಲವಾರು ವರ್ಷಗಳಿಂದ ನಂದಿಬೆಟ್ಟದ ಸೌಂದರ್ಯವನ್ನು ಈ ಲಿಲ್ಲಿಗಳು ಪ್ರತಿವರ್ಷ ಈ ಸಮಯದಲ್ಲಿ ಇಮ್ಮಡಿಗೊಳಿಸುತ್ತವೆ. ಮೊದಲ ಮಳೆ ಬಿದ್ದೊಡನೆಯೇ ಹೂವನ್ನು ಅರಳಿಸುವುದು ಈ ಲಿಲ್ಲಿಗಳ ವಿಶೇಷ. ಅದಕ್ಕೇ ಇದನ್ನು ರೈನ್ ಲಿಲ್ಲಿ ಎನ್ನುವರು. ಈಗ ಸಾವಿರಾರು ಸಂಖ್ಯೆಯಲ್ಲಿ ಅರಳಿರುವ ಈ ಹೂಗಳು ನಂದಿಬೆಟ್ಟದ ಬಣ್ಣವನ್ನೇ ಬದಲಿಸಿವೆ ಎನ್ನುತ್ತಾರೆ ನಂದಿಬೆಟ್ಟದ ತೋಟಗಾರಿಕಾ ಇಲಾಖೆಯ ವಿಶೇಷ ಅಧಿಕಾರಿ ಎನ್. ಗೋಪಾಲ್.

ಹುಬ್ಬಳ್ಳಿ ಗಲಭೆಯಲ್ಲಿ ಕಾಂಗ್ರೆಸ್ಸಿನವರು ಭಾಗಿಯಾಗಿದ್ದರೆ ಬಂಧಿಸಲಿ– ಡಿಕೆಶಿ

‘ರಾಜಕೀಯಕ್ಕಾಗಿ ಬಿಜೆಪಿಯಿಂದ ರಾಜ್ಯಕ್ಕೇ ಬೆಂಕಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜಕೀಯ ಹಿತಾಸಕ್ತಿಗಾಗಿ ಬಿಜೆಪಿಯವರು ಇಡೀ ರಾಜ್ಯವನ್ನು ಸುಡುತ್ತಿದ್ದಾರೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

ಹುಬ್ಬಳ್ಳಿ ಗಲಭೆಗೆ ಕಾಂಗ್ರೆಸ್ ಕಾರಣ ಎಂಬ ಬಿಜೆಪಿ ಆರೋಪಕ್ಕೆ ಅವರು, ‘ಗಲಭೆ ವೇಳೆ ನಮ್ಮ ಪಕ್ಷದ ಜಿಲ್ಲಾಧ್ಯಕ್ಷರು ಸ್ಥಳದಲ್ಲಿದ್ದರು ಎಂದು ಆರೋಪಿಸಲಾಗಿದೆ. ಕಾಂಗ್ರೆಸ್ ಪಕ್ಷದವರು ಗಲಭೆಯಲ್ಲಿ ಭಾಗಿಯಾಗಿದ್ದರೆ ಬಂಧಿಸಲಿ’ ಎಂದರು.

‘ಪರಿಸ್ಥಿತಿ ನಿಯಂತ್ರಿಸಲು ನಮ್ಮ ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷರನ್ನು ಪೊಲೀಸರೇ ಆಹ್ವಾನಿಸಿದ್ದರು. ಪೊಲೀಸರ ಸೂಚನೆಯಂತೆ, ಪೊಲೀಸ್ ಜೀಪ್ ಹತ್ತಿ ಶಾಂತವಾಗಿರುವಂತೆ ಧ್ವನಿವರ್ಧಕದ ಮೂಲಕ ಅವರು ಮನವಿ ಮಾಡಿದ್ದಾರೆ’ ಎಂದರು.

‘ದಿಂಗಾಲೇಶ್ವರ ಸ್ವಾಮೀಜಿ ಮಾಡಿರುವ ಕಮಿಷನ್ ಆರೋಪದ ಹಿಂದೆ ಕಾಂಗ್ರೆಸ್ ಇದೆ’ ಎಂಬ ಆರೋಪಕ್ಕೆ, ‘ಬಿಜೆಪಿಯವರು ಮೊದಲು ತಮ್ಮ ಮೇಲಿರುವ ಆರೋಪದಿಂದ ಹೊರಬರಲಿ. ಸ್ವಾಮೀಜಿ ಅವರಿಗಾಗಿರುವ ನೋವು ಹೇಳಿಕೊಂಡಿದ್ದಾರೆ. ಪ್ರಧಾನಿಗೆ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಪತ್ರ ಬರೆದಾಗಲೇ ಸರ್ಕಾರ ಎಚ್ಚೆತ್ತುಕೊಂಡಿದ್ದರೆ ರಾಜ್ಯದ ಮರ್ಯಾದೆ ಉಳಿಯುತ್ತಿತ್ತು’ ಎಂದರು.

ದೆಹಲಿ, ಉತ್ತರಪ್ರದೇಶ ರೀತಿಯಲ್ಲೇ ಬುಲ್ಡೋಜರ್ ಮಾದರಿ ಬೇಕೆಂದು ಮುಖ್ಯಮಂತ್ರಿಯನ್ನು ಒತ್ತಾಯಿಸುವುದಾಗಿ ಶಾಸಕರಾದ ಬಸನಗೌಡಪಾಟೀಲ ಯತ್ನಾಳ ಮತ್ತು ಸಿ.ಟಿ. ರವಿ ಹೇಳಿಕೆಗೆ, ‘ಬಿಜೆಪಿ ಸರ್ಕಾರ ಅಲ್ಪಸಂಖ್ಯಾತರ ಭಾವನೆಗೆ ಧಕ್ಕೆ ತರಲು ಯತ್ನಿಸುತ್ತಿದೆ. ರಾಜಕೀಯ ಉದ್ದೇಶಕ್ಕೆ, ದ್ವೇಷದಿಂದ ಅವರ ಮನೆಗಳನ್ನು ಕೆಡವಿ ಕೆಟ್ಟ ಸಂದೇಶ ರವಾನಿಸಲಾಗುತ್ತಿದೆ’ ಎಂದರು.

2023ರ ಚುನಾವಣೆಯಲ್ಲಿ 50 ಸ್ವಾಮೀಜಿಗಳು ಸ್ಪರ್ಧಿಸುವುದಾಗಿ ಬ್ರಹ್ಮಾನಂದ ಸರಸ್ವತಿ ಶ್ರೀಗಳ ಹೇಳಿಕೆಗೆ, ‘ವಿವಿಧ ಮಠಗಳ ಸ್ವಾಮೀಜಿಗಳನ್ನು ರಾಜಕೀಯಕ್ಕೆ ಬಳಸಿಕೊಂಡು ಬಿಜೆಪಿ ಸರ್ಕಾರ ನೋವುಂಟು ಮಾಡಿದೆ. ಹೀಗಾಗಿ, ನೋವಿನಿಂದ ಧ್ವನಿ ಎತ್ತುತ್ತಿದ್ದಾರೆ’ ಎಂದರು.

‘ನಾಮನಿರ್ದೇಶಿತ ಸದಸ್ಯರಿಗೆ ಮತದಾನದ ಹಕ್ಕಿಲ್ಲ’

ಬೆಂಗಳೂರು: ‘ನಗರ ಸ್ಥಳೀಯ ಸಂಸ್ಥೆಗಳ ನಾಮನಿರ್ದೇಶಿತ ಸದಸ್ಯರು ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನಗಳಿಗೆ ನಡೆಯುವ ಚುನಾವಣೆಯಲ್ಲಿ ಮತದಾನ ಮಾಡುವ ಹಕ್ಕನ್ನು ಹೊಂದಿಲ್ಲ’ ಎಂದು ಹೈಕೋರ್ಟ್ ಆದೇಶಿಸಿದೆ.

ಮಾಲೂರು ಪುರಸಭೆಯ ಕೆ.ಲಕ್ಷ್ಮೀಕಾಂತ ಸೇರಿದಂತೆ ಆರು ಜನ ನಾಮನಿರ್ದೇಶಿತ ಸದಸ್ಯರು ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅಲೋಕ್ ಅರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಕರ್ನಾಟಕ ಮುನಿಸಿಪಲ್ ಕಾಯ್ದೆಯ ಕಲಂ 11(1)(ಬಿ) ಸಂವಿಧಾನದ 14ನೇ ವಿಧಿಗೆ ವಿರುದ್ಧವಾಗಿದೆ. ಹಾಗಾಗಿ, ಕರ್ನಾಟಕ ಮುನಿಸಿಪಾಲಿಟಿ ಕಾಯ್ದೆ ಅನ್ವಯ ನಮಗೂ ಮತದಾನದ ಹಕ್ಕಿದೆ’ ಎಂದು ಅರ್ಜಿದಾರರು ಪ್ರತಿಪಾದಿಸಿದ್ದರು. ಇದನ್ನು ತಳ್ಳಿ ಹಾಕಿರುವ ನ್ಯಾಯಪೀಠ, ‘ಚುನಾಯಿತ ಸದಸ್ಯರು ಮತ್ತು ನಾಮನಿರ್ದೇಶಿತ ಸದಸ್ಯರು ಒಂದೇ ವರ್ಗಕ್ಕೆ ಸೇರಿದರೂ ವ್ಯತ್ಯಾಸವಿದೆ. ಹಾಗಾಗಿ ಸಂವಿಧಾನದ 243ಆರ್ (2)(ಎ) ಸಿಂಧುತ್ವ ಸಾಂವಿಧಾನದ ಕಲಂ 14ರ ಉಲ್ಲಂಘನೆಯಾಗುತ್ತದೆ ಎಂದು ಹೇಳಲಾಗದು’ ಎಂದು ಆದೇಶದಲ್ಲಿ ತಿಳಿಸಿದೆ. ಅಂತೆಯೇ, ಸಂವಿಧಾನದ 243ಆರ್(2)(ಎ) ವಿಧಿಯ ಸಿಂಧುತ್ವ ವನ್ನು ಎತ್ತಿ ಹಿಡಿದಿದೆ.

ನಿಧನ ವಾರ್ತೆ

ಸಾಹಿತಿ ಟಿ.ಜಿ. ಮುಡೂರು



ಸುಬ್ರಹ್ಮಣ್ಯ: ಸುಳ್ಯ ತಾಲ್ಲೂಕಿನ ಪಂಜ ನಿವಾಸಿ, ಸಾಹಿತಿ ತಮ್ಮಯ್ಯ ಗೌಡ ಮುಡೂರು (95) ವಯೋಸಹಜ ಅನಾರೋಗ್ಯದಿಂದ ಪುತ್ತೂರಿನಲ್ಲಿ ಬುಧವಾರ ನಿಧನರಾದರು. ಅವರಿಗೆ ಪುತ್ರ, ಮೂವರು ಪುತ್ರಿಯರು ಇದ್ದಾರೆ.

25 ವರ್ಷಕ್ಕೂ ಅಧಿಕ ಸಮಯ ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಪ್ರತಿನಿಧಿಯಾಗಿ, 8 ವರ್ಷಗಳ ಕಾಲ ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಘಟಕದ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸಿದ್ದರು. ಸುಳ್ಯ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿಯೂ ಆಯ್ಕೆಯಾಗಿದ್ದರು. ಅವರ 30ಕ್ಕೂ ಹೆಚ್ಚು ಕೃತಿಗಳು ಪ್ರಕಟಗೊಂಡಿವೆ. ಗುರುವಾರ (ಏ.21) ಬೆಳಿಗ್ಗೆ ಅವರ ಅಂತಿಮ ದರ್ಶನದ ಬಳಿಕ ಮಧ್ಯಾಹ್ನ ಅಂತ್ಯಸಂಸ್ಕಾರ ನಡೆಯಲಿದೆ ಎಂದು ಕುಟುಂಬ ತಿಳಿಸಿವೆ.

ಬೆಂಗಳೂರು ವಿ.ವಿ: ಹೊರಗುತ್ತಿಗೆ ನೌಕರರ ವೇತನ ಹೆಚ್ಚಳ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಪ್ರಸ್ತುತ ಪಡೆಯುತ್ತಿರುವ ವೇತನಕ್ಕೆ ₹4,000 ಹೆಚ್ಚಿಗೆ ನೀಡಲು ನಿರ್ಧಾರ
- ಪ್ರೊ. ಕೆ.ಆರ್. ವೇಣುಗೋಪಾಲ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನಿರ್ಧಾರ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ನೌಕರರ ವೇತನ ಹೆಚ್ಚಿಸಲು ಸಿಂಡಿಕೇಟ್ ಸಭೆಯಲ್ಲಿ ನಿರ್ಧರಿಸಲಾಗಿದೆ.

ಪ್ರಸ್ತುತ ಪಡೆಯುತ್ತಿರುವ ವೇತನಕ್ಕೆ ₹4,000 ಹೆಚ್ಚಿಗೆ ನೀಡಲು ಮತ್ತು ಮುಂದಿನ ಆರು ತಿಂಗಳ ಅವಧಿಗೆ ಮುಂದುವರಿಸಲು ನಿರ್ಧರಿಸಲಾಗಿದೆ. ಏ.16ರಿಂದ ಈ ನಿರ್ಧಾರಗಳು ಜಾರಿಯಾಗಿವೆ.

ಕುಲಪತಿ ಪ್ರೊ. ಕೆ.ಆರ್. ವೇಣುಗೋಪಾಲ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದ್ದು, 496 ನೌಕರರಿಗೆ ಈ ಸೌಲಭ್ಯಗಳು ಅನ್ವಯವಾಗಲಿವೆ. ಇವರ ಅವಧಿ ಏ.12ರಂದು ಮುಕ್ತಾಯಗೊಂಡಿತ್ತು. ಇಲ್ಲಿಯವರೆಗೆ ಇವರಿಗೆ ₹17 ಸಾವಿರ ವೇತನ ನೀಡಲಾಗುತ್ತಿತ್ತು. ಇನ್ನು ಮುಂದೆ ₹21 ಸಾವಿರ ದೊರೆಯಲಿದೆ.

ಬೆಂಗಳೂರು ವಿಶ್ವವಿದ್ಯಾಲಯದ ಹೊಸ ಕುಲಪತಿಯ ಆಯ್ಕೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ರಚಿಸುವ ಶೋಧನಾ ಸಮಿತಿಗೆ ನೃಪತುಂಗ ವಿಶ್ವವಿದ್ಯಾಲಯದ ಪ್ರೊ. ಶ್ರೀನಿವಾಸ್ ಎಸ್. ಬಾಲಿ ಅವರನ್ನು ನಾಮನಿರ್ದೇಶನ ಮಾಡಲು ಸಭೆಯಲ್ಲಿ ನಿರ್ಧರಿಸಲಾಯಿತು.

2021–22ನೇ ಮತ್ತು 2022–23ನೇ ಸಾಲಿನ ಆಯವ್ಯಯ ಅಂದಾಜುಗಳ ವಿವರಗಳನ್ನು ಮಂಡಿಸಿದ ಪ್ರಭಾರ ಹಣಕಾಸು ಅಧಿಕಾರಿ ಆರ್. ಜಯಲಕ್ಷ್ಮಿ ಅವರು, 2022–23ನೇ ಸಾಲಿನಲ್ಲಿ ₹55.28 ಕೋಟಿ ಕೊರತೆಯಾಗಲಿದೆ ಎಂದು ವಿವರಿಸಿದರು.

ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ 99 ದಿನಗೂಲಿ ನೌಕರರನ್ನು ಕಾಯಂಗೊಳಿಸಲು ಸರ್ಕಾರದ ಅನುಮೋದನೆ ಕೋರಿ ಪತ್ರ ಬರೆಯಲು ಸಭೆಯಲ್ಲಿ ನಿರ್ಧರಿಸಲಾಯಿತು.

ಯುವಿಸಿಇಯ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ನಿರ್ಮಾಣಕ್ಕೆ ವೆಚ್ಚವಾಗುವ ₹85 ಕೋಟಿಯನ್ನು ಬೆಂಗಳೂರು ವಿಶ್ವವಿದ್ಯಾಲಯ ಆಂತರಿಕ ಮೂಲಗಳಿಂದ ಭರಿಸಲು ಸಿಂಡಿಕೇಟ್ ಸಭೆ ವಿಸ್ತೃತ ಚರ್ಚೆಯ ನಂತರ ಒಪ್ಪಿಗೆ ನೀಡಿತು.

ಎಫ್‌ಎಸ್‌ಬಿ ಅಧ್ಯಕ್ಷ– ನಿರ್ಮಲಾ ಭೇಟಿ

ವಾಷಿಂಗ್ಟನ್ (ಪಿಟಿಐ): ಹಣಕಾಸು ಸ್ಥಿರತೆ ಮಂಡಳಿ ಅಧ್ಯಕ್ಷ (ಎಫ್‌ಎಸ್‌ಬಿ) ಕ್ಲಾಸ್ ನಾಟ್ ಮತ್ತು ಕ್ಲೈಮೇಟ್ ಫೈನಾನ್ಸ್ ಲೀಡರ್‌ಶಿಪ್ ಇನಿಶಿಯೇಟಿವ್ (ಸಿಎಫ್‌ಎಲ್‌ಐ) ಉಪಾಧ್ಯಕ್ಷೆ ಮೇರಿ ಶಾಪಿರೋ ಅವರನ್ನು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಇಲ್ಲಿ ಭೇಟಿಯಾದರು.

ಈ ವೇಳೆ ಅವರು ಕ್ರಿಪ್ಟೊ ವ್ಯವಸ್ಥೆಯಲ್ಲಿ ಎದುರಾಗುವ ಸಮಸ್ಯೆಗಳು ಮತ್ತು ಭಾರತದ ಮೊದಲ ಸ್ಮಾರ್ಟ್ ಸಿಟಿ ಯೋಜನೆಯಡಿ ಬರುವ ಗಿಫ್ಟ್ ನಗರದ ಅಭಿವೃದ್ಧಿ ಬಗ್ಗೆ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡರು.

ಅಂತರರಾಷ್ಟ್ರೀಯ ಹಣಕಾಸು ನಿಧಿ ಮತ್ತು ವಿಶ್ವ ಬ್ಯಾಂಕ್ ಮಂಗಳವಾರ ವಾಷಿಂಗ್ಟನ್‌ನಲ್ಲಿ ಆಯೋಜಿಸಿದ್ದ ಸಭೆ ಹಿನ್ನೆಲೆ ನಿರ್ಮಲಾ ಇಲ್ಲಿಗೆ ಆಗಮಿಸಿದ್ದರು.

‘ಕಮಿಷನ್ ದಂಧೆ ಕಡಿವಾಣಕ್ಕೆ ಉನ್ನತ ಸಮಿತಿ’

ಒಂದನೇ ಪುಟದಿಂದ...

‘ಮೌಖಿಕ ಆದೇಶದ ಮೇಲೆ ಯಾವುದೇ ಕಾಮಗಾರಿ ಕೈಗೆತ್ತಿಕೊಂಡರೂ ಅದಕ್ಕೆ ಆಯಾ ಎಂಜಿನಿಯರ್‌ಗಳು, ತಾಲ್ಲೂಕು ಪಂಚಾಯಿತಿ ಇಒ, ಪಿಡಿಒಗಳನ್ನು ಹೊಣೆ ಮಾಡಲಾಗುವುದು’ ಎಂದು ಎಚ್ಚರಿಸಿದರು.

‘ರಾಜ್ಯದ ಆರ್ಥಿಕ ಸ್ಥಿತಿ ಉತ್ತಮವಾಗಿದೆ. ಕಠಿಣಕ್ರಮದ ಫಲವಾಗಿ ₹ 15 ಸಾವಿರ ಕೋಟಿ ತೆರಿಗೆ ಸಂಗ್ರಹವಾಗಿದೆ. ಕೇಂದ್ರದ ಪಾಲು ನಿಯಮಿತವಾಗಿ ಬರುತ್ತಿದೆ. ವೆಚ್ಚ ಕಡಿಮೆ ಮಾಡಲಾಗಿದೆ. ಅವಕಾಶವಿದ್ದರೂ ₹ 4 ಸಾವಿರ ಕೋಟಿ ಸಾಲ ಪಡೆದಿಲ್ಲ’ ಎಂದರು.

‘ರಾಜ್ಯದಲ್ಲಿ ಹೆಚ್ಚುವರಿ ವಿದ್ಯುತ್ ಉತ್ಪಾದಿಸಲಾಗುತ್ತಿದೆ. ವಿತರಣೆಯಲ್ಲಿನ ಲೋಪದಿಂದಾಗಿ ವಿದ್ಯುತ್ ವ್ಯತ್ಯಯವಾಗುತ್ತಿದೆ. ಇದನ್ನು ತಡೆಯಲು ಹೆಚ್ಚು ಅನುದಾನ ನೀಡಲಾಗುವುದು. ಸುಗಮ ವಿತರಣೆಗೆ ಕ್ರಮ ಕೈಗೊಳ್ಳಲಾಗುವುದು’ ಎಂದರು.

ನಗರಸಭಾ ಕಾರ್ಯಾಲಯ, ಚಿಂತಾಮಣಿ

ಇ–ಪ್ರೊಕ್ಯೂರ್‌ಮೆಂಟ್ ಮೂಲಕ KW-1 & KG-1 ದಸ್ತಾವೇಜಿನಲ್ಲಿ ಟೆಂಡರ್ ಅಧಿಸೂಚನೆ ಸಂಖ್ಯೆ: ನಸಚಿ/ಆಶಾ/ಸಿಆರ್/159/2021–22 ದಿನಾಂಕ: 08.04.2022

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪೌರಾಯುಕ್ತರು ನಗರಸಭೆ ಚಿಂತಾಮಣಿ ಚಿಕ್ಕಬಳ್ಳಾಪುರ ಜಿಲ್ಲೆ ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಷರತ್ತುಗಳಿಗೆ ಒಳಪಟ್ಟು ಟೆಂಡರ್ ಆಹ್ವಾನಿಸಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ http://eproc.karnataka.gov.in ವೆಬ್‌ಸೈಟ್‌ನಲ್ಲಿ ಸಂಪರ್ಕಿಸಬಹುದು.

ಕಾಮಗಾರಿ ವಿವರ: (1) INDENT NO DMA/2021-22/IND13327, Purchase of Compactor. **(2)** INDENT NO DMA/2022-23/IND OW/Work-INDENT 130458, Purchase and istallation of LED Street Lights in CMC limits.

ಸೂಚನೆಗಳು: (1) ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ, ಸಮಯ: **25.04.2022 ಸಂಜೆ 17.00 ಗಂಟೆಯವರೆಗೆ.** (2) ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ತೆರೆಯುವ ದಿನಾಂಕ, ಸಮಯ: **26.04.2022 ರಂದು ಸಂಜೆ 5.05** ನಿಮಿಷದ ನಂತರ ಅಥವಾ ಸದರಿ ದಿನದಂದು ಸರ್ಕಾರಿ ರಜೆ ಇದ್ದಲ್ಲಿ ನಂತರದ ಕೆಲಸದ ದಿನ ತೆರೆಯಲಾಗುವುದು.

ಸಹಿ/– ಪೌರಾಯುಕ್ತರು, ನಗರಸಭೆ, ಚಿಂತಾಮಣಿ.

ವಾ.ಸಾ.ಸಂ.ಇ./ ಚಿಕ್ಕಬಳ್ಳಾಪುರ/ ಆರ್.ಓ.ಸಂಖ್ಯೆ19/ಎಂಸಿಎ/ 2022–23.

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಚಿತ್ರಾವಳಿ



ಕೆ.ಆರ್.ಪುರ ಸಮೀಪದ ಬಿದರಹಳ್ಳಿಯಲ್ಲಿ ಈಸ್ಟ್ ಪಾಯಿಂಟ್ ಸಮೂಹ ಸಂಸ್ಥೆಯಲ್ಲಿ ನಡೆದ ಸಂಸ್ಥಾಪಕರ ದಿನಾಚರಣೆಯಲ್ಲಿ ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಅವರನ್ನು ಎಂ.ಜಿ.ಚಾರಿಟಬಲ್ ಟ್ರಸ್ಟ್ ಅಧ್ಯಕ್ಷೆ ರಮಾದೇವಿ ವೆಂಕಟಪತಿ ಸನ್ಮಾನಿಸಿದರು. ಪಬ್ಲಿಕ್ ಟಿ.ವಿ. ಮುಖ್ಯಸ್ಥ ಎಚ್.ಆರ್.ರಂಗನಾಥ್, ಬಿ.ವಿ.ವಸಂತಕುಮಾರ, ವಿಜ್ಞಾನಿ ರಾಧಾಕೃಷ್ಣ, ಎಸ್.ವಿ.ಪ್ರಮೋದ್ ಗೌಡ, ರಾಜೀವ್ ಗೌಡ ಇದ್ದರು.

‘ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು’ ಎಂದು ಒತ್ತಾಯಿಸಿ ಪೌರ ಕಾರ್ಮಿಕರು ‘ಬಿಬಿಎಂಪಿ ಗುತ್ತಿಗೆ ಪೌರ ಕಾರ್ಮಿಕರ ಸಂಘ’ದ ನೇತೃತ್ವದಲ್ಲಿ ನಗರದ ಕಾರ್ಮಿಕ ಭವನದ ಎದುರು ಬುಧವಾರ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

ಮಸೀದಿಯಲ್ಲಿ ಕುಸುರಿ ಕೆತ್ತನೆ ಮಾಡಿದ ಹಿಂದೂ ಯುವಕ

ಸರ್ವಧರ್ಮ ಸಮನ್ವಯದ ಒರತೆ ‘ಪಕ್ಷಿಕೆರೆ’

● ಸಂಧ್ಯಾ ಹೆಗಡೆ

ಮಂಗಳೂರು: ಹಿಜಾಬ್, ಹಲಾಲ್ ಕಟ್, ವ್ಯಾಪಾರ ಬಹಿಷ್ಕಾರದಂತಹ ಬೆಳವಣಿಗೆಗಳಿಂದ ಸುದ್ದಿಯಾಗುತ್ತಿರುವ ಕರಾವಳಿಯಲ್ಲಿ ಸಾಮರಸ್ಯದ ಬದುಕಿಗೆ ಪಕ್ಷಿಕೆರೆ ಎಂಬ ಪುಟ್ಟ ಗ್ರಾಮ ಮಾದರಿಯಾಗಿದೆ. ಇಲ್ಲಿ ಪ್ರೀತಿಯೇ ಜನರ ಬಾಂಧವ್ಯಕ್ಕೆ ಬೆಸುಗೆ ಯಾಗಿದೆ.

ತಾಲ್ಲೂಕಿನ ಈ ಗ್ರಾಮದಲ್ಲಿ ದೈವಸ್ಥಾನ, ದೇವಸ್ಥಾನ, ಮಸೀದಿ, ಚರ್ಚ್– ಹೀಗೆ ಎಲ್ಲ ಧರ್ಮಗಳ ಪ್ರಾರ್ಥನಾ ಸ್ಥಳಗಳಿವೆ. ಧಾರ್ಮಿಕ ಕೇಂದ್ರಗಳ ಕಾರ್ಯಕ್ರಮಗಳಲ್ಲಿ ಎಲ್ಲ ಧರ್ಮೀಯರು ಭಾಗವಹಿಸುವುದು ವಿಶೇಷ.

ಪ್ರಜಾವಾಣಿ ವಿಶೇಷ

‘ಸೌಹಾರ್ದದ ಸೆಲೆ ಇರುವ ನಮ್ಮೂರು ನಮಗೆ ಹೆಮ್ಮೆ. ಸರ್ವ ಧರ್ಮಗಳ ಸಮನ್ವಯವೇ ಇಲ್ಲಿ ಬುನಾದಿ. ಚರ್ಚ್‌ನ ಕಾರ್ಯಕ್ರಮಗಳಲ್ಲಿ ಹಿಂದೂಗಳು, ಮುಸ್ಲಿಮರು ಭಾಗಿಯಾಗುತ್ತಾರೆ. ದೈವಸ್ಥಾನ, ದೇವಸ್ಥಾನದ ವಾರ್ಷಿಕ ಪೂಜೆಗೆ ನಾವು ಒಂದಿಷ್ಟು ಜನರು ಹೋಗಿ, ಊಟ ಮಾಡಿ ಬರುತ್ತೇವೆ. ಆರ್ಥಿಕ ರೂಪದಲ್ಲಿ ಪರಸ್ಪರ ಉಡುಗೊರೆ ವಿನಿಮಯ ಮಾಡಿಕೊಳ್ಳುತ್ತೇವೆ. ಮಸೀದಿಯ ‘ರಿಫಾಯಿಯಾ ದಫ್ ರಾತೀಬ್’ ವಾರ್ಷಿಕ ಸಂಭ್ರಮಕ್ಕೆ ದೈವಸ್ಥಾನ, ದೇವಸ್ಥಾನ, ಚರ್ಚ್ ಪ್ರಮುಖರು ಬರುತ್ತಾರೆ. ದಶಕಗಳಿಂದ ನಡೆದುಕೊಂಡು ಬಂದಿರುವ ಈ ಪದ್ಧತಿಗೆ ಯಾವ ವಿಷ ಸೋಂಕು ಕೂಡ ತಗುಲಿಲ್ಲ’ ಎನ್ನುವಾಗ ಸ್ಥಳೀಯರಾದ ಮೊಹಿದ್ದೀನ್ ಅವರಿಗೆ ತೃಪ್ತಭಾವ.

‘ಮಸೀದಿ, ಚರ್ಚ್ ಕಾರ್ಯಕ್ರಮಗಳಿಗೆ ನಮ್ಮನ್ನು ಆತ್ಮೀಯವಾಗಿ ಬರಮಾಡಿಕೊಳ್ಳುತ್ತಾರೆ. ನಾವೂ ಅವರನ್ನು ಅಷ್ಟೇ ಪ್ರೀತಿಯಿಂದ ಸ್ವಾಗತಿಸುತ್ತೇವೆ. ಇತ್ತೀಚೆಗೆ ಪೂರ್ಣಗೊಂಡ ದೈವಸ್ಥಾನದ ಕಾರ್ಯಕ್ರಮದಲ್ಲೂ ಎಲ್ಲರೂ ಭಾಗಿಯಾಗಿದ್ದರು’ ಎನ್ನುತ್ತಾರೆ ಅರಸು ಕುಂಜಿರಾಯ ದೈವಸ್ಥಾನದ ಅಧ್ಯಕ್ಷ ಚರಣ್ ಶೆಟ್ಟಿ.

ಬದ್ರಿಯಾ ಜುಮ್ಮಾ ಮಸೀದಿಯಲ್ಲಿ ಹರೀಶ್ ಆಚಾರ್ಯ ತಂಡದ ಕುಸುರಿ ಕೆಲಸ

ಹರೀಶ್ ಕೈಯಲ್ಲಿ ಅರಳಿದ ಕಲೆ: ‘40 ವರ್ಷ ಹಳೆಯದಾದ ಬದ್ರಿಯಾ ಜುಮ್ಮಾ ಮಸೀದಿ ನವೀಕರಣದ ವೇಳೆ ಮರದ ಕೆತ್ತನೆ ಕಾರ್ಯಕ್ಕೆ ಹುಡುಕಾಟದಲ್ಲಿದ್ದಾಗ ಮಜೂರು ಮಲಾಲ್‌ನ ಮಸೀದಿಯಲ್ಲಿ ಕಾಷ್ಠ ಕಲಾಕೃತಿ ತಯಾರಿಸಿದ ಕಾಪುವಿನ ಹರೀಶ್ ಆಚಾರ್ಯ ಅವರನ್ನು ಸಂಪರ್ಕಿಸಿದೆವು. ಸಾವಿರ ಚದರ ಅಡಿ ವ್ಯಾಪ್ತಿಯ ಮಸೀದಿಯ ಮರದ ಕುಸುರಿ ಕೆಲಸದಲ್ಲಿ ಹರೀಶ್ ಮತ್ತು ತಂಡ ಕುಶಲತೆ ತೋರಿದೆ’ ಎನ್ನುತ್ತಾರೆ ಮಸೀದಿಯ ಅಧ್ಯಕ್ಷ ಮುಹಮ್ಮದ್ ಹಾಜಿ ನೂರಾನಿಯಾ.

ಕೇರಳಕ್ಕೂ ಆಹ್ವಾನ: ‘ಕಲೆಗೆ ಜಾತಿ–ಮತದ ಭೇದವಿಲ್ಲ. ಕೇರಳದ ಮುಸ್ಲಿಂ ಧರ್ಮ ಗುರು ಎ.ಪಿ.ಅಬೂಬಕ್ಕರ್ ಮುಸ್ಲಿಯಾರ್ ಅವರೂ ಆಹ್ವಾನಿಸಿದ್ದಾರೆ’ ಎಂದು ಹರೀಶ್ ಆಚಾರ್ಯ ಪ್ರತಿಕ್ರಿಯಿಸಿದರು.

‘ವಿಡಿಯೊ’ ನೋಡಲು ಕೋಡ್ ಸ್ಕ್ಯಾನ್ ಮಾಡಿ....

ಪ್ರಜಾವಾಣಿ ನೋಡಿಯೊ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಕಾರ್ಯಪಾಲಕ ಅಭಿಯಂತರರು ಕಛೇರಿ, ಯೋಜನೆ ವಿಭಾಗ, ಕೆ.ಆರ್.ಆರ್.ಡಿ.ಎ.
ಕೋಲಾರ–ಬಂಗಾರಪೇಟೆ ರಸ್ತೆ, ಸಿ.ಬೈರೇಗೌಡ ಕ್ರೇಡಿಟ್ ಕೋ ಆಪರೇಟಿವ್
ಸೊಸೈಟಿ ಕಟ್ಟಡ, 2ನೇ ಮಹಡಿ, ಕೋಲಾರ–563101. ದೂರವಾಣಿ ಸಂಖ್ಯೆ: 08152–221670
ಕ್ರ.ಸಂ./ಕಾ.ಇಂ/ಯೋ.ವಿ/ಕೆ.ಆರ್.ಆರ್.ಡಿ.ಎ./ಕೋ/ಸ.ಇಂ/2022–23/28 ದಿನಾಂಕ:19.04.2022

“ಅಲ್ಪಾವಧಿ ಟೆಂಡರ್ ಪ್ರಕಟಣೆ”
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 01/2022–23 ದಿನಾಂಕ:19.04.2022

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ (ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್) ಕೆ.ಟಿ.ಟಿ.ಪಿ. ಕಾಯ್ದೆ ನಿಯಮಾನುಸಾರ ದ್ವಿ–ಲಕೋಟೆಯಲ್ಲಿ ಕಾರ್ಯಪಾಲಕ ಅಭಿಯಂತರರ ಕಛೇರಿ, ಯೋಜನೆ ವಿಭಾಗ, ಕೆ.ಆರ್.ಆರ್.ಡಿ.ಎ. ಕೋಲಾರ ಕಛೇರಿಯ ಅಧೀನಕ್ಕೊಳಪಡುವ “ಮಳೆ ಹಾನಿ ಪರಿಹಾರ ಕಾರ್ಯಕ್ರಮ ಹಾಗೂ 2021–22ನೇ ಸಾಲಿನ ಮುಖ್ಯಮಂತ್ರಿಗಳ ವಿಶೇಷ ಯೋಜನೆಯಡಿ” ಯಲ್ಲಿ ಶ್ರೀನಿವಾಸಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ 01 ಸಂಖ್ಯೆ ರಸ್ತೆ ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ. ಸದರಿ ಟೆಂಡರ್‌ಗೆ (ಷರತ್ತು ಮತ್ತು ನಿಬಂಧನೆಗಳಂತೆ) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ **(E-Procurement website: https://eproc.karnataka.gov.in)** (1) ಅರ್ಜಿ ಶುಲ್ಕ: ಇ–ಪ್ರೊಕ್ಯೂರ್‌ಮೆಂಟ್ ನಿಯಮಾನುಸಾರ (ಹಿಂತಿರುಗಿಸಲಾಗುವುದಿಲ್ಲ) (2) ಇ.ಎಂ.ಡಿ. (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಸಲ್ಲಿಸುವುದು): ಇ–ಪ್ರೊಕ್ಯೂರ್‌ಮೆಂಟ್ ನಿಯಮಾನುಸಾರ (3) ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 04.05.2022 (ಸಂಜೆ 4.00 ಘಂಟೆಯೊಳಗೆ)** (4) ಇ–ಪ್ರೊಕ್ಯೂರ್‌ಮೆಂಟ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **06.05.2022 (ಸಂಜೆ 4.30 ಘಂಟೆಗೆ)** (5) ಇ–ಪ್ರೊಕ್ಯೂರ್‌ಮೆಂಟ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: ತಾಂತ್ರಿಕ ಬಿಡ್ ಪರಿಶೀಲನೆ ಪೂರ್ಣಗೊಂಡ ನಂತರ.

ಸೂಚನೆ: ಸದರಿ ಟೆಂಡರ್‌ನ್ನು ಯಾವುದೇ ಕಾರಣವನ್ನು ನೀಡದೇ ಹಿಂದಕ್ಕೆ ಪಡೆಯುವ ಅಥವಾ ರದ್ದುಗೊಳಿಸುವ/ ತಿರಸ್ಕರಿಸುವ ಅಧಿಕಾರವನ್ನು ಕಾರ್ಯಪಾಲಕ ಅಭಿಯಂತರರು ಹೊಂದಿರುತ್ತಾರೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಯೋಜನೆ ವಿಭಾಗ, ಕೆ.ಆರ್.ಆರ್.ಡಿ.ಎ. ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ33/ಎಂ.ಸಿ.ಎ/2022–23

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕಾರು ಅಪಘಾತ ಜಯಚಂದ್ರ ಪಾರು

ಶಿರಾ: ಮಾಜಿ ಸಚಿವ ಟಿ.ಬಿ.ಜಯಚಂದ್ರ ಅವರು ಪ್ರಯಾಣಿಸುತ್ತಿದ್ದ ಕಾರು ರಾಷ್ಟ್ರೀಯ ಹೆದ್ದಾರಿ-48ರ ಸೀಬಿ ಗ್ರಾಮದ ಸಮೀಪ ಮಂಗಳವಾರ ರಾತ್ರಿ ಅಪಘಾತವಾಗಿದ್ದು, ಅವರಿಗೆ ಸಣ್ಣ ಪುಟ್ಟ ಗಾಯಗಳಾಗಿವೆ.

ಶಿರಾದಿಂದ ಬೆಂಗಳೂರಿಗೆ ತೆರಳುತ್ತಿದ್ದಾಗ ಸೀಬಿ ಬಳಿ ಕಾರಿನ ಹಿಂದಿನ ಚಕ್ರ ಸಿಡಿದು ಚಾಲಕ ನಿಯಂತ್ರಣ ತಪ್ಪಿ ಕಾರು ಪಲ್ಟಿಯಾಗಿದೆ. ಜಯಚಂ-ದ್ರ ಅವರು ಸೀಟ್ ಬೆಲ್ಟ್ ಹಾಕಿಕೊಂಡಿದ್ದರಿಂದ ಏರ್ ಬ್ಯಾಗ್ ತೆರೆದುಕೊಂಡಿದೆ. ಇದರಿಂದ ಯಾವುದೇ ಅನಾಹುತವಾಗಿಲ್ಲ.

ಜಯಚಂದ್ರ ಅವರ ಎಡ ಭುಜಕ್ಕೆ ಪೆಟ್ಟಾಗಿದ್ದು, ಅವರನ್ನು ಬೆಂಗಳೂರಿನ ವಿಕ್ರಂ ಆಸ್ಪತ್ರೆಗೆ ದಾಖಲಿಸಲಾಗಿದೆ. ಕಾರಿನ ಚಾಲಕ ಹಾಗೂ ಗನ್ ಮ್ಯಾನ್ ಕೂಡ ಸುರಕ್ಷಿತವಾಗಿದ್ದಾರೆ.

ಯಾರು ಬರಬೇಡಿ: ಆಸ್ಪತ್ರೆಯಲ್ಲಿರುವ ಟಿ.ಬಿ.ಜಯಚಂದ್ರ ಅವರು ಸಾಮಾಜಿಕ ಜಾಲತಾಣಗಳ ಮೂಲಕ ಸಂದೇಶ ನೀಡಿದ್ದು, 'ನಾನು ಆರೋಗ್ಯವಾಗಿದ್ದೇನೆ. ಯಾರೂ ಆತಂಕ ಪಡುವುದು ಬೇಡ. 3ರಿಂದ 4 ವಾರ ವಿಶ್ರಾಂತಿ ಪಡೆಯುವಂತೆ ವೈದ್ಯರು ಸೂಚಿಸಿದ್ದಾರೆ. ಯಾರೂ ಆಸ್ಪತ್ರೆಗೆ ಬರುವುದು ಬೇಡ. ಗುಣವಾದ ನಂತರ ನಾನೇ ನಿಮ್ಮ ಬಳಿ ಬಂದು ಮಾತನಾಡಿಸುತ್ತೇನೆ' ಎಂದು ಹೇಳಿದ್ದಾರೆ.

ಕಾಂಪ್ಯಾಕ್ಟರ್ ವಾಹನಗಳಿಂದ ಪದೇ ಪದೇ ಅಪಘಾತ • ಬಿಬಿಎಂಪಿಯಿಂದ ಹೊಸ ಟೆಂಡರ್

ಹೊಸ ವಾಹನಗಳಿಗಷ್ಟೇ ಅವಕಾಶ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ಕಸ ಸಾಗಿಸುವ ವಾಹನ (ಕಾಂಪ್ಯಾಕ್ಟರ್) ಡಿಕ್ಕಿ ಹೊಡೆದು ಜನ ಪ್ರಾಣ ಕಳೆದುಕೊಳ್ಳುವ ಪ್ರಕರಣಗಳು ಪದೇ ಪದೇ ಮರುಕಳಿಸುತ್ತಿರುವುದು ಬಿಬಿಎಂಪಿ ಪಾಲಿಗೆ ತಲೆನೋವಾಗಿದೆ. ಕಸ ವಿಲೇವಾರಿಗೆ ನಗರದ 198 ವಾರ್ಡ್‌ಗಳಿಗೂ ಅನ್ವಯವಾಗುವಂತೆ ಹೊಸ ಟೆಂಡರ್ ಆಹ್ವಾನಿಸಲು ಸಿದ್ಧತೆ ನಡೆಸಿರುವ ಬಿಬಿಎಂಪಿ, ಹೊಸ ವಾಹನ ಬಳಸುವವರಿಗೆ ಮಾತ್ರ ಗುತ್ತಿಗೆ ನೀಡಲಾಗುತ್ತಿದೆ ಎಂಬ ಷರತ್ತು ವಿಧಿಸಲು ಚಿಂತನೆ ನಡೆಸಿದೆ.

'ಹಳೆಯ ಕಾಂಪ್ಯಾಕ್ಟರ್ ವಾಹನಗಳಿಂದ ಪದೇ ಪದೇ ಅಪಘಾತಗಳು ಸಂಭವಿಸುತ್ತಿವೆ. ಒಂದೇ ತಿಂಗಳಿನಲ್ಲಿ ನಡೆದ ಮೂರು ಪ್ರತ್ಯೇಕ ಘಟನೆಗಳಲ್ಲಿ ಮೂವರು ಸಾವಿಗೀಡಾಗಿದ್ದಾರೆ. ಹಳೆ ವಾಹನಗಳ ಕಾರ್ಯಕ್ಷಮತೆ ಬಗ್ಗೆಯೇ ಸಾರ್ವಜನಿಕ ವಲಯದಲ್ಲಿ ಅನುಮಾನಗಳು ಎದ್ದಿವೆ. ಕಸ ವಿಲೇವಾರಿಯ ಹೊಸ ಟೆಂಡರ್ ಐದು ವರ್ಷಗಳ ಅವಧಿಯದ್ದು. ಇಷ್ಟೊಂದು ದೀರ್ಘಾವಧಿಗೆ ಗುತ್ತಿಗೆ ನಿರ್ವಹಿಸಬೇಕಾಗಿರುವುದರಿಂದ ಹೊಸ ಕಾಂಪ್ಯಾಕ್ಟರ್ ವಾಹನಗಳನ್ನು ಹೊಂದಿದವರಿಗೆ ಮಾತ್ರ ಅವಕಾಶ ನೀಡುವುದು ಸೂಕ್ತ. ಟೆಂಡರ್ ಷರತ್ತುಗಳಲ್ಲೇ ಈ ಅಂಶವನ್ನು ಸೇರ್ಪಡೆ ಮಾಡುವ ಉದ್ದೇಶ ನಮ್ಮದು' ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಪ್ರಸ್ತುತ ಬಿಬಿಎಂಪಿಯು 588 ಕಾಂಪ್ಯಾಕ್ಟರ್ ವಾಹನಗಳನ್ನು ಕಸ ಸಾಗಣೆಗೆ ಬಳಸುತ್ತಿದೆ. ಇವುಗಳಲ್ಲಿ ಹೆಚ್ಚಿನ ವಾಹನಗಳನ್ನು ಹೊರಗುತ್ತಿಗೆ ಆಧಾರದಲ್ಲೇ ಬಳಸಲಾಗುತ್ತಿದೆ. ಬಿಬಿಎಂಪಿಯು 22 ಕಾಂಪ್ಯಾಕ್ಟರ್‌ಗಳನ್ನು ಹೊಂದಿದೆಯಾದರೂ ಅವುಗಳ ನಿರ್ವಹಣೆಯನ್ನು ಹೊರಗುತ್ತಿಗೆ ನೀಡಿದೆ. ಕಸ ಸಾಗಣೆಗೆ ಬಳಕೆಯಾಗುತ್ತಿರುವ ಬಹುತೇಕ ವಾಹನಗಳು 10 ವರ್ಷಗಳಿಗೂ ಹಳೆಯವು ಎಂದು ಅವರು ಮಾಹಿತಿ ನೀಡಿದರು.

ಕಸ ಸಾಗಣೆ ವಾಹನಗಳಿಂದ ರಸ್ತೆ ಅಪಘಾತ ಸಂಭವಿಸಿದ ಬಳಿಕ ಬಿಬಿಎಂಪಿ ಕಾಂಪ್ಯಾಕ್ಟರ್ ವಾಹನ ಹಾಗೂ ಅದರ ಚಾಲಕರ ಮೇಲೆ ಹೆಚ್ಚಿನ ನಿಗಾ ಇಟ್ಟಿದೆ.

'ಎರಡು ಅಪಘಾತ ಪ್ರಕರಣಗಳು ನಡೆದ ಬಳಿಕ ಪ್ರತಿ ವಾಹನದ ದಾಖಲೆಗಳ ಪರಿಶೀಲನೆ ಮಾಡುತ್ತಿದ್ದೇವೆ. ವಿಮೆ, ಸದೃಢತಾ ಪ್ರಮಾಣ ಪತ್ರಗಳಿಲ್ಲದೇ ಕಸ ಸಾಗಿಸುವ ಯಾವುದೇ ವಾಹನವನ್ನೂ ರಸ್ತೆಗಿಳಿಸುತ್ತಿಲ್ಲ. ಚಾಲಕರು ಮದ್ಯ ಸೇವಿಸಿದ್ದಾರಾ ಎಂದು ಪರಿಶೀಲಿಸುವ ವ್ಯವಸ್ಥೆ ಜಾರಿಗೆ ತಂದಿದ್ದೇವೆ. ಇದೀಗ ಇನ್ನಷ್ಟು ನಿರ್ಬಂಧಗಳನ್ನು ಹೇರುವ ಚಿಂತನೆ ನಡೆಸುತ್ತಿದ್ದೇವೆ' ಎಂದು ಬಿಬಿಎಂಪಿ ವಿಶೇಷ ಆಯುಕ್ತ ಡಾ.ಕೆ.ಹರೀಶ್ ಕುಮಾರ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ನಗರದಲ್ಲಿ ಉತ್ಪತ್ತಿಯಾಗುವ 4,000 ಟನ್‌ಗಳಷ್ಟು ಕಸದಲ್ಲಿ ನಿತ್ಯ 2 ಸಾವಿರ ಟನ್‌ಗೂ ಹೆಚ್ಚು ಕಸವನ್ನು ಮಿಟ್ಟಗಾನಹಳ್ಳಿಯ ಭೂಭರ್ತಿ ಕೇಂದ್ರಕ್ಕೆ ರವಾನಿಸಲಾಗುತ್ತಿದೆ. ಇನ್ನುಳಿದ ಕಸವನ್ನು ಕಸ ಸಂಸ್ಕರಣಾ ಘಟಕಗಳಿಗೆ ಸಾಗಿಸಲಾಗುತ್ತಿದ್ದು, ಅಲ್ಲಿ ಅವುಗಳನ್ನು ಒಣ ಮತ್ತು ಹಸಿ ಕಸಗಳನ್ನಾಗಿ ವಿಂಗಡಿಸಲಾಗುತ್ತಿದೆ. ಹಸಿ ಕಸವನ್ನು ಸಾವಯವ ಗೊಬ್ಬರ ತಯಾರಿಸಲು ಬಳಸಲಾಗುತ್ತಿದೆ.

ಕಾಂಪ್ಯಾಕ್ಟರ್‌ಗಳಿಗೆ ವೇಗ ನಿಯಂತ್ರಕ?

ಕಸ ಸಾಗಿಸುವ ವಾಹನಗಳಿಗೆ 'ವೇಗ ನಿಯಂತ್ರಕ'ಗಳನ್ನು (ಸ್ಪೀಡ್ ಗವರ್ನರ್) ಅಳವಡಿಸಲು ಬಿಬಿಎಂಪಿ ಚಿಂತನೆ ನಡೆಸಿದೆ.

ಕಾಂಪ್ಯಾಕ್ಟರ್‌ಗಳಿಗೆ ವೇಗ ನಿಯಂತ್ರಕ ಅಳವಡಿಸಿದರೆ ಇನ್ನೊಂದು ರೀತಿಯ ಸಮಸ್ಯೆಯನ್ನು ಬಿಬಿಎಂಪಿ ಎದುರಿಸಬೇಕಾಗುತ್ತದೆ. ಕೆಂಗೇರಿಯಂತಹ ಕಡೆಯಿಂದ ಮಿಟ್ಟಗಾನಹಳ್ಳಿಗೆ ಕಸ ಸಾಗಿಸುವ ವಾಹನವು 45 ಕಿ.ಮೀ.ಗೂ ಹೆಚ್ಚು ದೂರಕ್ಕೆ ಸಂಚರಿಸಬೇಕಾಗುತ್ತದೆ. ವೇಗ ನಿಯಂತ್ರಕಗಳನ್ನು ಅಳವಡಿಸಿದರೆ ವಾಹನ ಸಾಗುವ ವೇಗ ಕಡಿಮೆ ಆಗಲಿದೆ. ಇದರಿಂದ ಕಸ ವಿಲೇವಾರಿ ವ್ಯವಸ್ಥೆ ಮೇಲೆ ಪರಿಣಾಮ ಉಂಟಾಗುವ ಸಾಧ್ಯತೆಯೂ ಇದೆ.

'ನಗರ ಕೇಂದ್ರ ಪ್ರದೇಶಗಳಾಚೆ ಸಂಚರಿಸುವಾಗ ಚಾಲಕರು ಕಾಂಪ್ಯಾಕ್ಟರ್ ಅನ್ನು ಅತಿವೇಗವಾಗಿ ಚಲಾಯಿಸುತ್ತಾರೆ ಎಂಬ ದೂರುಗಳಿವೆ. ಪ್ರತಿ ಟ್ರಿಪ್ ಪೂರ್ಣಗೊಳಿಸುವಾಗ ಒಟ್ಟು 70 ರಿಂದ 80 ಕಿ.ಮೀ ದೂರ ಸಂಚರಿಸಬೇಕಾಗುತ್ತದೆ. ವೇಗವಾಗಿ ಹೋಗದಿದ್ದರೆ ಎಲ್ಲ ಕಡೆಯ ಕಸವನ್ನು ನಿಗದಿತ ಅವಧಿಯೊಳಗೆ ಸಾಗಿಸಲಾಗದು ಎಂಬುದು ಚಾಲಕರ ವಾದ. ಹಾಗೆಂದು ಜನರ ಜೀವದೊಂದಿಗೆ ಚೆಲ್ಲಾಟ ಆಡಲು ಸಾಧ್ಯವಿಲ್ಲ. ವೇಗ ನಿಯಂತ್ರಕ ಅಳವಡಿಸಿದರೆ ಅತಿ ವೇಗವಾಗಿ ಸಾಗುವ ಪರಿಪಾಟಕ್ಕೆ ಕಡಿವಾಣ ಹಾಕಬಹುದು' ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ತಿಳಿಸಿದರು.

ಸುದ್ದಿ 2 ನಿಮಿಷ

ರೈತರ ಸಾಲ ಮನ್ನಾ; ಸಮಸ್ಯೆ ಪರಿಹರಿಸಲು ಸಿಎಂಗೆ ಪತ್ರ

ಬೆಂಗಳೂರು: 'ಮಂಡ್ಯ ಜಿಲ್ಲೆಯೂ ಸೇರಿದಂತೆ ರಾಜ್ಯದಾದ್ಯಂತ ಸಾಲ ಮನ್ನಾ ಬಾಕಿ ಇರುವ ಒಂದು ಲಕ್ಷಕ್ಕೂ ಹೆಚ್ಚು ರೈತರ ಸಮಸ್ಯೆಗಳನ್ನು ಶೀಘ್ರ ಬಗೆಹರಿಸಬೇಕು' ಎಂದು ಆಗ್ರಹಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಅವರಿಗೆ ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಪತ್ರ ಬರೆದಿದ್ದಾರೆ.

'ಮಂಡ್ಯ ಜಿಲ್ಲೆಯೊಂದರಲ್ಲೇ 3,021 ರೈತರಿಗೆ 15.37 ಕೋಟಿ ಸಾಲಮನ್ನಾ ಹಣ ಬಿಡುಗಡೆ ಆಗಬೇಕಿದೆ. ಈ ಪೈಕಿ, ಸಮರ್ಪಕ ದಾಖಲೆಗಳನ್ನು ಹೊಂದಿದ್ದು, ಹಸಿರು ಪಟ್ಟಿಯಲ್ಲಿರುವ 2,151 ರೈತರಿಗೆ ₹ 10.86 ಕೋಟಿ ಬಿಡುಗಡೆ ಆಗಬೇಕು. ಉಳಿತಾಯ ಖಾತೆ ತಪ್ಪಾಗಿರುವ 105 ರೈತರಿಗೆ ₹ 57.13 ಲಕ್ಷ ಬಿಡುಗಡೆಗೆ ಬಾಕಿ ಇದೆ. 765 ರೈತರು ಹಸಿರು ಪಟ್ಟಿಗೆ ಬರಲು ಬಾಕಿ ಇದ್ದು, ಅವರ ₹ 3.93 ಕೋಟಿ ಬಿಡುಗಡೆ ಆಗಬೇಕಿದೆ' ಎಂದು ಪತ್ರದಲ್ಲಿ ವಿವರಿಸಿದ್ದಾರೆ.

'2018ರಲ್ಲಿ ಅನೇಕ ಷರತ್ತುಗಳನ್ನು ವಿಧಿಸಿ ಸರ್ಕಾರ ಸಾಲಮನ್ನಾ ಘೋಷಿಸಿತ್ತು. ಆದರೆ, ನಾಲ್ಕು ವರ್ಷ ಕಳೆದರೂ ರೈತರ ಸಮಸ್ಯೆ ಬಗೆಹರಿದಿಲ್ಲ. ಸಾಲಮನ್ನಾದ ಪ್ರಯೋಜನ ಪಡೆಯಲಾಗದ ರೈತರಿಗೆ ಹೊಸ ಸಾಲ ಸಿಗುತ್ತಿಲ್ಲ. ಅಲ್ಲದೆ, ಹಳೆಯ ಸಾಲದ ನವೀಕರಣ ಆಗದೆ ಸಮಸ್ಯೆಗೆ ಸಿಲುಕಿದ್ದಾರೆ. ಇಡೀ ರಾಜ್ಯದಲ್ಲಿ ರೈತರು ಈ ಸಮಸ್ಯೆಯನ್ನು ಎದುರಿಸುತ್ತಿದ್ದು, ಸಂಕಷ್ಟದಲ್ಲಿರುವ ರೈತರ ನೆರವಿಗೆ ಧಾವಿಸಬೇಕು' ಎಂದು ಪತ್ರದಲ್ಲಿ ಮನವಿ ಮಾಡಿದ್ದಾರೆ.

ಲಾಡ್ಜ್ ಹೆಸರು ಬದಲಾವಣೆ ಬೆನ್ನಲ್ಲೇ ಆತ್ಮಹತ್ಯೆ

ಉಡುಪಿ: ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಮಾಡಿಕೊಂಡಿದ್ದ ಲಾಡ್ಜ್‌ನಲ್ಲಿ ಮಂಗಳವಾರ ಮತ್ತೊಬ್ಬ ವ್ಯಕ್ತಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮಂಗಳೂರಿನ ಕೊಣಾಜೆಯ ಶರಣ್ ರಾಜ್ ಎಂಬುವರು ಕೊಠಡಿಯಲ್ಲಿ ನೇಣುಹಾಕಿಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ. ಅವರ ಆತ್ಮಹತ್ಯೆಗೆ ನಿಖರ ಕಾರಣ ತಿಳಿದುಬಂದಿಲ್ಲ.

ಮಾಜಿ ಸಚಿವ ಈಶ್ವರಪ್ಪ ವಿರುದ್ಧ 'ಶೇ 40 ಪರ್ಸೆಂಟೇಜ್' ಆರೋಪ ಮಾಡಿ ಬೆಳಗಾವಿಯಿಂದ ಉಡುಪಿಗೆ ಬಂದಿದ್ದ ಸಂತೋಷ್ ಪಾಟೀಲ ಏ.12ರಂದು ಲಾಡ್ಜ್‌ನಲ್ಲಿ ವಿಷಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದರು.

ಈ ಘಟನೆ ರಾಜ್ಯದಾದ್ಯಂತ ಸುದ್ದಿಯಾಗುವುದರ ಜತೆಗೆ, ಲಾಡ್ಜ್‌ನ ಹೆಸರೂ ಎಲ್ಲಾ ಕಡೆ ಕೇಳಿಬಂದಿತ್ತು. ಇದರಿಂದ ವ್ಯಾಪಾರಕ್ಕೆ ತೊಂದರೆಯಾಗುವುದೆಂಬ ಕಾರಣದಿಂದ ಮಾಲೀಕರು ಲಾಡ್ಜ್‌ನ ಹೆಸರು ಬದಲಿಸಿದ್ದರು. ಮಾತ್ರವಲ್ಲದೆ, ಜ್ಯೋತಿಷಿಗಳ ಸಲಹೆಯಂತೆ ಹೋಮ ಹವನಾದಿಗಳನ್ನೂ ನೆರವೇರಿಸಿದ್ದರು. ಇದೆಲ್ಲ ಮುಗಿದು ಕಲವೇ ದಿನಗಳಲ್ಲಿ ಲಾಡ್ಜ್‌ನಲ್ಲಿ ಮತ್ತೊಬ್ಬ ವ್ಯಕ್ತಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮಗನ ಕೊಂದು ತಾಯಿ ಆತ್ಮಹತ್ಯೆ

ಬೆಂಗಳೂರು: 'ತಾಯಿ ಆತ್ಮಹತ್ಯೆ ಮಾಡಿಕೊಂಡು ಮೃತಪಟ್ಟರು' ಎಂಬ ಕಾರಣಕ್ಕೆ ಮಾನಸಿಕವಾಗಿ ನೊಂದಿದ್ದರು ಎನ್ನಲಾದ ರೋಹಿಣಿ ಶೆಟ್ಟಿ (36) ಎಂಬುವವರು ತಮ್ಮ ಮಗ ಸಿಯಾನ್‌ನನ್ನು (5) ಕೊಂದು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಬಗ್ಗೆ ಹುಳಿಮಾವು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮಂಗಳೂರಿನ ರೋಹಿಣಿ, ನಗರದ ಸಾಫ್ಟ್‌ವೇರ್ ಕಂಪನಿಯಲ್ಲಿ ಎಂಜಿನಿಯರ್ ಆಗಿದ್ದ ಪ್ರವೀಣ್ ಅವರನ್ನು ಮದುವೆಯಾಗಿದ್ದರು. ಹುಳಿಮಾವು ಬಳಿಯ ಬಸವನಪುರದಲ್ಲಿ ಮಗ ಸಿಯಾನ್ ಜೊತೆ ದಂಪತಿ ನೆಲೆಸಿದ್ದರು. ಸೋಮವಾರ ರಾತ್ರಿ (ಏಪ್ರಿಲ್ 18) ಮನೆಯ ಕೊಠಡಿಯಲ್ಲಿ ಮಗನನ್ನು ಕೊಂದು ರೋಹಿಣಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಮಗನನ್ನು ಕೊಂದ ಆರೋಪದಡಿ ರೋಹಿಣಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ರೋಹಿಣಿ ಸಾವಿನ ಬಗ್ಗೆ ಪ್ರತ್ಯೇಕ ಯುಡಿಆರ್ (ಅಸಹಜ ಸಾವು) ಪ್ರಕರಣ ದಾಖಲಾಗಿದೆ' ಎಂದೂ ತಿಳಿಸಿದರು.

ಹಲವು ಬಾರಿ ಆತ್ಮಹತ್ಯೆಗೆ ಯತ್ನ: 'ರೋಹಿಣಿ ಅವರ ತಾಯಿ ಇತ್ತೀಚೆಗೆ ಆತ್ಮಹತ್ಯೆ ಮಾಡಿಕೊಂಡಿದ್ದರು. ಇದರಿಂದ ಮಾನಸಿಕವಾಗಿ ನೊಂದಿದ್ದ ರೋಹಿಣಿ, ಹಲವು ಬಾರಿ ಆತ್ಮಹತ್ಯೆಗೆ ಯತ್ನಿಸಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸ್ ಅಧಿಕಾರಿ ಹೇಳಿದರು.

'ಸೋಮವಾರ ರಾತ್ರಿ ರೋಹಿಣಿ ಹಾಗೂ ಪ್ರವೀಣ್ ಪ್ರತ್ಯೇಕ ಕೊಠಡಿಗಳಲ್ಲಿ ಮಲಗಿದ್ದರು. ತಡರಾತ್ರಿ ಮಗನನ್ನು ನೇಣು ಬಿಗಿದು ಕೊಂದಿದ್ದ ರೋಹಿಣಿ, ಕೆಲ ನಿಮಿಷಗಳ ನಂತರ ಅದೇ ಫ್ಯಾನ್‌ಗೆ ನೇಣು ಹಾಕಿಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ.'

'ಮಂಗಳವಾರ (ಏಪ್ರಿಲ್ 19) ಬೆಳಿಗ್ಗೆ ಎಚ್ಚರಗೊಂಡಿದ್ದ ಪ್ರವೀಣ್, ಕೊಠಡಿಗೆ ಹೋಗಿ ನೋಡಿದಾಗ ಮೃತದೇಹಗಳು ಕಂಡಿದ್ದವು. ಬಳಿಕ, ಠಾಣೆಗೆ ಮಾಹಿತಿ ನೀಡಿದ್ದರು' ಎಂದೂ ಪೊಲೀಸ್ ಅಧಿಕಾರಿ ತಿಳಿಸಿದರು.

ಹೆಚ್ಚುತ್ತಿರುವ ಅಪಘಾತ: ಸಂಚಾರ ಪೊಲೀಸರ ತಪಾಸಣೆ

ಕಸ ಸಾಗಣೆಯ 463 ವಾಹನಗಳಿಗೆ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಸ ಸಾಗಣೆ ವಾಹನಗಳ ವಿರುದ್ಧ ಸಂಚಾರ ಪೊಲೀಸರು ಬುಧವಾರ ವಿಶೇಷ ಕಾರ್ಯಾಚರಣೆ ನಡೆಸಿದರು.

ಪ್ರಮುಖ ಪ್ರದೇಶ ಹಾಗೂ ರಸ್ತೆಗಳಲ್ಲಿ ಬಿಬಿಎಂಪಿ ಕಸ ಸಾಗಣೆ ವಾಹನಗಳನ್ನು ತಡೆದು ದಾಖಲೆಗಳ ಪರಿಶೀಲನೆ ನಡೆಸಿದರು. ಮದ್ಯ ಕುಡಿದು ವಾಹನ ಚಾಲನೆ ಮಾಡುವ ಅನುಮಾನದ ಮೇರೆಗೆ ಆಲ್ಕೊಮೀಟರ್ ಬಳಸಿ ಚಾಲಕರ ತಪಾಸಣೆ ಮಾಡಿದರು. ಕುಡಿದ ಮತ್ತಿನಲ್ಲಿ ಒಬ್ಬ ಚಾಲಕ ಸಿಕ್ಕಿಬಿದ್ದರು. ಅವರ ವಿರುದ್ಧ ಪ್ರತ್ಯೇಕ ಪ್ರಕರಣ ದಾಖಲಾಗಿದೆ.

ಪೂರ್ವ, ಪಶ್ಚಿಮ ಹಾಗೂ ಉತ್ತರ ವಿಭಾಗದ ಎಲ್ಲ ಸಂಚಾರ ಠಾಣೆಗಳ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಯಿತು. ಕಸ ಹೊತ್ತೊಯ್ಯುವ ಆಟೊ ಟಿಪ್ಪರ್, ಲಾರಿ, ಕಂಟೇನರ್ ಸೇರಿದಂತೆ 823 ವಾಹನಗಳನ್ನು ತಪಾಸಣೆ ನಡೆಸಿದರು.

ಸಮವಸ್ತ್ರ ಧರಿಸದ, ದೋಷಪೂರಿತ ನೋಂದಣಿ ಸಂಖ್ಯೆ ಫಲಕ ಅಳವಡಿಕೆ, ಸಿಗ್ನಲ್ ಜಂಪ್, ಪಥ ಶಿಸ್ತು, ಅಜಾಗರೂಕತೆ ಚಾಲನೆ ಸೇರಿದಂತೆ ವಿವಿಧ ಪ್ರಕಾರ ಸಂಚಾರ ನಿಯಮ ಉಲ್ಲಂಘಿಸಿದ್ದಕ್ಕಾಗಿ 463 ವಾಹನಗಳಿಗೆ ದಂಡ ವಿಧಿಸಿದರು. ಕೆಲ ವಾಹನಗಳ ಚಾಲಕರಿಂದ ಸ್ಥಳದಲ್ಲೇ ದಂಡ ಸಂಗ್ರಹಿಸಿ ರಶೀದಿ ನೀಡಿದರು.

'ಪೂರ್ವ ವಿಭಾಗ ವ್ಯಾಪ್ತಿಯಲ್ಲಿ ಬುಧವಾರ ನಸುಕಿನಲ್ಲೇ ರಸ್ತೆಗೆ ಇಳಿದಿದ್ದ ಸಿಬ್ಬಂದಿ, ಕಸ ಸಾಗಣೆಯ ಪ್ರತಿಯೊಂದು ವಾಹನವನ್ನು ತಪಾಸಣೆ ಮಾಡಿದರು. ಸಂಚಾರ ನಿಯಮ ಉಲ್ಲಂಘಿಸಿದ್ದವರಿಂದ ₹ 1.25 ಲಕ್ಷ ದಂಡ ಸಂಗ್ರಹಿಸಿದ್ದಾರೆ. ನಿಯಮ ಉಲ್ಲಂಘಿಸದಂತೆ ಎಚ್ಚರಿಕೆಯನ್ನೂ ನೀಡಿದ್ದಾರೆ' ಎಂದು ಸಂಚಾರ ವಿಭಾಗದ (ಪೂರ್ವ) ಡಿಸಿಪಿ ಕೆ.ಎಂ. ಶಾಂತರಾಜು ಹೇಳಿದರು.

ಪಶ್ಚಿಮ ವಿಭಾಗದ ಡಿಸಿಪಿ ಕುಲದೀಪ್ ಕುಮಾರ್ ಆರ್. ಜೈನ್, 'ಕಸ ಸಾಗಣೆ ವಾಹನಗಳ ಸದೃಢತಾ ಪ್ರಮಾಣ ಪತ್ರ, ವಿಮೆ ಸೇರಿದಂತೆ ಎಲ್ಲ ದಾಖಲೆಗಳನ್ನು ಪರಿಶೀಲಿಸಲಾಯಿತು. ದಾಖಲೆ ನೀಡದವರ ವಿರುದ್ಧ ಕ್ರಮ ಜರುಗಿಸಲಾಗಿದೆ' ಎಂದು ಅವರು ತಿಳಿಸಿದರು.

ಉತ್ತರ ವಿಭಾಗದ ಡಿಸಿಪಿ ಎಸ್. ಸವಿತಾ, 'ತಪಾಸಣೆ ಜೊತೆಯಲ್ಲೇ ಚಾಲಕರಿಗೆ ಸಂಚಾರ ನಿಯಮಗಳ ಬಗ್ಗೆ ಜಾಗೃತಿ ಮೂಡಿಸಲಾಗಿದೆ' ಎಂದು ಹೇಳಿದರು.

ಬಿಬಿಎಂಪಿ ಕಸ ಸಾಗಣೆ ಲಾರಿ ಚಾಲಕನನ್ನು ಆಲ್ಕೊಮೀಟರ್ ಮೂಲಕ ಸಂಚಾರ ಪೊಲೀಸರು ಬುಧವಾರ ತಪಾಸಣೆ ನಡೆಸಿದರು

ವಿಭಾಗವಾರು ಕಾರ್ಯಾಚರಣೆ ವಿವರ

ವಿಭಾಗ	ತಪಾಸಣೆ ಮಾಡಿದ (ವಾಹನಗಳು)	ದಂಡ ವಿಧಿಸಿದ (ವಾಹನಗಳು)
ಪಶ್ಚಿಮ	252	82
ಪೂರ್ವ	353	255
ಉತ್ತರ	218	126

'ಮೊಬೈಲ್ ಬಳಸಿ ಸಿಕ್ಕಿಬಿದ್ದ ಚಾಲಕರು'

ಕಸ ಸಾಗಣೆ ವಾಹನ ಚಲಾಯಿಸುತ್ತಿದ್ದ ಸಂದರ್ಭದಲ್ಲೇ ಮೊಬೈಲ್ ಬಳಸಿ 19 ಚಾಲಕರು ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ.

'ಮೊಬೈಲ್‌ನಲ್ಲಿ ಮಾತನಾಡುತ್ತಲೇ ಚಾಲಕರು, ಅಜಾಗರೂಕತೆಯಿಂದ ಅತೀ ವೇಗದಲ್ಲಿ ವಾಹನ ಚಲಾಯಿಸುತ್ತಿದ್ದರು. ಅವರನ್ನು ತಡೆದು ದಂಡ ವಿಧಿಸಲಾಗಿದೆ. ತಪ್ಪು ಮರುಕಳಿಸಿದರೆ ಪರವಾನಗಿ ರದ್ದುಪಡಿಸುವ ಎಚ್ಚರಿಕೆ ನೀಡಲಾಗಿದೆ' ಎಂದು ಸಂಚಾರ ಪೊಲೀಸರು ಹೇಳಿದರು.

ಕಾಶಿ: ಯಾತ್ರಿಗಳಿಗೆ ತಲಾ ₹5 ಸಾವಿರ

ಬೆಂಗಳೂರು: ರಾಜ್ಯದಿಂದ ಕಾಶಿ ಯಾತ್ರೆ ಕೈಗೊಳ್ಳುವ 30 ಸಾವಿರ ಯಾತ್ರಿಕರಿಗೆ ತಲಾ ₹5,000 ಸಹಾಯಧನ ನೀಡಲು ಸರ್ಕಾರ ತಾತ್ವಿಕ ಅನುಮೋದನೆ ನೀಡಿದೆ ಎಂದು ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ ತಿಳಿಸಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಜೆಟ್‌ನಲ್ಲಿ ಈ ಕುರಿತು ಘೋಷಣೆ ಮಾಡಿದ್ದರು. ಅಲ್ಲದೆ, ಮಹಾರಾಷ್ಟ್ರದ ಪಂಢರಾಪುರದಲ್ಲಿ ಅತಿಥಿ ಗೃಹ ನಿರ್ಮಾಣ ಮಾಡುವ ಸಂಬಂಧ ಅಧಿಕೃತ ಆದೇಶ ಹೊರಡಿಸಲಾಗಿದೆ. ₹7.50 ಕೋಟಿ ವೆಚ್ಚದಲ್ಲಿ ಸುಸಜ್ಜಿತ ಅತಿಥಿಗೃಹ ನಿರ್ಮಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಹಣ ಕಳೆದುಕೊಂಡ ಯುವಕ

ಬೆಂಗಳೂರು: 'ಸರ್ಕಾರಿ ನೌಕರಿ ಖಾಲಿ ಇದೆ' ಎಂಬುದಾಗಿ ಮೊಬೈಲ್‌ಗೆ ಬಂದ ಸಂದೇಶ ನಂಬಿ ಖಾಸಗಿ ಕಂಪನಿ ಉದ್ಯೋಗಿಯೊಬ್ಬರು ಹಣ ಕಳೆದುಕೊಂಡಿದ್ದು, ಈ ಸಂಬಂಧ ಆಗ್ನೇಯ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಎಲೆಕ್ಟ್ರಾನಿಕ್ ಸಿಟಿ ಬಳಿಯ ಪೇಯಿಂಗ್ ಗೆಸ್ಟ್ ಕಟ್ಟಡವೊಂದರಲ್ಲಿ ವಾಸವಿರುವ ಮಂಜುನಾಥ್ ವಂಚನೆ ಬಗ್ಗೆ ದೂರು ನೀಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ಹಲವು ಸರ್ಕಾರಿ ಹುದ್ದೆಗಳಿಗೆ ಮಂಜುನಾಥ್ ಅರ್ಜಿ ಸಲ್ಲಿಸಿದ್ದರು. ಆದರೆ, ಕೆಲಸ ಸಿಕ್ಕಿರಲಿಲ್ಲ. ಅಪರಿಚಿತ ಸಂಖ್ಯೆಯಿಂದ ಜನವರಿ 10ರಂದು ಅವರ ಮೊಬೈಲ್‌ಗೆ ಸಂದೇಶ ಬಂದಿತ್ತು. 'ಸರ್ಕಾರಿ ಕೆಲಸ ಖಾಲಿ ಇದೆ' ಎಂಬುದಾಗಿ ಸಂದೇಶದಲ್ಲಿ ಬರೆಯಲಾಗಿತ್ತು.' 'ಸಂದೇಶ ನಂಬಿದ್ದ ದೂರುದಾರ, ಅದರಲ್ಲಿದ್ದ ಮೊಬೈಲ್ ಸಂಖ್ಯೆಗೆ ಕರೆ ಮಾಡಿದ್ದರು. ಕರೆ ಸ್ವೀಕರಿಸಿದ್ದ ವಿಜಯ್ ಎಂಬಾತ ಸರ್ಕಾರಿ ಕೆಲಸ ಕೊಡಿಸುವುದಾಗಿ ಹೇಳಿದ್ದ. ಶುಲ್ಕ ಹಾಗೂ ಇತರೆ ವೆಚ್ಚವೆಂದು ಹೇಳಿ ₹ 76,900 ಪಡೆದಿದ್ದ.

ಭ್ರಷ್ಟಾಚಾರ ವಿರೋಧಿ ಜನಾಂದೋಲನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾಗೃತ ಕರ್ನಾಟಕ ಸಂಘಟನೆ ವತಿಯಿಂದ ಹಮ್ಮಿಕೊಂಡಿರುವ ಭ್ರಷ್ಟಾಚಾರ ವಿರೋಧಿ ಜನಾಂದೋಲನ ಏ. 22ರಿಂದ ಚಿಕ್ಕಬಳ್ಳಾಪುರದಿಂದ ಆರಂಭವಾಗಲಿದೆ.

ಬುಧವಾರ ಹಮ್ಮಿಕೊಂಡಿದ್ದ ಸಮಾಲೋಚನಾ ಸಭೆಯಲ್ಲಿ ಸಂಘಟನೆಯ ಡಾ. ಎಚ್.ವಿ. ವಾಸು ಈ ವಿಷಯ ತಿಳಿಸಿದರು.

ಸಭೆಯಲ್ಲಿ ರೈತ ಸಂಘಟನೆ ನಾಯಕರು, ಕಾರ್ಮಿಕ ನಾಯಕರು ಮತ್ತು ವಿಷಯ ಪರಿಣತರು ಭಾಗವಹಿಸಿ ಸಲಹೆ ಸೂಚನೆಗಳನ್ನು ನೀಡಿದರು.

ಕರ್ನಾಟಕದಲ್ಲಿ ಭ್ರಷ್ಟಾಚಾರ ಮಿತಿಮೀರುತ್ತಿದೆ. ಶೇ 40 ಕಮಿಷನ್ ಪಡೆಯುವ ಮೂಲಕ ಕಳಪೆ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಪ್ರತಿಯೊಂದು ಇಲಾಖೆಯಲ್ಲೂ ಭ್ರಷ್ಟಾಚಾರ ವ್ಯಾಪಿಸಿದೆ ಎಂದು ಪ್ರಮುಖರು ಆಕ್ರೋಶ ವ್ಯಕ್ತಪಡಿಸಿದರು.

ಕೋವಿಡ್ ಸಂದರ್ಭದಲ್ಲಿ ಕಾರ್ಮಿಕ ಇಲಾಖೆ ಮತ್ತು ಆರೋಗ್ಯ ಇಲಾಖೆಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿದೆ. ಅದು ಈಗಲೂ ಮುಂದುವರಿದಿದೆ ಎಂದು ಹೇಳಿದರು.

ಕೋವಿಡ್ ನಿರ್ವಹಣೆಯಲ್ಲಿ ಆಗಿರುವ ವ್ಯಾಪಕ ಭ್ರಷ್ಟಾಚಾರದ ವಿರುದ್ಧವೂ ರಾಜ್ಯವ್ಯಾಪಿ ಆಂದೋಲನ ನಡೆಸಲು ಜಾಗೃತ ಕರ್ನಾಟಕ ಸಂಘಟನೆ ಇದೇ ಸಂದರ್ಭದಲ್ಲಿ ನಿರ್ಣಯ ಕೈಗೊಂಡಿದೆ.

ಮಾಜಿ ಐಎಎಸ್ ಅಧಿಕಾರಿ ಟಿ.ಆರ್. ರಘುನಂದನ್ ಮಾತನಾಡಿ, ಸರಕುಗಳ ಖರೀದಿಯಲ್ಲಿ ಪಾರದರ್ಶಕ ನಿಯಮಗಳನ್ನು ಅನುಸರಿಸುತ್ತಿಲ್ಲ. ಹೀಗಾಗಿ, ಹೊಸ ಕಾಯ್ದೆ ಜಾರಿಗೆ ತರುವ ಅಗತ್ಯವಿದೆ ಎಂದು ಪ್ರತಿಪಾದಿಸಿದರು.

ಆದರ್ಶ ಅಯ್ಯರ್, ಜೆ.ಎಂ. ವೀರಸಂಗಯ್ಯ , ಆಂಜನೇಯ ರೆಡ್ಡಿ, ಮಹಾಂತೇಶ್ ಇದ್ದರು.

ಸೋಮಶೇಖರ್ ಅವಿರೋಧ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿ ಸೋಮವಂಶ ಸಹಸ್ರಾರ್ಜುನ ಕ್ಷತ್ರಿಯ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್‌ನ ಆಡಳಿತ ಮಂಡಳಿ ಅಧ್ಯಕ್ಷರಾಗಿ ಮಗಜಿ ಬಾದ್ ಕೆ.ಸೋಮಶೇಖರ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಕೆ.ಸೋಮಶೇಖರ್

'ಬುಧವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಮಗಜಿ ಬಾದ್ ಕೆ.ಸೋಮಶೇಖರ್ ಒಬ್ಬರೇ ನಾಮಪತ್ರ ಸಲ್ಲಿಸಿದ್ದರು' ಎಂದು ಸೊಸೈಟಿಯ ಚುನಾವಣಾ ಧಿಕಾರಿ ಟಿ.ಸಿ. ವಿಜಯಕುಮಾರ್ ಅವರು ತಿಳಿಸಿದ್ದಾರೆ.

ಕಾಮಗಾರಿಗೆ ಮೇ ತಿಂಗಳ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಬಿಎಂಪಿಗೆ ಸೇರ್ಪಡೆಯಾಗಿರುವ 110 ಹಳ್ಳಿಗಳಲ್ಲಿ ಕುಡಿಯುವ ನೀರಿನ ಕೊಳವೆಮಾರ್ಗ ಹಾಗೂ ಒಳಚರಂಡಿ ಕಾಮಗಾರಿ ಪೂರ್ಣಗೊಂಡಿರುವ ಕಡೆ ರಸ್ತೆಗಳ ಪುನಶ್ಚೇತನ ಕಾರ್ಯ ಮೇ ತಿಂಗಳಾಂತ್ಯದೊಳಗೆ ಪೂರ್ಣಗೊಳ್ಳಬೇಕು. ವಿಳಂಬ ಮಾಡುವ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸಲಾಗುವುದು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

110 ಹಳ್ಳಿಗಳಲ್ಲಿನ ರಸ್ತೆಗಳ ಪುನಶ್ಚೇತನ ಕಾರ್ಯದ ಪ್ರಗತಿ ಪರಿಶೀಲಿಸಲು ಅಧಿಕಾರಿಗಳ ಜೊತೆ ಅವರು ವರ್ಚುವಲ್ ರೂಪದಲ್ಲಿ ಬುಧವಾರ ಸಭೆ ನಡೆಸಿದರು. ರಸ್ತೆ ಪುನಃಶ್ಚೇತನ ಕಾಮಗಾರಿಗಳ 74 ಪ್ಯಾಕೇಜ್‌ಗಳನ್ನು ಬಿಬಿಎಂಪಿ ಕೈಗೆತ್ತಿಕೊಂಡಿದೆ. ಈಗಾಗಲೇ ಕಾಮಗಾರಿ ಪ್ರಗತಿಯಲ್ಲಿದೆ. 505.29 ಕಿ.ಮೀ ರಸ್ತೆ ಪುನಶ್ಚೇತನ ಕಾರ್ಯ ಇನ್ನಷ್ಟೇ ಆಗಬೇಕಿದೆ.

'ಪುನಶ್ಚೇತನ ಕಾಮಗಾರಿ ಗುಣಮಟ್ಟದಿಂದ ಕೂಡಿರಬೇಕು. ಈ ಬಗ್ಗೆ ಹೆಚ್ಚಿನ ನಿಗಾ ವಹಿಸಬೇಕು' ಎಂದು ಅಧಿಕಾರಿಗಳಿಗೆ ಮುಖ್ಯ ಆಯುಕ್ತರು ತಾಕೀತು ಮಾಡಿದರು.

'ನಗರದ ಮುಖ್ಯರಸ್ತೆಗಳು ಹಾಗೂ ಉಪಮುಖ್ಯ ರಸ್ತೆಗಳ ಪುನಃಶ್ಚೇತನ ಕಾರ್ಯವನ್ನೂ ತಕ್ಷಣವೇ ಕೈಗೆತ್ತಿಕೊಳ್ಳಬೇಕು. ನಗರದ ರಸ್ತೆಗಳು ಹಾಳಾಗಿವೆ ಎಂದು ದೂರುವ ಸ್ಥಿತಿ ನಿರ್ಮಾಣವಾಗುವುದಕ್ಕೆ ಅವಕಾಶ ನೀಡಬಾರದು' ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ರಸ್ತೆ ಮೂಲಸೌಕರ್ಯ ವಿಭಾಗದ ಮುಖ್ಯ ಎಂಜಿನಿಯರ್, ವಿವಿಧ ವಲಯಗಳ ಮುಖ್ಯ ಎಂಜಿನಿಯರ್‌ಗಳು, ವಿಭಾಗೀಯ ಕಾರ್ಯಪಾಲಕ ಎಂಜಿನಿಯರ್‌ಗಳು, ಸಹಾಯಕ ಎಂಜಿನಿಯರ್ ಉಪಸ್ಥಿತರಿದ್ದರು.

ಅಂಕಿ-ಅಂಶಗಳು

₹1,078 ಕೋಟಿ
110 ಹಳ್ಳಿಗಳ ರಸ್ತೆಗಳ ಅಭಿವೃದ್ಧಿಗೆ ಸರ್ಕಾರ ಬಿಡುಗಡೆ ಮಾಡಿದ ಅನುದಾನ

794.98 ಕಿ.ಮೀ
ಪುನಶ್ಚೇತನಗೊಳಿಸಬೇಕಾದ ರಸ್ತೆಗಳ ಒಟ್ಟು ಉದ್ದ

289.69 ಕಿ.ಮೀ
ಪುನಶ್ಚೇತನ ಕಾರ್ಯ ಪೂರ್ಣಗೊಂಡಿರುವ ರಸ್ತೆಗಳು

ಚಿತ್ರಾವಳಿ

ಸಪ್ತಕ ವತಿಯಿಂದ ಮಲ್ಲೇಶ್ವರದಲ್ಲಿ ಆಯೋಜಿಸಿದ್ದ 'ಸ್ವರಸಂಜೆ' ಕಾರ್ಯಕ್ರಮದಲ್ಲಿ ಗಾಯಕ ಉಸ್ತಾದ್ ಅರ್ಷದ್ ಅಲಿ ಖಾನ್ ಮತ್ತು ತಂಡದವರು ಕಾರ್ಯಕ್ರಮ ನಡೆಸಿಕೊಟ್ಟರು.

ಬಿ.ಎಂ.ಶ್ರೀ. ಪ್ರತಿಷ್ಠಾನದ ವತಿಯಿಂದ ನಗರದಲ್ಲಿ ನಡೆದ 2022ನೇ ಸಾಲಿನ ಹಳಗನ್ನಡ ರಸಗ್ರಹಣ ತರಗತಿಯನ್ನು ಸಾಹಿತಿ ಪಿ.ವಿ.ನಾರಾಯಣ ಉದ್ಘಾಟಿಸಿ ಮಾತನಾಡಿದರು. ಚಂದ್ರಶೇಖರ್, ಕೆ.ಆರ್.ಗಣೇಶ್, ಆರ್. ಲಕ್ಷ್ಮೀನಾರಾಯಣ, ಬೈರಮಂಗಲ ರಾಮೇಗೌಡ, ಶಾಂತರಾಜು ಇದ್ದರು.

ಎಂ.ಎಸ್.ರಾಮಯ್ಯ ಪ್ರತಿಷ್ಠಾನದಿಂದ ಬುಧವಾರ ಆಯೋಜಿಸಿದ್ದ ಎಂ.ಎಸ್. ರಾಮಯ್ಯ ಜನ್ಮಶತಮಾನೋತ್ಸವ ಕಾರ್ಯಕ್ರಮದಲ್ಲಿ ಚಿತ್ರಶೇಖರ್, ಬ್ರಿಗೇಡಿಯರ್ ದೀಪೇಂದ್ರ ರಾವತ್, ಬ್ರಿಗೇಡಿಯರ್ ಎಂ.ಬಿ.ಶಶಿಧರ್, ಫೌಂಡೇಷನ್‌ನ ಸಂಸ್ಥಾಪಕ ಟ್ರಸ್ಟಿ ಡಾ.ಎಂ.ಆರ್.ಪಟ್ಟಾಭಿರಾಮ್ ಹಾಗೂ ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಬಿಸಿನೆಸ್ ಸ್ಟಡೀಸ್‌ನ ಪ್ರಾಂಶುಪಾಲ ಎಂ.ಕೆ.ಪುರುಷೋತ್ತಮ ಇದ್ದರು

–ಪ್ರಜಾವಾಣಿ ಚಿತ್ರ

ಗೋಡೆ ಕೊರೆದು 5 ಕೆ.ಜಿ ಚಿನ್ನಾಭರಣ ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆ.ಪಿ. ನಗರ ಒಂದನೇ ಹಂತದ 14ನೇ ಅಡ್ಡರಸ್ತೆಯಲ್ಲಿರುವ 'ಪ್ರಿಯದರ್ಶಿನಿ ಜ್ಯುವೆಲರ್ಸ್' ಮಳಿಗೆಯ ಗೋಡೆ ಕೊರೆದು 5 ಕೆ.ಜಿ ಚಿನ್ನಾಭರಣ ಕಳ್ಳತನ ಮಾಡಲಾಗಿದ್ದು, ಈ ಬಗ್ಗೆ ಎಫ್‌ಐಆರ್ ದಾಖಲಾಗಿದೆ.

'ಏಪ್ರಿಲ್ 17ರಂದು ರಾತ್ರಿ ಕಳ್ಳತನ ನಡೆದಿದ್ದು, ಮಳಿಗೆ ಮಾಲೀಕ ಕೆ. ರಾಜು ದೇವಾಡಿಗ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡು, ಆರೋಪಿಗಳ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕನಕಪುರ ಮುಖ್ಯರಸ್ತೆಯ ಮೆಟ್ರೊ ನಿಲ್ದಾಣ ಸಮೀಪದಲ್ಲಿ ಮಳಿಗೆ ಇದೆ. ಏಪ್ರಿಲ್ 17ರಂದು ಎಂದಿನಂತೆ ವ್ಯಾಪಾರ ಮುಗಿಸಿದ್ದ ಮಾಲೀಕ, ರಾತ್ರಿ 7 ಗಂಟೆಗೆ ಬೀಗ ಹಾಕಿಕೊಂಡು ಮನೆಗೆ ಹೋಗಿದ್ದರು. ಮರುದಿನ ಬೆಳಿಗ್ಗೆ 10 ಗಂಟೆಗೆ ಮಳಿಗೆಗೆ ಬಂದು ಬೀಗ ತೆರೆದು ನೋಡಿದಾಗ ಕಳ್ಳತನ ಗಮನಕ್ಕೆ ಬಂದಿದೆ' ಎಂದೂ ತಿಳಿಸಿವೆ.

ವ್ಯವಸ್ಥಿತ ಕಳ್ಳತನ: 'ಹಲವು ದಿನಗಳಿಂದ ಸಂಚು ರೂಪಿಸಿದ್ದ ಆರೋಪಿಗಳು, ವ್ಯವಸ್ಥಿತವಾಗಿ ಕೃತ್ಯ ಎಸಗಿದ್ದಾರೆ. ಡ್ರಿಲ್ಲಿಂಗ್ ಯಂತ್ರ ಬಳಸಿ ಗೋಡೆ ಕೊರೆದು ಮಳಿಗೆಯೊಳಗೆ ರಾತ್ರಿ ನುಗ್ಗಿದ್ದರು. ಗ್ಯಾಸ್ ಕಟರ್ ಬಳಸಿ ಕಬ್ಬಿಣದ ಸರಳು ಹಾಗೂ ಲಾಕರ್ ಕತ್ತರಿಸಿದ್ದಾರೆ. ನಂತರ, ಲಾಕರ್‌ನಲ್ಲಿಟ್ಟಿದ್ದ ₹ 2.50 ಕೋಟಿ ಮೌಲ್ಯದ 5 ಕೆ.ಜಿ ತೂಕದ ಚಿನ್ನಾಭರಣಗಳನ್ನು ಕದ್ದುಕೊಂಡು ಹೋಗಿರುವುದು ಗೊತ್ತಾಗಿದೆ' ಎಂದೂ ತಿಳಿಸಿವೆ.

'ಬಹುಮಹಡಿ ಕಟ್ಟಡದ ನೆಲಮಹಡಿಯಲ್ಲಿ ಮಳಿಗೆ ಇದೆ. ಅದರ ಮೇಲೆ ಮೂರು ಮಹಡಿಗಳಿವೆ. ಮೂರನೇ ಮಹಡಿಯ ಮನೆಗೆ ಇತ್ತೀಚೆಗೆ ಅಪರಿಚಿತರು ಬಂದಿದ್ದರು. ಸದ್ಯ ಅವರು ಮನೆ ಖಾಲಿ ಮಾಡಿಕೊಂಡು ಹೋಗಿದ್ದಾರೆ. ಅವರು ಮಾಲೀಕರಿಗೆ ನೀಡಿದ್ದ ದಾಖಲೆಗಳೂ ನಕಲಿಯಾಗಿವೆ. ಅವರೇ ಕೃತ್ಯ ಎಸಗಿರುವ ಅನುಮಾನವಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಕದ್ದ ಚಿನ್ನಾಭರಣ ಮಾರಿ ಕಾರು ಖರೀದಿ

ಬೆಂಗಳೂರು: ಒಂಟಿಯಾಗಿ ಸುತ್ತಾಡುವ ಮಹಿಳೆಯರನ್ನು ಹಿಂಬಾಲಿಸಿ ಚಿನ್ನದ ಸರಗಳವು ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ರಾಜರಾಜೇಶ್ವರಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಚಂದನ್ ಹಾಗೂ ರವಿ ಬಂಧಿತರು. ಇವರಿಂದ ₹ 4 ಲಕ್ಷ ಮೌಲ್ಯದ ಚಿನ್ನಾಭರಣ, ದ್ವಿಚಕ್ರ ವಾಹನ ಹಾಗೂ ಮಾರುತಿ ಸ್ವಿಫ್ಟ್ ಕಾರು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಅಪರಾಧ ಹಿನ್ನೆಲೆಯುಳ್ಳ ಆರೋಪಿಗಳು, ನಗರದಲ್ಲಿ ಬೆಳಿಗ್ಗೆ ಹಾಗೂ ಸಂಜೆ ದ್ವಿಚಕ್ರ ವಾಹನದಲ್ಲಿ ಸುತ್ತಾಡುತ್ತಿದ್ದರು. ವಾಯುವಿಹಾರ ಹಾಗೂ ಇತರೆ ಕೆಲಸಕ್ಕಾಗಿ ರಸ್ತೆಯಲ್ಲಿ ಒಂಟಿಯಾಗಿ ನಡೆದುಕೊಂಡು ಹೋಗುವ ಮಹಿಳೆಯರನ್ನು ಹಿಂಬಾಲಿಸುತ್ತಿದ್ದರು. ಅವರ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗುತ್ತಿದ್ದರು' ಎಂದೂ ತಿಳಿಸಿದರು.

'ತಾವರಕೆರೆ ಠಾಣೆ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನ ಕದ್ದಿದ್ದ ಆರೋಪಿಗಳು, ಅದರಲ್ಲೇ ರಾಜರಾಜೇಶ್ವರಿನಗರಕ್ಕೆ ಮಾರ್ಚ್ 22ರಂದು ಬಂದಿದ್ದರು. ದೇವಸ್ಥಾನದಿಂದ ಮನೆಗೆ ಹೊರಟಿದ್ದ ಮಹಿಳೆಯ ಚಿನ್ನದ ಸರ ಕಿತ್ತೊಯ್ದಿದ್ದರು. ಈ ಬಗ್ಗೆ ಪ್ರಕರಣ ದಾಖಲಾಗಿತ್ತು. ಘಟನಾ ಸ್ಥಳದಲ್ಲಿ ದೊರಕಿದ್ದ ಕೆಲ ಸುಳಿವು ಆಧರಿಸಿ ಆರೋಪಿಗಳನ್ನು ಬಂಧಿಸಲಾಯಿತು' ಎಂದೂ ಹೇಳಿದರು.

'ನಗರದ ಹಲವು ಠಾಣೆಗಳ ವ್ಯಾಪ್ತಿಯಲ್ಲಿ ಆರೋಪಿಗಳು ಕೃತ್ಯ ಎಸಗಿರುವುದು ಗೊತ್ತಾಗಿದೆ. ಕದ್ದ ಚಿನ್ನಾಭರಣ ಮಾರಾಟದಿಂದ ಬಂದ ಹಣದಲ್ಲಿ ಆರೋಪಿಗಳು ಮಾರುತಿ ಸ್ವಿಫ್ಟ್ ಕಾರು ಖರೀದಿ ಮಾಡಿದ್ದರು' ಎಂದೂ ಪೊಲೀಸರು ತಿಳಿಸಿದರು.

ಎಸ್‌ಬಿಐ 'ಯೊನೊ' ಹೆಸರಿನಲ್ಲಿ ₹ 5.84 ಲಕ್ಷ ವಂಚನೆ

ಅಪರಾಧ ಸುದ್ದಿ

ಬೆಂಗಳೂರು: ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ (ಎಸ್‌ಬಿಐ) 'ಯೊನೊ' ಆ್ಯಪ್ ನವೀಕರಣ ಹೆಸರಿನಲ್ಲಿ ಗ್ರಾಹಕರೊಬ್ಬರ ಖಾತೆಯಿಂದ ₹ 5.84 ಲಕ್ಷ ವರ್ಗಾಯಿಸಿಕೊಂಡು ವಂಚಿಸಲಾಗಿದ್ದು, ಈ ಬಗ್ಗೆ ದಕ್ಷಿಣ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಜೆ.ಪಿ. ನಗರ 2ನೇ ಹಂತದ ನಿವಾಸಿಯಾದ 26 ವರ್ಷದ ಯುವಕ ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಎಸ್‌ಬಿಐ ಶಾಖೆಯಲ್ಲಿ ಖಾತೆ ಹೊಂದಿರುವ ದೂರುದಾರ, ಯೊನೊ ಆ್ಯಪ್ ಬಳಸುತ್ತಿದ್ದಾರೆ. ಎಸ್‌ಬಿಐ ಪ್ರತಿನಿಧಿ ಸೋಗಿನಲ್ಲಿ ಏಪ್ರಿಲ್ 17ರಂದು ದೂರುದಾರರಿಗೆ ಕರೆ ಮಾಡಿದ್ದ ಸೈಬರ್ ವಂಚಕ, 'ಯೊನೊ ಆ್ಯಪ್ ಸದ್ಯದಲ್ಲೇ ನಿಷ್ಕ್ರಿಯ ಆಗಲಿದೆ. ಕೂಡಲೇ ನವೀಕರಣ ಮಾಡಿಸಬೇಕು. ನಾನು ಕಳುಹಿಸುವ ಲಿಂಕ್ ತೆರೆದು ಮಾಹಿತಿ ಭರ್ತಿ ಮಾಡಿ' ಎಂದಿದ್ದ.'

'ವಂಚಕನ ಮಾತು ನಂಬಿದ್ದ ದೂರುದಾರ, ವೈಯಕ್ತಿಕ ಹಾಗೂ ಖಾತೆ ಮಾಹಿತಿ ಭರ್ತಿ ಮಾಡಿದ್ದರು. ಅದಾದ ನಂತರ, ದೂರುದಾರರ ಖಾತೆಯಿಂದ ಹಂತ ಹಂತವಾಗಿ ₹ 5.84 ಲಕ್ಷ ಕಡಿತವಾಗಿದೆ. ಈ ಬಗ್ಗೆ ಬ್ಯಾಂಕ್‌ನಲ್ಲಿ ವಿಚಾರಿಸಿದಾಗಲೂ ಯಾವುದೇ ಪ್ರತಿಕ್ರಿಯೆ ಸಿಕ್ಕಿಲ್ಲ. ಹೀಗಾಗಿ, ಗ್ರಾಹಕ ಠಾಣೆಗೆ ದೂರು ನೀಡಿದ್ದಾರೆ.

ಬಾಲಕಿ ಅಪಹರಿಸಿ ಅತ್ಯಾಚಾರ ಅಪರಾಧಿಗೆ ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಲಕಿಯನ್ನು ಅಪಹರಿಸಿ ಮದುವೆಯಾಗಿ ಅತ್ಯಾಚಾರ ಎಸಗಿದ್ದ ಪ್ರಕರಣದ ಅಪರಾಧಿ ವಿ. ಹರೀಶ್‌ಗೆ ಜೀವಾವಧಿ ಶಿಕ್ಷೆ ವಿಧಿಸಿ ನಗರದ ನ್ಯಾಯಾಲಯ ಆದೇಶ ಹೊರಡಿಸಿದೆ.

ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕಾಯ್ದೆಯಡಿ ದಾಖಲಾಗಿದ್ದ ಪ್ರಕರಣದ ವಿಚಾರಣೆಯನ್ನು ನ್ಯಾಯಾಧೀಶರಾದ ಎನ್. ರೂಪಾ ನಡೆಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ಪಿ. ಕೃಷ್ಣವೇಣಿ ವಾದಿಸಿದ್ದರು.

'ಚಿಕ್ಕ ಕಮ್ಮನಹಳ್ಳಿ ನಿವಾಸಿ ಹರೀಶ್, ಮನೆ ಸಮೀಪದಲ್ಲಿ ವಾಸವಿದ್ದ ಬಾಲಕಿಯನ್ನು ಪರಿಚಯ ಮಾಡಿ ಕೊಂಡಿದ್ದ. ಪ್ರೀತಿಸುವುದಾಗಿ ಹೇಳಿ ಸಲುಗೆ ಬೆಳೆಸಿದ್ದ. ಬಾಲಕಿಯನ್ನು ಅಪಹರಿಸಿದ್ದ ಆರೋಪಿ, ಮಂಗಮ್ಮನಪಾಳ್ಯದ ಬಾಡಿಗೆ ಮನೆಯಲ್ಲಿ ಅಕ್ರಮ ಬಂಧನದಲ್ಲಿರಿಸಿಕೊಂಡಿದ್ದ. ಮೆಜೆಸ್ಟಿಕ್ ಬಳಿಯ ದೇವಸ್ಥಾನ ವೊಂದಕ್ಕೆ ಕರೆ ದೊಯ್ದು, ಅರಿಶಿಣ ಕೊಂಬಿನ ತಾಳಿ ಕಟ್ಟಿ ಬಾಲ್ಯ ವಿವಾಹ ಮಾಡಿಕೊಂಡಿದ್ದ' ಎಂದು ಕೃಷ್ಣವೇಣಿ ತಿಳಿಸಿದರು.

'ತಿರುಪತಿ, ಚೆನ್ನೈ, ಮಡಿಕೇರಿ, ಮೈಸೂರು ಸೇರಿದಂತೆ ಹಲವೆಡೆ ಬಾಲಕಿಯನ್ನು ಕರೆದೊಯ್ದಿದ್ದ ಆರೋಪಿ, ನಿರಂತರವಾಗಿ ಅತ್ಯಾಚಾರ ಎಸಗಿದ್ದ. ಈ ಬಗ್ಗೆ ಬಾಲಕಿ ಪೋಷಕರು ದೂರು ನೀಡಿದ್ದರು. ಅದರನ್ವಯ ಹರೀಶ್‌ನನ್ನು ಬಂಧಿಸಿದ್ದ ಪೊಲೀಸರು, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು' ಎಂದೂ ಹೇಳಿದರು.

4 ಲಕ್ಷ ಪರಿಹಾರ: ಪ್ರಕರಣದ ಸಂತ್ರಸ್ತ ಬಾಲಕಿಗೆ ₹ 4 ಲಕ್ಷ ಪರಿಹಾರ ನೀಡುವಂತೆ ನ್ಯಾಯಾಲಯ ಆದೇಶದಲ್ಲಿ ತಿಳಿಸಿದೆ.

ಹುಕ್ಕಾ ಬಾರ್ ಮೇಲೆ ಸಿಸಿಬಿ ದಾಳಿ

ಬೆಂಗಳೂರು: ಕುಮಾರಸ್ವಾಮಿ ಲೇಔಟ್‌ನ 50 ಅಡಿ ರಸ್ತೆಯಲ್ಲಿರುವ 'ಜೆನಿ ದಿ ಶೀಷಾ ಲಾಂಜ್' ಹುಕ್ಕಾ ಬಾರ್ ಮೇಲೆ ಸಿಸಿಬಿ ಪೊಲೀಸರು ದಾಳಿ ಮಾಡಿದ್ದು, ₹ 52,580 ಜಪ್ತಿ ಮಾಡಿದ್ದಾರೆ.

'ಹದಿನೆಂಟು ವರ್ಷದೊಳಗಿನ ಮಕ್ಕಳಿಗೆ ಹುಕ್ಕಾ ನೀಡುವುದನ್ನು ನಿಷೇಧಿಸಲಾಗಿದೆ. ಈ ನಿಯಮ ಉಲ್ಲಂಘಿಸಿ ಬಾರ್‌ನಲ್ಲಿ ಬಾಲಕರಿಗೆ ಹುಕ್ಕಾ ನೀಡಲಾಗುತ್ತಿತ್ತು. ಮಾಹಿತಿ ಬರುತ್ತಿದ್ದಂತೆ ಬಾರ್ ಮೇಲೆ ದಾಳಿ ಮಾಡಲಾಯಿತು' ಎಂದು ಸಿಸಿಬಿ ಪೊಲೀಸರು ಹೇಳಿದರು.

'ದಾಳಿ ವೇಳೆಯೇ ಬಾಲಕನೊಬ್ಬ ಹುಕ್ಕಾ ಸೇದುತ್ತಿದ್ದದ್ದು ಕಂಡುಬಂತು. ನಂತರ, ಬಾರ್‌ನಲ್ಲಿ ಪರಿಶೀಲನೆ ನಡೆಸಲಾಯಿತು. ವಿವಿಧ ಬಗೆಯ ಹುಕ್ಕಾ ಜಪ್ತಿ ಮಾಡಲಾಯಿತು.'

'ಬಾರ್ ಮಾಲೀಕ ಹಾಗೂ ಹುಕ್ಕಾ ತಯಾರಕನನ್ನು ಬಂಧಿಸಲಾಯಿತು. ಇವರ ವಿರುದ್ಧ ಕುಮಾರಸ್ವಾಮಿ ಲೇಔಟ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ' ಎಂದೂ ತಿಳಿಸಿದರು.

ಶೇ 30 ಕಮಿಷನ್: ಸರ್ಕಾರದ ಪರ ನಿಂತ ಹಿಂದುಳಿದ, ದಲಿತ ಮಠಾಧೀಶರ ಒಕ್ಕೂಟ

‘ಕಮಿಷನ್‌ಗೆ ಯಾರೂ ಬೇಡಿಕೆ ಇಟ್ಟಿಲ್ಲ’

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ‘ಶೋಷಿತ ಸಮುದಾಯದ ಮಠಗಳ ಶೈಕ್ಷಣಿಕ ಅಭಿವೃದ್ಧಿಗೆ ಸರ್ಕಾರದ ಆರ್ಥಿಕ ನೆರವು ಸಹಿಸದ ಮನಸ್ಸುಗಳು ಕಮಿಷನ್ ಆರೋಪ ಮಾಡುತ್ತಿವೆ. ಈವರೆಗೂ ಕಮಿಷನ್ ವಿಚಾರ ಉದ್ಭವಿಸಿಲ್ಲ. ಅಂಥ ಸ್ಥಿತಿ ಎದುರಾದರೆ ಅನುದಾನದ ಅವಶ್ಯಕತೆಯಿಲ್ಲ. ಭಿಕ್ಷೆ ಬೇಡಿ ಮಠ ಕಟ್ಟುತ್ತೇವೆ’ ಎಂಬ ಸಂದೇಶವನ್ನು ಹಿಂದುಳಿದ, ದಲಿತ ಮಠಾಧೀಶರ ಒಕ್ಕೂಟ ರವಾನಿಸಿತು.

ನಗರದ ಭೋವಿ ಗುರುಪೀಠದಲ್ಲಿ ಬುಧವಾರ ಸುದ್ದಿಗೋಷ್ಠಿ ನಡೆಸಿದ ಒಕ್ಕೂಟದ ಸ್ವಾಮೀಜಿಗಳು, ‘ಬಿ.ಎಸ್. ಯಡಿಯೂರಪ್ಪ ಅವರ ಅವಧಿಯಿಂದ ಈವರೆಗಿನ ಎಲ್ಲ ಮುಖ್ಯಮಂತ್ರಿಗಳು ಮಠಗಳಿಗೆ ಅನುದಾನ ನೀಡಿದ್ದಾರೆ. ಯಾವ ಅವಧಿಯಲ್ಲೂ ಅಧಿಕಾರಿಗಳು, ರಾಜಕಾರಣಿಗಳು ಕಮಿಷನ್ ಬೇಡಿಕೆ ಇಟ್ಟಿಲ್ಲ. ಅದರ ಕಲ್ಪನೆಯೂ ಯಾರಿಗೂ ಇಲ್ಲ’ ಎಂದರು.

ಒಕ್ಕೂಟದ ಅಧ್ಯಕ್ಷರಾದ ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ, ‘ಕಮಿಷನ್ ವಿಚಾರದ ಹೇಳಿಕೆಗೆ ತಾತ್ವಿಕ ಅಂತ್ಯ ಕಾಣಿಸಲು ಒಕ್ಕೂಟ ನಿರ್ಧರಿಸಿದೆ. ದಿಂಗಾಲೇಶ್ವರ ಶ್ರೀಗಳ ಆರೋಪ ಸತ್ಯಕ್ಕೆ ದೂರವಾದದ್ದು’ ಎಂದರು.

ಪ್ರಧಾನ ಕಾರ್ಯದರ್ಶಿ ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ‘‘ಕಮಿಷನ್’ ಆರೋಪ ಸತ್ಯಕ್ಕೆ ದೂರವಾಗಿದೆ. ಉತ್ತಮ ಕಾರ್ಯ ಮಾಡುತ್ತಿರುವ ಮುಖ್ಯಮಂತ್ರಿ ಬೊಮ್ಮಾಯಿ ಅವರಿಗೆ ಒಕ್ಕೂಟ ಬೆಂಬಲಿಸಲಿದೆ’ ಎಂದರು.

ಗೌರವಾಧ್ಯಕ್ಷ ಭಗೀರಥ ಗುರುಪೀಠದ ಪುರುಷೋತ್ತಮಾನಂದಪುರಿ ಸ್ವಾಮೀಜಿ, ‘ಈವರೆಗೂ ಯಾರೂ ಕಮಿಷನ್‌ಗೆ ಬೇಡಿಲ್ಲ. ನಾವು ಯಾರಿಗೂ ಕೊಟ್ಟಿಲ್ಲ. ಅಂತಹ ಪ್ರಮೇಯವೂ ಬರುವುದಿಲ್ಲ’ ಎಂದು ಹೇಳಿದರು.

ತೀರ್ಥಹಳ್ಳಿ ನಾರಾಯಣ ಮಠದ ಆರ್ಯರೇಣುಕಾನಂದ ಸ್ವಾಮೀಜಿ, ಮಡಿವಾಳ ಗುರುಪೀಠದ ಬಸವ ಮಾಚಿದೇವ ಸ್ವಾಮೀಜಿ, ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಗಾಣಿಗರ ಗುರುಪೀಠದ ಬಸವ ಕುಮಾರ ಸ್ವಾಮೀಜಿ, ಹಾವೇರಿ ನಿಜಶರಣ ಅಂಬಿಗರ ಚೌಡಯ್ಯ ಗುರುಪೀಠದ ಶಾಂತಭೀಷ್ಮ ಚೌಡಯ್ಯ ಸ್ವಾಮೀಜಿ, ತೆಲಂಗ ಕುಂಬಾರ ಗುಂಡಯ್ಯ ಗುರುಪೀಠದ ಬಸವ ಕುಂಬಾರ ಗುಂಡಯ್ಯ ಸ್ವಾಮೀಜಿ, ತಂಗಡಗಿ–ಮುದ್ದೇಬಿಹಾಳ ಹಡಪದ ಗುರುಪೀಠದ ಅನ್ನದಾನಿ ಭಾರತಿ ಅಪ್ಪಣ್ಣ ಸ್ವಾಮೀಜಿ, ಗುಬ್ಬಿ ಹಳವ ಗುರುಪೀಠದ ಬಸವ ಬ್ರಂಗೇಶ್ವರ ಸ್ವಾಮೀಜಿ, ಮೇದಾರ ಗುರುಪೀಠದ ಇಮ್ಮಡಿ ಬಸವ ಕೇತೇಶ್ವರ ಸ್ವಾಮೀಜಿ ಇದ್ದರು.

‘ದಿಂಗಾಲೇಶ್ವರ ಶ್ರೀ ಹೇಳಿಕೆ ಶೋಭೆ ತರಲ್ಲ’

ಕಲಬುರಗಿ: ‘ದಿಂಗಾಲೇಶ್ವರ ಸ್ವಾಮೀಜಿ ಆರೋಪದಲ್ಲಿ ಸತ್ಯವಿಲ್ಲ. ಇಂತಹ ಆರೋಪ ಅವರಿಗೆ ಶೋಭೆ ತರುವುದಿಲ್ಲ’ ಎಂದು ಇಲ್ಲಿಯ ಸುಲಫಲಮಠದ ಡಾ.ಸಾರಂಗಧರ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಅವರು, ‘ಯಡಿಯೂರಪ್ಪ ರಾಜೀನಾಮೆ ನೀಡುವ ಮುನ್ನ ಲಿಂಗಾಯತ ಸಮುದಾಯದ ಉತ್ತರ ಕರ್ನಾಟಕ ಭಾಗದವರನ್ನು ಸಿ.ಎಂ ಮಾಡಲು ಒತ್ತಾಯಿಸಿದ್ದವು. ಅದರಂತೆಯೇ ಆಗಿದ್ದಾರೆ. ‘ಕಲ್ಯಾಣ ಕರ್ನಾಟಕ ಮಠಾಧೀಶರ ಸಂಘ’ದ ಬೆಂಬಲ ಅವರಿಗಿದೆ’ ಎಂದರು.

ಅನುದಾನ ನೀಡದಿರುವ ಜಿಲ್ಲಾಧಿಕಾರಿ ಖಾತೆಯಿಂದ ಮಠಗಳಿಗೆ ಬರುವುದಿಲ್ಲ. ಅಧಿಕಾರಿಗಳು ಕಾಮಗಾರಿ ಪರಿಶೀಲಿಸಿ ಹಣ ಬಿಡುಗಡೆ ಮಾಡುತ್ತಾರೆ

ಶಾಂತವೀರ ಸ್ವಾಮೀಜಿ, ಕುಂಚಿಟಿಗ ಮಠ, ಹೊಸದುರ್ಗ, ಒಕ್ಕೂಟದ ಕಾರ್ಯದರ್ಶಿ

ಅದು ಕಮಿಷನ್ ಅಲ್ಲ: ಕಾರಜೋಳ

ದಾವಣಗೆರೆ: ‘ಕಾಮಗಾರಿ ಬಳಿಕ ಬಿಡುಗಡೆಗೊಂಡ ಅನುದಾನದಲ್ಲಿ ತೆರಿಗೆ ಮತ್ತು ಸೇವಾ ಶುಲ್ಕಗಳ ಶೇ 27ರಷ್ಟು ಕಡಿತಗೊಳ್ಳುತ್ತವೆ. ಅವು ಕಮಿಷನ್ ಅಲ್ಲ. ಈ ಬಗ್ಗೆ ಸ್ವಾಮೀಜಿ ಸರಿಯಾಗಿ ತಿಳಿದುಕೊಳ್ಳಬೇಕು’ ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಹೇಳಿದರು.

ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಅವರು, ‘ಹೀಗೆ ಮುರಿದುಕೊಂಡ ತೆರಿಗೆ, ಶುಲ್ಕವನ್ನೇ ಲಂಚ ಅಂದರೆ ಹೇಗೆ? ಕಾಂಗ್ರೆಸ್‌ನವರ ನೀಚ ರಾಜಕಾರಣಕ್ಕೆ ಸ್ವಾಮೀಜಿಗಳನ್ನು ಬಳಸಿಕೊಳ್ಳುತ್ತಿದ್ದಾರೆ’ ಎಂದರು.

‘ಮಠಗಳಿಗೆ ₹ 5, ₹10 ಹೀಗೆ ಭಕ್ತರು ನೀಡಿದ ಕಾಣಿಕೆ ಪಡೆದುಕೊಂಡು ಇರುತ್ತಿದ್ದರು. ಯಡಿಯೂರಪ್ಪ ಅವಧಿಯಲ್ಲಿ ಕೆಲವು ಮಠಗಳಿಗೆ ಅನುದಾನ ನೀಡಿದರು. ನಾವು ಬಡ ಮಠಗಳಿಗೆ ಎಂದು ಇನ್ನಷ್ಟು ಮುಂದೆ ಬಂದರು’ ಎಂದು ಹೇಳಿದರು.

‘ಸ್ವಾಮೀಜಿ ಆರೋಪ ಸತ್ಯ’

ಹುಬ್ಬಳ್ಳಿ: ‘ಮಠಗಳಿಗೆ ಅನುದಾನ ಬಿಡುಗಡೆ ಅಧಿಕಾರಿಗಳು ಹಾಗೂ ರಾಜಕಾರಣಿಗಳು ಕಮಿಷನ್ ಪಡೆಯುತ್ತಾರೆ ಎಂದು ಕೇಳಿದ್ದೇನೆ. ಈ ಕುರಿತು ದಿಂಗಾಲೇಶ್ವರ ಸ್ವಾಮೀಜಿ ಮಾಡಿರುವ ಆರೋಪ ಸತ್ಯ’ ಎಂದು ಬೆಂಗಳೂರಿನ ಚನ್ನಬಸವೇಶ್ವರ ಜ್ಞಾನಪೀಠದ ಚನ್ನಬಸವಾನಂದ ಸ್ವಾಮೀಜಿ ಹೇಳಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಅವರು, ‘ಕಮಿಷನ್ ವಿಷಯ ಸ್ವತಃ ಅನುಭವಕ್ಕೆ ಬಂದಿಲ್ಲ. ಅದರ ಹತ್ತಿರದಿಂದ ಕಂಡಿದ್ದೇನೆ. ಯಾವುದೇ ಪಕ್ಷವಿರಲಿ. ಪಡೆಯುವ ಪ್ರಮಾಣ ಹೆಚ್ಚು, ಕಡಿಮೆ ಇರುತ್ತದೆ ಅಷ್ಟೇ’ ಎಂದರು.

ರಾಹುಲ್ ಗಾಂಧಿ ಪ್ರಲ್ಹಾದ ಜೋಶಿ ಟ್ವೀಟ್ ಸಮರ

ನವದೆಹಲಿ: ದೇಶದಲ್ಲಿನ ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳಲ್ಲಿ ತಲೆದೋರಿರುವ ಕಲ್ಲಿದ್ದಲು ದಾಸ್ತಾನು ಕೊರತೆ ಸಂಬಂಧ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮತ್ತು ಕೇಂದ್ರ ಕಲ್ಲಿದ್ದಲು ಸಚಿವ ಪ್ರಲ್ಹಾದ ಜೋಶಿ ಅವರ ನಡುವೆ ಬುಧವಾರ ಟ್ವೀಟ್ ಸಮರ ನಡೆಯಿತು.

ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳಲ್ಲಿ ಕಲ್ಲಿದ್ದಲು ದಾಸ್ತಾನು ಖಾಲಿಯಾಗುತ್ತಿರುವ ಬಗ್ಗೆ ಎನ್‌ಡಿಎ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ರಾಹುಲ್ ಗಾಂಧಿ, ‘8 ವರ್ಷಗಳ ದೊಡ್ಡ ಮಾತುಗಳ ಫಲಿತಾಂಶದ ಪರಿಣಾಮ ದೇಶ ಕೇವಲ 8 ದಿನಗಳ ಕಲ್ಲಿದ್ದಲು ದಾಸ್ತಾನು ಇದೆ. ಮೋದಿ ಜೀ, [illegible]’ ಎಂದು ಟೀಕಿಸಿ ಟ್ವೀಟ್ ಮಾಡಿದ್ದಾರೆ.

‘ವಿದ್ಯುತ್ ಕಡಿತವು ಸಣ್ಣ ಕೈಗಾರಿಕೆಗಳನ್ನು ಪುಡಿಗಟ್ಟುತ್ತದೆ. ಹೆಚ್ಚಿನ ಉದ್ಯೋಗ ನಷ್ಟಕ್ಕೂ ಕಾರಣವಾಗುತ್ತದೆ. ದ್ವೇಷದ ಬುಲ್ಡೋಜರ್‌ಗಳನ್ನು ಆಫ್ ಮಾಡಿ ಮತ್ತು ವಿದ್ಯುತ್ ಸ್ಥಾವರಗಳನ್ನು ಆನ್ ಮಾಡಿ!’ ಎಂದು ರಾಹುಲ್ ಟ್ವೀಟ್‌ನಲ್ಲಿ ಕುಟುಕಿದ್ದಾರೆ.

‘ಕಾಂಗ್ರೆಸ್ ಪಕ್ಷದ ಎಲ್ಲ ವಿಷಯಗಳಲ್ಲೂ ಹೊಣೆಗೇಡಿತನ ಪ್ರದರ್ಶಿಸುವ ರಾಹುಲ್ ಗಾಂಧಿಯವರು ಸ್ವಯಂ ಘೋಷಿತ ಪರಿಣತರು. ಕಲ್ಲಿದ್ದಲು ಹಗರಣದಲ್ಲಿ ಭಾಗಿಯಾಗಿರುವವರು ಕಲ್ಲಿದ್ದಲು ಉತ್ಪಾದನೆಯ ಬಗ್ಗೆ ಮಾತನಾಡುತ್ತಿದ್ದಾರೆ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಟ್ವೀಟ್‌ನಲ್ಲಿ ಎದಿರೇಟು ನೀಡಿದ್ದಾರೆ.

‘ಮಿಸ್ಟರ್ ನಕಲಿ ಗಾಂಧಿ, ಭಯ ಹುಟ್ಟಿಸುವುದನ್ನು ನಿಲ್ಲಿಸಿ, ಬದಲಾಗಿ, ತನ್ನದೇ ಪಕ್ಷದ ಭವಿಷ್ಯದ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಿ’ ಎಂದು ರಾಹುಲ್ ವಿರುದ್ಧ ಸಚಿವ ಜೋಶಿ ವಾಗ್ದಾಳಿ ನಡೆಸಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ www.prajavani.net LIVE
Prajavani.net Prajavani Prajavani
ಫೇಸ್‌ಬುಕ್, ಯುಟ್ಯೂಬ್, ಟ್ವಿಟರ್‌ನಲ್ಲಿ ಪರಿಕಲ್ಪನೆ ನೇರಪ್ರಸಾರ
ಇಂದು
ಮಿಸಳ್ ಹಾಪ್ಪಾ
ಹಸಿರು ಹಚ್ಚಿ.. ಚುಚ್ಚಿ
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

‘ವಿದ್ಯುತ್: ಕಾಂಗ್ರೆಸ್ ಅಪಪ್ರಚಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕಲ್ಲಿದ್ದಲು ಕೊರತೆ ಇದೆ, ವಿದ್ಯುತ್ ಕ್ಷಾಮದಿಂದ ಎಂದು ಕಾಂಗ್ರೆಸ್ ಅಪಪ್ರಚಾರ ಮಾಡುತ್ತಿದ್ದು, ಜನರ ದಾರಿ ತಪ್ಪಿಸಲು ಪ್ರಯತ್ನ ನಡೆಸಿದೆ ಎಂದು ಇಂಧನ ಸಚಿವ ವಿ.ಸುನಿಲ್ ಕುಮಾರ್ ದೂರಿದ್ದಾರೆ.

ಕಲ್ಲಿದ್ದಲು ದಾಸ್ತಾನಿಗೆ ಸರ್ಕಾರ ಆದ್ಯತೆ ನೀಡಿದ್ದು, ರಾಜ್ಯದ ಸರಾಸರಿ ಬೇಡಿಕೆಯ ಅರ್ಧದಷ್ಟು ಭಾಗ ವಿದ್ಯುತ್ ಈಗ ಸೌರ ಮತ್ತು ಪವನಶಕ್ತಿಯ ಮೂಲದಿಂದ ಪಡೆಯಲಾಗುತ್ತಿದೆ. ಆದ್ದರಿಂದ ವಿದ್ಯುತ್ ಕ್ಷಾಮ ಎಂಬ ಕಾಂಗ್ರೆಸ್ ಕಟ್ಟುಕತೆಯಲ್ಲಿ ಅರ್ಥವೇ ಇಲ್ಲ ಎಂದು ಹೇಳಿದ್ದಾರೆ.

ಕೇಂದ್ರದಿಂದ ಪ್ರತಿ ದಿನ ಸರಾಸರಿ 13,500 ರಿಂದ 14,500 ರೇಕ್ ಕಲ್ಲಿದ್ದಲು ಪೂರೈಕೆ ಆಗುತ್ತಿದೆ. ಎಲ್ಲ ವಿದ್ಯುತ್ ಸ್ಥಾವರಗಳ ಬೇಡಿಕೆಗೆ ಅಗತ್ಯವಾದ ಕಲ್ಲಿದ್ದಲು ಇದರಿಂದ ಲಭಿಸುತ್ತಿದೆ. ಬುಧವಾರ ರಾಜ್ಯದಲ್ಲಿ 10,400 ಮೆ.ವ್ಯಾ ವಿದ್ಯುತ್ ಬೇಡಿಕೆ ಇತ್ತು. ಮಾರ್ಚ್‌ನಲ್ಲಿ 14,500 ಮೆ.ವ್ಯಾ ಬೇಡಿಕೆ ಇತ್ತು. ಆಗಲೂ ಕಲ್ಲಿದಲು ಕೊರತೆ ಆಗಿರಲಿಲ್ಲ ಎಂದರು.

ರಾಜ್ಯದಲ್ಲಿ ಕಳೆದ ಕೆಲವು ದಿನಗಳಿಂದ ಉತ್ತಮವಾಗಿ ಮಳೆಯಾಗುತ್ತಿದೆ. ಇದರಿಂದ ಕೃಷಿ ಪಂಪ್‌ಸೆಟ್‌ಗಳಿಗೆ ಅಗತ್ಯವಾದ ವಿದ್ಯುತ್ ಬೇಡಿಕೆ ಪ್ರಮಾಣ ಕುಗ್ಗಿದೆ. ಈ ಕಾರಣಕ್ಕೆ ಬಳ್ಳಾರಿ ಮತ್ತು ರಾಯಚೂರು ಶಾಖೋತ್ಪನ್ನ ಘಟಕದಲ್ಲಿ ಉತ್ಪಾದನೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿತ್ತು. ಕಲ್ಲಿದ್ದಲಿನ ಕೊರತೆಯ ಕಾರಣಕ್ಕಾಗಿ ಅಲ್ಲ ಎಂದೂ ಸುನಿಲ್ ಹೇಳಿದ್ದಾರೆ.

ಯುಪಿಎ ಸರ್ಕಾರದ ಅವಧಿಯಲ್ಲಿ (2004 ರಿಂದ 2014)725 ಲಕ್ಷ ಮೆಟ್ರಿಕ್ ಟನ್ ಕಲ್ಲಿದ್ದಲು ಪೂರೈಕೆ ಆಗಿದ್ದರೆ, 2015 ರಿಂದ 2022 ರ ಅವಧಿಯಲ್ಲಿ 792 ಲಕ್ಷ ಮೆಟ್ರಿಕ್ ಟನ್ ಪೂರೈಕೆ ಆಗಿತ್ತು. ಅಧಿಕಾರದ ಅಭಾವ ವೈರಾಗ್ಯದಿಂದ ರೋಸಿ ಹೋಗಿರುವ ಕಾಂಗ್ರೆಸ್ ರಾಜ್ಯದಲ್ಲಿ ವಿದ್ಯುತ್ ಅಭಾವ ಇದೆ ಎಂಬ ಪ್ರಹಸನ ಸೃಷ್ಟಿಸಿದರೆ ಜನರು ಶಾಕ್ ಟ್ರೀಟ್‌ಮೆಂಟ್ ನೀಡುತ್ತಾರೆ. ಸಿದ್ದರಾಮಯ್ಯ ಕಾಲದ ‘ಕತ್ತಲೆ ಭಾಗ್ಯ’ದ ದುರ್ದಿನಗಳನ್ನು ಸಾರ್ವಜನಿಕರು ಮರೆತಿಲ್ಲ ಎಂದು ಹೇಳಿದ್ದಾರೆ.

ಕಲಬುರಗಿ: 43 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲು

ಕಲಬುರಗಿ: ಕೆಲ ದಿನಗಳಿಂದ 40 ಡಿಗ್ರಿ ಸೆಲ್ಸಿಯಸ್ ಇದ್ದ ಜಿಲ್ಲೆಯ ಉಷ್ಣಾಂಶ ಬುಧವಾರ 43 ಡಿಗ್ರಿಗೆ ಏರಿದೆ. ಕನಿಷ್ಠ ಉಷ್ಣಾಂಶವೇ 26 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ಬಿಸಿಲಿನ ಹೊಡೆತಕ್ಕೆ ಜನರು ಮನೆಯಿಂದ ಹೊರಬರಲು ಹಿಂದೇಟು ಹಾಕಿದರು.

ಅನಿವಾರ್ಯ ಕಾರಣಗಳಿಗೆ ಮನೆಯಿಂದ ಹೊರ ಬಂದಿದ್ದ ಮಹಿಳೆಯರು ತಲೆ ಮೇಲೆ ದುಪ್ಪಟ್ಟಾ ಧರಿಸಿ ಓಡಾಡಿದರು. ವೃದ್ಧರು ಮತ್ತು ಮಕ್ಕಳು ಗಿಡ, ಮರಗಳ ನೆರಳಲ್ಲಿ ನಿಂತಿರುವುದು ಕಂಡು ಬಂತು.

ಏಪ್ರಿಲ್ 21, 22ರಂದು ಗರಿಷ್ಠ ಉಷ್ಣಾಂಶ 41 ಡಿಗ್ರಿ ಸೆಲ್ಸಿಯಸ್ ಇರಲಿದ್ದು, 23ರಿಂದ ಮತ್ತೆ ಏರಿಕೆ ಕಾಣಲಿದೆ. 24ರಂದು 43 ಡಿಗ್ರಿ ಹಾಗೂ 25, 26ರಂದು 42 ಡಿಗ್ರಿ ಗರಿಷ್ಠ ಉಷ್ಣಾಂಶ ಇರಲಿದೆ ಎಂದು ಐಎಂಡಿ ಜಾಲತಾಣ ತಿಳಿಸಿದೆ.

‘ಈ ವಾರ ಜಿಲ್ಲೆಯಲ್ಲಿ ಸರಾಸರಿ 40 ಡಿಗ್ರಿ ಉಷ್ಣಾಂಶ ದಾಖಲಾಗುವ ಸಾಧ್ಯತೆಯಿದೆ. ಎರಡು ದಿನ ತೀವ್ರ ತಾಪಮಾನ ದಾಖಲಾದರೆ, ಸಂಜೆ ವೇಳೆ ಬಿರುಗಾಳಿ ಬೀಸಲಿದೆ. ಮಳೆಯೂ ಆಗಲಿದೆ. ಕಳೆದ ವರ್ಷ ಮೇ ಕೊನೆಯ ವಾರದಲ್ಲಿ ಬಿಸಿಲು ಹೆಚ್ಚಾಗಿತ್ತು. ಈ ಬಾರಿ ಮೇ ಮೊದಲ ವಾರದಲ್ಲೇ ಉಷ್ಣಾಂಶ ತೀವ್ರವಾಗಿ ಏರಿಕೆ ಕಾಣಲಿದೆ’ ಎಂದು ರಾಯಚೂರು ಕೃಷಿ ವಿಶ್ವವಿದ್ಯಾಲಯದ ಹವಾಮಾನ ವಿಭಾಗದ ತಾಂತ್ರಿಕ ಅಧಿಕಾರಿ ಡಾ.ಶಾಂತಪ್ಪ ಧುತ್ತರಗಾಂವಿ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

‘ದಿನದಿಂದ ದಿನಕ್ಕೆ ಬಿಸಿಲು ಹೆಚ್ಚಾಗುವ ಕಾರಣ ಜಾನುವಾರುಗಳ ಬಗ್ಗೆ ಎಚ್ಚರ ವಹಿಸಬೇಕು’ ಎಂದು ರಾಯಚೂರು ಕೃಷಿ ವಿಶ್ವವಿದ್ಯಾಲಯದ ಹವಾಮಾನ ವಿಭಾಗದ ತಾಂತ್ರಿಕ ಅಧಿಕಾರಿ ಡಾ.ಶಾಂತಪ್ಪ ಧುತ್ತರಗಾಂವಿ ತಿಳಿಸಿದರು.

ಅಪಘಾತ; ಸ್ಥಳದಲ್ಲೇ 6 ಸ್ನೇಹಿತರ ಸಾವು

ಹುಣಸೂರು: ತಾಲ್ಲೂಕಿನ ಕಲ್‌ಬೆಟ್ಟದ ಸಮೀಪ ಬುಧವಾರ ಬೊಲೆರೊ ವಾಹನ ಮರಕ್ಕೆ ಡಿಕ್ಕಿ ಹೊಡೆದು, ಭಾನುವಾರ ಮದುವೆ ನಿಗದಿಯಾಗಿದ್ದ ಕೊಡಗು ಜಿಲ್ಲೆಯ ವಿರಾಜಪೇಟೆ ತಾಲ್ಲೂಕಿನ ಪಾಲಿಬೆಟ್ಟ ಗ್ರಾಮದ ವಿನೀತ್ (35) ಸೇರಿ 6 ಮಂದಿ ಸ್ಥಳದಲ್ಲೇ ಮೃತಪಟ್ಟರು. ಎಲ್ಲರೂ ಸ್ನೇಹಿತರು. ವಿನೀತ್ ಅವರ ವಿವಾಹ ಅಮ್ಮತ್ತಿಯ ಹುಡುಗಿಯೊಂದಿಗೆ ನಿಗದಿಯಾಗಿತ್ತು.

23ರಿಂದ ಹರಜಾತ್ರೆ: ಉದ್ಯೋಗ ಮೇಳ

ವಚನಾನಂದ ಸ್ವಾಮೀಜಿ

ಹರಿಹರ: ಇಲ್ಲಿನ ವೀರಶೈವ ಲಿಂಗಾಯತ ಪಂಚಮಸಾಲಿ ಮಠದ ಆವರಣದಲ್ಲಿ ಏ. 23 ಹಾಗೂ 24ರಂದು ಹರಜಾತ್ರೆ ನಡೆಯಲಿದೆ. ಏ.24ರಂದು ಉದ್ಯೋಗ ಮೇಳ ನಡೆಯಲಿದ್ದು, 100ಕ್ಕೂ ಹೆಚ್ಚು ಕಂಪನಿಗಳು ಪಾಲ್ಗೊಳ್ಳಲಿವೆ

‘ಉದ್ಯೋಗ ಮೇಳದಲ್ಲಿ ಬರಿ ಪಂಚಮಸಾಲಿ ಸಮುದಾಯದವರಷ್ಟೇ ಅಲ್ಲ; ಎಲ್ಲಾ ಜಾತಿ, ಜನಾಂಗ, ಧರ್ಮದವರಿಗೂ ಅವಕಾಶವಿದೆ. ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥನಾರಾಯಣ, ಮುರುಗೇಶ್ ನಿರಾಣಿ ಪಾಲ್ಗೊಳ್ಳುವರು’ ಎಂದು ಪೀಠಾಧಿಪತಿ ವಚನಾನಂದ ಸ್ವಾಮೀಜಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಹರಜಾತ್ರೆಯಲ್ಲಿ ಸ್ವಾತಂತ್ರ್ಯದ ಅಮೃತ ಮಹೋತ್ಸವದ ನಿಮಿತ್ತ ಪಂಚಮಸಾಲಿ ಸಮಾಜದ 7 ಪ್ರಮುಖ ವೀರ ಸೇನಾನಿಗಳ ಕೊಡುಗೆ ಕುರಿತು ಪುಸ್ತಕ, ಭಾವಚಿತ್ರ ಬಿಡುಗಡೆ ಕಾರ್ಯಕ್ರಮ ನಡೆಯಲಿದೆ. ರಾಷ್ಟ್ರೀಯ ಶಿಕ್ಷಣ ನೀತಿ, ವ್ಯವಸಾಯ, ಕೌಶಲ, ‘ಉದ್ಯಮಿಯಾಗು ಉದ್ಯೋಗ ನೀಡು’ ಕುರಿತು ಗೋಷ್ಠಿಗಳು ನಡೆಯಲಿವೆ’ ಎಂದು ಮಾಹಿತಿ ನೀಡಿದರು.

ಸಿ.ಎಂ ಬಳಿ ಚರ್ಚೆ: ಮಾದಾರ ಚನ್ನಯ್ಯ ಸ್ವಾಮೀಜಿ

ಚಿತ್ರದುರ್ಗ: ‘ರಾಜ್ಯದಲ್ಲಿ ಬೇಡ ಜಂಗಮ ಸಮುದಾಯದ ಹೆಸರಲ್ಲಿ ‘ಎಸ್‌ಸಿ’ ಜಾತಿ ಪ್ರಮಾಣ ಪತ್ರ ಪಡೆಯುತ್ತಿರುವ ವಿಚಾರದ ಬಗ್ಗೆ ಹೋರಾಟ ಆರಂಭವಾಗಿವೆ. ಕೆಲ ದಿನಗಳ ಹಿಂದೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಳಿ ಚರ್ಚೆ ನಡೆಸಲಾಗಿದೆ’ ಎಂದು ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ತಿಳಿಸಿದರು.

‘ಸಮುದಾಯದ ಜತೆ ಕಾನೂನಾತ್ಮಕ ಮಾತುಕತೆ ನಡೆಸಿ ಶೀಘ್ರದಲ್ಲೇ ಸಿಎಂ ಬಳಿ ನಿಯೋಗದಲ್ಲಿ ತೆರಳುತ್ತೇವೆ’ ಎಂದು ತಿಳಿಸಿದರು.

ಎಸಿಬಿ ಬಲೆಗೆ ಕೆಐಎಡಿಬಿ ಕಚೇರಿ ವ್ಯವಸ್ಥಾಪಕ

ಕಲಬುರಗಿ: ಇಲ್ಲಿನ ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿ (ಕೆಐಎಡಿಬಿ)ಯ ವಿಶೇಷ ಭೂಸ್ವಾಧೀನ ಅಧಿಕಾರಿ ಕಚೇರಿಯ ವ್ಯವಸ್ಥಾಪಕ ಶರಣಬಸಪ್ಪ ಜಾಲಹಳ್ಳಿ ಬುಧವಾರ ತಮ್ಮ ಕಚೇರಿಯಲ್ಲಿ ರೈತರೊಬ್ಬರಿಂದ ₹ 14,850 ಲಂಚ ಪಡೆಯುವಾಗ ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಅಧಿಕಾರಿಗಳು ಬಂಧಿಸಿದ್ದಾರೆ.

Karnataka Veterinary, Animal & Fisheries Sciences University
P.B. No. 6, Nandinagar, Bidar-585 226, Karnataka
Ph: 08482-245241 email:regkvafsu@gmail.com
No. R/PG-Admn/Ntfn/2021-22 Date: 21-4-2022
PG ADMISSION NOTIFICATION 2021-22
The eligible candidates for PG admission to the Master's and Doctoral degree programs at the constituent colleges of the University for the **Academic year 2021-22** are invited to submit their filled in application online as on the last date prescribed. The entrance test for Master's and Doctoral program shall be conducted at Veterinary College Bidar and Veterinary College Bengaluru campuses on **10-5-2022.** The dead line for uploading the online application is **5-5-2022**.
For detail of various Master's and Doctoral programs offered at **KVAFSU, Bidar** Application fees, Mode of payment and calendar of Events with respect to Admission please visit **www.kvafsu.edu.in.**
BY ORDER,
Sd/-
(B. V. Shivaprakash)
REGISTRAR

ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗ
ಕೊಠಡಿ ಸಂಖ್ಯೆ:121, 1ನೇ ಮಹಡಿ, ಬಹುಮಹಡಿ ಕಟ್ಟಡ, ಡಾ॥ ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು–560001. ದೂ:080–22032470
ಸಂ.ಪಿಡಿಎಸ್41 ಎಸ್‌ಪಿಬಿ 2021(ಭಾ–1) ದಿನಾಂಕ: 20.04.2022
ಪತ್ರಿಕಾ ಪ್ರಕಟಣೆ
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ/ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗ, ಕರ್ನಾಟಕ ಸರ್ಕಾರ, ಈ ಕಛೇರಿಯಲ್ಲಿ ಕಾರ್ಯನಿರ್ವಹಿಸುವ ಉದ್ದೇಶಕ್ಕಾಗಿ **ಸಂಶೋಧನಾ ಸಮಾಲೋಚಕರ ಒಂದು ಹುದ್ದೆಯನ್ನು** ಸಂಚಿತ ವೇತನದಡಿಯಲ್ಲಿ ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿದ್ದು, ಈ ಕೆಳಕಂಡ ಅರ್ಹತೆಗಳನ್ನು ಒಳಗೊಂಡ ಆಸಕ್ತ ಅಭ್ಯರ್ಥಿ ಅರ್ಜಿ ಸಲ್ಲಿಸಬಹುದಾಗಿದೆ.

ಕ್ರ.ಸಂ.	ಹುದ್ದೆಯ ವಿವರ	ಅರ್ಹತೆ	ಗೌರವಧನ
1.	ಸಂಶೋಧನಾ ಸಮಾಲೋಚಕರು (Research Consultant)	ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ/ಯೋಜನಾ ಇಲಾಖೆಯಲ್ಲಿ ನಿರ್ದೇಶಕರು/ಹೆಚ್ಚುವರಿ ನಿರ್ದೇಶಕರು/ಜಂಟಿ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ ನಿವೃತ್ತ ಅಧಿಕಾರಿಗಳು. **ಅಥವಾ** ಜಿಲ್ಲಾ ಪಂಚಾಯತಿಯಲ್ಲಿ ಸಿ.ಪಿ.ಒ ಆಗಿ ಅಥವಾ ಸಚಿವಾಲಯದ ಯೋಜನಾ ಇಲಾಖೆಯಲ್ಲಿ ಜಂಟಿ ನಿರ್ದೇಶಕರಾಗಿ ಕನಿಷ್ಠ ಮೂರು ವರ್ಷಗಳ ಅನುಭವವುಳ್ಳ ನಿವೃತ್ತ ಅಧಿಕಾರಿಗಳು	ಕೆ.ಸಿ.ಎಸ್.ಆರ್. ನಿಯಮದನ್ವಯ

ಸದರಿ ಹುದ್ದೆಗೆ ಆಯ್ಕೆಯಾದವರ ಜವಾಬ್ದಾರಿ ಹಾಗೂ ಕರ್ತವ್ಯಗಳು ಈ ಕೆಳಕಂಡಂತಿವೆ: 1. ಸರ್ಕಾರದ ಕಾರ್ಯಕ್ರಮಗಳು, ನೀತಿ ಹಾಗೂ ದತ್ತಾಂಶಗಳ ವಿಶ್ಲೇಷಣೆ ಮಾಡಿ ಟಿಪ್ಪಣಿ ನೀಡುವುದು. **2.** ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಸಭೆ ಕಾರ್ಯಸೂಚಿ ಹಾಗೂ ವಿಷಯಗಳ ಕುರಿತಾಗಿ ಪ್ರಾತ್ಯಕ್ಷಿಕೆ (PPT) ತಯಾರಿಸುವುದು ಹಾಗೂ ಉಳಿದ ತಾಂತ್ರಿಕ ವ್ಯವಸ್ಥೆಗಳನ್ನು ನೋಡಿಕೊಳ್ಳುವುದು. **3.** ಸರ್ಕಾರದಿಂದ ಆಗಾಗ ಬಂದ ಕೋರಿಕೆಯ ಪ್ರಕಾರ ವಿವಿಧ ಕ್ಷೇತ್ರಗಳಾದ ಕೃಷಿ, ಉದ್ದಿಮೆ, ಸೇವೆಗಳು, ಶಿಕ್ಷಣ, ಆರೋಗ್ಯ ಮುಂತಾದ ಕ್ಷೇತ್ರಗಳಲ್ಲಿ ಪ್ರಸ್ತುತ ಸ್ಥಿತಿಗಳ ವಿಶ್ಲೇಷಣೆ, ಬೇರೆ ರಾಜ್ಯಗಳೊಂದಿಗೆ ಹೋಲಿಕೆ ಹಾಗೂ ನೀತಿ ನಿರೂಪಣೆಗಾಗಿ ಅಂಶಗಳನ್ನು ಸಿದ್ದಪಡಿಸುವುದು. **4.** ನೀತಿ ಆಯೋಗದ DMEO (Development Monitoring Evaluation Office) ಜೊತೆಗೆ ನಿರಂತರ ಸಂಪರ್ಕದಲ್ಲಿದ್ದು ರಾಜ್ಯದ ಯೋಜನಾ ಮೌಲ್ಯಮಾಪನ, ಅನು ಕುರಿತ ಮಾಹಿತಿ ನೀಡುವುದು ಹಾಗೂ ಚರ್ಚೆಯಲ್ಲಿ ಪಾಲ್ಗೊಳ್ಳುವುದು. ಮೇಲ್ಕಾಣಿಸಿದ ಅರ್ಹತಾ ಮಾನದಂಡಗಳನ್ನು ಹೊಂದಿದ ಅರ್ಹ ಅಭ್ಯರ್ಥಿಗಳು ದಿನಾಂಕ: **ಮೇ 6, 2022ರೊಳಗಾಗಿ** ರೆಸ್ಯೂಮ್‌ನೊಂದಿಗೆ ಮನವಿ ಪತ್ರವನ್ನು ಇ–ಮೇಲ್ ವಿಳಾಸ **planningboard115@gmail.com** ಗೆ ಅಥವಾ ಉಪ ಕಾರ್ಯದರ್ಶಿಗಳು(ಲೆಕ್ಕಪತ್ರ), ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇವರಿಗೆ ಸಲ್ಲಿಸಲು ಕೋರಿದೆ.
ಸಹಿ/– ಸರ್ಕಾರದ ಉಪ ಕಾರ್ಯದರ್ಶಿ(ಲೆಕ್ಕಪತ್ರ),
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.
DIPR/CP/KAVITA/216/2022-23
ಕೋವಿಡ್-19. ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಗೃಹ ಮಂಡಳಿ
ಕರ್ನಾಟಕ ಗೃಹ ಮಂಡಲಿ ಸಮುದಾಯದ ನಿರ್ಮಾಣದತ್ತ
ಗೃಹ ಆಯುಕ್ತರವರ ಕಛೇರಿ, 3ನೇ ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009 ದೂರವಾಣಿ: 080–22273511–16
ಸಂಖ್ಯೆ: ಕಗೃಮಂ/ಉಪ್ರವ್ಯ(ಗ್ರಾಸೇ)/ಹಂಚಿಕೆ–10/2022–23 ದಿನಾಂಕ: 20–04–2022
ಮೈಸೂರು ಜಿಲ್ಲೆ, ದೊಡ್ಡ ಹುಣಸೂರು 2ನೇ ಹಂತ ಬಡಾವಣೆಯಲ್ಲಿ ಲಭ್ಯವಿರುವ ನಿವೇಶನಗಳ ಹಂಚಿಕೆಗೆ ಇ–ಲಾಟರಿ ವೇಳಾಪಟ್ಟಿ ಪ್ರಕಟಣೆ
ಕರ್ನಾಟಕ ಗೃಹ ಮಂಡಳಿಯು ಮೆ॥ ಉಪಕಾರ್ ಡೆವಲಪರ್ಸ್, ಬೆಂಗಳೂರು ಇವರ ಜಂಟಿ ಸಹಭಾಗಿತ್ವ ಯೋಜನೆಯಡಿ ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕು , ಕಸಬಾ ಹೋಬಳಿ, ದೊಡ್ಡ ಹುಣಸೂರು 2ನೇ ಹಂತ ಬಡಾವಣೆಯಲ್ಲಿ ಸಾರ್ವಜನಿಕ ಸೌಲಭ್ಯಗಳೊಂದಿಗೆ ನಿವೇಶನಗಳನ್ನು ಅಭಿವೃದ್ಧಿಪಡಿಸಿದ್ದು, ಸದರಿ ನಿವೇಶನಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿ ದಿನಾಂಕ: 21–03–2022 ರಂದು ಪತ್ರಿಕಾ ಪ್ರಕಟಣೆ ಹೊರಡಿಸಲಾಗಿತ್ತು. ಸದರಿ ಪ್ರಕಟಣೆಗೆ ಅನುಗುಣವಾಗಿ ಆರಂಭಿಕ ಠೇವಣಿಯೊಂದಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿರುವ ಅರ್ಜಿದಾರರಿಗೆ ಕರ್ನಾಟಕ ಗೃಹ ಮಂಡಳಿ ಹಂಚಿಕೆ ರೆಗ್ಯುಲೇಶನ್ಸ್–1983ರ ನಿಯಮ 9ರ ಅನ್ವಯ ಪ್ರವರ್ಗವಾರು ಮೀಸಲಾತಿಯಡಿಯಲ್ಲಿ ಇ–ಲಾಟರಿ ಮುಖಾಂತರ ಹಂಚಿಕೆ ಮಾಡಲು ಈ ಕೆಳಕಂಡ ವೇಳಾಪಟ್ಟಿಯನ್ನು ನಿಗಧಿಪಡಿಸಲಾಗಿದೆ.

ಬಡಾವಣೆ	ಅರ್ಜಿದಾರರ ತಾತ್ಕಾಲಿಕ ಪಟ್ಟಿ ಪ್ರಕಟಣೆ ದಿನಾಂಕ ಮತ್ತು ಸ್ಥಳ	ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸ್ಥಳ	ಅರ್ಹ ಅರ್ಜಿದಾರರ ಅಂತಿಮ ಪಟ್ಟಿ ಪ್ರಕಟಣೆ ದಿನಾಂಕ ಮತ್ತು ಸ್ಥಳ	ಇ–ಲಾಟರಿ ನಡೆಯುವ ದಿನಾಂಕ ಮತ್ತು ಸ್ಥಳ ಹಾಗೂ ಸಮಯ
ಮೈಸೂರು ಜಿಲ್ಲೆ ದೊಡ್ಡ ಹುಣಸೂರು 2ನೇ ಹಂತ	21–04–2022	25–04–2022	26–04–2022	ಕರ್ನಾಟಕ ಗೃಹ ಮಂಡಳಿ, ಕೇಂದ್ರ ಕಛೇರಿ, ಬೆಂಗಳೂರು. ದಿನಾಂಕ: 28–04–2022. ಸಮಯ:– ಬೆಳಗ್ಗೆ– 11.00 ಗಂಟೆಗೆ
	ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಮೈಸೂರು ಮತ್ತು ಕರ್ನಾಟಕ ಗೃಹ ಮಂಡಳಿ, ಕೇಂದ್ರ ಕಛೇರಿ, ಕಾವೇರಿ ಭವನ, ಬೆಂಗಳೂರು			

ನಿಯಮ ಮತ್ತು ಷರತ್ತುಗಳ ವಿವರಗಳಿಗಾಗಿ ವೆಬ್‌ಸೈಟ್ https://www.khb.karnataka.gov.in ಸಂಪರ್ಕಿಸುವುದು. ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಗೃಮಂ, ಮೈಸೂರು ಜಿಲ್ಲಾ ಯೋಜನಾ ಕಛೇರಿ ಇವರನ್ನು ಮೊಬೈಲ್ ನಂ.8310045887 ಅಥವಾ ಉಪ ಪ್ರಧಾನ ವ್ಯವಸ್ಥಾಪಕರು (ಗ್ರಾ.ಸೇ)/ಕಂದಾಯ ಅಧಿಕಾರಿಗಳು, ಹಂಚಿಕೆ ಶಾಖೆ, ಕಛೇರಿ ದೂರವಾಣಿ ಸಂಖ್ಯೆ: 080–22273511 ext. 335/307 ಗೆ ಸಂಪರ್ಕಿಸುವುದು.
ಸಹಿ/–
ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು
DIPR/CP/226/Zenkar/2022-23
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕಮಾಂಡೆಂಟ್‌ರವರ ಕಚೇರಿ,
ಕೆ.ಎ.ಆರ್.ಪಿ. ಮೌಂಟೆಡ್ ಕಂಪನಿ, ಮೈಸೂರು
ಕೆ.ಎ.ಆರ್.ಪಿ. ಮೌಂಟೆಡ್ ಕಂಪನಿ, ಮೈಸೂರು ಘಟಕದಲ್ಲಿನ ಅಶ್ವಗಳಿಗೆ 2022–23ನೇ ಸಾಲಿನ ತ್ರೈಮಾಸಿಕ ಅವಧಿಗೆ (01.05.2022 ರಿಂದ 30.06.2022 ರವರೆಗೆ) ಅವಶ್ಯವಿರುವ 11 ಬಗೆಯ **ಅಶ್ವಗಳ ಆಹಾರ ಮತ್ತಿತರೆ ಪದಾರ್ಥಗಳಾದ ಹುರುಳಿಕಾಳು, ಗೋಧಿತೌಡು, ಡಿ.ಸಿ.ಓಟ್ಸ್, ಭತ್ತದ ಹುಲ್ಲು, ಅಗಸೇ ಬೀಜ, ಲೂಸನ್, ಕಾಡುಸೌದೆ, ಕುದುರೆಲಾಳ, ಕುದುರೆಲಾಳದ ಮೊಳೆ, ಹರಳುಪ್ಪು, ಇದ್ದಿಲು** ಇವುಗಳನ್ನು ಪರಿಮಾಣಕ್ಕನುಗುಣವಾಗಿ ದರಪಟ್ಟಿಗಳ ಮುಖಾಂತರ ಖರೀದಿಸುವ ಸಂಬಂಧ ಇಚ್ಛೆಯುಳ್ಳ ಸಂಸ್ಥೆ ಮತ್ತು ವರ್ತಕರುಗಳಿಂದ ದರಪಟ್ಟಿಗಳನ್ನು ಆಹ್ವಾನಿಸಲಾಗಿರುತ್ತದೆ. ಮೇಲ್ಕಂಡ ಅಶ್ವಗಳ ಆಹಾರ ಮತ್ತಿತರೆ ಪದಾರ್ಥಗಳನ್ನು ಸರಬರಾಜು ಮಾಡಲು ಇಚ್ಛೆಯುಳ್ಳವರು **ಕಮಾಂಡೆಂಟ್‌ರವರ ಕಚೇರಿ, ಕೆ.ಎ.ಆರ್.ಪಿ. ಮೌಂಟೆಡ್ ಕಂಪನಿ, ಲಲಿತಮಹಲ್ ರಸ್ತೆ, ಮೈಸೂರು** ವಿಳಾಸಕ್ಕೆ ಖುದ್ದಾಗಿ ಭೇಟಿ ನೀಡಿ ಅಥವಾ **ಕಚೇರಿ ದೂರವಾಣಿ ಸಂಖ್ಯೆ:0821–2418154**ರ ಮುಖಾಂತರ ಸಂಪರ್ಕಿಸಿ ವಿವರಗಳನ್ನು ಪಡೆದುಕೊಂಡು, ದರಪಟ್ಟಿಗಳನ್ನು **ದಿ: 25.04.2022 ಸಂಜೆ 05:30** ಗಂಟೆಯೊಳಗೆ ಸಲ್ಲಿಸುವುದು. ಅಂಗೀಕರಿಸಲ್ಪಟ್ಟ ದರಪಟ್ಟಿಗಳಲ್ಲಿ ನಮೂದಿಸಿರುವ ಆಹಾರ ಮತ್ತಿತರೆ ಪದಾರ್ಥಗಳ ಮಾದರಿಯನ್ನು ಪರಿಶೀಲಿಸಿ, ಸರಬರಾಜು ಆದೇಶವನ್ನು ನೀಡಲಾಗುವುದು.
ಸಹಿ/– ಕಮಾಂಡೆಂಟ್, ಕೆ.ಎ.ಆರ್.ಪಿ. ಮೌಂಟೆಡ್ ಕಂಪನಿ, ಮೈಸೂರು.
DIPR/DDMYS/MCA/30/2022-23

ರಾಷ್ಟ್ರೀಯ ಆರೋಗ್ಯ ಅಭಿಯಾನ
ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ
ಆರೋಗ್ಯ ಸೌಧ, 1ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು–560023
ದೂರವಾಣಿ: 080–23113584, ಇ–ಮೇಲ್: pdrch-hfws@karnataka.gov.in
ಸಂಖ್ಯೆ: NHM/DD/CH/06/2020-21 ದಿನಾಂಕ: 16.04.2022
ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಪ್ರಕಟಣೆ
For Printing and Supply of HBYC Documents
ರಾಷ್ಟ್ರೀಯ ಆರೋಗ್ಯ ಅಭಿಯಾನ ಕಛೇರಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅಧಿಸೂಚನೆಯಂತೆ Printing and Supply of HBYC Documents ಗಳನ್ನು ಮಾಡುವ ಸಲುವಾಗಿ ಮುದ್ರಣಕಾರರನ್ನು ಅಗತ್ಯ ದಾಖಲೆಯೊಂದಿಗೆ ಭಾಗವಹಿಸಲು ಟೆಂಡರ್ ಅನ್ನು ಆಹ್ವಾನಿಸಲಾಗಿದೆ.
ಅರ್ಹತೆಯುಳ್ಳ ಟೆಂಡರ್‌ದಾರರು ಮೇಲ್ಕಂಡ ವಿಷಯದ ಬಗ್ಗೆ ವಿವರವಾದ ಮಾಹಿತಿಯನ್ನು ವೆಬ್‌ಸೈಟ್ www.eproc.karnataka.gov.in ನಲ್ಲಿ ಪಡೆಯಬಹುದಾಗಿದೆ. ಟೆಂಡರ್ ಡಾಕ್ಯುಮೆಂಟ್ ಅನ್ನು ದಿನಾಂಕ: **21.04.2022** ರಂದು ಬೆಳಿಗ್ಗೆ **11.30** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಟೆಂಡರ್ ಡಾಕ್ಯುಮೆಂಟ್ ಅನ್ನು ದಿನಾಂಕ: **04.05.2022 ಸಂಜೆ 5.30 ಗಂಟೆಯೊಳಗೆ** ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಈ ಕೆಳಸಹಿದಾರರಿಂದ ಕಚೇರಿ ಸಮಯ ಬೆಳಿಗ್ಗೆ **11.00 ಗಂಟೆಯಿಂದ ಸಂಜೆ 5.30 ಗಂಟೆಯೊಳಗೆ** ಪಡೆಯಬಹುದಾಗಿರುತ್ತದೆ.
ಸಹಿ/–
DIPR/CP/220/Yakshi/2022-23 ಯೋಜನಾ ನಿರ್ದೇಶಕರು (ಆರ್‌ಸಿಹೆಚ್)
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ
ಕಾರ್ಯಪಾಲಕ ಅಭಿಯಂತರವರ ಕಛೇರಿ ಬೆಳಗಾವಿ ವಿಭಾಗ, ಬೆಳಗಾವಿ.
ಪ್ಲಾಟ ನಂ. ಸಿ–1, ಹೌಸಿಂಗ್ ಬೋರ್ಡ ಕಾಲನಿ, ಟೀಚರ್ಸ್ ಕಾಲನಿ ಎದುರಿಗೆ, (ಓಂಕಾರ ನಗರ) ಹಿಂಡಲಗಾ, ಬೆಳಗಾವಿ. ದೂರವಾಣಿ
ಫ್ಯಾಕ್ಸ್ ನಂ: (0831)2442294 ಇ–ಮೇಲ್:ksdb.bgmdiv@gmail.com
ಸಂ.ಕಕೊಅಮ/ಕಾಪಾಅ/ಬೆವಿ/ತಾಂ.ಶಾ/ಕ್ರಿ.ಯೋ/ಟೆಂ.ಪ್ರ/2022–23/62 ದಿನಾಂಕ:18–04–2022
ಇ–ಪ್ರೋಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ– ದ್ವಿಲಕೋಟೆ KW– 4
ಆಯುಕ್ತರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಬೆಳಗಾವಿ ವಿಭಾಗ ಕಛೇರಿ ವ್ಯಾಪ್ತಿಯಲ್ಲಿ ಬರುವ 2020–21ನೇ ಸಾಲಿನ ಕ್ರಿಯಾ ಯೋಜನೆಯಡಿ ಮಂಜೂರಾದ ಅಥಣಿ ಪಟ್ಟಣದ ಚರ್ಮಾಲಯ ರಸ್ತೆ ಕೊಳಗೇರಿ ಪ್ರದೇಶದಲ್ಲಿ ಆರ್.ಸಿ.ಸಿ. ಚರಂಡಿ ಮತ್ತು ಸಿ.ಸಿ. ರಸ್ತೆ ಕಾಮಗಾರಿ ಸಲುವಾಗಿ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಕರೆದಿರುವ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯಿಂದ ಸಿವ್ಹಿಲ್ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ನ್ನು ಕರೆಯಲಾಗಿದೆ. ಹೆಚ್ಚಿನ ವಿವರ/ವಿಚಾರಣೆ ಇ–ಪ್ರೋಕ್ಯೂರ್‌ಮೆಂಟ್ www.eproc.karnataka.gov.in ನಿಂದ ದಿನಾಂಕ:19.04.2022 ರಿಂದ ಡೌನಲೋಡ್ ಮಾಡಿಕೊಂಡು ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ:11.05.2022 ಸಾಯಂಕಾಲ 5.30 ಗಂಟೆಯವರೆಗೆ ಸ್ವೀಕೃತ ಟೆಂಡರ್ ತೆರೆಯುವ ದಿನಾಂಕ: 13.05.2022 ರಂದು ಸಾಯಂಕಾಲ 4.00 ಗಂಟೆಯ ನಂತರ ತೆರೆಯಲಾಗುವುದು. ಆರ್ಥಿಕ ಬಿಡ್ (ಲಕೋಟೆ–2) ತೆರೆಯುವ ದಿನಾಂಕವನ್ನು ಅರ್ಹ ಗುತ್ತಿಗೆದಾರರಿಗೆ ತಿಳಿಸಲಾಗುವುದು.
ಕಾಮಗಾರಿಯ ಟೆಂಡರ ಮೊತ್ತ ರೂ.101.16 ಲಕ್ಷಗಳು ಹಾಗೂ ಇ.ಎಮ್.ಡಿ. ಮೊತ್ತ ರೂ. 2,00,000 ಗುತ್ತಿಗೆದಾರರ ಅರ್ಹತೆ/ ಟೆಂಡರಿನ ನಿಯಮ/ ಟೆಂಡರ್ ಪ್ರೋಸೆಸಿಂಗ್ ಶುಲ್ಕ ತುಂಬುವ ವಿಧಾನ ಇತ್ಯಾದಿ ವಿವರಗಳಿಗೆ https://eproc.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ದಿನದಂದು ಕಛೇರಿಯ ವೇಳೆಯಲ್ಲಿ ಪಡೆಯಬಹುದು.
ಸಹಿ/–ಕಾರ್ಯಪಾಲಕ ಅಭಿಯಂತರರು
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಬೆಳಗಾವಿ ವಿಭಾಗ, ಬೆಳಗಾವಿ.
DIPR/BGM/RO-NO-95/MCA/2022-23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ರಸ್ತೆ ಮೂಲಸೌಕರ್ಯ– ಯಲಹಂಕ ವಿಭಾಗ, ಎನ್.ಆರ್ ಚೌಕ, ಬೆಂಗಳೂರು– 560 002.
ಸಂ: ಕಾಪಾಅ/ಯವಿ/ಟೆಂಡ್/01/2022–23 ದಿನಾಂಕ:19.04.2022
ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) (ದ್ವಿಲಕೋಟೆ ಪದ್ಧತಿ)
ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಸೌಕರ್ಯ– ಯಲಹಂಕ ವಿಭಾಗ, ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ	ಕಾಮಗಾರಿಯ ವಿವರ	ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ. ಲಕ್ಷಗಳಲ್ಲಿ)
1.	ಯಲಹಂಕ ರೈಲ್ವೇ ನಿಲ್ದಾಣದ ಹತ್ತಿರ ಯಲಹಂಕ ಓಲ್ಡಡ್ ಟೌನ್ ಮತ್ತು ಯಲಹಂಕ ನ್ಯೂ ಟೌನ್ ನ್ನು ಸಂಪರ್ಕಿಸಲು ಉದ್ದೇಶಿತ ಕೆಳಸೇತುವೆಗೆ ಪ್ರವೇಶ ರ್‍ಯಾಂಪ್‌ಗಳ ನಿರ್ಮಾಣ ಕಾಮಗಾರಿ ಮತ್ತು ಇತರೆ ಸಂಬಂಧಿತ ಕಾಮಗಾರಿಗಳು.	472.79	4.73

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಿಂದ ದಿನಾಂಕ: **21.04.2022ರಿಂದ** ಡೌನ್‌ಲೊಡ್ ಮಾಡಿಕೊಳ್ಳಬಹುದು. 2) ಪೂರ್ವಭಾವಿ ಸಭೆ ದಿನಾಂಕ : **30.04.2022ರ ಸಂಜೆ 4.00 ಗಂಟೆಗೆ.** 3) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **21.05.2022ರ ಸಂಜೆ 5.30 ಗಂಟೆಯವರೆಗೆ** 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **23.05.2022ರ ಸಂಜೆ 4.30 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: www.eproc.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದು ಅಥವಾ ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಸೌಕರ್ಯ– ಯಲಹಂಕ ವಿಭಾಗ.
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ರಾಮನಗರ ವಿಭಾಗ, ರಾಮನಗರ
ಸಂಖ್ಯೆ: 01/2022-23 ದಿನಾಂಕ: 19-04-2022
ಅಲ್ಪಾವಧಿ ಟೆಂಡರ್ ಪ್ರಕಟಣೆ
2022-23 ನೇ ಸಾಲಿನಲ್ಲಿ ರಾಮನಗರ ವಿಭಾಗ ವ್ಯಾಪ್ತಿಗೆ ಸಂಬಂದಿಸಿದಂತೆ ಅಲ್ಪಾವಧಿ ಟೆಂಡರ್ ಪ್ರಕಟಣೆ ಹೊರಡಿಸಲಾಗಿದ್ದು, ವಿವರಗಳು ಈ ಕೆಳಕಂಡತಿವೆ. (ಅಂದಾಜು ಮೊತ್ತ ರೂ. 50.00 ಲಕ್ಷ)
1. ಕರ್ನಾಟಕ ಸರಕಾರದ ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್ ನಿಂದ ಟೆಂಡರ್ ಡಾಕ್ಯುಮೆಂಟ್ ಅನ್ನು ದಿನಾಂಕ: 25-04-2022 ರಿಂದ ಡೌನ್ ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.
2. ಕರ್ನಾಟಕ ಸರಕಾರದ ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ದಿನಾಂಕ: 02-05-2022 ವೇಳೆ 16:00 ಗಂಟೆಯೊಳಗೆ ಸಲ್ಲಿಸುವುದು.
3. ಟೆಂಡರ್‌ಗಳನ್ನು ತೆರೆಯುವ ದಿನಾಂಕ: 04-05-2022 ವೇಳೆ 11.30 ಗಂಟೆ. (ಸಾಧ್ಯವಾದಲ್ಲಿ)
ಹೆಚ್ಚಿನ ವಿವರಗಳಿಗೆ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.
Note: Here after any changes with reference to this Notification will be Notified in E-Portal only.
ಕಾರ್ಯಪಾಲಕ ಅಭಿಯಂತರರು,
ಲೋ. ಇ. ರಾಮನಗರ ವಿಭಾಗ, ರಾಮನಗರ
ಡಿಐಪಿಆರ್/ರಾಮನಗರ/30/ಮಣಿಪಾಲ್/2022–23

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಮುಖ್ಯ ಅಭಿಯಂತರರ ಕಛೇರಿ (ಪಶ್ಚಿಮ),
6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560 009
ಸಂ: ಬೆಂ.ಜ.ಮ/ಪ್ರಮುಅ/ಮುಅ(ಪ)/ಅಮುಅ(ಪ)–1/ಉಮುಅ(ನಿ)–1/ತಾಂಸ(ನಿ)–1/244/2022–23 ದಿನಾಂಕ:19.04.2022
ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) (4ನೇ ಕರೆ)
ಬೆಂಗಳೂರು ಜಲಮಂಡಳಿಯು ಅರ್ಹ ಗುತ್ತಿಗೆದಾರರಿಂದ ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರದ ವಾಯುವ್ಯ–1 ಉಪವಿಭಾಗದ ಕೇತಮಾರನಹಳ್ಳಿ ಸೇವಾಠಾಣೆಯಡಿ ಬರುವ ವಾರ್ಡ್ ಸಂಖ್ಯೆ 76 (ಗಾಯತ್ರಿನಗರ) ಮತ್ತು ವಾರ್ಡ್ ಸಂಖ್ಯೆ 66 (ಸುಬ್ರಮಣ್ಯನಗರ)ದಲ್ಲಿ ಹೆಚ್‌ಎಸ್‌ಸಿಯೊಂದಿಗೆ 100ಮಿಮೀ ವ್ಯಾಸದ ಡಿಐ ನೀರು ಸರಬರಾಜು ಕೊಳವೆಮಾರ್ಗವನ್ನು ಒದಗಿಸುವುದು ಮತ್ತು ಅಳವಡಿಸುವ ಕಾಮಗಾರಿಗಾಗಿ ದ್ವಿಹಂತದ ಪದ್ಧತಿಯಲ್ಲಿ ಐಟಂ ದರದ ಟೆಂಡರನ್ನು ಆಹ್ವಾನಿಸಿದೆ.
ಟೆಂಡರಿಗಿಟ್ಟ ಮೊತ್ತ : ರೂ. 393.35 ಲಕ್ಷಗಳು/– ಇಎಂಡಿ : ರೂ. 5.901 ಲಕ್ಷಗಳು
ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 28.04.2022ರ ಸಂಜೆ 4.00 ಗಂಟೆಯವರೆಗೆ. ಬಿಡ್‌ಗಳನ್ನು ತೆರೆಯುವ ದಿನಾಂಕ: 30.04.2022ರ ಸಂಜೆ 4.00 ಗಂಟೆಯ ನಂತರ. ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತ ಮಾಹಿತಿಯನ್ನು https://eproc.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
ಸಹಿ/–
ವಾಸಾಸಂಇ/ವಾಪ್ರ/ಜಗದಾಳೆ ಅಡ್ವರ್ಟೈಸಿಂಗ್/224/2022–23 ಮುಖ್ಯ ಅಭಿಯಂತರರು (ಪಶ್ಚಿಮ)
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರವರ ಕಛೇರಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್.ಕರಿಯಪ್ಪ ರಸ್ತೆ, (ಬನಶಂಕರಿ ದೇವಸ್ಥಾನದ ಹತ್ತಿರ) ಬನಶಂಕರಿ, ಬೆಂಗಳೂರು – 560070.
ಸಂಖ್ಯೆ: ಕಾಅ/ಪಂರಾಇಂವಿ/ಬೆಂನ/ಎಇ–1/ಟೆಂಡರ್/02/2022–23 ದಿನಾಂಕ: 18.04.2022
ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ನೋಟೀಸ್
ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ MLA & BIAAPA Grants ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: 04.05.2022ರ ಸಂಜೆ 4.00 ಗಂಟೆಯವರೆಗೆ ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿಯ ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಿ ಅಥವಾ ವೆಬ್‌ಸೈಟ್ http://www.eproc.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.
ಸಹಿ/–
ಕಾರ್ಯಪಾಲಕ ಅಭಿಯಂತರರು,
DIPR/CP/210/Zenkar/2022-23 ಪ.ರಾ.ಇ.ವಿಭಾಗ, ಬೆಂ.ನ, ಬೆಂಗಳೂರು
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

70 ದಿನ ಪೂರೈಸಿದ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ಧರಣಿ: ಸರ್ಕಾರಕ್ಕೆ ಎಚ್ಚರಿಕೆ • ಹೋರಾಟಕ್ಕೆ ಮಠಾಧೀಶರ ಬೆಂಬಲ

‘ಅಸಡ್ಡೆ ಬೇಡ; ಸರ್ಕಾರಕ್ಕೆ ಇಚ್ಛಾಶಕ್ತಿ ಕೊರತೆ’

ಬೆಂಗಳೂರು: ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಶೇ 7.5ಕ್ಕೆ ಹೆಚ್ಚಿಸಬೇಕು ಎಂದು ಒತ್ತಾಯಿಸಿ ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ನಡೆಸುತ್ತಿರುವ ಧರಣಿ ಸತ್ಯಾಗ್ರಹ ಬುಧವಾರಕ್ಕೆ 70 ದಿನಗಳನ್ನು ಪೂರೈಸಿದೆ.

ತಮ್ಮ ಬೇಡಿಕೆ ಈಡೇರುವವರೆಗೂ ಧರಣಿ ನಿಲ್ಲಿಸುವ ಪ್ರಶ್ನೆಯೇ ಇಲ್ಲ ಎನ್ನುವುದು ಸ್ವಾಮೀಜಿ ಅವರ ಅಚಲ ನಿರ್ಧಾರ. ನಗರದ ಫ್ರೀಡಂ ಪಾರ್ಕ್‌ನಲ್ಲಿ ಕೈಗೊಂಡಿರುವ ಧರಣಿಯನ್ನು ಮತ್ತಷ್ಟು ತೀವ್ರಗೊಳಿಸುವ ಬಗ್ಗೆ ಮತ್ತು ಸರ್ಕಾರದ ನಿಲುವುಗಳ ಕುರಿತು ‘ಪ್ರಜಾವಾಣಿ ಜತೆ ಅವರು ಮಾತನಾಡಿದ್ದು ಇಲ್ಲಿದೆ.

ಪ್ರಜಾವಾಣಿ ಸಂದರ್ಶನ

ಪ್ರಸನ್ನಾನಂದ ಸ್ವಾಮೀಜಿ

• ಧರಣಿ ಇನ್ನೂ ಎಷ್ಟು ದಿನ?

ಸ್ವಾಮೀಜಿ: ‘ಮೀಸಲಾತಿ ನೀಡುವ ವಿಷಯದಲ್ಲಿ ಸರ್ಕಾರ ದೃಢ ತೀರ್ಮಾನ ಕೈಗೊಂಡು ಆದೇಶದ ಪ್ರತಿ ಹೊರಡಿಸುವವರೆಗೂ ಧರಣಿ ಸತ್ಯಾಗ್ರಹ ನಡೆಸಲಾಗುವುದು. ನಮ್ಮ ನಿಲುವಿನಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ.

• ಅಗತ್ಯಬಿದ್ದರೆ ಸಾಮೂಹಿಕ ರಾಜೀನಾಮೆ ನೀಡುವುದಾಗಿ ಸಮುದಾಯದ ಶಾಸಕರು, ಸಚಿವರು ಹಲವು ಬಾರಿ ಹೇಳಿಕೆ ನೀಡಿದ್ದಾರೆ. ನಿಜವಾಗಿಯೂ ಅವರಿಗೆ ಬದ್ಧತೆ ಇದೆಯೇ?

ಸ್ವಾಮೀಜಿ: ರಾಜೀನಾಮೆ ಎನ್ನುವುದು ಕೇವಲ ರಾಜಕೀಯ ಗಿಮಿಕ್. ರಾಜಕಾರಣಿಗಳು ಸಾಮಾಜಿಕ ಬದ್ಧತೆ ತೋರಿಸುತ್ತಿಲ್ಲ. ಸಭೆ, ಸಮಾರಂಭಗಳಲ್ಲಿ ಮಾತ್ರ ಭಾವೋದ್ವೇಗದಿಂದ ರಾಜೀನಾಮೆ ನೀಡುವ ಹೇಳಿಕೆ ನೀಡುತ್ತಾರೆ. ನಂತರ, ಮೌನವಹಿಸುತ್ತಾರೆ.

• ಸರ್ಕಾರ ವಿಳಂಬ ಧೋರಣೆ ಮುಂದುವರಿಸಿದರೆ ನಿಮ್ಮ ನಿಲುವು?

ಸ್ವಾಮೀಜಿ: ‘ಕೊಲುವೆನೆಂಬ ಭಾಷೆ ದೇವನದು, ಗೆಲುವೆನೆಂಬ ಭಾಷೆ ಭಕ್ತನದು’. ಇದೇ ಧೋರಣೆ ಅನುಸರಿಸುತ್ತೇವೆ. ಇದೇ ಸೂತ್ರದಲ್ಲಿ ಹೋರಾಟ ರೂಪಿಸುತ್ತೇವೆ. ಬೆಂಗಳೂರಿಗೆ ಅಷ್ಟದಿಗ್ಬಂಧನ ಹಾಕಲು ಸಿದ್ಧ. ಸರ್ಕಾರಕ್ಕೆ ಇಚ್ಛಾಶಕ್ತಿ ಕೊರತೆ ಇದೆ ಮತ್ತು ಪರಿಶಿಷ್ಟರ ಬಗ್ಗೆ ಇರುವ ಅಸಡ್ಡೆಯಿಂದಾಗಿ ನಿರ್ಧಾರ ಕೈಗೊಳ್ಳುತ್ತಿಲ್ಲ. ಯಾವ ಸಮುದಾಯವು ನಮಗೆ ಮೀಸಲಾತಿ ಕೊಡಬೇಡಿ ಎಂದು ಹೇಳಿಲ್ಲ. ಎಲ್ಲ ಸಮುದಾಯಗಳು ನಮ್ಮ ಹೋರಾಟಕ್ಕೆ ಬೆಂಬಲ ಸೂಚಿಸಿವೆ. ಎಲ್ಲ ಮಠಾಧೀಶರು ಧರಣಿಗೆ ಬೆಂಬಲ ಸೂಚಿಸಿದ್ದಾರೆ. ಧರಣಿ ಸತ್ಯಾಗ್ರಹಕ್ಕೆ ಸುಮಾರು 90 ಹಾಲಿ ಮತ್ತು ಮಾಜಿ ಶಾಸಕರು ಬೆಂಬಲ ಸೂಚಿಸಿದ್ದಾರೆ.

• ಮೀಸಲಾತಿ ಪ್ರಮಾಣ ಶೇ50ರಷ್ಟು ಮೀರಬಾರದು ಎನ್ನುವ ಸುಪ್ರೀಂ ಕೋರ್ಟ್ ತೀರ್ಪು ಮೀಸಲಾತಿ ಹೆಚ್ಚಳಕ್ಕೆ ಅಡ್ಡಿಯಾಗುವುದಿಲ್ಲವೇ?

ಸ್ವಾಮೀಜಿ: ಇಂದ್ರಾ ಸಹಾನಿ ಪ್ರಕರಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸಂಬಂಧಿಸಿದಂತೆ ಸ್ಪಷ್ಟ ಉಲ್ಲೇಖಗಳಿವೆ. ಸಮಾಜದ ಕಟ್ಟಕಡೆಯ ಸಮುದಾಯಗಳಿಗಾಗಿ ಮೀಸಲಾತಿ ಪ್ರಮಾಣ ಹೆಚ್ಚಿಸಬೇಕು ಎನ್ನುವುದು ಪುಟ 810ರಲ್ಲಿದೆ. ವಿಶೇಷ ಸಂದರ್ಭಗಳನ್ನು ಪರಿಗಣಿಸಬೇಕು ಎಂದು ಹೇಳಲಾಗಿದೆ. ಆದರೆ, ಕೆಲವು ಪಟ್ಟಭದ್ರರು ಈ ಅಂಶವನ್ನು ಮುಚ್ಚಿಡುತ್ತಿದ್ದಾರೆ.

• ಸದನ ಸಮಿತಿ ರಚನೆ ಮತ್ತು ನ್ಯಾಯಮೂರ್ತಿ ಸುಭಾಷ್ ಅಡಿ ಆಯೋಗ ರಚನೆಗೆ ಆಕ್ಷೇಪ ಏಕೆ?

ಸ್ವಾಮೀಜಿ: ಸದನ ಸಮಿತಿ ರಚಿಸುವ ಅಗತ್ಯವೇ ಇರಲಿಲ್ಲ. ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗದ ವರದಿಯನ್ನು ಪರಾಮರ್ಶೆ ಮಾಡಲು ರಾಜ್ಯ ಸರ್ಕಾರ ಈಗ ನ್ಯಾಯಮೂರ್ತಿ ಸುಭಾಷ್ ಅಡಿ ಆಯೋಗವನ್ನು ರಚಿಸಿದೆ. ವಿಳಂಬ ಮಾಡಲು ಇಂತಹ ಕ್ರಮಗಳನ್ನು ಅನುಸರಿಸುತ್ತಿದೆ. ಪರಿಶಿಷ್ಟ ಪಂಗಡದ ಮೀಸಲಾತಿ ಹೆಚ್ಚಳದ ಬೇಡಿಕೆಯನ್ನು ವಿನಾಕಾರಣ ಇತರೆ ಸಮುದಾಯದ ಸಮಸ್ಯೆಗಳ ಜತೆಗೆ ಸೇರಿಸುವ ಪ್ರಯತ್ನ ಮಾಡಲಾಗುತ್ತಿದೆ. ಉದ್ಯೋಗ ಮತ್ತು ಶಿಕ್ಷಣದಲ್ಲಿ ಜನಸಂಖ್ಯೆ ಅನುಗುಣವಾಗಿ ಮೀಸಲಾತಿ ಹೆಚ್ಚಿಸಬೇಕು ಎನ್ನುವುದು ನಮ್ಮ ಬೇಡಿಕೆ.

• ಸರ್ಕಾರ ನಿಮ್ಮ ಹೋರಾಟಕ್ಕೆ ಸ್ಪಂದಿಸುತ್ತಿಲ್ಲವೇ?

ಸ್ವಾಮೀಜಿ: ರಾಜ್ಯ ಸರ್ಕಾರ ಕಾಲಹರಣಕ್ಕಾಗಿ ಸಭೆಗಳನ್ನು ಮಾಡುತ್ತಿದೆ. ಇಂದಿಗೂ ಸಮುದಾಯವನ್ನು ಕಡೆಗಣಿಸಲಾಗುತ್ತಿದೆ. ಆದರೆ, ಸಮುದಾಯ ಈಗ ಜಾಗೃತಗೊಳ್ಳುತ್ತಿದೆ. ಮನೆ, ಮನೆಗೂ ಸಂದೇಶ ತಲುಪಿಸುತ್ತಿದ್ದೇವೆ. ಸಮುದಾಯದ ಪ್ರಭಾವಿ ಸಚಿವರು ಮತ್ತು ಶಾಸಕರು ಮೀಸಲಾತಿಗೆ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಅವರ ಮಾತಿಗೆ ಮನ್ನಣೆ ಸಿಗುತ್ತಿಲ್ಲ. ಮುಖ್ಯಮಂತ್ರಿ ಅವರ ಪ್ರತಿನಿಧಿಯಾಗಿ ಸಚಿವ ಗೋವಿಂದ ಕಾರಜೋಳ ಅವರು ಧರಣಿ ಸ್ಥಳಕ್ಕೆ ಭೇಟಿ ನೀಡಿ ಬೇಡಿಕೆ ಈಡೇರಿಸಲು 15 ದಿನಗಳ ಸಮಯಾವಕಾಶ ಕೇಳಿದ್ದರು. 20 ದಿನ ಕಳೆದರೂ ಯಾವುದೇ ನಿರ್ಧಾರವನ್ನೂ ಪ್ರಕಟಿಸಿಲ್ಲ.

2020ರ ಫೆ.9ರಂದು ಅಂದಿನ ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ ಅವರು ನ್ಯಾಯಮೂರ್ತಿ ನಾಗಮೋಹನದಾಸ್ ಅವರು ವರದಿ ನೀಡಿದ ತಕ್ಷಣವೇ ಮೀಸಲಾತಿ ಕಲ್ಪಿಸಲು ಕ್ರಮಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದ್ದರು. ವರದಿ ನೀಡಿ ಒಂದು ವರ್ಷ ಹತ್ತು ತಿಂಗಳಾದರೂ ಯಾವುದೇ ರೀತಿ ಕ್ರಮಕೈಗೊಂಡಿಲ್ಲ. ಇವು ಸರ್ಕಾರದ ಧೋರಣೆಗೆ ಸಾಕ್ಷಿ.

ಸಂದರ್ಶನ– ಸಚ್ಚಿದಾನಂದ ಕುರಗುಂದ

ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣ; ವಿಚಾರಣೆ ಚುರುಕುಗೊಳಿಸಿದ ಅಧಿಕಾರಿಗಳು

ಬ್ಯಾಂಕ್ ವಹಿವಾಟು ಪತ್ತೆಗೆ ಮುಂದಾದ ಸಿಐಡಿ

• ಮನೋಜಕುಮಾರ್ ಗುದ್ದಿ

ಕಲಬುರಗಿ: ಪಿಎಸ್‌ಐ ನೇಮಕಾತಿ ಹಗರಣದಲ್ಲಿ ಕೆಲವರು ಭಾರಿ ಮೊತ್ತ ಕೊಟ್ಟು ಸರಿ ಉತ್ತರ ಬರೆಸಿದ್ದಾರೆ ಎಂಬ ಆರೋಪಗಳ ಬಗ್ಗೆ ತನಿಖೆ ನಡೆಸುತ್ತಿರುವ ಸಿಐಡಿ ಪೊಲೀಸರು, ಇದೀಗ ಬಂಧಿತ ಆರೋಪಿಗಳು, ಅವರ ಪೋಷಕರ ಬ್ಯಾಂಕ್ ವಹಿವಾಟು ಪರಿಶೀಲನೆಗೆ ಮುಂದಾಗಿದ್ದಾರೆ.

‘ಪಿಎಸ್‌ಐ ಹುದ್ದೆ ಹಲವು ಲಕ್ಷಗಳವರೆಗೆ ಬಿಕರಿಯಾಗಿರುವ ಶಂಕೆ ಇದೆ. ಅಭ್ಯರ್ಥಿಗಳು, ಅವರ ತಂದೆ, ತಾಯಿ ಹಾಗೂ ಹತ್ತಿರದ ಸಂಬಂಧಿಗಳ ಕಳೆದ ಐದಾರು ತಿಂಗಳ ಬ್ಯಾಂಕ್ ವಹಿವಾಟಿನ ವಿವರ ಪಡೆಯಲಿದ್ದೇವೆ. ಅದರಲ್ಲಿ ಸಾಮಾನ್ಯ ವಹಿವಾಟಿಗಿಂತ ಹೆಚ್ಚು ಹಣ ಜಮೆ ಅಥವಾ ವರ್ಗಾವಣೆ ಮಾಡಿದ್ದರೆ ಯಾವ ಉದ್ದೇಶಕ್ಕೆ ಹಣ ವರ್ಗಾವಣೆಯಾಗಿದೆ ಎಂಬ ಮಾಹಿತಿ ಸಿಗಲಿದೆ. ಶೀಘ್ರವೇ ಬ್ಯಾಂಕ್ ಖಾತೆಗಳ ವಿವರ ಪಡೆಯಲಿದ್ದೇವೆ’ ಎಂದು ಸಿಐಡಿ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ವಿಚಾರಣೆ ಸಂದರ್ಭದಲ್ಲಿ ಬಂಧಿತ ಅಭ್ಯರ್ಥಿ ಸೇಡಂನ ವೀರೇಶ ನಿಡಗುಂದಾ ಕಲಬುರಗಿಯ ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಯ ಇನ್ನೂ ಇಬ್ಬರು ಶಿಕ್ಷಕಿಯರು ಈ ಅಕ್ರಮದಲ್ಲಿ ಶಾಮೀಲಾಗಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ. ಶಾಲೆಯ ಮುಖ್ಯಸ್ಥೆ ದಿವ್ಯಾ ಹಾಗರಗಿ ಪರಾರಿಯಾದ ದಿನವೇ ಈ ಶಿಕ್ಷಕಿಯರೂ ನಾಪತ್ತೆಯಾಗಿದ್ದು, ಅವರಿಗಾಗಿ ಸಿಐಡಿ ಅಧಿಕಾರಿಗಳು ಹುಡುಕಾಟ ನಡೆಸಿದ್ದಾರೆ.

ತೀವ್ರ ಹುಡುಕಾಟ: ಪ್ರಮುಖ ಆರೋಪಿ ಜ್ಞಾನಜ್ಯೋತಿ ಶಿಕ್ಷಣ ಸಂಸ್ಥೆಯ ಮುಖ್ಯಸ್ಥೆ, ಬಿಜೆಪಿ ನಾಯಕಿ ದಿವ್ಯಾ ಹಾಗರಗಿ ಪತ್ತೆಗಾಗಿ ಸಿಐಡಿ ಅಧಿಕಾರಿಗಳು ಹುಡುಕಾಟ ತೀವ್ರಗೊಳಿಸಿದ್ದಾರೆ.

‘ಶಾಲೆಯ ಮೂವರು ಶಿಕ್ಷಕಿಯರ ಬಂಧನದ ಹಿಂದೆಯೇ ನಾಪತ್ತೆಯಾಗಿರುವ ದಿವ್ಯಾ ಅಂದಿನಿಂದ ಮೊಬೈಲ್ ಫೋನ್ ಸ್ವಿಚ್ ಆಫ್ ಮಾಡಿ, ಮೊಬೈಲ್ ಬಿಟ್ಟು ಹೋಗಿದ್ದಾರೆ. ಇನ್ನೂ ಪತ್ತೆಯಾಗಿಲ್ಲ’ ಎನ್ನುವುದು ಸಿಐಡಿ ಮೂಲಗಳ ಮಾಹಿತಿ.

ಇದೇ 21ರಂದು ಕಲಬುರಗಿಯಲ್ಲಿ ಬಿಜೆಪಿಯ ವಿಭಾಗಮಟ್ಟದ ಪ್ರಮುಖ ಪದಾಧಿಕಾರಿಗಳ ಸಭೆ ನಡೆಯಲಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ ಸೇರಿ ಹಲವು ಮುಖಂಡರು ನಗರಕ್ಕೆ ಬರುತ್ತಿದ್ದಾರೆ. ಈ ಸಂದರ್ಭದಲ್ಲೇ ಹಗರಣದಲ್ಲಿ ಪಕ್ಷದ ನಾಯಕಿ ಪ್ರಮುಖ ಆರೋಪಿಯಾಗಿರುವುದು ಆ ಪಕ್ಷಕ್ಕೆ ಬಿಸಿ ತುಪ್ಪವಾಗಿದೆ. ದಿವ್ಯಾ ಬಂಧನಕ್ಕೆ ಒತ್ತಾಯಿಸಿ ಕಾಂಗ್ರೆಸ್ ಕಾರ್ಯಕರ್ತರು ಮುಖ್ಯಮಂತ್ರಿ ಅವರಿಗೆ ಮುತ್ತಿಗೆ ಹಾಕುವುದಾಗಿ ತಿಳಿಸಿದ್ದಾರೆ.

ಅರುಣ ಪಾಟೀಲ ಎಬಿವಿಪಿ ಮುಖಂಡ

ಹಗರಣ ಸಂಬಂಧ ಬಂಧಿತನಾಗಿ, ನ್ಯಾಯಾಂಗ ಬಂಧನದಲ್ಲಿರುವ ಅರುಣ ಪಾಟೀಲ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಮುಖಂಡನಾಗಿದ್ದರು ಎಂಬುದು ತನಿಖೆಯಲ್ಲಿ ಗೊತ್ತಾಗಿದೆ.

2020ರಲ್ಲಿ ಅರುಣ ಕಲಬುರಗಿ ಎಬಿವಿಪಿ ನಗರ ಘಟಕದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದು, ಸಂಘಟನೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು ಎಂದು ತಿಳಿದು ಬಂದಿದೆ.

ಈ ಬಗ್ಗೆ ತನಿಖಾಧಿಕಾರಿಗಳ ಎದುರು ಹೇಳಿಕೆ ನೀಡಿರುವ ಅರುಣ, ‘ನಾನು ವಿದ್ಯಾರ್ಥಿ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದರಿಂದ ಲಕ್ಷಾಂತರ ಹಣ ಹೊಂದಿಸಲು ಆಗಿಲ್ಲ’ ಎಂದು ಹೇಳಿದ್ದಾಗಿ ಮೂಲಗಳು ತಿಳಿಸಿವೆ.

ಕಣ್ಣೀರಿಟ್ಟ ಶಿಕ್ಷಕಿಯರು: ವಿಚಾರಣೆ ವೇಳೆ ತನಿಖಾಧಿಕಾರಿಗಳ ಎದುರು ಶಿಕ್ಷಕಿಯರು ಕಣ್ಣೀರಿಟ್ಟದ್ದು, ತಾವು ಮೇಲ್ವಿಚಾರಕರಾಗಿ ಕಾರ್ಯನಿರ್ವಹಿಸಿದ ಕೊಠಡಿಯಲ್ಲಿ ಅಕ್ರಮ ನಡೆದಿಲ್ಲ ಎಂದು ಹೇಳಿಕೆ ನೀಡಿದ್ದಾರೆ.

ಯುಪಿಎಸ್ಸಿ ಪರೀಕ್ಷೆ ಬರೆದಿದ್ದ ಪ್ರವೀಣಕುಮಾರ್

ಅಕ್ರಮದಲ್ಲಿ ಭಾಗಿಯಾದ ಆರೋಪದಲ್ಲಿ ಬಂಧಿತರಾಗಿರುವ ರಾಯಚೂರಿನ ಪ್ರವೀಣಕುಮಾರ್ ರೆಡ್ಡಿ ಎರಡು ಬಾರಿ ಕೇಂದ್ರ ಲೋಕಸೇವಾ ಆಯೋಗದ ಪರೀಕ್ಷೆ ಬರೆದ ಸಂಗತಿ ಬೆಳಕಿಗೆ ಬಂದಿದೆ.

ಅಲ್ಲದೇ, ಇದೇ ಜೂನ್‌ನಲ್ಲಿ ನಡೆಯುವ ಯುಪಿಎಸ್ಸಿ ಪ್ರಿಲಿಮ್ಸ್ ಪರೀಕ್ಷೆಗೂ ಮೂರನೇ ಬಾರಿ ಹಾಜರಾಗಲು ಸಿದ್ಧತೆ ನಡೆಸಿದ್ದರು. ದೆಹಲಿಯ ಪ್ರತಿಷ್ಠಿತ ವಾಜಿರಾಮ್ ಅಂಡ್ ರವಿ ಐಎಎಸ್ ತರಬೇತಿ ಕೇಂದ್ರದಲ್ಲಿ ವರ್ಷಗಳ ಕಾಲ ತರಬೇತಿ ಪಡೆದಿದ್ದರು ಎಂದು ಗೊತ್ತಾಗಿದೆ. ಸಿಐಡಿ ಪೊಲೀಸರ ತಂಡವು ರಾಯಚೂರಿನ ಅವರ ಮನೆಗೆ ತೆರಳಿ ಪರಿಶೀಲಿಸಿದಾಗ ಸ್ಪರ್ಧಾತ್ಮಕ ಪರೀಕ್ಷೆಗೆ ಸಂಗ್ರಹಿಸಿದ್ದ ಪುಸ್ತಕಗಳು, ಯುಪಿಎಸ್ಸಿ ಪ್ರಶ್ನೆ ಪತ್ರಿಕೆಗಳು ಸಿಕ್ಕಿವೆ.

ಮೇ 5ರವರೆಗೆ ನ್ಯಾಯಾಂಗ ಬಂಧನಕ್ಕೆ

ಬಂಧಿತರಾದ ಅಭ್ಯರ್ಥಿಗಳಾದ ವೀರೇಶ ನಿಡಗುಂದಾ, ಅರುಣ ಪಾಟೀಲ, ಕೆ.ಪ್ರವೀಣಕುಮಾರ ರೆಡ್ಡಿ, ಚೇತನ ನಂದಗಾಂವ, ಪರೀಕ್ಷಾ ಮೇಲ್ವಿಚಾರಣೆಗೆ ನಿಯೋಜನೆಗೊಂಡಿದ್ದ ಶಿಕ್ಷಕಿಯರಾದ ಸುಮಾ, ಸಿದ್ದಮ್ಮ ಹಾಗೂ ಸಾವಿತ್ರಿ ಅವರ ಸಿಐಡಿ ಕಸ್ಟಡಿ ಅವಧಿ ಪೂರ್ಣಗೊಂಡಿದ್ದರಿಂದ ಬುಧವಾರ ಕಲಬುರಗಿಯ ಮೂರನೇ ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಲಯವು ಅವರನ್ನು ಮೇ 5ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿತು.

ಆರು ಆರೋಪಿಗಳ ಜಾಮೀನು ಅರ್ಜಿಯ ವಿಚಾರಣೆಯನ್ನು ನ್ಯಾಯಾಲಯ ಗುರುವಾರ ನಡೆಸಲಿದೆ.

ಸಹಾಯಕ ಪ್ರಾಧ್ಯಾಪಕರ ನೇಮಕ: ಅಕ್ರಮದ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಹಾಯಕ ಪ್ರಾಧ್ಯಾಪಕರ ನೇಮಕಾತಿಯ ಪರೀಕ್ಷೆಯಲ್ಲಿ ಭಾರಿ ಅಕ್ರಮ ನಡೆದಿದ್ದು, ಈ ಪ್ರಕರಣವನ್ನು ಸಿಐಡಿಗೆ ವಹಿಸಬೇಕು’ ಎಂದು ಆಗ್ರಹಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಆರ್‌ಟಿಐ ಕಾರ್ಯಕರ್ತ ಮರಿಲಿಂಗೇಗೌಡ ಮಾಲಿ ಪಾಟೀಲ ಮನವಿ ಸಲ್ಲಿಸಿದ್ದಾರೆ.

ಮಾರ್ಚ್ 14ರಂದು ನಡೆದ ಭೂಗೋಳ ಪ್ರಶ್ನೆ ಪತ್ರಿಕೆಯು ಪರೀಕ್ಷೆ ಅರ್ಧ ಗಂಟೆಗೂ ಮೊದಲು, ಬೆಳಿಗ್ಗೆ 8.30ಕ್ಕೆ ಸೋರಿಕೆಯಾಗಿ ವಾಟ್ಸ್‌ಆ್ಯಪ್ ಮೂಲಕ ಹರಿದಾಡಿತ್ತು. ಅದೇ ಪ್ರಶ್ನೆ ಪತ್ರಿಕೆಯನ್ನು ಪರೀಕ್ಷಾರ್ಥಿಗಳಿಗೆ ನೀಡಲಾಗಿತ್ತು. ಈ ಬಗ್ಗೆ ಪೂರಕ ದಾಖಲೆಗಳ ಸಹಿತ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಮಾರ್ಚ್ 30ರಂದು ಅಭ್ಯರ್ಥಿಗಳು ದೂರು ನೀಡಿದ್ದರು. ಈ ದೂರನ್ನು ಮುಂದಿನ ಕ್ರಮಕ್ಕಾಗಿ ತಮ್ಮ ವ್ಯಾಪ್ತಿಯ ಪೊಲೀಸ್ ಠಾಣೆಗೆ ಕೆಇಎ ನೀಡಿದೆ. ಮೇಲ್ನೋಟಕ್ಕೆ ಪ್ರಶ್ನೆಪತ್ರಿಕೆ ಸೋರಿಕೆ ಆಗಿಲ್ಲ ಎಂದು ಕೆಇಎ ತಿಳಿಸಿದೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಮರಿಲಿಂಗೇಗೌಡ ಮಾಲಿ ಪಾಟೀಲ, ‘ಅಭ್ಯರ್ಥಿಗಳು ದೂರು ನೀಡಿದರೂ ಉನ್ನತ ಶಿಕ್ಷಣ ಇಲಾಖೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಪಿಎಸ್‌ಐ ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂದು ಅಭ್ಯರ್ಥಿಗಳು ದೂರಿದಾಗ ಪ್ರಕರಣವನ್ನು ಸಿಐಡಿಗೆ ವಹಿಸಿದ್ದರಿಂದ ಅಕ್ರಮ ಬಹಿರಂಗವಾಗಿದೆ. ಅದೇ ರೀತಿ ಸಹಾಯಕ ಪ್ರಾಧ್ಯಾಪಕರ ನೇಮಕಾತಿಯಲ್ಲಿ ಅಕ್ರಮ ಆರೋಪ ಬಗ್ಗೆಯೂ ತನಿಖೆ ನಡೆಸಬೇಕು’ ಎಂದು ಆಗ್ರಹಿಸಿದರು

ಅಭ್ಯರ್ಥಿಗಳ ದೂರಿಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಮಲ್ಲೇಶ್ವರ ಪೊಲೀಸ್ ಠಾಣೆಯ ಹಿರಿಯ ಪೊಲೀಸ್ ಅಧಿಕಾರಿ, ‘ಈ ಪ್ರಕರಣದಲ್ಲಿ ಎಫ್‌ಐಆರ್ ದಾಖಲು ಆಗದೇ ಇರುವುದರಿಂದ ಸಮಗ್ರ ತನಿಖೆಗೆ ಅವಕಾಶ ಇಲ್ಲ’ ಎಂದರು.

‘ಎಪಿಎಂಸಿಗಳನ್ನು ಮುಚ್ಚುವ ಮಾತೇ ಇಲ್ಲ’

ಬೆಳಗಾವಿ: ‘ರಾಜ್ಯದಲ್ಲಿ ಎಪಿಎಂಸಿಗಳನ್ನು ಮುಚ್ಚುವ ಮಾತೇ ಇಲ್ಲ’ ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಹೇಳಿದರು.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ‘ಎಪಿಎಂಸಿಗಳಿಂದ ರೈತರಿಗೆ ಬಹಳ ಅನುಕೂಲವಾಗುತ್ತಿದೆ’ ಎಂದು ಸ್ಪಷ್ಟಪಡಿಸಿದರು.

ಬಳಿಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಬೆಳಗಾವಿ ಪ್ರಾಂತೀಯ ಕಟ್ಟಡದ ಉದ್ಘಾಟನಾ ಸಮಾರಂಭದಲ್ಲಿ ಅವರು, ‘ಬಡವರು ₹ 2 ಲಕ್ಷ ಸಾಲ ಪಾವತಿಸದಿದ್ದರೆ ಡಂಗುರ ಬಾರಿಸಿ, ಮನೆಗಳಿಗೆ ಹೋಗಿ ವಸೂಲಿ ಮಾಡುತ್ತೀರಿ. ಶ್ರೀಮಂತರು ಹಾಗೂ ರಾಜಕಾರಣಿಗಳಿಗೆ ನೀಡಿರುವ ಸಾಲ ವಸೂಲಿ ಮಾಡುವ ತಾಕತ್ತಿಲ್ಲವೇ? ಹಾಗಾದರೆ ಸಾಲ ಕೊಡುತ್ತೀರೇಕೆ?’ ಎಂದು ಅವರು ಪ್ರಶ್ನಿಸಿದರು.

ಆಯುಷ್ ಉತ್ಪನ್ನಗಳ ಗುಣಮಟ್ಟ ದೃಢೀಕರಣಕ್ಕೆ ‘ಆಯುಷ್ ಮಾರ್ಕ್’

ಗಾಂಧಿನಗರ (ಪಿಟಿಐ): ದೇಶದಲ್ಲಿನ ಸಾಂಪ್ರದಾಯಿಕ ಔಷಧ ಉದ್ಯಮವನ್ನು ಉತ್ತೇಜಿಸಲು ಹಾಗೂ ಆಯುಷ್ ಉತ್ಪನ್ನಗಳ ಗುಣಮಟ್ಟವನ್ನು ದೃಢೀಕರಿಸುವುದಕ್ಕಾಗಿ ಶೀಘ್ರದಲ್ಲೇ ‘ಆಯುಷ್ ಮಾರ್ಕ್’ ಅನ್ನು ಪ್ರಾರಂಭಿಸಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಬುಧವಾರ ಹೇಳಿದ್ದಾರೆ.

ಇಲ್ಲಿನ ಮಹಾತ್ಮ ಮಂದಿರದಲ್ಲಿ ಮೂರು ದಿನಗಳ ಜಾಗತಿಕ ಆಯುಷ್ ಹೂಡಿಕೆ ಮತ್ತು ನಾವೀನ್ಯತೆ ಶೃಂಗಸಭೆಯನ್ನು ಮಾರಿಷಸ್ ಪ್ರಧಾನಿ ಪ್ರವಿಂದ್ ಜಗನ್ನಾಥ್ ಮತ್ತು ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯುಎಚ್‌ಒ) ಮಹಾನಿರ್ದೇಶಕ ಟೆಡ್ರೋಸ್ ಅಧನಾಮ್ ಗ್ಯಾಬ್ರಿಯೇಸಸ್ ಅವರ ಸಮ್ಮುಖದಲ್ಲಿ ಉದ್ಘಾಟಿಸಿದ ನಂತರ ಮೋದಿ ಮಾತನಾಡಿದರು.

‘ಹೀಲ್ ಇನ್ ಇಂಡಿಯಾ’ ಕುರಿತು ಮಾತನಾಡಿದ ಅವರು, ಆಯುಷ್ ಚಿಕಿತ್ಸೆಗಳನ್ನು ಪಡೆಯಲು ಭಾರತಕ್ಕೆ ಬರಲು ಬಯಸುವವರಿಗೆ ವಿಶೇಷ ‘ಆಯುಷ್ ವೀಸಾ’ ವ್ಯವಸ್ಥೆ ಮಾಡಲಾಗುವುದು ಎಂದೂ ಘೋಷಿಸಿದರು.

‘ಭಾರತವು ಶೀಘ್ರದಲ್ಲೇ ಆಯುಷ್ ಮಾರ್ಕ್ ಅನ್ನು ಪರಿಚಯಿಸಲಿದ್ದು, ಇದು ದೇಶದ ಗುಣಮಟ್ಟದ ಆಯುಷ್ ಉತ್ಪನ್ನಗಳಿಗೆ ಅಧಿಕೃತತೆಯನ್ನು ನೀಡುತ್ತದೆ. ಇತ್ತೀಚಿನ ತಂತ್ರಜ್ಞಾನವನ್ನು ಬಳಸಿಕೊಂಡು ಪರಿಶೀಲಿಸಿದ ಉತ್ಪನ್ನಗಳಿಗೆ ಈ ಗುರುತು ನೀಡಲಾಗುವುದು. ಇದು ಜನರಲ್ಲಿ (ಗ್ರಾಹಕರಿಗೆ) ಗುಣಮಟ್ಟದ ಆಯುಷ್ ಉತ್ಪನ್ನಗಳ ಖರೀದಿಯ ವಿಶ್ವಾಸವನ್ನು ಮೂಡಿಸಲಿದೆ’ ಎಂದು ಹೇಳಿದರು.

ಕೇಂದ್ರ ಆಯುಷ್ ಸಚಿವಾಲಯವು ಸಾಂಪ್ರದಾಯಿಕ ಔಷಧ ಕ್ಷೇತ್ರದಲ್ಲಿ ಸ್ಟಾರ್ಟ್- ಅಪ್ ಸಂಸ್ಕೃತಿಯನ್ನು ಪ್ರೋತ್ಸಾಹಿಸಲು ಕ್ರಮಗಳನ್ನು ಕೈಗೊಂಡಿದೆ ಎಂದರು.

ಹುಬ್ಬಳ್ಳಿ ಗಲಭೆ: ಮತ್ತೆ 11 ಮಂದಿ ಬಂಧನ, ಮುಖಂಡರಿಂದ ಸೌಹಾರ್ದದ ಮಂತ್ರ

ದೂರುದಾರನ ವಿರುದ್ಧವೂ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ನಗರದಲ್ಲಿ ನಡೆದ ಗಲಭೆಗೆ ಕಾರಣವಾಗಿದ್ದ ವಾಟ್ಸ್‌ಆ್ಯಪ್‌ನಲ್ಲಿ ಆಕ್ಷೇಪಾರ್ಹ ಸ್ಟೇಟಸ್ ಕುರಿತು ದೂರು ಕೊಟ್ಟಿದ್ದ ದೂರುದಾರನ ವಿರುದ್ಧ, ಘಟನೆ ನಡೆದ ದಿನವೇ ಇಲ್ಲಿನ ಹಳೇ ಹುಬ್ಬಳ್ಳಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಸ್ಟೇಟಸ್ ಹಾಕಿದ್ದ ಆರೋಪಿ ಅಭಿಷೇಕ ಹಿರೇಮಠ ವಿರುದ್ಧ ದೂರು ಕೊಡಲು ಬಂದಿದ್ದ ತಬೀಬಲ್ಯಾಂಡ್‌ನ ಮೊಹಮ್ಮದ್ ಅಜರ್ ಬೆಲೇರಿ ಸೇರಿ ಹಲವರ ವಿರುದ್ಧ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಜೆ.ಬಿ. ಕಾಳಪ್ಪನವರ ದೂರು ಆಧರಿಸಿ ಎಫ್‌ಐಆರ್ ದಾಖಲಿಸಲಾಗಿದೆ.

‘ಠಾಣೆ ಮುಂದೆ ಜಮಾಯಿಸಿದ್ದ ಆರೋಪಿಗಳು ಮತ್ತು ಉದ್ರಿಕ್ತರು, ಪೊಲೀಸರನ್ನು ಕೊಲ್ಲುವ ಉದ್ದೇಶದಿಂದ ಕಲ್ಲು, ಕಟ್ಟಿಗೆ, ಬಡಿಗೆಗಳಿಂದ ಹಲ್ಲೆ ನಡೆಸಿದ್ದಾರೆ. ಪೊಲೀಸ್ ವಾಹನ ಜಖಂಗೊಳಿಸಿದ್ದಾರೆ’ ಎಂದು ದೂರಿನಲ್ಲಿ ಆರೋಪಿಸಲಾಗಿದೆ. ಈವರೆಗೆ 11 ಎಫ್‌ಐಆರ್ ದಾಖಲಾಗಿವೆ. ಅದರಲ್ಲಿ ಮೂವರು ಇನ್‌ಸ್ಪೆಕ್ಟರ್‌ಗಳು ಸೇರಿದಂತೆ ಇತರ ಪೊಲೀಸ್ ಸಿಬ್ಬಂದಿ ನೀಡಿರುವ ಕೊಲೆ ಯತ್ನ ಆರೋಪದ 8 ಎಫ್‌ಐಆರ್‌ಗಳು ಇವೆ.

ಮತ್ತೆ ನಾಲ್ವರ ಬಂಧನ: ಗಲಭೆ ಸಂಬಂಧ ಮತ್ತೆ ನಾಲ್ವರನ್ನು ಪೊಲೀಸರು ಬಂಧಿಸಿದ್ದು, ಬಂಧಿತರ ಸಂಖ್ಯೆ 126ಕ್ಕೆ ಏರಿದೆ. ಘಟನೆ ಸಂಬಂಧ ನ್ಯಾಯಾಲಯಕ್ಕೆ ಯಾವುದೇ ವರದಿ ಸಲ್ಲಿಸಿಲ್ಲ’ ಎಂದು ಪೊಲೀಸ್ ಕಮಿಷನರ್ ಲಾಭೂ ರಾಮ್ ತಿಳಿಸಿದ್ದಾರೆ.

ಪರೀಕ್ಷೆ ಬರೆಯಲು ಆರೋಪಿಗೆ ಅವಕಾಶ

ವಾಟ್ಸ್‌ಆ್ಯಪ್‌ನಲ್ಲಿ ಆಕ್ಷೇಪಾರ್ಹ ಸ್ಟೇಟಸ್ ಹಾಕಿದ್ದ ಆರೋಪಿ ಅಭಿಷೇಕ ಹಿರೇಮಠನಿಗೆ ದ್ವಿತೀಯ ಪಿಯುಸಿ ಪರೀಕ್ಷೆ ಬರೆಯಲು ಇಲ್ಲಿನ 4ನೇ ಎಸಿಜೆ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಬುಧವಾರ ಅನುಮತಿ ನೀಡಿದೆ.

ಪಿಯು ಕಲಾ ವಿಭಾಗದ ವಿದ್ಯಾರ್ಥಿಯಾಗಿರುವ ಆರೋಪಿಯ ಜಾಮೀನು ಅರ್ಜಿಯ ವಿಚಾರಣೆ ನಡೆಸಿದ ಕೋರ್ಟ್, ಪರೀಕ್ಷೆ ಬರೆಯಲು ಆರೋಪಿಗೆ ಅಗತ್ಯ ವ್ಯವಸ್ಥೆ ಮಾಡಬೇಕು. ಪರೀಕ್ಷಾ ಕೇಂದ್ರಕ್ಕೆ ತೆರಳಲು ಭದ್ರತೆ ಒದಗಿಸಬೇಕು ಎಂದು ಆದೇಶಿಸಿತು ಎಂದು ಆರೋಪಿ ಪರ ವಕೀಲ ಸಂಜಯ್ ಬಡಸ್ಕರ ತಿಳಿಸಿದರು.

ಹುಬ್ಬಳ್ಳಿಯಲ್ಲಿ ಬುಧವಾರ ಹಿಂದೂ ಹಾಗೂ ಮುಸ್ಲಿಂ ಸಮಾಜದ ಧಾರ್ಮಿಕ ಮುಖಂಡರು ಪರಸ್ಪರ ಕೈ ಹಿಡಿದು ಒಗ್ಗಟ್ಟು ಪ್ರದರ್ಶಿಸಿದರು –ಪ್ರಜಾವಾಣಿ ಚಿತ್ರ

ಧಾರ್ಮಿಕ ಮುಖಂಡರಿಂದ ಸೌಹಾರ್ದ ಮಂತ್ರ

ಹುಬ್ಬಳ್ಳಿ: ಹಳೇ ಹುಬ್ಬಳ್ಳಿ ಗಲಭೆ ಹಿನ್ನೆಲೆಯಲ್ಲಿ ಶಾಂತಿ ರಕ್ಷಣೆ ಕುರಿತು ಮಾಡಲು ಹಿಂದೂ ಹಾಗೂ ಮುಸ್ಲಿಂ ಸಮಾಜದ ಧಾರ್ಮಿಕ ಮುಖಂಡರು ಬುಧವಾರ ಸೌಹಾರ್ದದ ಮಂತ್ರ ಜಪಿಸಿದರು.

ಎರಡೂ ಧರ್ಮಗಳ ಮುಖಂಡರು ಜಂಟಿ ಸುದ್ದಿಗೋಷ್ಠಿಯಲ್ಲಿ ‘ಧಾರವಾಡ ಜಿಲ್ಲೆ ಸೌಹಾರ್ದಕ್ಕೆ ಹೆಸರಾಗಿದೆ. ಎಲ್ಲರೂ ಸಹಬಾಳ್ವೆ, ಸಮಾನತೆಯಿಂದ ಬದುಕಬೇಕು’ ಎಂದು ಕೋರಿದರು.

ಮುಖಂಡರಾದ ಸೈಯದ್ ಅಹ್ಮದ್ ರಜಾ ಸರ್ ಖಾಜಿ, ಅಬ್ದುಲ್ ರಜಾಕ್ ಖಾದ್ರಿ ಹಾಷ್ಮಿಸುತಾರಿ ಖಾದ್ರಿ, ಬೈಲಹೊಂಗಲದ ಶಿವಾನಂದ ಪರಮಹಂಸ ಸ್ವಾಮೀಜಿ, ಸೈಯದ್ ನಿಸಾರ್ ಅಹ್ಮದ್ ಖಾದ್ರಿ, ಮೊಹಮ್ಮದ್ ಅನ್ಸಾಲ್ ಮುಕ್ತಿ ಖಾದ್ರಿ, ಹಫೀಜ್ ಅಲೀಮುದ್ದೀನ್ ರಜ್ವಿ, ಹುಬ್ಬಳ್ಳಿ ಹೊಸಮಠದ ಪೀಠಾಧಿಪತಿ ಚಂದ್ರಶೇಖರ ಶಿವಯೋಗಿ ರಾಜಯೋಗಿಂದ್ರ ಸ್ವಾಮೀಜಿ, ಬೆಂಗಳೂರಿನ ಚನ್ನಬಸವೇಶ್ವರ ಜ್ಞಾನಪೀಠದ ಪೀಠಾಧ್ಯಕ್ಷ ಚನ್ನಬಸವಾನಂದ ಸ್ವಾಮೀಜಿ ಪಾಲ್ಗೊಂಡಿದ್ದರು.

ಸಂಕ್ಷಿಪ್ತ ಸುದ್ದಿ

‘ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಬಿಎಸ್‌ವೈ ಹೆಸರು ಅಂತಿಮ’

ಶಿವಮೊಗ್ಗ: ‘ಸೋಗಾನೆಯಲ್ಲಿ ನಿರ್ಮಾಣವಾಗುತ್ತಿರುವ ವಿಮಾನ ನಿಲ್ದಾಣಕ್ಕೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೆಸರು ಅಂತಿಮಗೊಳಿಸಿದ್ದು, ಕೇಂದ್ರಕ್ಕೆ ಶಿಫಾರಸು ಮಾಡಲಾಗಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಿಮಾನ ನಿಲ್ದಾಣ ಕಾಮಗಾರಿಗಳ ಪರಿಶೀಲಿಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ವಿಮಾನ ನಿಲ್ದಾಣ ₹ 386 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿದೆ. ನಾಮಕರಣಕ್ಕೆ ಹಲವರ ಹೆಸರು ಪ್ರಸ್ತಾವದಲ್ಲಿದ್ದವು. ನಿಲ್ದಾಣ ನಿರ್ಮಾಣಕ್ಕೆ ಯಡಿಯೂರಪ್ಪ ಅವರು ಶ್ರಮಿಸಿದ್ದಾರೆ. ಹಾಗಾಗಿ, ಅವರ ಹೆಸರು ಅಂತಿಮಗೊಳಿಸಲಾಗಿದೆ. ಸಂಪುಟ ಅನುಮೋದನೆ ನೀಡಿದೆ’ ಎಂದು ತಿಳಿಸಿದರು.

ಸೇವಾಸಿಂಧು ಪೋರ್ಟಲ್‌ಗೆ ಪ್ರಶಸ್ತಿ

ಬೆಂಗಳೂರು: ಕೇಂದ್ರ ಸರ್ಕಾರ ಸಾರ್ವಜನಿಕ ಆಡಳಿತದಲ್ಲಿ ಉತ್ಕೃಷ್ಟತೆಯ ಸೇವೆಗಾಗಿ ನೀಡುವ 2021 ರ ಸಾಲಿನ ಪ್ರಶಸ್ತಿಗೆ ಕರ್ನಾಟಕ ಸರ್ಕಾರದ ‘ಸೇವಾಸಿಂಧು’ ಪೋರ್ಟಲ್ ಅನ್ನು ಆಯ್ಕೆ ಮಾಡಿದೆ.

‘ಅಡೆತಡೆಯಿಲ್ಲದ, ಮೊದಲಿನಿಂದ ಕೊನೆ ತನಕ ಮಾನವ ಮಧ್ಯಪ್ರವೇಶವಿಲ್ಲದ ಸೇವೆ ನೀಡಿಕೆ ವಿಭಾಗ’ದಡಿ ಈ ಪ್ರಶಸ್ತಿ ನೀಡಲಾಗುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ(ಏ.21) ವಿಜ್ಞಾನ ಭವನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಆರ್‌ಎಸ್‌ಎಸ್ ಕೂಡ ನಿಷೇಧಿಸಿ – ಎಂ.ಬಿ. ಪಾಟೀಲ ಆಗ್ರಹ

ಬಾಗಲಕೋಟೆ: ‘ಎಸ್‌ಡಿಪಿಐ, ಪಿಎಫ್‌ಐ, ಎಂಐಎಂ ಜೊತೆಗೆ ಆರ್‌ಎಸ್‌ಎಸ್, ಬಜರಂಗದಳ, ವಿಎಚ್‌ಪಿ, ಶ್ರೀರಾಮಸೇನೆ ಸಂಘಟನೆಗಳನ್ನು ಕೇಂದ್ರ ಸರ್ಕಾರ ಕೂಡಲೇ ನಿಷೇಧಿಸಲಿ. ಇಡೀ ದೇಶ ಸ್ವಚ್ಛವಾಗಲಿ. ಅದಕ್ಕೆ ನಾವು ಬೆಂಬಲ ನೀಡಲಿದ್ದೇವೆ’ ಎಂದು ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ.ಪಾಟೀಲ ಆಗ್ರಹಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಪ್ರಶ್ನೆಯೊಂದಕ್ಕೆ ಹೀಗೆ ಪ್ರತಿಕ್ರಿಯಿಸಿದ ಅವರು, ‘ಆರ್‌ಎಸ್‌ಎಸ್, ಬಿಜೆಪಿಯವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿರಲಿಲ್ಲ. ಇವರೆಲ್ಲ ಬ್ರಿಟಿಷರ ಏಜೆಂಟರಾಗಿದ್ದರು, ಈಗ ರಾಷ್ಟ್ರೀಯತೆ ಬಗ್ಗೆ ಮಾತನಾಡುತ್ತಿದ್ದಾರೆ’ ಎಂದರು.

‘ಪಿಎಸ್‌ಐ ನೇಮಕಾತಿ ಅಕ್ರಮ: ಯಾರ ರಕ್ಷಣೆಗೂ ನಿಂತಿಲ್ಲ’

ರಿಪ್ಪನ್‌ಪೇಟೆ (ಶಿವಮೊಗ್ಗ ಜಿಲ್ಲೆ): ‘ಪಿಎಸ್‌ಐ ನೇಮಕಾತಿ ಅಕ್ರಮ ಕುರಿತು ಮಾಹಿತಿ ದೊರೆತ ತಕ್ಷಣವೇ ಮುಖ್ಯಮಂತ್ರಿಯೊಂದಿಗೆ ಚರ್ಚಿಸಿ, ಸಿಐಡಿ ತನಿಖೆಗೆ ಒಪ್ಪಿಸಲಾಗಿದೆ. ಯಾರ ರಕ್ಷಣೆಗೂ ನಿಂತಿಲ್ಲ’ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ದಿವ್ಯಾ ಹಾಗರಗಿ ಅವರ ರಕ್ಷಣೆಗೆ ನಿಂತಿಲ್ಲ’ ಎಂದು ಸ್ಪಷ್ಟಪಡಿಸಿದರು.

ಹೆಚ್ಚಿನ ಬೆಲೆಗೆ ರಫ್ತಾಗುತ್ತಿರುವ ದೇಶಿ ಕಾಗದ

ಪಠ್ಯಪುಸ್ತಕ ವಿಳಂಬ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುದ್ರಣ ಕಾಗದದ ತೀವ್ರ ಅಭಾವದಿಂದಾಗಿ ಈ ಬಾರಿ (2022–23) ರಾಜ್ಯದ ಶಾಲಾ ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ಪಠ್ಯ ಪುಸ್ತಕಗಳು ಸಿಗುವ ಸಾಧ್ಯತೆ ಇಲ್ಲ.

ರಷ್ಯಾ–ಉಕ್ರೇನ್ ಯುದ್ಧ, ಚೀನಾದಲ್ಲಿನ ಕೋವಿಡ್ ಸಮಸ್ಯೆಯಿಂದ ಜಾಗತಿಕವಾಗಿ ಮುದ್ರಣ ಕಾಗದದ ಅಭಾವ ಸೃಷ್ಟಿಯಾಗಿದೆ. ಆದರೆ, ಭಾರತದ ಮುದ್ರಣ ಕಾಗದ ತಯಾರಿಕಾ ಕಂಪನಿಗಳು ಹೆಚ್ಚಿನ ಬೆಲೆಗೆ ಕಾಗದವನ್ನು ವಿದೇಶಗಳಿಗೆ ರಫ್ತು ಮಾಡುತ್ತಿರುವುದರಿಂದ, ದೇಶೀ ಮಾರುಕಟ್ಟೆಯಲ್ಲೂ ಕಾಗದದ ಕೊರತೆ ಸೃಷ್ಟಿಯಾಗಿದೆ.

ಇದರ ಪರಿಣಾಮ, ಪೆಟ್ರೋಲ್–ಡೀಸೆಲ್ ಮಾದರಿಯಲ್ಲೇ ಮುದ್ರಣ ಕಾಗದದ ಬೆಲೆಯೂ ಗಗನಮುಖಿಯಾಗಿದೆ. ಜತೆಗೆ ಪಠ್ಯ ಪುಸ್ತಕ ಮುದ್ರಣಕ್ಕೆ ಅಗತ್ಯವಿರುವಷ್ಟು ಕಾಗದವೂ ಮುದ್ರಕರಿಗೆ ಪೂರೈಕೆ ಆಗುತ್ತಿಲ್ಲ. ಮೇ 15 ಕ್ಕೆ ಪಠ್ಯಪುಸ್ತಕಗಳನ್ನು ಮುದ್ರಿಸಿ ಹಸ್ತಾಂತರಿಸಬೇಕು ಎಂಬ ಶಿಕ್ಷಣ ಇಲಾಖೆ ಗಡುವು ನೀಡಿದೆ. ಆದರೆ ಕಾಗದ ಕೊರತೆಯಿಂದಾಗಿ ಅದು ಸಾಧ್ಯವಾಗುವುದಿಲ್ಲ ಎಂಬುದು ಪಠ್ಯಪುಸ್ತಕ ಮುದ್ರಕರ ಅಳಲು.

‘ಕೆಲವು ದಿನಗಳ ಹಿಂದೆ ಒಂದು ಕೆ.ಜಿ ಮುದ್ರಣ ಕಾಗದದ ಬೆಲೆ ₹62 ಇತ್ತು. ಈಗ ಅದು ₹80 ಕ್ಕೆ ತಲುಪಿದೆ (ಜಿಎಸ್‌ಟಿ ಪ್ರತ್ಯೇಕ). ಹೆಚ್ಚು ಹಣ ಕೊಡುತ್ತೇವೆ ಎಂದರೂ ಮುದ್ರಣ ಕಾಗದ ಸಿಗುತ್ತಿಲ್ಲ. ಒಂದು ಶೈಕ್ಷಣಿಕ ವರ್ಷದ ಪಠ್ಯ ಪುಸ್ತಕಗಳನ್ನು ಮುದ್ರಿಸಲು ಸುಮಾರು 15 ಸಾವಿರ ಟನ್ ಕಾಗದ ಬೇಕಾಗುತ್ತದೆ.

ಪ್ರತಿಯೊಬ್ಬ ಮುದ್ರಕನಿಗೆ ದಿನಕ್ಕೆ ತಲಾ 350 ಟನ್ ಕಾಗದ ಅಗತ್ಯವಿದೆ. ಆದರೆ, ಈಗ ಮುದ್ರಕರಿಗೆ ಸಿಗುತ್ತಿರುವುದು ದಿನಕ್ಕೆ 50 ರಿಂದ 60 ಟನ್ ಮಾತ್ರ. ರಾಜ್ಯದಲ್ಲಿ ಪಠ್ಯಪುಸ್ತಕಗಳ 27 ಮುದ್ರಕರಿದ್ದು, ಶೇ 20 ರಿಂದ ಶೇ 30 ರಷ್ಟು ಮಾತ್ರ ಮುದ್ರಣವಾಗಿದೆ’ ಎಂದು ಪಠ್ಯಪುಸ್ತಕದ ಪ್ರಮುಖ ಮುದ್ರಕರಾದ ಅಭಿಮಾನಿ ಪ್ರಕಾಶನದ ಆಡಳಿತಾಧಿಕಾರಿ ಅನಿಲ್ ಹೊಸಕೊಪ್ಪ ತಿಳಿಸಿದರು.

ಪುಸ್ತಕೋದ್ಯಮಕ್ಕೂ ಹೊಡೆತ

ಮುದ್ರಣ ಕಾಗದದ ಕೊರತೆ ಮತ್ತು ಬೆಲೆ ಏರಿಕೆಯಿಂದ ಪುಸ್ತಕೋದ್ಯಮಕ್ಕೂ ಹೊಡೆತ ಬಿದ್ದಿದೆ. ಮುದ್ರಣ ಇಂಕು, ಪುಸ್ತಕಗಳ ಸಾಗಾಣಿಕೆ ವೆಚ್ಚವೂ ಹೆಚ್ಚಿದೆ ಎಂದು ಸೃಷ್ಟಿ ಪ್ರಕಾಶನದ ಸೃಷ್ಟಿ ನಾಗೇಶ್ ತಿಳಿಸಿದ್ದಾರೆ.

ಲೇಖಕರ ರಾಯಧನದ ಮೇಲೆ ಜಿಎಸ್‌ಟಿ ವಿಧಿಸಲಾಗುತ್ತಿದೆ. ಒಂದು ಬಾಕ್ಸ್ ಪುಸ್ತಕದ ಸಾಗಣೆಗೆ ₹36 ರಿಂದ ₹38 ಇದೆ. ಕೂಲಿ ವೆಚ್ಚವೂ ಹೆಚ್ಚಾಗಿ. ಒಟ್ಟಾರೆ ಪುಸ್ತಕೋದ್ಯಮ ದುಬಾರಿಯಾಗಿದೆ ಎಂದು ಹೇಳಿದ್ದಾರೆ.

ಪಠ್ಯಪುಸ್ತಕಗಳ ಮುದ್ರಣಕ್ಕೆ ಅಗತ್ಯವಿರುವಷ್ಟು ಮುದ್ರಣ ಕಾಗದ ಸರಬರಾಜು ಮಾಡಬೇಕು. ಪಠ್ಯಪುಸ್ತಕ ಸರಬರಾಜಿಗೆ ನೀಡಿರುವ ಗಡುವನ್ನು 15 ದಿನಗಳು ಹೆಚ್ಚುವರಿಯಾಗಿ ನೀಡಬೇಕು

ಅನಿಲ್ ಹೊಸಕೊಪ್ಪ
ಅಭಿಮಾನಿ ಪ್ರಕಾಶನ

ಈ ಹಿಂದೆ ಸಮಸ್ಯೆ ಆದಾಗ ಸರ್ಕಾರ ಮಧ್ಯಪ್ರವೇಶ ಮಾಡಿ ಮುದ್ರಕರಿಗೆ ಮುಂಗಡ ಹಣ ಕೊಟ್ಟು ಪಠ್ಯಪುಸ್ತಕ ಮುದ್ರಣಕ್ಕೆ ಅವಕಾಶ ನೀಡಿತ್ತು. ಈ ವರ್ಷ ಕಾರ್ಯಾದೇಶ ಕೊಟ್ಟು ಕೆಲಸ ಶುರು ಮಾಡಿದ್ದರೂ ಕಳೆದ ವರ್ಷದ ಬಿಲ್ ಪಾವತಿ ಮಾಡಿಲ್ಲ

ಸತ್ಯಕುಮಾರ್
ಅಧ್ಯಕ್ಷರು ಪಠ್ಯ ಪುಸ್ತಕ ಮುದ್ರಕರ ಸಂಘ

ಕಳೆದ ತಿಂಗಳು 15 ರಿಂದ 20 ದಿನಗಳು ಕಾಗದದ ಸರಬರಾಜು ನಿಲ್ಲಿಸಲಾಗಿತ್ತು.

ಖ್ಯಾತ ನಿರ್ದೇಶಕ ಟಿ.ರಾಮರಾವ್ ನಿಧನ

ಚೆನ್ನೈ/ಹೈದರಾಬಾದ್ (ಪಿಟಿಐ): ಖ್ಯಾತ ಚಿತ್ರ ನಿರ್ಮಾಪಕ, ನಿರ್ದೇಶಕ ಟಿ.ರಾಮರಾವ್ (84) ಅವರು ಚೆನ್ನೈನಲ್ಲಿ ಬುಧವಾರ ನಿಧನರಾದರು.

ತಾತಿನೇನಿ ರಾಮರಾವ್ ಅವರಿಗೆ ಪತ್ನಿ ಮತ್ತು ಮೂವರು ಮಕ್ಕಳು ಇದ್ದಾರೆ. ಅವರು ತೆಲುಗು ಮತ್ತು ಹಿಂದಿ ಭಾಷೆಯಲ್ಲಿ ಹಲವು ಸಿನಿಮಾಗಳನ್ನು ನಿರ್ದೇಶಿಸಿ, ನಿರ್ಮಾಣ ಮಾಡಿದ್ದಾರೆ.

ಜನಪ್ರಿಯ ನಟರಾದ ದಿವಂಗತ ಎನ್‌.ಟಿ. ರಾಮರಾವ್, ರಜನಿಕಾಂತ್ ಮತ್ತು ಅಮಿತಾಭ್ ಬಚ್ಚನ್ ಮೊದಲಾದವರ ನಟನೆಯ ಚಿತ್ರಗಳನ್ನು ರಾಮರಾವ್ ನಿರ್ಮಿಸಿದ್ದಾರೆ.

ಸುಮಾರು ನಾಲ್ಕು ದಶಕಗಳ ತಮ್ಮ ವೃತ್ತಿಜೀವನದಲ್ಲಿ ಅವರು ಸಾಮಾಜಿಕ ಕಥಾವಸ್ತುಗಳ ಚಿತ್ರಗಳಿಗೆ ಆದ್ಯತೆ ನೀಡಿ, ಯಶಸ್ಸು ಸಂಪಾದಿಸಿದ್ದರು.

1966ರಲ್ಲಿ ಅಕ್ಕಿನೇನಿ ನಾಗೇಶ್ವರ ರಾವ್ ಮತ್ತು ಸಾವಿತ್ರಿ ಅವರು ಪ್ರಮುಖ ಪಾತ್ರದಲ್ಲಿ ನಟಿಸಿದ್ದ ತೆಲುಗಿನ ‘ನವರಾತ್ರಿ’ ಚಿತ್ರವನ್ನು ಮೊದಲ ಬಾರಿಗೆ ಅವರು ನಿರ್ಮಿಸಿದರು. 1977ರಲ್ಲಿ ನಿರ್ಮಿಸಿದ ಎನ್‌ಟಿಆರ್ ಜೊತೆಗಿನ ಹಾಸ್ಯ ಚಿತ್ರ ‘ಯಮಗೋಳ’ ಬ್ಲಾಕ್‌ಬಸ್ಟರ್ ಚಿತ್ರವೆನಿಸಿತ್ತು.

ಷಡಕ್ಷರಮುನಿ ಸ್ವಾಮೀಜಿ ನೇತೃತ್ವದ ಧರಣಿಗೆ ಸ್ಪಂದನೆ

ಎಸ್ಸಿಎಸ್ಟಿ ದೌರ್ಜನ್ಯ ಸಂತ್ರಸ್ತರಿಗೆ ನೇರ ಸಾಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೌರ್ಜನ್ಯಕ್ಕೆ ಒಳಗಾದ ಪರಿಶಿಷ್ಟ ಜಾತಿ ಮತ್ತು ಪಂಗಡದ ಸಂತ್ರಸ್ತರಿಗೆ ಬ್ಯಾಂಕ್ ಸಾಲದ ಮೂಲಕ ನೀಡುತ್ತಿದ್ದ ಪುನರ್ವಸತಿಗೆ ಬದಲು ನಿಗಮಗಳ ಮೂಲಕವೇ ನೇರ ಸಾಲ ನೀಡಲು ಸರ್ಕಾರ ಆದೇಶಿಸಿದೆ.

ಎಸ್‌ಸಿಎಸ್‌ಟಿ ದೌರ್ಜನ್ಯ ತಡೆ ಕಾಯ್ದೆ ಯಥಾವತ್ ಜಾರಿಗೆ ಆಗ್ರಹಿಸಿ ಆದಿಜಾಂಬವ ಮಠದ ಷಡಕ್ಷರಮುನಿ ದೇಶಿಕೇಂದ್ರ ಸ್ವಾಮೀಜಿ ನೇತೃತ್ವದಲ್ಲಿ ಟಿ.ಡಿ. ರಾಜಗಿರಿ ಬಣದ ದಲಿತ ಸಂಘರ್ಷ ಸಮಿತಿ 16 ದಿನಗಳಿಂದ ನಡೆಸುತ್ತಿರುವ ಧರಣಿಗೆ ಸ್ಪಂದಿಸಿದ ಸರ್ಕಾರ ಈ ಆದೇಶ ಹೊರಡಿಸಿದೆ.

ದೌರ್ಜನ್ಯಕ್ಕೆ ಒಳಗಾದವರಿಗೆ ಸ್ವಯಂ ಉದ್ಯೋಗ ಯೋಜನೆ ಮತ್ತು ಉದ್ಯಮಶೀಲತಾ ಯೋಜನೆಯಡಿ ಬ್ಯಾಂಕ್ ಸಾಲ ಪಡೆದವರಿಗೆ ಶೇ 50ರಷ್ಟು ಸಹಾಯಧನ ನೀಡುವ ಯೋಜನೆ ಜಾರಿಯಲ್ಲಿತ್ತು. ‘ಬ್ಯಾಂಕ್‌ಗಳಿಗೆ ಸಾಲಕ್ಕೆ ಸಲ್ಲಿಸಿದ್ದ ಅರ್ಜಿಗಳು ತಿರಸ್ಕಾರಗೊಂಡರೆ ಸಹಾಯಧನವೂ ಸಿಗದೆ ಸಂತ್ರಸ್ತರು ಬರಿಗೈ ಆಗುತ್ತಿದ್ದಾರೆ. ಆದ್ದರಿಂದ ಅಂಬೇಡ್ಕರ್ ಅಭಿವೃದ್ಧಿ ನಿಗಮದ ಮೂಲಕವೇ ನೇರ ಸಾಲ ಮತ್ತು ಸಹಾಯಧನ ನೀಡಬೇಕು’ ಎಂದು ಒತ್ತಾಯಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ನಿರಂತರ ಧರಣಿ ನಡಸಲಾಗುತ್ತಿತ್ತು.

ಸರ್ಕಾರ ನಮ್ಮ ಮನವಿಗೆ ಸ್ಪಂದಿಸಿರುವುದಕ್ಕೆ ಧನ್ಯವಾದಗಳು. ಆದರೆ, ನಿಗದಿಪಡಿಸಿರುವ ಮೊತ್ತ ಸಾಕಾಗುವುದಿಲ್ಲ, ಹೆಚ್ಚಳ ಮಾಡಬೇಕು

ಷಡಕ್ಷರಮುನಿ ದೇಶಿಕೇಂದ್ರ ಸ್ವಾಮೀಜಿ
ಆದಿಜಾಂಬವ ಮಠ

ಸ್ವಯಂ ಉದ್ಯೋಗ ನೇರ ಸಾಲ ಯೋಜನೆಯಡಿ ₹25 ಸಾವಿರ ನಿಗಮ ಸಹಾಯಧನ ಮತ್ತು ₹25 ಸಾವಿರ ನೇರ ಸಾಲ ನೀಡಲಾಗುತ್ತಿತ್ತು. ಅದನ್ನು ಬದಲಿಸಿ ₹50 ಸಾವಿರ ಸಹಾಯಧನ ಮತ್ತು ₹50 ಸಾವಿರ ನಿಗಮದಿಂದ ನೇರ ಸಾಲ ಒದಗಿಸಲು ಆದೇಶದಲ್ಲಿ ತಿಳಿಸಿದೆ.

ಉದ್ಯಮಶೀಲತಾ ಯೋಜನೆಯಡಿ ₹1 ಲಕ್ಷ ಸಹಾಯಧನ ಮತ್ತು ₹1 ಲಕ್ಷ ಬ್ಯಾಂಕ್ ಸಾಲ ನೀಡಲಾಗುತ್ತಿತ್ತು. ಅದಕ್ಕೆ ಬದಲಾಗಿ ₹1 ಲಕ್ಷ ಸಹಾಯಧನ ಮತ್ತು ₹1 ಲಕ್ಷ ನಿಗಮದ ಮೂಲಕ ನೇರ ಸಾಲ ನೀಡಲು ಸೂಚನೆ ನೀಡಿದೆ.

ಉದ್ಯಮಶೀಲತಾ ಯೋಜನೆಯಡಿ ಗರಿಷ್ಠ ₹5 ಲಕ್ಷ ಸಹಾಯಧನ ಮತ್ತು ₹5 ಲಕ್ಷ ಬ್ಯಾಂಕ್ ಸಾಲ ನೀಡುವ ಯೋಜನೆಯೂ ಜಾರಿಯಲ್ಲಿತ್ತು. ಅದನ್ನು ಬದಲಿಸಿ ₹1.50 ಲಕ್ಷ ಸಹಾಯಧನ ಮತ್ತು ₹1.50 ಲಕ್ಷ ನಿಗಮದ ನೇರ ಸಾಲ ಒದಗಿಸಲು ತಿಳಿಸಿದೆ.

‘ಜಿಲ್ಲಾಧಿಕಾರಿಗಳ ಹಂತದಲ್ಲಿ ಈ ಯೋಜನೆ ಅನುಷ್ಠಾನಗೊಳಿಸಿ 15 ದಿನಗಳಲ್ಲಿ ಫಲಾನುಭವಿಗಳ ಖಾತೆಗೆ ಅನುದಾನ ಬಿಡುಗಡೆ ಮಾಡಬೇಕು’ ಎಂದು ಆದೇಶದಲ್ಲಿ ಹೇಳಿದೆ.

‘ಬ್ಯಾಂಕ್ ಸಾಲದ ಅರ್ಜಿಗಳು ತಿರಸ್ಕಾರಗೊಂಡರೆ ಸಹಾಯಧನವೂ ಸಿಗದಂತಾಗಿತ್ತು. ಆದ್ದರಿಂದ ನಿಗಮದ ಮೂಲಕವೇ ನೇರ ಸಾಲ ನೀಡಬೇಕು ಎಂದು ಒತ್ತಾಯಿಸಿದ್ದೆವು’ ಎಂದು ಷಡಕ್ಷರಮುನಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

EXAM DH ಪ್ರಜಾವಾಣಿ MASTERMIND

ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಇ.ಇ.... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ

ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ www.exammastermind.comಗೆ ಭೇಟಿ ಕೊಡಿ

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

ಸಮಾಜ-ವಿಜ್ಞಾನ ವಿಷಯ

ಕಠಿಣ ಅಧ್ಯಯನ ಅನಿವಾರ್ಯ

> ಸಮಾಜ ವಿಜ್ಞಾನ ವಿಷಯ ಸುಲಭವಾದರೂ ಹೆಚ್ಚು ಅಂಕಗಳಿಸುವುದು ಬಹು ದೊಡ್ಡ ಸವಾಲು. ಹೆಚ್ಚು ಶ್ರಮವಹಿಸಿ ಅಧ್ಯಯನ ಮಾಡುವುದು ಅನಿವಾರ್ಯ.

ಆರ್.ಬಿ.ಗುರುಬಸವರಾಜ

ವಿಜ್ಞಾನ ಹಾಗೂ ಗಣಿತ ವಿಷಯಗಳಿಗೆ ಹೋಲಿಸಿದರೆ ಸಮಾಜ ವಿಜ್ಞಾನ ತುಂಬಾ ಸುಲಭವಾದ ವಿಷಯ ಎನ್ನುತ್ತಾರೆ. ಆದರೆ ಈ ವಿಷಯದಲ್ಲಿ ಹೆಚ್ಚು ಅಂಕಗಳಿಸುವುದು ತುಸು ಕಷ್ಟ. ವಿಷಯ ವ್ಯಾಪ್ತಿ ಮತ್ತು ಆಳ ಹೆಚ್ಚು ಇರುವುದರಿಂದ ಶ್ರಮವಹಿಸಿ ಅಧ್ಯಯನ ಮಾಡುವುದು ಅನಿವಾರ್ಯ. ಈಗ ಇರುವ ಸೀಮಿತ ಕಾಲಾವಧಿಯಲ್ಲಿ ಸಾಕಷ್ಟು ವಿಷಯವನ್ನು ಓದಿ ಮನನ ಮಾಡಿಕೊಳ್ಳಬೇಕಾದ ಅನಿವಾರ್ಯತೆ ಇದೆ.

ಸಮಾಜ ವಿಜ್ಞಾನ ಪದವೀಧರ ಶಿಕ್ಷಕ ಹುದ್ದೆಗಾಗಿ ಪರೀಕ್ಷೆ ಬರೆಯುತ್ತಿರುವವರಿಗೆ ಪತ್ರಿಕೆ-2 ಬಹಳ ಪ್ರಮುಖವಾದದ್ದು. ಇದು 150 ಅಂಕಗಳ ಪತ್ರಿಕೆ. ಅಭ್ಯರ್ಥಿಗಳು ಶೇ 45 ಅಂಕಗಳಿಸುವುದು ಕಡ್ಡಾಯ. ಅಲ್ಲದೇ ಇಲ್ಲಿ ಗಳಿಸಿದ ಅಂಕಗಳನ್ನು ಮೆರಿಟ್‌ಗೆ ಪರಿಗಣಿಸಲಾಗುತ್ತದೆ. ಈ ಎಲ್ಲವನ್ನೂ ಗಮನದಲ್ಲಿಟ್ಟು ಪರೀಕ್ಷೆಗೆ ಹೀಗೆ ತಯಾರಾಗಬಹುದು;

ಪ್ರಶ್ನೆಗಳ ಸ್ವರೂಪ ತಿಳಿಯಿರಿ: ಸಮಾಜ ವಿಜ್ಞಾನ ವಿಷಯದಲ್ಲಿ ಪರೀಕ್ಷಾ ಸಿದ್ಧತೆಗೆ ತೊಡಗುವ ಮುನ್ನ ಪ್ರಶ್ನೆಪತ್ರಿಕೆ ಮತ್ತು ಪ್ರಶ್ನೆಗಳ ಸ್ವರೂಪ ತಿಳಿಯಬೇಕು. ಇದು ತಿಳಿಯದೇ ಅಧ್ಯಯನ ಮಾಡಿದರೆ ವ್ಯರ್ಥವಾಗುತ್ತದೆ. ಪತ್ರಿಕೆ-2 ಸಮಾಜ ವಿಜ್ಞಾನ ಪತ್ರಿಕೆಗೆ ಮೀಸಲಾಗಿರುವ 150 ಅಂಕಗಳಲ್ಲಿ, 50 ಅಂಕಗಳಿಗೆ ಬಹು ಆಯ್ಕೆಯ ಪ್ರಶ್ನೆಗಳು ಹಾಗೂ 100 ಅಂಕಗಳಿಗೆ ವಿವರಾಣಾತ್ಮಕ ಪ್ರಶ್ನೆಗಳಿಗೆ ಉತ್ತರಿಸಬೇಕು. ಇದರಲ್ಲಿ 3 ಅಂಕದ 20 ಪ್ರಶ್ನೆಗಳಿರುತ್ತವೆ. ಈ ಪ್ರಶ್ನೆಗಳಿಗೆ 30 ಪದಗಳ ಮಿತಿಯಲ್ಲಿ ಉತ್ತರಿಸಬೇಕು. ಇನ್ನುಳಿದಂತೆ 4 ಅಂಕದ 10 ಪ್ರಶ್ನೆಗಳಿರುತ್ತವೆ. ಇವುಗಳಿಗೆ 40 ಪದಗಳ ಮಿತಿಯಲ್ಲಿ ಉತ್ತರಿಸಬೇಕು. ಜೊತೆಗೆ ಬೋಧನಾ ಪದ್ಧತಿಗೆ ಅನುಗುಣವಾಗಿ ಶೇ 8 ರಿಂದ 10 ಅಂಕಗಳ ಪ್ರಶ್ನೆಗಳಿರುತ್ತವೆ.

ಖಚಿತ ಉತ್ತರಗಳಿರಲಿ: ಗಣಿತ ಹಾಗೂ ವಿಜ್ಞಾನ ವಿಷಯಗಳಲ್ಲಿ ಸೂತ್ರಗಳು, ತತ್ವಗಳು ಹಾಗೂ ಸಿದ್ಧಾಂತಗಳಿದ್ದು ಅವುಗಳ ಆಧಾರದ ಮೇಲೆ ಉತ್ತರದಲ್ಲಿ ನಿರ್ದಿಷ್ಟತೆ ಇರುತ್ತದೆ. ಅದರಂತೆ ಸಮಾಜ ವಿಜ್ಞಾನ ವಿಷಯದಲ್ಲೂ ಉತ್ತರಗಳಲ್ಲಿ ಖಚಿತತೆ, ನಿರ್ದಿಷ್ಟತೆ ಇರಬೇಕು. ಸೀಮಿತ ಪದಗಳ ಮಿತಿಯಲ್ಲಿ ಸ್ಪಷ್ಟ ಉತ್ತರ ಬರೆದರೆ ಮಾತ್ರ ಹೆಚ್ಚು ಅಂಕಗಳಿಸಲು ಸಾಧ್ಯವಾಗುತ್ತದೆ.

ಪ್ರತಿ ವಿಭಾಗವನ್ನೂ ಓದಿ: ಸಮಾಜ ವಿಜ್ಞಾನ ವ್ಯಾಪ್ತಿ ದೊಡ್ಡದಿದೆ. ಹಾಗಾಗಿ ಅದನ್ನು ವಿಭಾಗವಾರು ಅಧ್ಯಯನ ಮಾಡುವುದರಿಂದ, ಒಂದು ಸ್ಪಷ್ಟತೆ ಸಿಗುತ್ತದೆ. ಇಲಾಖೆ ನಿಗದಿಪಡಿಸಿದ ಪಠ್ಯಕ್ರಮವನ್ನು ಗಮನಿಸಿದರೆ ಯಾವ ಯಾವ ವಿಭಾಗಗಳಿವೆ ಎಂಬುದು ತಿಳಿಯುತ್ತದೆ.

ಇತಿಹಾಸದ ವಿಷಯದಲ್ಲಿ ಮೂಲದಿಂದ ಹಿಡಿದು ಪ್ರಸ್ತುತವಿರುವ ಆಧುನಿಕ ಇತಿಹಾಸದವರೆಗಿನ ಎಲ್ಲಾ ಅಂಶಗಳನ್ನು ಅಧ್ಯಯನ ಮಾಡಬೇಕಾಗುತ್ತದೆ. ಇದರಲ್ಲಿ ಕಾಲಗಣನೆ ಮುಖ್ಯ. ಹಾಗಾಗಿ ನಿಖರ ಟೈಮ್‌ಲೈನ್ ತಯಾರಿಸಿಕೊಳ್ಳಿ. ಇಸವಿಗೆ ಅನುಗುಣವಾದ ಕಾಲಾನುಕ್ರಮಣಿಕೆ ಮತ್ತು ರಾಜರುಗಳ ವಂಶಾವಳಿ ಬಹಳ ಮುಖ್ಯ. ಇದಕ್ಕಾಗಿ ವಿಸ್ಕೃತ ಟಿಪ್ಪಣಿ ಅಗತ್ಯ.

ಪ್ರಾಥಮಿಕ ಶಾಲಾ ಸಹಶಿಕ್ಷಕರ ನೇಮಕಾತಿ ಸ್ಪರ್ಧಾತ್ಮಕ ಪರೀಕ್ಷೆ

ರಾಜ್ಯಶಾಸ್ತ್ರದಲ್ಲಿ ಭಾರತದ ಸಂವಿಧಾನ, ನಮ್ಮ ಸರ್ಕಾರಗಳು, ರಕ್ಷಣಾ ಪಡೆಗಳು, ದೇಶದ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳು ಕುರಿತು ಅಧ್ಯಯನ ಮಾಡಿ. ನೆರೆಹೊರೆಯ ದೇಶಗಳು ಹಾಗೂ ವಿವಿಧ ಅಂತರರಾಷ್ಟ್ರೀಯ ಸಂಸ್ಥೆಗಳೊಂದಿಗಿನ ಭಾರತದ ಸಂಬಂಧ, ಮಾನವ ಸಂಪನ್ಮೂಲಗಳು, ಮಾನವ ಹಕ್ಕುಗಳು ಮುಂತಾದ ಪರಿಕಲ್ಪನೆಗಳ ಬಗ್ಗೆ ಟಿಪ್ಪಣಿ ಮಾಡಿಟ್ಟುಕೊಂಡರೆ ಪ್ರಶ್ನೆಗಳಿಗೆ ಸುಲಭವಾಗಿ ಉತ್ತರಿಸಬಹುದು. ವಿವಿಧ ಸಮುದಾಯಗಳು ಹಾಗೂ ಅವುಗಳ ಸಂಸ್ಕೃತಿ, ಸಾಮಾಜಿಕ ಬದಲಾವಣೆಗಳು, ಸಾಮೂಹಿಕ ನಡವಳಿಗಳು ಮತ್ತು ಪ್ರತಿಭಟನೆಗಳು, ಸಾಮಾಜಿಕ ಸಮಸ್ಯೆಗಳು ಮುಂತಾದ ವಿಷಯಗಳ ಕುರಿತು ಆಳವಾದ ಅಧ್ಯಯನ ಮಾಡಬೇಕಾಗುತ್ತದೆ.

ಭೂಗೋಳದ ಅಧ್ಯಯನ ಒಂದು ರೀತಿಯ ವಿಜ್ಞಾನ ಇದ್ದಂತೆ. ಇಲ್ಲಿ ನಿಖರತೆ ಇರುತ್ತದೆ. ಭೂಮಿಯ ಉಗಮ, ನಮ್ಮ ಸೌರವ್ಯೂಹ, ಭೂಖಂಡಗಳು, ಅವುಗಳ ಭೂಸ್ವರೂಪಗಳು, ಅಕ್ಷಾಂಶ ಮತ್ತು ರೇಖಾಂಶಗಳು, ಭಾರತದ ಭೌಗೋಳಿಕ ಲಕ್ಷಣಗಳು, ಭಾರತದ ನೆಲ, ಜಲ ಹಾಗೂ ಖನಿಜ ಸಂಪನ್ಮೂಲಗಳು ಮುಂತಾದ ಅಂಶಗಳ ಬಗ್ಗೆ ಸ್ಪಷ್ಟ, ನಿಖರ ಹಾಗೂ ಪ್ರಸ್ತುತ ಮಾಹಿತಿಯನ್ನು ಅಪ್‌ಡೇಟ್ ಮಾಡಿಕೊಳ್ಳಿ. ಭೂಗೋಳ ಅಧ್ಯಯನಕ್ಕೆ ಭೂಪಟ, ಗ್ಲೋಬ್ ಮತ್ತು ಅಟ್ಲಾಸ್‌ಗಳು ಹೆಚ್ಚು ಸಹಾಯಕ.

ಆರ್ಥಿಕತೆಯ ವಿಧಗಳು, ಅಭಿವೃದ್ಧಿ ಮೇಲೆ ಅರ್ಥಶಾಸ್ತ್ರದ ಪ್ರಭಾವ, ರಾಷ್ಟ್ರೀಯ ಆದಾಯ ಮತ್ತು ತಲಾ ಆದಾಯ, ಕೃಷಿ ಸಂಕಷ್ಟಗಳು, ದೇಶದ ಆರ್ಥಿಕ ಯೋಜನೆಗಳು, ಸಾಧನೆಗಳು ಮತ್ತು ವೈಫಲ್ಯಗಳು, ಉದಾರಿಕರಣ, ಖಾಸಗೀಕರಣ ಮತ್ತು ಜಾಗತೀಕರಣ, ಹಣಕಾಸು ಸಂಸ್ಥೆಗಳ ಕಾರ್ಯಾಚರಣೆ ಮುಂತಾದ ಅರ್ಥಶಾಸ್ತ್ರೀಯ ಅಂಶಗಳ ಕುರಿತು ಮಾಹಿತಿ ಸಂಗ್ರಹಿಸಿಕೊಳ್ಳಬೇಕು.

ವ್ಯಾಪಾರ, ಮಾರುಕಟ್ಟೆ, ಕೈಗಾರಿಕೆ, ಹಣಕಾಸಿನ ನಿರ್ವಹಣೆ, ಬ್ಯಾಂಕಿಂಗ್‌ವ್ಯವಹಾರಗಳು, ಉದ್ಯಮಶೀಲ ವ್ಯಾಪಾರದ ಜಾಗತೀಕರಣ ಮುಂತಾದ ಅಂಶಗಳನ್ನು ವ್ಯವಹಾರ ಅಧ್ಯಯನ ವಿಭಾಗದಲ್ಲಿ ಅಧ್ಯಯನಕ್ಕೆ ಒಳಪಡಿಸಿಕೊಳ್ಳಬೇಕು. ಪ್ರಚಲಿತ ವಿದ್ಯಮಾನಗಳು ಹಾಗೂ ಈಗಾಗಲೇ ತಿಳಿದಿರುವ ಮಾಹಿತಿಯನ್ನು ಅಪ್‌ಡೇಟ್ ಮಾಡಿಕೊಳ್ಳುವುದಕ್ಕಾಗಿ ಕಡ್ಡಾಯವಾಗಿ ದಿನಪತ್ರಿಕೆ ಓದಬೇಕು.

ಅಧ್ಯಯನಕ್ಕೆ ಪೂರಕವಾದ ಪುಸ್ತಕಗಳು

- 6 ರಿಂದ 10ನೇ ತರಗತಿ ರಾಜ್ಯ ಸರ್ಕಾರದ ಪಠ್ಯ ಪುಸ್ತಕಗಳು,
- 11 ರಿಂದ 12 ನೇ ತರಗತಿ ಪಿಯುಸಿ ಪಠ್ಯ ಪುಸ್ತಕಗಳು.
- 6 ರಿಂದ10 ಎನ್‌ಸಿಇಆರ್‌ಟಿ ಪಠ್ಯಪುಸ್ತಕಗಳು (ಆಂಗ್ಲ ಮಾಧ್ಯಮದಲ್ಲಿ ಮಾತ್ರ ಲಭ್ಯ)
- ಸದಾಶಿವ, ಎಚ್.ಆರ್.ಕೆ. ಬರೆದಿರುವ 'ಇತಿಹಾಸ'
- ಎಚ್.ಎಂ.ರಾಜಶೇಖರ್ ಅವರ 'ರಾಜ್ಯಶಾಸ್ತ್ರ'
- ಕೆ.ಎಂ.ಸುರೇಶ, ಮಲ್ಲಪ್ಪ ಅವರ 'ಭೂಗೋಳ' ಕೃತಿ
- ಎಚ್.ಆರ್.ಕೆ. ಅವರ 'ಅರ್ಥಶಾಸ್ತ್ರ'

ವಿಡಿಯೊ ಪಾಠ ವೀಕ್ಷಿಸಿ

ಕೋವಿಡ್ ಹಿನ್ನೆಲೆಯಲ್ಲಿ ಕಳೆದ ವರ್ಷ ಮಕ್ಕಳ ಕಲಿಕೆಗೆ ಅನುಕೂಲವಾಗುವಂತೆ ಶಿಕ್ಷಣ ಇಲಾಖೆ 'ವಿದ್ಯಾಗಮ' ಹೆಸರಿನಲ್ಲಿ ನಿರ್ಮಿಸಿದ ಸಂವೇದ ಪಾಠಗಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹೆಚ್ಚು ಉಪಯುಕ್ತ. ಅಲ್ಲದೇ ಡಿಎಸ್‌ಇಆರ್‌ಟಿ ಎಜ್ಯುಸ್ಯಾಟ್ ಪಾಠಗಳಿಗೆ ತಯಾರಿಸಿದ ವಿಡಿಯೊ ಪಾಠಗಳೂ ಪರೀಕ್ಷೆಗೆ ಪೂರಕ. ಈ ಪಾಠಗಳು ಕೆಳಗಿನ ಲಿಂಕ್‌ಗಳಲ್ಲಿ ಲಭ್ಯವಿವೆ.

https://www.youtube.com/channel/UCYXGup94ByD1Lb6woVs_oGA/videos

https://www.youtube.com/channel/UCrnoyJbZlapzdMaOvMT9ZqQ?view_as=subscriber

ಯುಪಿಎಸ್‌ಸಿ ಪ್ರಿಲಿಮ್ಸ್

ಯಾವ ಪಠ್ಯಕ್ರಮಕ್ಕೆ ಯಾರ ಪುಸ್ತಕ?

ಸಿವಿಲ್ ಸರ್ವೀಸಸ್ ಪರೀಕ್ಷೆ ಪಾಠ-5

ಗುರುರಾಜ್ ಎಸ್. ದಾವಣಗೆರೆ

ಸುಮಾರು ಎರಡು ಸಾವಿರ ಅಂಕಗಳಿಗೆ ನಡೆಯುವ ಯುಪಿಎಸ್‌ಸಿ ಪರೀಕ್ಷೆಗೆ ತಯಾರಾಗಲು ಯಾವ ಪುಸ್ತಕಗಳನ್ನು ಓದಬೇಕು ಎಂಬ ಪ್ರಶ್ನೆ ಪರೀಕ್ಷೆ ಎದುರಿಸುವ ಎಲ್ಲ ಅಭ್ಯರ್ಥಿಗಳನ್ನೂ ಕಾಡುತ್ತದೆ.

ಪ್ರತಿ ವಿಷಯಕ್ಕೂ ಬೇಕಾದ ಸಾವಿರಾರು ಪುಸ್ತಕಗಳು ಮಾರುಕಟ್ಟೆಯಲ್ಲಿವೆ. ಯಾವುದು ಉತ್ತಮ? ಈ ಹಿಂದೆ ರ‍್ಯಾಂಕ್‌ಗಳಿಸಿದವರು ಯಾವ ಪುಸ್ತಕಗಳನ್ನು ಶಿಫಾರಸು ಮಾಡುತ್ತಾರೆ? ಎಂಬೆಲ್ಲ ಪ್ರಶ್ನೆಗಳಿಗೆ ಸಿಗುವ ಉತ್ತರಗಳೆಲ್ಲ ಅತ್ಯಂತ ಸಾಪೇಕ್ಷವಾಗಿರುತ್ತವೆ. ಅಂದರೆ ಅವರವರ ಅನುಭವ, ಕ್ಷಮತೆ, ಜಾಣತನ ಮತ್ತು ಆಯಾ ಕಾಲಕ್ಕೆ ತಕ್ಕಂತಿರುತ್ತವೆ. ಆದರೆ ಪಠ್ಯಕ್ರಮ (ಸಿಲಬಸ್‌ಗೆ) ಅನುಗುಣವಾಗಿ ಮೂಲ ತಯಾರಿಗೆ ಬೇಕಾದ, ಓದಲೇ ಬೇಕಾದ ಕೆಲವು ಪುಸ್ತಕಗಳಿರುತ್ತವೆ. ಒಬ್ಬೊಬ್ಬರದೂ ಒಂದೊಂದು ಅಭಿಪ್ರಾಯವಿರುವುದರಿಂದ ಹೊಸದಾಗಿ ಓದುವವರು ಗೊಂದಲಕ್ಕೆ ಬೀಳುವುದು ಸಹಜ.

ಸಿಲಬಸ್‌ಗೆ ತಕ್ಕ ಪುಸ್ತಕಗಳು

ಸಿಲಬಸ್‌ಗೆ ತಕ್ಕಂತೆ ಪುಸ್ತಕಗಳನ್ನು ಓದಬೇಕು. ಯುಪಿಎಸ್‌ಸಿಯ ಪೂರ್ವಭಾವಿ ಪರೀಕ್ಷೆಯಲ್ಲಿರುವ ಭಾರತದ ರಾಜಕೀಯದ ಪಠ್ಯಕ್ರಮದ ಓದಿಗೆ ಎಂ.ಲಕ್ಷ್ಮಿಕಾಂತ ಅವರ ಕೃತಿ ಅತ್ಯಂತ ಸೂಕ್ತ ಎಂಬ ಮಾತು ಐಎಎಸ್ ಸಾಧಕರದ್ದು. ಕೋಚಿಂಗ್ ಸಂಸ್ಥೆಗಳು ಇದನ್ನೇ ಹೇಳುತ್ತವೆ. ಇದು ಬೇರೆ ಪರೀಕ್ಷೆಗೂ ಇದು ಅತ್ಯಂತ ಉಪಯುಕ್ತ ಎಂಬ ಅಭಿಪ್ರಾಯವೂ ಇದೆ. ಇದರ ಜೊತೆ ಎನ್‌ಸಿಇಆರ್‌ಟಿಯವರು 9 ರಿಂದ 12 ನೇ ತರಗತಿಗೆ ನಿಗದಿ ಮಾಡಿರುವ ಪಠ್ಯಪುಸ್ತಕಗಳನ್ನು ಓದಿದರೆ ಯಶಸ್ಸು ಖಂಡಿತ.

ನಮ್ಮ ಕಲೆ, ಪರಂಪರೆ ಮತ್ತು ಸಂಸ್ಕೃತಿಯ ಅಮೂಲಾಗ್ರ ಅಧ್ಯಯನಕ್ಕೆ ನಿತಿನ್ ಸಿಂಘಾನಿಯ ಅವರ 'ಇಂಡಿಯನ್ ಆರ್ಟ್ ಅಂಡ್ ಕಲ್ಚರ್' ಎಂಬ ಪುಸ್ತಕದಲ್ಲಿ, ಸಿವಿಲ್ ಸರ್ವೀಸಸ್ ಪರೀಕ್ಷೆ ತಯಾರಿಗೆ ಬೇಕಾದ ವಸ್ತು - ವಿಷಯಗಳನ್ನು ಒದಗಿಸಬಲ್ಲ ಹೂರಣವಿದೆ. ಬಿಪಿನ್ ಚಂದ್ರರ 'ಇಂಡಿಯ ಆಫ್ಟರ್ ಇಂಡಿಪೆಂಡೆನ್ಸ್' ಮತ್ತು 'ಹಿಸ್ಟರಿ ಆಫ್ ಮಿಡೀವಲ್ ಇಂಡಿಯ' ಹಾಗೂ ಆರ್ ಎಸ್ ಶರ್ಮರ 'ಏನ್ಶಿಯಂಟ್ ಇಂಡಿಯ' ಕೃತಿಗಳ ಜೊತೆಗೆ ಎನ್‌ಸಿಇಆರ್‌ಟಿಯ 11ನೇ ತರಗತಿಯ 'ಆ್ಯನ್ ಇಂಟ್ರೊಡಕ್ಷನ್ ಟು ಇಂಡಿಯನ್ ಆರ್ಟ್' ಪುಸ್ತಗಳು ಪರೀಕ್ಷೆ ತಯಾರಿಗೆ ಸಂಪೂರ್ಣ ನೆರವು ನೀಡುತ್ತವೆ.

ಎಕಾನಿಮಿಕ್ ಸರ್ವೆ ಓದಿ

ಭಾರತದ ಆರ್ಥಿಕತೆಯ ವಿಷಯಕ್ಕೆ ರಮೇಶ್ ಸಿಂಗ್ ಬರೆದಿರುವ 'ಇಂಡಿಯನ್ ಎಕಾನಮಿ' ಹಲವು ವರ್ಷಗಳಿಂದ ನಿರಂತರವಾಗಿ ಮಾರಾಟವಾಗುತ್ತಿರುವ 'ಬೆಸ್ಟ್ ಸೆಲ್ಲರ್' ಎನಿಸಿದ್ದು ವಿಷಯದ ಸಮಗ್ರ ನಿರೂಪಣೆಗೆ ಹೆಸರುವಾಸಿಯಾಗಿದೆ. ಹೆಚ್ಚಿನ ಅಂಕಗಳಿಸಲು ನಿತಿನ್ ಸಿಂಘಾನಿಯರ 'ಇಂಡಿಯನ್ ಇಕಾನಮಿ', ಜೈನ್ ಅಂಡ್ ಓಹ್ರಿಯ 'ಇಕನಾಮಿಕ್ ಡೆವಲಪ್‌ಮೆಂಟ್ ಅಂಡ್ ಪಾಲಿಸೀಸ್ ಇನ್ ಇಂಡಿಯ' ಹಾಗೂ 11ನೇ ತರಗತಿಯ ಎನ್‌ಸಿಆರ್‌ಟಿ ಪುಸ್ತಕ ಓದಬಹುದಾಗಿದೆ. ಅಧಿಕೃತ ಆರ್ಥಿಕ ಮಾಹಿತಿಗಾಗಿ ಕೇಂದ್ರ ಸಚಿವಾಲಯದ ಆರ್ಥಿಕ ಸಮೀಕ್ಷೆ (Economic Survey) ವರದಿಯನ್ನೂ ಓದಿದರೆ ಉತ್ತಮ.

ಭೂಗೋಳ ವಿಷಯಾಧ್ಯಯನಕ್ಕೆ ಜಿ.ಸಿ. ಲಿಯೊಂಗ್ ಬರೆದಿರುವ 'ಸರ್ಟಿಫಿಕೇಟ್ ಫಿಸಿಕಲ್ ಅಂಡ್ ಹ್ಯೂಮನ್ ಜಿಯಾಗ್ರಫಿ' ಅತ್ಯಂತ ಪ್ರಮುಖ ಪುಸ್ತಕವಾಗಿದೆ. ಐಎಎಸ್ ಪ್ರಿಲಿಮ್ಸ್ ಮತ್ತು ಮೇನ್ಸ್ ಎರಡೂ ಪರೀಕ್ಷೆಗೆ ಬೇಕಾದ ಎಲ್ಲ ಸರಕೂ ಇದರಲ್ಲಿದೆ. 6 ರಿಂದ 12 ನೆಯ ತರಗತಿಯ ಎನ್‌ಸಿಇಆರ್‌ಟಿಯ ಹೊಸ- ಹಳೆಯ ಸಿಲಬಸ್‌ನ ಪುಸ್ತಕಗಳೂ ತಯಾರಿಗೆ ಬೇಕಾಗುತ್ತವೆ. ವಿಶ್ವದ ಭೌಗೋಳಿಕ ಸಂರಚನೆಯ ಚಿತ್ರ - ವಿವರಗಳಿಗಾಗಿ ಆಕ್ಸ್‌ಫರ್ಡ್ ಪ್ರೆಸ್‌ನವರ 'ಆಕ್ಸ್‌ಫರ್ಡ್ ಸ್ಕೂಲ್ ಅಟ್ಲಾಸ್' ಮತ್ತು ಓರಿಯಂಟ್ ಬ್ಲಾಕ್ ಸ್ವಾನ್ ಪ್ರಕಾಶನದ 'ವರ್ಲ್ಡ್ ಅಟ್ಲಾಸ್' ಅಭ್ಯರ್ಥಿಗಳ ಬಳಿ ಇರಲೇಬೇಕು. ಅದರಲ್ಲಿ 200 ಕ್ಕೂ ಹೆಚ್ಚು ನಕ್ಷೆಗಳಿದ್ದು ಭಾರತಕ್ಕೆ ಸಂಬಂಧಿಸಿದ 94 ವಿವಿಧ ವಿಶೇಷಗಳ ನಕ್ಷೆಗಳಿವೆ.

ಆಧುನಿಕ ಭಾರತದ ಇತಿಹಾಸಕ್ಕಾಗಿ ರಾಜೀವ್ ಅಹಿರ್ ಬರೆದ 'ಎ ಬ್ರೀಫ್ ಹಿಸ್ಟರಿ ಆಫ್ ಮಾಡ್ರನ್ ಇಂಡಿಯ', ಅಂತರರಾಷ್ಟ್ರೀಯ ಸಂಬಂಧಗಳ ವಿವರಣೆಗೆ ಎನ್‌ಸಿಇಆರ್‌ಟಿಯ 12ನೇ ತರಗತಿಯ ಕಾಂಟೆಂಪೊರರಿ ವರ್ಲ್ಡ್ ಪಾಲಿಟಿಕ್ಸ್ ಎಂಬ ವಿಸ್ತೃತ ಅಧ್ಯಾಯ, ಪ್ರಚಲಿತ ವಿದ್ಯಮಾನಗಳಿಗಾಗಿ ಇಯರ್ ಬುಕ್, ಪ್ರೆಸ್ ಇನ್‌ಫರ್ಮೇಶನ್ ಬ್ಯುರೊದ ಸುದ್ದಿ ಸಮೀಕ್ಷೆ, ವಿವಿಧ ವಿಶ್ವಾಸಾರ್ಹ ದಿನಪತ್ರಿಕೆ / ನಿಯತ ಕಾಲಿಕೆಗಳನ್ನು ತಪ್ಪದೇ ಓದಬೇಕು.

'ಡೌನ್ ಟು ಅರ್ಥ್' ಉತ್ತಮ ಆಕರ

ಸೈನ್ಸ್ ಅಂಡ್ ಟೆಕ್ನಾಲಜಿಗಾಗಿ ಇಸ್ರೊ ವೆಬ್‌ಸೈಟ್, ಸೈನ್ಸ್ ರಿಪೋರ್ಟರ್‌ನ ಲೇಖಗಳು, ದಿನಪತ್ರಿಕೆಗಳ ವಿಜ್ಞಾನ ಅಂಕಣಗಳು, ಸಂಶೋಧನಾ ಸಂಸ್ಥೆಗಳು ಹೊರಡಿಸುವ ವಾರ್ತಾಪತ್ರಗಳನ್ನು ಕಡ್ಡಾಯವಾಗಿ ಓದಿದಲ್ಲಿ ಯಶಸ್ಸು ಖಚಿತ. ಪರಿಸರ ಮತ್ತು ಜೀವಿಪರಿಸರ ವಿಜ್ಞಾನ (Ecology)ಗಳ ಕುರಿತು ಡೌನ್‌ಟು ಅರ್ಥ ನಿಯತ ಕಾಲಿಕೆ, ಮುಂಗಾಬೇ ವೆಬ್‌ಸೈಟ್, ನೀತಿ ಆಯೋಗ ಮತ್ತು ಕೇಂದ್ರ ಪರಿಸರ ಸಚಿವಾಲಯದ ವೆಬ್‌ಸೈಟ್‌ಗಳನ್ನು ನೋಡಬೇಕು. ಸಿಎಸ್‌ಎಟಿ (ಪ್ರಿಲಿಮ್ಸ್‌ನ ಎರಡನೆ ಪರೀಕ್ಷೆ)ಗೆ ತಯಾರಾಗಲು ಟಾಟಾ ಮೆಗ್ರಾಹಿಲ್‌ನ CSAT ಮ್ಯಾನವಲ್, ಅರಿಹಂತ್ ಪ್ರಕಾಶನದ CSAT – II Verbal (ಹೇಳಿಕೆ ರೂಪದ) and Non Verbal (ಚಿತ್ರರೂಪದ) ರೀಸನಿಂಗ್‌ಗೆ ಆರ್.ಎಸ್. ಅಗರ್‌ವಾಲ್ ಪುಸ್ತಕ ಬೇಕೇಬೇಕು. ಪರಿಮಾಣಾತ್ಮಕ (Quantitative) ಸಾಮರ್ಥ್ಯ (Attitude) ದ ಓದಿಗೆ ಆರ್.ಎಸ್. ಅಗರ್‌ವಾಲ್‌ರ ಪ್ರಸ್ತಕಗಳು ಅನಿವಾರ್ಯ. ಇಲ್ಲಿರುವ ಹೆಸರಿಸಿರುವ ಬಹುತೇಕ ಪುಸ್ತಕಗಳು ಕನ್ನಡ ಆವೃತ್ತಿಯಲ್ಲೂ ಲಭ್ಯವಿವೆ.

(ಮುಂದಿನವಾರ ಪಾಠ-6: ಯುಪಿಎಸ್‌ಸಿ ಮುಖ್ಯ ಪರೀಕ್ಷೆಗೆ ಯಾವ ಪುಸ್ತಕಗಳು)

ಮಾದರಿ ಪ್ರಶ್ನೋತ್ತರಗಳು

ಕೆಪಿಎಸ್‌ಸಿ 'ಗ್ರೂಪ್-ಸಿ'ಯ ವಿವಿಧ ಹುದ್ದೆಗಳು, ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ವಿಶೇಷ ಮೀಸಲು ಸಬ್‌ಇನ್‌ಸ್ಪೆಕ್ಟರ್ (ಕೆಎಸ್‌ಆರ್‌ಪಿ ಐಆರ್‌ಬಿ) ಹಾಗೂ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯ ಸಬ್ ಇನ್‌ಸ್ಪೆಕ್ಟರ್ ಹುದ್ದೆಗಳ ನೇರ ನೇಮಕಾತಿಗಾಗಿ ಶೀಘ್ರದಲ್ಲೇ ಸ್ಪರ್ಧಾತ್ಮಕ ಪರೀಕ್ಷೆಗಳು ನಡೆಯಲಿವೆ. ಈ ಮೂರು ಪರೀಕ್ಷೆಗಳಲ್ಲಿರುವ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

ಸಾಮಾನ್ಯ ಜ್ಞಾನ

1) ಇತ್ತೀಚೆಗೆ ವಿಶ್ವ ಸಂಸ್ಥೆಯ ಮಾನವ ಹಕ್ಕು ಮಂಡಳಿಯಿಂದ ರಷ್ಯಾವನ್ನು ತೆಗೆದು ಹಾಕಲಾಗಿದೆ. ಈ ವಿಶ್ವಸಂಸ್ಥೆಯ ಮಾನವ ಹಕ್ಕು ಮಂಡಳಿಯ ಕಾರ್ಯಾಲಯ ಎಲ್ಲಿದೆ?

ಎ) ಜಿನೀವಾ ಬಿ) ನ್ಯೂಯಾರ್ಕ್

ಸಿ) ಟೊಕಿಯೋ ಡಿ)ವಾಷಿಂಗ್‌ಟನ್ ಡಿಸಿ

ಉತ್ತರ: ಎ

2) ಮಣಿಪಾಲದ ಬಳಿ ಸಿಕ್ಕ ಹೊಸ ಪ್ರಬೇಧವೊಂದಕ್ಕೆ ಲಂಡನ್‌ನ ಪ್ರತಿಷ್ಠಿತ ಬಯೋಲಾಜಿಕಲ್ ಸೊಸೈಟಿಯು ಪ್ಯಾರಾ ಕೈಟ್ಲಿಯ ಭಟ್ಟಿಯೈ ಎಂದು ಹೆಸರಿಟ್ಟು ಗೌರವಿಸಿತ್ತು. ಹಾಗಾದರೆ ಈ ಕೆಳಗೆ ಉಲ್ಲೇಖಿಸಿರುವ ಯಾರ ಗೌರವಾರ್ಥ ಈ ಹೆಸರನ್ನು ಇಡಲಾಗಿದೆ?

ಎ) ಡಾ.ಕೆ. ಗೋಪಾಲ್ ಕೃಷ್ಣ ಭಟ್ಟ

ಬಿ) ಡಾ.ಎಂ. ಗಜಾನನ ಭಟ್

ಸಿ) ಡಾ.ಜೆ. ಸುರಾಮ್ ಭಟ್

ಡಿ) ಮೇಲಿನ ಯಾರೂ ಅಲ್ಲ

ಉತ್ತರ: ಎ

(ವಿವರಣೆ:- ಪ್ರಸಿದ್ಧ ಸಸ್ಯ ವಿಜ್ಞಾನಿ ಡಾ ಕೆ. ಗೋಪಾಲ್ ಕೃಷ್ಣ ಭಟ್ಟ ಇತ್ತೀಚೆಗೆ ನಿಧನರಾದರು. ಸಸ್ಯವರ್ಗೀಕರಣದಲ್ಲಿ ದೊಡ್ಡ ಪಾತ್ರವಹಿಸಿದ್ದಲ್ಲದೇ ಉಡುಪಿ, ದಕ್ಷಿಣ ಕನ್ನಡದಲ್ಲಿರುವ ಸಸ್ಯ ಪ್ರಭೇದಗಳನ್ನು ಜಗತ್ತಿಗೆ ಪರಿಚಯಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಫ್ಲೋರಾ ಆಫ್ ಉಡುಪಿ, ಫ್ಲೋರಾ ಆಫ್ ದಕ್ಷಿಣ ಕನ್ನಡ ಈ ಮೊದಲಾದ ಕೃತಿಗಳನ್ನು ಬರೆದಿದ್ದಾರೆ)

3) ಏರೋಸ್ಪೇಸ್ ಕಂಪನಿಯಾದ ಪಿಕ್ಸಲ್(Pixxel) ತಯಾರಿಸಿದ ಶಕುಂತಲಾ ಎಂಬ ಹೆಸರಿನ ಉಪಗ್ರಹ ಅಮೆರಿಕದಿಂದ ನಭಕ್ಕೆ ಉಡಾಯಿಸಲಾಯಿತು. ಈ ಕಂಪನಿಯನ್ನು ಆರಂಭಿಸಿದ ಕನ್ನಡಿಗ ಯಾರು?

ಎ) ಡಾ. ಸುನಿಲ್ ಗಾಂವ್ಕರ್

ಬಿ) ರಮೇಶ ಪಂಡಿತ್

ಸಿ) ಅವೇಜ್ ಅಹಮದ್ (Awais Ahmed)

ಡಿ) ಮೇಲಿನ ಯಾರೂ ಅಲ್ಲ

ಉತ್ತರ: ಸಿ

4) ಕ್ರಿಮಿನಲ್ ಪ್ರೊಸಿಜರ್ (ಐಡೆಂಟಿಫಿಕೇಷನ್) ಬಿಲ್-2022ನಲ್ಲಿ (Criminal Procedure (Identification) Bill-2022) ಇರುವ ಅಂಶವನ್ನು ಗಮನಿಸಿ. ಯಾವ ಅಂಶ ಸರಿ ಇದೆ ಎನ್ನುವುದನ್ನು ಗುರುತಿಸಿ.

ಎ) ಆರೋಪಿತ ಅಪರಾಧಿಯ ಅಪರಾಧ ಸಾಬೀತು ಆಗದಿದ್ದರೆ ಅವರಿಂದ ಪಡೆದ ಫಿಂಗರ್ ಪ್ರಿಂಟ್ ಹಾಗೂ ಫೂಟ್ ಪ್ರಿಂಟ್ ಮೊದಲಾದ ದೈಹಿಕ ಮಾದರಿಗಳ ಸಂಗ್ರಹವನ್ನು ನಾಶ ಮಾಡಲಾಗುವುದು.

ಬಿ) ಸಬ್-ಇನ್‌ಸ್ಪೆಕ್ಟರ್ ಮತ್ತು ಮೇಲಿನ ಅಧಿಕಾರಿಗಳು ಮಾತ್ರ ಆರೋಪಿಯ ದೈಹಿಕ ಮಾದರಿಗಳ ಸಂಗ್ರಹಕ್ಕೆ ಅವಕಾಶ ನೀಡಲಾಗಿದೆ

ಸಿ) ಆರೋಪಿತ ಅಪರಾಧಿಯ ದೈಹಿಕ ಮಾದರಿಗಳನ್ನು 75 ವರ್ಷಗಳ ಕಾಲ ಸಂರಕ್ಷಿಸಿಡಲು ಅವಕಾಶಗಳಿವೆ.

ಡಿ) ಕೈದಿಗಳ ಗುರುತು ಪತ್ತೆ ಕಾಯ್ದೆ-1920ಯು ಈ ಕಾಯ್ದೆಯ ಜೊತೆ ಜೊತೆಗೆ ಮುನ್ನಡೆಯಲಿದೆ.

ಉತ್ತರ: ಸಿ

5) ನಮ್ಮ ರಾಜ್ಯದ ಮೊದಲ ರಾಷ್ಟ್ರೀಯ ಆಯುಷ್ ಕ್ರೀಡಾ ಔಷಧ ಕೇಂದ್ರ (ಆಯುಷ್ ಸ್ಪೋರ್ಟ್ಸ್ ಮೆಡಿಸಿನ್ ಸೆಂಟರ್) ಎಲ್ಲಿ ಆರಂಭವಾಗಲಿದೆ?

ಎ) ಬೆಂಗಳೂರು ಬಿ) ಮಂಗಳೂರು

ಸಿ) ಮಂಡ್ಯ ಡಿ) ವಿಜಯಪುರ

ಉತ್ತರ: ಬಿ

6) ಈ ಕೆಳಗಿನ ಯಾವುದು ವಿಶ್ವದ ಮೊದಲ ವಿದ್ಯುತ್ ಚಾಲಿತ ಸರಕು ಸಾಗಣೆ ಹಡಗು ಆಗಿದೆ?

ಎ) ಯಾಂಗ್ಟ್ಸಿ ರಿವರ್ ತ್ರೀ ಗಾರ್ಜಸ್

ಬಿ) ವಿಕ್ರಮ್ ಸಾಗರ್

ಸಿ) ಧೂದ್ ಸಾಗರ್

ಡಿ) ಯಾರಾ ಬಿರ್ಕೆಲ್ಯಾಂಡ್

ಉತ್ತರ: ಡಿ

6) ಪೊಲೀಸ್ ಇಲಾಖೆಗೆ ಸಂಬಂಧಿಸಿದಂತೆ ಟಿ. ಎಂ.ವಿಜಯ ಭಾಸ್ಕರ್ ನೇತೃತ್ವದ ಆಡಳಿತ ಸುಧಾರಣಾ ಆಯೋಗ ನೀಡಿರುವ ವರದಿಯಲ್ಲಿರುವ ಯಾವ ಅಂಶವನ್ನು ತಪ್ಪಾಗಿ ನೀಡಲಾಗಿದೆ?

ಎ) ಪೊಲೀಸ್ ಕಾಯ್ದೆಯಡಿ ಸೂಚಿಸಲಾದ ದಂಡದ ಮೊತ್ತವನ್ನು ಪರಿಷ್ಕರಿಸಬೇಕು.

ಬಿ) ಸೈಬರ್ ಅಪರಾಧ ಭೇದಿಸಲು ಠಾಣೆಗೆ ಒಬ್ಬರು ಅಥವಾ ಇಬ್ಬರನ್ನು ಎಂಸಿಎ/ ಬಿಸಿಎ/ ಡಿಪ್ಲಮಾ ಪದವೀಧರರನ್ನು ಹೊರಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಬೇಕು

ಸಿ) ಪ್ರತಿ ಕಂದಾಯ ಜಿಲ್ಲೆಯಲ್ಲಿ ಮಿನಿವಿಧಿ ವಿಜ್ಞಾನ ಪ್ರಯೋಗಾಲಯ ಸ್ಥಾಪಿಸಬೇಕು

ಡಿ) ಲಾಕಪ್ ಕೈದಿಗಳಿಗೆ ದಿನಕ್ಕೆ ಎರಡೂ ಊಟದ ಜತೆಗೆ ಬೆಳಿಗ್ಗೆ ಮತ್ತು ಸಂಜೆ ತಿಂಡಿ, ಚಹಾ/ಕಾಫಿ ಹಾಗೂ ವಾರಕ್ಕೊಮ್ಮೆ ವಿಶೇಷ ಹಬ್ಬದೂಟವನ್ನು ನೀಡಬೇಕು.

ಉತ್ತರ: ಡಿ

7) ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) ಸರ್ಬಿಯಾ ದೇಶದ ಅಧ್ಯಕ್ಷರಾಗಿ ಅಲೆಕ್ಸಾಂಡರ್ ವುಸಿಕ್ ಆಯ್ಕೆಯಾಗಿದ್ದಾರೆ

2) ಹಂಗೇರಿ ದೇಶದ ಅಧ್ಯಕ್ಷರಾಗಿ ನಾಲ್ಕನೇ ಬಾರಿಗೆ ವಿಕ್ಟರ್ ಓರ್ಬನ್ ಆಯ್ಕೆಯಾಗಿದ್ದಾರೆ.

ಉತ್ತರ ಸಂಕೇತಗಳು

ಎ) ಹೇಳಿಕೆ 1 ಮಾತ್ರ ಸರಿಯಾಗಿದೆ

ಬಿ) ಹೇಳಿಕೆ 2 ಮಾತ್ರ ಸರಿಯಾಗಿದೆ

ಸಿ) ಎರಡೂ ಹೇಳಿಕೆಗಳು ತಪ್ಪಾಗಿವೆ .

ಡಿ) ಎರಡೂ ಹೇಳಿಕೆಗಳು ಸರಿಯಾಗಿವೆ

ಉತ್ತರ: ಡಿ

8) ಭಾರತದ ರಫ್ತು ಸರ್ವಕಾಲಿಕ ದಾಖಲೆಯನ್ನು ಬರೆದಿದ್ದು 417.8 ಬಿಲಿಯನ್ ಅಮೆರಿಕನ್ ಡಾಲರ್ ಮುಟ್ಟಿದೆ. ಹಾಗಾದರೆ ಯಾವೆಲ್ಲಾ ದೇಶಗಳಿಗೆ ಭಾರತ ಅತಿಹೆಚ್ಚು ರಫ್ತು ಮಾಡುತ್ತಿದೆ?

ಎ) ಅಮೆರಿಕ, ಸರ್ಬಿಯಾ, ಚೀನಾ, ಬಾಂಗ್ಲಾದೇಶ, ಯುಎಇ,

ಬಿ) ಹಂಗೇರಿ ಅಮೆರಿಕ, ನೆದರ್ಲೆಂಡ್ಸ್, ಬಾಂಗ್ಲಾದೇಶ, ಯುಎಇ

ಸಿ) ಅಮೆರಿಕ, ಯುಎಇ, ಚೀನಾ, ಬಾಂಗ್ಲಾದೇಶ, ನೆದರ್ಲೆಂಡ್ಸ್

ಡಿ) ಅಮೆರಿಕ, ಚೀನ, ನೇಪಾಳ, ಜಪಾನ್ ಮತ್ತು ಶ್ರೀಲಂಕ

ಉತ್ತರ:ಸಿ

9) ಇತ್ತೀಚೆಗೆ ನೇಪಾಳದ ಪ್ರಧಾನಿ ಶೇರ್ ಬಹದ್ದೂರ್ ದೇವಬಾ ಭಾರತಕ್ಕೆ ಬಂದ ಸಂದರ್ಭದಲ್ಲಿ ನೇಪಾಳದಲ್ಲಿ ಭಾರತದ ರುಪೆ ಕಾರ್ಡ್ ಬಳಸಲು ಅನುವಾಗುವ ಸೇವೆಗೆ ಚಾಲನೆ ನೀಡಿದರು. ಈ ಕೆಳಗಿನ ಯಾವೆಲ್ಲಾ ದೇಶಗಳಲ್ಲಿ ರುಪೆ ಕಾರ್ಡ್ ಬಳಸಲು ಮಾನ್ಯತೆ ನೀಡಿವೆ?

ಎ) ಭೂತಾನ್, ಸಿಂಗಪುರ, ಯುಎಇ

ಬಿ) ಶ್ರೀಲಂಕಾ, ಅಮೆರಿಕ, ರಷ್ಯಾ

ಸಿ) ಥಾಯ್ಲೆಂಡ್, ಭೂತಾನ್, ಜಪಾನ್

ಡಿ) ಮಲೇಷ್ಯಾ, ಜಪಾನ್, ಸಿಂಗಪುರ

ಉತ್ತರ: ಎ

(ಮಾಹಿತಿ: Spardha Bharati UPSC ಯೂಟ್ಯೂಬ್ ಚಾನೆಲ್)

ಲೇಖನಕ್ಕೆ ಸಂಬಂಧಿಸಿ ಇನ್ನಷ್ಟು ವಿವರಗಳಿಗೆ prajavani.net ನೋಡಿ

❦ ಸುಭಾಷಿತ ❦
ಹಲವರ ಮಾತುಗಳನ್ನು ಕೇಳಿಸಿಕೊಳ್ಳಿ, ಕೆಲವರ ಜೊತೆಗಷ್ಟೇ ಮಾತನಾಡಿ.
–ವಿಲಿಯಂ ಷೇಕ್ಸ್‌ಪಿಯರ್

ನೈತಿಕ ಶಿಕ್ಷಣದ ತುರ್ತು ಅಗತ್ಯ ಮಕ್ಕಳಿಗಲ್ಲ, ರಾಜಕಾರಣಿಗಳಿಗೆ

ಧಾರ್ಮಿಕ ಅಂಶಗಳನ್ನು ಒಳಗೊಂಡ ನೀತಿ ಪಾಠಗಳನ್ನು ಶಾಲೆಗಳಲ್ಲಿ ಬೋಧಿಸಲು ಮುಂದಾಗಿರುವ ರಾಜ್ಯ ಸರ್ಕಾರದ ನಡೆ ಗೊಂದಲದಿಂದ ಕೂಡಿರುವಂತಹದ್ದು ಹಾಗೂ ಮಕ್ಕಳ ನಡುವೆ ಧಾರ್ಮಿಕವಾಗಿ ಪ್ರತ್ಯೇಕತೆಯ ಭಾವನೆ ಬೆಳೆಯಲು ಅವಕಾಶ ಕಲ್ಪಿಸುವಂತಹದ್ದು. ಶಾಲೆಗಳಲ್ಲಿ ಶೇಕಡ 90ರಷ್ಟು ವಿದ್ಯಾರ್ಥಿಗಳು ಯಾವ ಧರ್ಮಕ್ಕೆ ಸೇರಿರುವರೋ ಆ ಧರ್ಮದ ಅಂಶಗಳನ್ನು ಒಳಗೊಂಡ ಪಾಠವನ್ನು ಮುಂದಿನ ವರ್ಷದಿಂದ ಬೋಧಿಸಲಾಗುವುದು ಎನ್ನುವ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರ ಮಾತು, ಸರ್ಕಾರಿ ಶಾಲೆಗಳ ಬಹುತ್ವದ ಸ್ವರೂಪಕ್ಕೆ ವಿರುದ್ಧವಾಗಿದೆ. ಮಕ್ಕಳಲ್ಲಿ ವಿಶ್ವಮಾನವ ಪ್ರಜ್ಞೆ ಬೆಳೆಸುವ ಸಾಧ್ಯತೆಯ ಪ್ರಯೋಗಶಾಲೆಯಂತಿರುವ ಸರ್ಕಾರಿ ಶಾಲೆಗಳನ್ನು ಧರ್ಮದ ಗರಡಿಮನೆಗಳಾಗಿಸುವ ಪ್ರಯತ್ನಗಳು ಕೆಲವು ತಿಂಗಳಿಂದ ರಾಜ್ಯದಲ್ಲಿ ಹೆಚ್ಚುತ್ತಿದ್ದು, ಆ ಅನಪೇಕ್ಷಿತ ಘಟನೆಗಳ ಮುಂದುವರಿಕೆಯಂತೆ ಧಾರ್ಮಿಕ ಅಂಶಗಳನ್ನು ಒಳಗೊಂಡ ನೀತಿಪಾಠ ಬೋಧಿಸುವ ಪ್ರಯತ್ನವನ್ನು ಗುರುತಿಸಬಹುದು. ಅರಿವು ಹಾಗೂ ಆತ್ಮವಿಶ್ವಾಸವನ್ನು ಮೂಡಿಸುವುದರ ಜೊತೆಗೆ ಸಮಾಜದ ವಿವಿಧ ವರ್ಗಗಳ ಮಕ್ಕಳು ಶಾಲೆಯ ವಾತಾವರಣದಲ್ಲಿ ತಮ್ಮ ವ್ಯಕ್ತಿತ್ವ ರೂಪಿಸಿಕೊಳ್ಳು- ವುದಕ್ಕೆ ಸರ್ಕಾರಿ ಶಾಲೆಗಳಿಗಿಂತ ಅತ್ಯುತ್ತಮ ವೇದಿಕೆ ಬೇರೊಂದಿಲ್ಲ. ವಿದ್ಯಾರ್ಥಿಗಳಲ್ಲಿ ಬಹುಸಂಖ್ಯಾತರನ್ನು ಗುರುತಿಸಿ, ಅವರ ಧರ್ಮದ ಸಂಗತಿಗಳನ್ನು ನೀತಿ ಪಾಠದಲ್ಲಿ ಅಳವಡಿಸುವುದರಿಂದ ಶಾಲೆಗಳ ಜಾತ್ಯತೀತ ಸ್ವರೂಪವನ್ನೇ ದುರ್ಬಲಗೊಳಿಸಿದಂತಾಗುತ್ತದೆ. ಇಂಥ ಪ್ರಯತ್ನಗಳು ಅಲ್ಪಸಂಖ್ಯಾತ ವಿದ್ಯಾರ್ಥಿಗಳ ಮನಸ್ಸಿನ ಮೇಲೆ ಉಂಟುಮಾಡಬಹುದಾದ ಸೂಕ್ಷ್ಮ ಪರಿಣಾಮಗಳನ್ನು ಸರ್ಕಾರ ಅಲಕ್ಷಿಸಿದಂತಿದೆ. ಮಾದರಿ ಶಿಕ್ಷಣ ವ್ಯವಸ್ಥೆಯಲ್ಲಿ ಅಲ್ಪಸಂಖ್ಯಾತರು ಮತ್ತು ಬಹುಸಂಖ್ಯಾತರು ಎನ್ನುವ ಭಾವನೆ ಮಕ್ಕಳಲ್ಲಿ ಉಂಟಾಗಬಾರದು. ಆದರೆ, ವಿದ್ಯಾರ್ಥಿ ಸಮೂಹವನ್ನು ಒಡೆದು ಬೋಧಿಸುವುದೇ ಈಗಿನ ಸರ್ಕಾರದ ಶಿಕ್ಷಣನೀತಿ ಇದ್ದಂತಿದೆ. ಹಿಜಾಬ್ ಮತ್ತು ಕೇಸರಿಶಾಲು ವಿವಾದದಲ್ಲಿ ಶಾಲೆಗಳಲ್ಲಿ ಯಾವುದೇ ಧರ್ಮದ ಆಚರಣೆಗೆ ಅವಕಾಶ ಕೊಡುವುದಿಲ್ಲ ಎಂದು ಮತ್ತೆ ಮತ್ತೆ ಹೇಳಿದ್ದ ಸರ್ಕಾರ, ಈಗ ಧಾರ್ಮಿಕ ಅಂಶಗಳ ಬೋಧನೆ ವಿಷಯದಲ್ಲಿ ತನ್ನ ಮಾತಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿದೆ. 'ಯಾವ ಧರ್ಮದ ಮಕ್ಕಳು ನಮ್ಮ ಶಾಲೆಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೋ ಅವರು ಕೇಳುವ ವಿಚಾರಗಳನ್ನು ಅಳವಡಿಸುತ್ತೇವೆ' ಎನ್ನುವ ಶಿಕ್ಷಣ ಸಚಿವರ ಮಾತು ಶಿಕ್ಷಣ ಕ್ಷೇತ್ರಕ್ಕೆ ಹೊಂದುವಂತಹದ್ದಲ್ಲ. ಬೇಡಿಕೆಗೆ ತಕ್ಕಂತೆ ಉತ್ಪನ್ನಗಳನ್ನು ಒದಗಿಸುವ ಮನೋಧರ್ಮ ವ್ಯಾಪಾರದಲ್ಲಿ ಸರಿಹೋಗಬಹುದೇ ವಿನಾ ಶಾಲೆಗಳಲ್ಲಿ ಅಲ್ಲ.

ತನ್ನ ನೈತಿಕ ಮಟ್ಟವನ್ನು ಸುಧಾರಿಸಿಕೊಳ್ಳುವ ಗೋಜಿಗೇ ಹೋಗದ ಸರ್ಕಾರ, ಶಾಲಾ ಮಕ್ಕಳಿಗೆ ನೈತಿಕತೆಯ ಪಾಠ ಮಾಡಲು ಹೊರಟಿರುವುದು ವಿಕಟ ವಿನೋದದಂತೆ ಕಾಣಿಸುತ್ತದೆ

ಜ್ಞಾನದ ಜೊತೆಗೆ ಉತ್ತಮ ಸಂಸ್ಕಾರವನ್ನು ನೀಡುವ ಉದ್ದೇಶದಿಂದ ಪಠ್ಯದಲ್ಲಿ ಭಗವದ್ಗೀತೆಯ ಅಂಶಗಳನ್ನು ಅಳವಡಿಸುವುದಾಗಿ ಶಿಕ್ಷಣ ಸಚಿವರು ಇತ್ತೀಚೆಗಷ್ಟೇ ಹೇಳಿದ್ದರು. ಆ ಮಾತನ್ನೀಗ ವಿಸ್ತರಿಸಿದಂತಿರುವ ಅವರು, ಧರ್ಮಗಳ ಉತ್ತಮ ಅಂಶಗಳನ್ನು ನೀತಿಶಿಕ್ಷಣದ ರೂಪದಲ್ಲಿ ಮಕ್ಕಳಿಗೆ ಪರಿಚಯಿಸುವುದಾಗಿ ಹೇಳಿದ್ದಾರೆ. ಮಕ್ಕಳಲ್ಲಿ ನೈತಿಕಶಕ್ತಿಯನ್ನು ಬೆಳೆಸಬೇಕು ಎನ್ನುವುದು ಒಪ್ಪತಕ್ಕ ಮಾತು. ಸಮಸ್ಯೆ ಇರುವುದು ನೈತಿಕಪ್ರಜ್ಞೆಯನ್ನು ಮೂಡಿಸಲು ಸರ್ಕಾರ ಆರಿಸಿಕೊಂಡಿರುವ ಮಾರ್ಗದಲ್ಲಿ. ಧರ್ಮ ಮತ್ತು ರಾಜಕಾರಣದ ನಡುವಣ ಗೆರೆ ಕ್ಷೀಣಿಸಿಹೋಗಿರುವುದರ ರೂಪವಾಗಿ ವರ್ತಮಾನದ ಬಹುತೇಕ ಬಿಕ್ಕಟ್ಟುಗಳನ್ನು ನೋಡಬಹುದಾಗಿದೆ. ಧರ್ಮದ ನೈತಿಕಶಕ್ತಿಯನ್ನು ಲಾಭಬಡುಕ ರಾಜಕಾರಣ ಆಪೋಶನ ತೆಗೆದುಕೊಂಡಿರುವ ಸನ್ನಿವೇಶದಲ್ಲಿ, ಧರ್ಮಗ್ರಂಥಗಳಿಗೆ ನೈತಿಕಪ್ರಜ್ಞೆಯನ್ನು ಆರೋಪಿಸುವುದು ಕೂಡ ಒಂದು ರಾಜಕೀಯ ತಂತ್ರವೇ ಆಗಿದೆ. ಸಮಾನ ಶಿಕ್ಷಣಕ್ಕೆ ಅವಕಾಶವಿಲ್ಲದ ವ್ಯವಸ್ಥೆಯಲ್ಲಿ ಮೌಲ್ಯಾಧಾರಿತ ಶಿಕ್ಷಣದ ಬಗ್ಗೆ ಮಾತನಾಡುವುದು ಆತ್ಮವಂಚನೆಯೇ ಸರಿ. ಶಿಕ್ಷಣ ಕ್ಷೇತ್ರದಲ್ಲಿನ ಮೂಲಭೂತ ಹುಳುಕುಗಳನ್ನು ಸರಿಪಡಿಸುವ ಗೋಜಿಗೇ ಹೋಗದೆ ನೈತಿಕ ಶಿಕ್ಷಣದ ಬಗ್ಗೆ ಮಾತನಾಡುವುದಾದರೆ, ಆ ಮಾತುಗಳಲ್ಲಿ ರಾಜಕೀಯ ಉದ್ದೇಶಗಳಿರಬಹುದೇ ಹೊರತು ಮಕ್ಕಳ ಬಗೆಗಿನ ಕಾಳಜಿ ಇರುತ್ತದೆಂದು ಭಾವಿಸಲಾಗದು. ಅಲ್ಲದೆ, ಕರ್ನಾಟಕದಲ್ಲಿ ಸದ್ಯಕ್ಕೆ ನೈತಿಕ ಶಿಕ್ಷಣದ ಅಗತ್ಯ ಇರುವುದು ಮಕ್ಕಳಿಗಿಂತ ಹೆಚ್ಚಾಗಿ ರಾಜಕಾರಣಿಗಳಿಗೆ. ಸರ್ಕಾರಿ ಕಾಮಗಾರಿಗಳ ಗುತ್ತಿಗೆ ಪಡೆಯಲು ಶೇ 40ರಷ್ಟು ಲಂಚ ನೀಡಬೇಕಾಗಿದೆ ಎಂದು ಗುತ್ತಿಗೆದಾರರ ಸಂಘ ಆರೋಪಿಸಿದೆ. ಮಠಕ್ಕೆ ಘೋಷಿತ ಅನುದಾನ ಪಡೆಯಲು ಕಮಿಷನ್ ನೀಡಬೇಕಾಗಿದೆ ಎಂದು ಸ್ವಾಮೀಜಿಯೊಬ್ಬರು ಹೇಳಿದ್ದಾರೆ. ಗುತ್ತಿಗೆದಾರರೊಬ್ಬರ ಆತ್ಮಹತ್ಯೆ ಪ್ರಕರಣದಲ್ಲಿ ಸಚಿವರೊಬ್ಬರು ರಾಜೀನಾಮೆ ನೀಡಿದ್ದಾರೆ. ಲೈಂಗಿಕ ಹಗರಣದ ಆರೋಪದಲ್ಲಿ ಮತ್ತೊಬ್ಬರು ಸಚಿವ ಸಂಪುಟದಿಂದ ದೂರ ಉಳಿಯುವಂತಾಗಿದೆ. ಪಿಎಸ್‌ಐ ಸೇರಿದಂತೆ ಸರ್ಕಾರಿ ಹುದ್ದೆಗಳ ನೇಮಕಾತಿಗಳಲ್ಲಿ ಅಕ್ರಮಗಳು ನಡೆದ ಆರೋಪ ಇದೆ. ಹೀಗೆ ಹಲವು ರೂಪದಲ್ಲಿ ಸರ್ಕಾರದ ನೈತಿಕತೆಯೇ ಪ್ರಶ್ನಾರ್ಹವಾಗಿದೆ. ತನ್ನ ನೈತಿಕ ಮಟ್ಟವನ್ನು ಸುಧಾರಿಸಿಕೊಳ್ಳುವ ಗೋಜಿಗೇ ಹೋಗದ ಸರ್ಕಾರ, ಶಾಲಾ ಮಕ್ಕಳಿಗೆ ನೈತಿಕತೆಯ ಪಾಠ ಮಾಡಲು ಹೊರಟಿರುವುದು ವಿಕಟ ವಿನೋದದಂತೆ ಕಾಣಿಸುತ್ತದೆ.

ದಿನದ ಟ್ವೀಟ್

ಬೋಧಕರ ಸಂದಿಗ್ಧ

ಈ ಕುರಿತು ನಾನು ಟ್ವೀಟ್ ಮಾಡಬೇಕಿತ್ತು. ಈಗಿನ ತಲೆಮಾರಿಗೆ ಏನಾಗಿದೆ? ಶಿಕ್ಷಕರು ಪಾಠ ಮಾಡುತ್ತಿರುತ್ತಾರೆ ಮತ್ತು ವಿದ್ಯಾರ್ಥಿಗಳು ತಮ್ಮ ತಮ್ಮಲ್ಲೇ ಮಾತನಾಡಿಕೊಳ್ಳುತ್ತಿರುತ್ತಾರೆ... ಅದು ಪಿಸುಮಾತೂ ಅಲ್ಲ, ಜೋರಾಗಿಯೇ... ಒಂದೆರಡು ನಿಮಿಷಗಳೂ ಅಲ್ಲ, 5– 10 ನಿಮಿಷಗಳ ಕಾಲ ಹೀಗೇ ಮುಂದುವರಿಯುತ್ತದೆ. ಇದಕ್ಕೆ ಯಾರಾದರೂ ಹೇಗೆ ಪ್ರತಿಕ್ರಿಯಿಸುವುದು? ಆನ್‌ಲೈನ್ ಯುಗ ಕೊನೆಗೊಂಡ ನಂತರ ಆಫ್‌ಲೈನ್ ಬೋಧನೆ ಎದುರಿಸುತ್ತಿರುವ ಅಪಾಯಕಾರಿ ಸ್ಥಿತಿ ಇದು.

ಶಿಲ್ಪಿ ಶರ್ಮಾ, ಸಹಾಯಕ ಪ್ರಾಧ್ಯಾಪಕಿ

ಕಿಡಿನುಡಿ

ಬಿಬಿಎಂಪಿ ಮತ್ತು ಬಿಡಿಎ ನಮಗೆ ನೀಡಿರುವ ಮೂಲಸೌಕರ್ಯ ಅತ್ಯಂತ ಕೆಟ್ಟದಾಗಿದೆ. ಈ ಎರಡನ್ನೂ ವಿಸರ್ಜಿಸಲು ಅಥವಾ ಖಾಸಗೀಕರಣಗೊಳಿಸಲು ಇದು ತಕ್ಕ ಸಮಯ.

ಪ್ರಥಮ್, ಬರಹಗಾರ

25 ವರ್ಷಗಳ ಹಿಂದೆ

ಸೋಮವಾರ, 21-4-1997

● **ಪ್ರಧಾನಿಯಾಗಿ ಗುಜ್ರಾಲ್ ಇಂದು ಪ್ರಮಾಣ**

ನವದೆಹಲಿ, ಏ. 20– ನೂತನ ಪ್ರಧಾನ ಮಂತ್ರಿಯಾಗಿ ಅಧಿಕಾರ ಸ್ವೀಕಾರ ಮಾಡಲು ರಾಷ್ಟ್ರಪತಿ ಅವರು ಇಂದ್ರಕುಮಾರ್ ಗುಜ್ರಾಲ್ ಅವರನ್ನು ಇಂದು ರಾತ್ರಿ ಆಮಂತ್ರಿಸಿದರು. ಗುಜ್ರಾಲ್ ಅವರು ಹನ್ನೆರಡನೇ ಪ್ರಧಾನಿಯಾಗಿ ನಾಳೆ ಬೆಳಿಗ್ಗೆ ಹತ್ತು ಗಂಟೆಗೆ ರಾಷ್ಟ್ರಪತಿ ಭವನದ ಅಶೋಕಾ ಹಾಲ್‌ನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಲಿದ್ದಾರೆ.

ಪ್ರಧಾನಿ ನೇತೃತ್ವದಲ್ಲಿ ಸಂಯುಕ್ತ ರಂಗ ಮತ್ತು ಕಾಂಗ್ರೆಸ್ ಸಂಸದೀಯ ಸಂಯೋಜಕ ಸಮಿತಿಯೊಂದನ್ನು ರಚಿಸಿಕೊಳ್ಳುವ ಬಗ್ಗೆ ಉಭಯ ಪಕ್ಷಗಳು ನೀಡಿದ ಭರವಸೆಯನ್ನು ಪರಿಶೀಲಿಸಿದ ಮೇಲೆ ರಾಷ್ಟ್ರಪತಿ ಡಾ. ಶಂಕರ ದಯಾಳ್ ಶರ್ಮಾ ಅವರು ರಾತ್ರಿ 8.30ಕ್ಕೆ ಗುಜ್ರಾಲ್ ಅವರನ್ನು ಕರೆಸಿಕೊಂಡು ಸರ್ಕಾರ ರಚನೆಗೆ ಅಧಿಕೃತ ಆಮಂತ್ರಣ ನೀಡಿದರು.

ನಾಳೆಯಿಂದ ನೂತನ ನಾಯಕನ ನೇತೃತ್ವದಲ್ಲಿ ಮತ್ತೆ ಕಾಂಗ್ರೆಸ್ ಬೆಂಬಲದಿಂದ ಸಂಯುಕ್ತ ರಂಗದ ಸರ್ಕಾರ ಬರುವುದರಿಂದ ಹತ್ತೂವರೆ ತಿಂಗಳ ಎಚ್.ಡಿ.ದೇವೇಗೌಡ ನೇತೃತ್ವದ ಸರ್ಕಾರ ಅಂತ್ಯವಾಗಲಿದೆ. ಆದರೆ ಅವರ ನಾಯಕತ್ವ ಬದಲಾದರೂ ಅವರ ಸಂಪುಟದಲ್ಲಿದ್ದ ಬಹುತೇಕ ಮಂದಿಯು ಹೊಸ ಸರ್ಕಾರದಲ್ಲೂ ಮುಂದುವರಿಯುವುದು ಬಹುತೇಕ ಖಚಿತ.

50 ವರ್ಷಗಳ ಹಿಂದೆ

ಶುಕ್ರವಾರ, 21-4-1972

● **ಗೇಣಿದಾರರ ರಕ್ಷಣಾ ಮಸೂದೆಗೆ ತ್ರಿಶಂಕು ಸ್ಥಿತಿ**

ಬೆಂಗಳೂರು, ಏ. 20– ವಿಧಾನಸಭೆ ಮಂಜೂರು ಮಾಡಿದ ಗೇಣಿದಾರರ ರಕ್ಷಣಾ ವಿಧೇಯಕವು, ಇಂದು ವಿರೋಧಪಕ್ಷ ಬಹುಮತದಲ್ಲಿರುವ ವಿಧಾನಪರಿಷತ್ತಿನಲ್ಲಿ ತಿದ್ದುಪಡಿಗೊಳಗಾಗಿ ಸರ್ಕಾರದಿಂದಲೇ ಕೈ ಬಿಡಲ್ಪಟ್ಟ ಅಪೂರ್ವ ಪ್ರಸಂಗ ನಡೆಯಿತು.

ಎರಡು ವರ್ಷಗಳ ಗೇಣಿ ಬಾಕಿ ತೀರಿಸಿದರೆ, ಅಂಥ ಗೇಣಿದಾರರನ್ನು ಒಕ್ಕಲೆಬ್ಬಿಸುವುದರಿಂದ ರಕ್ಷಿಸುವುದು ವಿಧೇಯಕದಲ್ಲಿ ಸರ್ಕಾರ ಉದ್ದೇಶಿಸಿದ ಗುರಿ. ಇದರ ಬದಲಾಗಿ ವಿರೋಧಪಕ್ಷವು ಭೂಸುಧಾರಣೆಯ ಸಮಗ್ರ ಶಾಸನ ಜಾರಿಗೆ ಬರುವವರೆಗೆ ಗೇಣಿದಾರರಿಗೆ ಒಕ್ಕಲೆಬ್ಬಿಸುವುದರಿಂದ ರಕ್ಷಣೆಯಿರಬೇಕೆಂಬ ಉದ್ದೇಶದಿಂದ ತಿದ್ದುಪಡಿಯೊಂದನ್ನು ಸೂಚಿಸಿತು. ಹದಿಮೂರಕ್ಕೆ ಇಪ್ಪತ್ತಮೂರರ ಬಹುಮತದಿಂದ ತಿದ್ದುಪಡಿಯು ಅಂಗೀಕಾರ ಪಡೆದ ನಂತರ ವಿಧೇಯಕವನ್ನು ಅಂತಿಮ ಮಂಜೂರಾತಿಗೆ ಸದ್ಯದಲ್ಲಿ ಮಂಡಿಸಲು ಕಂದಾಯ ಮಂತ್ರಿ ಎನ್. ಹುಚ್ಚಮಾಸ್ತಿಗೌಡ ಅವರು ಇಷ್ಟಪಡಲಿಲ್ಲ.

ಶ್ರೀಗಂಧದ ಮರ ಬೆಳೆಸಲು ಈಗಿಲ್ಲ ಅಡೆತಡೆ • ಮರಳಲಿದೆಯೇ ಶ್ರೀಗಂಧದ ನಾಡೆಂಬ ಮೆರುಗು?

ಕೃಷಿ ಭೂಮಿಯಲ್ಲಿ ಗಂಧದ ಘಮ

ವಿಶ್ಲೇಷಣೆ

ಎಚ್.ಜಿ. ಶಿವಾನಂದಮೂರ್ತಿ

ರಾಷ್ಟ್ರದಲ್ಲಿಯೇ ಅತಿ ಹೆಚ್ಚು ಶ್ರೀಗಂಧದ ಉತ್ಪಾದನೆಗೆ ಹೆಸರಾಗಿದ್ದ ಕರ್ನಾಟಕವನ್ನು ಶ್ರೀಗಂಧದ ನಾಡು, ಗಂಧದ ಬೀಡು ಎಂದೆಲ್ಲ ಕರೆಯಲಾಗುತ್ತದೆ. ಆದರೆ ಅನೇಕ ಕಾರಣಗಳಿಂದ ನಾಡಿನಲ್ಲಿ ಶ್ರೀಗಂಧದ ಉತ್ಪಾದನೆ ಕುಂಠಿತವಾಗಿದೆ. ಇದನ್ನು ಮನಗಂಡ ಸರ್ಕಾರವು ಕರ್ನಾಟಕ ಅರಣ್ಯ ಕಾಯ್ದೆ– 1963ಕ್ಕೆ 2001ರಲ್ಲಿ ತಿದ್ದುಪಡಿ ತಂದಿದೆ ಹಾಗೂ ಒಂದು ವರ್ಷದ ನಂತರ, ಶ್ರೀಗಂಧ ಕಟಾವಣೆ ಹಾಗೂ ಅದರ ವಿಲೇವಾರಿ ಸಂಬಂಧ 1969ರ ಕರ್ನಾಟಕ ಅರಣ್ಯ ನಿಯಮಗಳಿಗೂ ತಿದ್ದುಪಡಿ ತಂದಿದೆ.

ಇದರ ಪ್ರಕಾರ, ರೈತರು ತಮ್ಮ ಜಮೀನುಗಳಲ್ಲಿ ಬೆಳೆದಿರುವ ಶ್ರೀಗಂಧದ ಮರಗಳನ್ನು ಈ ಮೊದಲಿನಂತೆ ಅರಣ್ಯ ಇಲಾಖೆಯೊಂದಿಗೆ ಘೋಷಣೆ ಮಾಡಿಕೊಳ್ಳಬೇಕಾದ ಅಗತ್ಯವಿಲ್ಲ. ಒಂದುವೇಳೆ ಅವರ ಜಮೀನುಗಳಲ್ಲಿ ಶ್ರೀಗಂಧದ ಮರಗಳ ಕಳ್ಳತನವಾಗಿದ್ದಲ್ಲಿ ಅಥವಾ ಅವುಗಳಿಗೆ ಹಾನಿಯುಂಟಾಗಿದ್ದಲ್ಲಿ ಆ ಬಗ್ಗೆ ಅರಣ್ಯ ಇಲಾಖೆ ಅಥವಾ ಪೊಲೀಸ್ ಇಲಾಖೆಗೆ ದೂರು ನೀಡಬೇಕೆಂಬ ನಿಯಮವನ್ನು ಸಹ ತೆಗೆದುಹಾಕಲಾಗಿದೆ. ಶ್ರೀಗಂಧದ ಮರಗಳನ್ನು ಕಟಾವು ಮಾಡಲು ಈಗ ಅರಣ್ಯ ಇಲಾಖೆಯು ಕಾಲಮಿತಿಯೊಳಗೆ ಅನುಮತಿ ನೀಡಬೇಕಾಗುತ್ತದೆ. ಮರಗಳು ಮಳೆಗಾಳಿಗೆ ಸಿಲುಕಿದಾಗ, ಒಣಗಿ ಬಿದ್ದಾಗ, ಮರಗಳಿಂದ ಆಸ್ತಿಪಾಸ್ತಿಗೆ, ಪ್ರಾಣಕ್ಕೆ ಹಾನಿಯಾಗುವ ಸಂಭವವಿದ್ದಾಗ, ಕೃಷಿ ವಿಸ್ತರಣೆಗೆ ಅಡ್ಡಿಯಾಗುವ ಸಂದರ್ಭಗಳಲ್ಲಿ ಮರಗಳನ್ನು ತೆರವುಗೊಳಿಸುವ ಬೇಡಿಕೆಯನ್ನು ಅರಣ್ಯ ಇಲಾಖೆಯು ತಿರಸ್ಕರಿಸುವಂತಿಲ್ಲ. ಇಲ್ಲಿ ಶ್ರೀಗಂಧ ಬೆಳೆಯುವವರಿಗೆ ಮರಗಳನ್ನು ಮಾರಾಟ ಮಾಡಲು ಸ್ವಾತಂತ್ರ್ಯ ನೀಡಲಾಗಿದೆ. ಆದರೆ ಅರಣ್ಯ ಇಲಾಖೆಗೆ ಅಥವಾ ರಾಜ್ಯ ಸರ್ಕಾರಿ ಅಧೀನದ ಸಂಸ್ಥೆಗಳಿಗೆ ಅವುಗಳನ್ನು ಮಾರಾಟ ಮಾಡುವುದಕ್ಕೆ ಪೂರಕವಾಗಿ ಕಾಲಕ್ಕೆ ತಕ್ಕಂತೆ ಬೆಲೆಯನ್ನು ಘೋಷಣೆ ಮಾಡಲಾಗುತ್ತದೆ. ಡಿಪೊಗಳಲ್ಲಿ ಅದನ್ನು ಸ್ವೀಕರಿಸಿದ ಮೂರು ತಿಂಗಳೊಳಗಾಗಿ ಹಣ ಪಾವತಿಸಿ ರಸೀದಿ ನೀಡಬೇಕಾಗಿದೆ.

ಇಂತಹ ಕ್ರಮಗಳ ಮೂಲಕ ಸರ್ಕಾರವು ಶ್ರೀಗಂಧ ತೆರವು ಮತ್ತು ವಿಲೇವಾರಿಗೆ ಸಂಬಂಧಿಸಿದ ವಿಧಾನಗಳನ್ನು ಸುಗಮಗೊಳಿಸಿದೆ. ಇದು, ರೈತರು ಖಾಸಗಿ ಜಮೀನುಗಳಲ್ಲಿ ನಿರಾತಂಕವಾಗಿ ಶ್ರೀಗಂಧ ಬೆಳೆಯಲು ಪ್ರೋತ್ಸಾಹಿಸುವ ನಡೆಯಾಗಿದೆ.

ಈ ಮೊದಲು, ಶ್ರೀಗಂಧದ ಮರವನ್ನು ಎಲ್ಲೇ ಬೆಳೆದರೂ ಅದು ರಾಜ್ಯ ಸರ್ಕಾರದ ಸ್ವತ್ತಾಗಿತ್ತು. ಈಗ ಖಾಸಗಿ ಜಮೀನುಗಳಲ್ಲಿ ಬೆಳೆದ ರೈತರೇ ಅವುಗಳ ಮಾಲೀಕರೆಂದು ಘೋಷಣೆ ಮಾಡಲಾಗಿದೆ. ಇಂತಹ ಸರಳೀಕೃತ ವಿಧಾನಗಳ ಫಲಶ್ರುತಿಯಾಗಿ ರೈತರು ಹೆಚ್ಚಿನ ಪ್ರಮಾಣದಲ್ಲಿ ಶ್ರೀಗಂಧದ ಮರಗಳನ್ನು ರಾಜ್ಯದ ಉದ್ದಗಲಕ್ಕೂ ಬೆಳೆಸಲು ಪ್ರಾರಂಭಿಸಿದ್ದಾರೆ. ಇದೊಂದು ಆಶಾದಾಯಕ ಬೆಳವಣಿಗೆಯಾಗಿದ್ದು, ಶ್ರೀಗಂಧದ ನಾಡೆಂಬ ಮೆರುಗನ್ನು ರಾಜ್ಯಕ್ಕೆ ಮರಳಿ ತರಲು ನೆರವಾಗಲಿದೆ.

ಅರಣ್ಯ ಇಲಾಖೆಯಿಂದ ರೈತರಿಗೆ ಅತಿ ಕಡಿಮೆ ದರದಲ್ಲಿ ಶ್ರೀಗಂಧದ ಸಸಿಗಳನ್ನು ವಿತರಿಸುವುದಷ್ಟೇ ಅಲ್ಲ ಅದನ್ನು ಬೆಳೆಸಲು ಹಣಕಾಸಿನ ನೆರವನ್ನೂ ಕಲ್ಪಿಸಲಾಗಿದೆ.

ಶ್ರೀಗಂಧದ ಮರಗಳನ್ನು ಖಾಸಗಿ ಜಮೀನುಗಳಲ್ಲಿ ಬೆಳೆಸುವುದರಿಂದ ಅರಣ್ಯ ಪ್ರದೇಶಗಳು ಅಥವಾ ಸಾರ್ವಜನಿಕ ಭೂಮಿಯಲ್ಲಿ ಬೆಳೆಯುವುದಕ್ಕಿಂತ ಹೆಚ್ಚಿನ ಅನುಕೂಲವಾಗುತ್ತದೆ. ಏಕೆಂದರೆ, ಅಂತಹ ಸ್ಥಳಗಳಲ್ಲಿ ಪ್ರಾರಂಭಿಕ ಹಂತದಲ್ಲಿ ಗಿಡಗಳು ಕಾಳ್ಗಿಚ್ಚಿಗೆ ಆಹುತಿಯಾಗುವ ಅಥವಾ ಸಸ್ಯಾಹಾರಿ ಪ್ರಾಣಿಗಳು ತಿಂದು ಹಾಳು ಮಾಡುವ ಸಾಧ್ಯತೆ ಹೆಚ್ಚಾಗಿರುತ್ತದೆ. ಸಾರ್ವಜನಿಕ ಭೂಮಿಯಲ್ಲಿ ಅದರಲ್ಲೂ ಅರಣ್ಯ ಭೂಮಿಯಲ್ಲಿ ಹೆಚ್ಚಿನ ವಿಸ್ತಾರದಲ್ಲಿ ಬೆಳೆಸುವಾಗ ಅವುಗಳಿಗೆ ಹಾನಿಯಾಗದಂತೆ ನಿಭಾಯಿಸುವುದು ಸುಲಭದ ಕಾರ್ಯವೇನಲ್ಲ. ಈ ಕಾರಣಗಳಿಂದ ಶ್ರೀಗಂಧದ ಗಿಡಗಳು ಬಹಳಷ್ಟು ಸಂಖ್ಯೆಯಲ್ಲಿ ಕಡಿಮೆಯಾಗುತ್ತಾ ಬರುತ್ತವೆ. ಅದೇ ಖಾಸಗಿ ಭೂಮಿಯಲ್ಲಿ ಬೆಳೆಸಿದ ಮರಗಳಿಗೆ ಮಾಲೀಕರು ರಕ್ಷಣೆ ಒದಗಿಸುವುದರಿಂದ ಅವು ಸುರಕ್ಷಿತವಾಗಿ ಬೆಳೆಯಲು ಅನುವಾಗುತ್ತದೆ.

ಅರಣ್ಯ ಪ್ರದೇಶದಲ್ಲಿ ಹಬ್ಬುವ ಬಳ್ಳಿಗಳು ಅಥವಾ ಅಕ್ಕಪಕ್ಕದ ಮರಗಳ ಕೊಂಬೆಗಳು ಶ್ರೀಗಂಧದ ಗಿಡಗಳ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತವೆ. ಖಾಸಗಿ ಭೂಮಿಯಲ್ಲಿ ಬಳ್ಳಿಗಳಿಂದಾಗಲೀ ಅಕ್ಕಪಕ್ಕದ ಮರಗಳ ಕೊಂಬೆಗಳಿಂದಾಗಲೀ ಹಾನಿಯಾಗದಂತೆ ರೈತರು ನೋಡಿಕೊಳ್ಳುವುದರಿಂದ ಶ್ರೀಗಂಧದ ಸಸಿ ಉತ್ತಮವಾಗಿ ಬೆಳೆಯಲು ಸಾಧ್ಯವಾಗುತ್ತದೆ. ಇದರಿಂದ ಕೃಷಿ ಭೂಮಿಯಲ್ಲಿ ಅವುಗಳನ್ನು ಸುಮಾರು 15ರಿಂದ 20 ವರ್ಷಗಳಲ್ಲಿ ಕಟಾವು ಮಾಡಬಹುದು. ಆದರೆ ಅರಣ್ಯ ಪ್ರದೇಶದಲ್ಲಿ ಬೆಳೆಯುವ ಮರಗಳ ಕಟಾವಣೆಗೆ 25ರಿಂದ 30 ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ವರ್ಷಗಳೇ ಬೇಕಾಗುತ್ತದೆ.

ಆದರೆ ಶ್ರೀಗಂಧದ ಮರಗಳು ಬೆಳೆಯತೊಡಗಿದಂತೆ ರೈತರು ತೀವ್ರತರನಾದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ಮರಕ್ಕಿರುವ ಹೆಚ್ಚಿನ ಬೆಲೆಯ ಕಾರಣದಿಂದ ಕಳ್ಳರು ಅವುಗಳನ್ನು ಕಡಿದುಕೊಂಡು ಹೋಗುವುದು ಅಥವಾ ಅಕ್ರಮವಾಗಿ ಸಾಗಣೆ ಮಾಡುವುದು ಹೆಚ್ಚುತ್ತಿದೆ. ಖಾಸಗಿ ಭೂಮಿಯಲ್ಲಿ ಬೆಳೆಯುವ ಶ್ರೀಗಂಧದ ಮರಗಳಿಗೆ ಅರಣ್ಯ ಇಲಾಖೆಯಿಂದ ರಕ್ಷಣೆ ನೀಡುವುದು ಸಾಧ್ಯವಿಲ್ಲದ ಮಾತು. ಆದರೆ ರೈತರು ತಮಗೆ ಉಂಟಾಗುವ ನಷ್ಟವನ್ನು ತಡೆಗಟ್ಟಲು ಕೆಳಕಂಡ ಕೆಲವು ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳುವುದು ಅವಶ್ಯ:

- ದೊಡ್ಡ ಪ್ರಮಾಣದಲ್ಲಿ ಶ್ರೀಗಂಧದ ಮರಗಳನ್ನು ಬೆಳೆಸುವ ರೈತರು ನೆಡುತೋಪುಗಳಿಗೆ ಬಿಗಿ ಕಾವಲಿನ ವ್ಯವಸ್ಥೆ ಮಾಡಬೇಕಿದೆ. ಅಂದರೆ ಚೈನ್ ಲಿಂಕ್ ಮೆಶ್ ಫೆನ್ಸಿಂಗ್ ಅಥವಾ ಕಲ್ಲಿನ ಗೋಡೆಗಳನ್ನು ಸುತ್ತಲೂ ನಿರ್ಮಿಸಿ, ರಾತ್ರಿ, ಹಗಲು ಕಾವಲು ಕಾಯುವ ವ್ಯವಸ್ಥೆ ಮಾಡಬೇಕಾಗುತ್ತದೆ. ಅರಣ್ಯ ಇಲಾಖೆಯು ಇತ್ತೀಚೆಗೆ ಶ್ರೀಗಂಧದ ನೆಡುತೋಪುಗಳನ್ನು ಎಸ್ಟೇಟ್ ಮಾದರಿಯಲ್ಲಿ ಬೆಳೆಸುತ್ತಿರುವಂತಹ ಕ್ರಮವನ್ನು ರೈತರೂ ಅನುಸರಿಸಬಹುದಾಗಿದೆ.
- ರೈತರು ಗುಂಪುಗಳನ್ನು ರಚಿಸಿಕೊಂಡು ಸಹಕಾರ ತತ್ವದ ಆಧಾರದ ಮೇಲೆ ಶ್ರೀಗಂಧವನ್ನು ಬೆಳೆಸಬಹುದು. ಹೀಗಾದಾಗ ಭದ್ರತೆಗೆ ನೀಡುವ ವೆಚ್ಚ ಸಮನಾಗಿ ಹಂಚಿಕೆಯಾಗುತ್ತದೆ.
- ಸಿ.ಸಿ. ಟಿ.ವಿ. ಕ್ಯಾಮೆರಾ, ಕಣ್ಗಾವಲು ಉಪಕರಣ, ಹೈ ಸ್ಪೀಡ್ ಇನ್‌ಫ್ರಾರೆಡ್ ಉಪಕರಣ ಮುಂತಾದವನ್ನು ಅವಶ್ಯಕತೆಗನುಗುಣವಾಗಿ ಶ್ರೀಗಂಧದ ನೆಡುತೋಪಿನಲ್ಲಿ ಅಳವಡಿಸಿಕೊಳ್ಳಬೇಕಿದೆ. ಈ ಉಪಕರಣಗಳು ಕಳ್ಳಕಾಕರ ಚಲನವಲನ ದಾಖಲಿಸಿ ನಿಯಂತ್ರಣ ಕೊಠಡಿಗೆ ರವಾನಿಸುವುದರಿಂದ, ತಕ್ಷಣವೇ ಮುಂದಿನ ಕ್ರಮ ಜರುಗಿಸಲು ಸಾಧ್ಯವಾಗುತ್ತದೆ. ಬೆಂಗಳೂರಿನ ಮರವಿಜ್ಞಾನ ಮತ್ತು ತಾಂತ್ರಿಕ ಸಂಸ್ಥೆಯು ಇಂತಹ ಭದ್ರತಾ ವ್ಯವಸ್ಥೆಗೆ ಸಂಬಂಧಿಸಿದ ನೂತನ ಆವಿಷ್ಕಾರಗಳ ಅಭಿವೃದ್ಧಿಗಾಗಿ ಹಣಕಾಸು ನೆರವು ಒದಗಿಸುತ್ತಿದೆ.
- ಖಾಸಗಿ ಭೂಮಿಯಲ್ಲಿ ಬೆಳೆಯುವ ಶ್ರೀಗಂಧದ ಮರಗಳಿಗೆ ವಿಮೆ ಸೌಲಭ್ಯದ ಅವಶ್ಯಕತೆಯಿದೆ. ಇದಕ್ಕೆ ಅರಣ್ಯ ಇಲಾಖೆಯು ಉತ್ತಮ ವಿಮಾ ಕಂಪನಿಯೊಂದಿಗೆ ವಿಮೆ ಮಾಡಿಸಲು ಸಹಕರಿಸಬೇಕಿದೆ. ಕಳ್ಳತನವಾದಲ್ಲಿ, ನಷ್ಟ ಉಂಟಾದಲ್ಲಿ ನೀಡಬೇಕಾದ ಪರಿಹಾರದ ಮೊತ್ತವನ್ನು ಬೆಳೆಯುತ್ತಿರುವ ಶ್ರೀಗಂಧದ ಮರಗಳ ವಯಸ್ಸಿಗನುಗುಣವಾಗಿ ನಿಗದಿಪಡಿಸಬೇಕಿದೆ.
- ಅನಿವಾರ್ಯ ಸಂದರ್ಭಗಳಲ್ಲಿ ಸರ್ಕಾರವು ಖಾಸಗಿ ಜಮೀನುಗಳನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಪಡೆದುಕೊಂಡ ಪ್ರಕರಣಗಳಲ್ಲಿ, ಅಲ್ಲಿ ಬೆಳೆದಿರುವ ಮರಗಳನ್ನು ಕಟಾವು ಮಾಡಿ, ಮಾರಾಟದಿಂದ ಬಂದಂತಹ ಮೊಬಲಗನ್ನು ಪಾವತಿಸಲಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಎಳೆ ವಯಸ್ಸಿನ ಮರಗಳಿದ್ದಲ್ಲಿ, ಅಂತಹವು ಮಾರಾಟ ಮಾಡಲು ಯೋಗ್ಯ-ವಾಗಿರುವುದಿಲ್ಲ. ಆಗ ಅವುಗಳನ್ನು ಬೆಳೆಸಲು ತಗಲಿರುವ ವೆಚ್ಚವನ್ನು ಪರಿಹಾರವಾಗಿ ನೀಡಲಾಗುತ್ತದೆ. ಇಲ್ಲೊಂದು ಸಲಹೆಯೆಂದರೆ, ಕೃಷಿ ಭೂಮಿಯಲ್ಲಿ ಮರಗಳನ್ನು ಕೃಷಿವನ ನಿರ್ಮಾಣದ ಉದ್ದೇಶದಿಂದ ಬೆಳೆಸಿದ ಪ್ರಕರಣಗಳಲ್ಲಿ ಮಾರಾಟಕ್ಕೆ ಯೋಗ್ಯವಲ್ಲದ ಎಳೆ ವಯಸ್ಸಿನ ಶ್ರೀಗಂಧದ ಮರಗಳಿದ್ದಲ್ಲಿ, ಅವುಗಳಿಗೆ ಸಹಾನುಭೂತಿಯಿಂದ ಪರಿಹಾರದ ಮೊತ್ತವನ್ನು ನಿಗದಿಪಡಿಸಬೇಕಿದೆ. ಇಲ್ಲಿಯವರೆಗೂ ಮರಗಳನ್ನು ಬೆಳೆಯಲು ತಗಲಿರುವ ವೆಚ್ಚದೊಂದಿಗೆ, ಅವರ ಪ್ರಯತ್ನವನ್ನು ಗುರುತಿಸುವ ಸಲುವಾಗಿ ಹಾಗೂ ಕೃಷಿವನದ ವಿಚಾರವನ್ನು ಸಾರ್ವಜನಿಕವಾಗಿ ಪ್ರಚುರಪಡಿಸಿರುವುದಕ್ಕಾಗಿ ಹೆಚ್ಚುವರಿ ಪರಿಹಾರ ನೀಡಬೇಕಾದುದು ಅವಶ್ಯ.

ಲೇಖಕ: ನಿವೃತ್ತ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ

ಚುರುಮುರಿ

ಕಾರ್ಯಕಾರಿಣಿ ಕಣಿ!

● ತುರುವೇಕೆರೆ ಪ್ರಸಾದ್

ತಾವರೆ ಪಕ್ಷದ ಕಾರ್ಯಕಾರಿಣಿಯಲ್ಲಿ ಬುಡಕ್ಕೆ ಬಿಸಿನೀರು ಬಿಡುಸ್ಕೊಂಡೋರೆಲ್ಲಾ ಬಗ ಬಗ ಉರೀತಾ ಕೂತಿದ್ರು: 'ಕಾರ್ಯಕಾರಿಣಿ ಅಂತ ಬರೋದು, ಶಿಸ್ತಿನ ಹಳೇ ಕಣಿ ಊದೋದು. ಆ ಕೆಂಗಣ್ಣಯ್ಯಂಗ್ ಏನ್ ಗೊತ್ತಾಗುತ್ತೆ ಲೋಕಲ್ ಪಾಲಿಟಿಕ್ಸು' ಗುಡುಗಿದರು ನವರಂಗಿ.

'ನಿಜ! ಇಲ್ ಬಿಸಿ ತುಪ್ಪ ಗಂಟ್ಲಾಗೆ ಸಿಗಾಕ್ಕಂಡದೆ. ಹಳುಬ್ರು ಕಾಲ್ ಎಳೀತಾರೆ. ಹೊಸುಬ್ರು ಕೈ ಕೊಡ್ತಾರೆ. ಯಾರ್ ತವ ತಲೆ ಚಚ್ಕೊಬೇಕು ಗೊತ್ತಾಯ್ತಿಲ್ಲ' ಅಂತ ತಿದಿ ಒತ್ತಿದರು ನುಂಗಪ್ಪ.

'ಎಲ್ಲ ಸ್ವಚ್ಛ ಮಾಡ್ತೀವಿ, ಗುಡಿಸಿ ಗುಂಡಾಂತರ ಮಾಡ್ತೀವಿ ಅಂತ ಹೊಂಟ್ರೆ ಆಯ್ತುದಾ? ಊರು ಅಂದ್ಮೇಲೆ ಹೊಲಗೇರಿ ಇದ್ದೇ ಇರ್ತದೆ. ಅಂಗೇ ಪಕ್ಷ, ಸರ್ಕಾರ ಅಂದ್ಮೇಲೆ ಪರ್ಸಂಟೇಜು, ಕಟ್ ಮನಿ ಇದ್ದೇ ಇರ್ತದೆ'.

'ಪರ್ಸಂಟೇಜೇ ಬೇಡ ಅಂದ್ರ ಎಂಗೆ? ಮುಂದಿನ್ ವರ್ಷನೇ ಎಲೆಕ್ಷನ್ ಬತ್ತಿದೆ. ಮನೆ ಮಠ ಮಾರ್ಕಂಡು ಎಲೆಕ್ಷನ್‌ಗೆ ನಿಲ್ಲಕ್ಕಾಯ್ತದಾ?'

'ಇನ್ನು ಆತ್ಮವಿಮರ್ಶೆ ಮಾಡ್ಕೊಳ್ಳಿ ಅಂತ ಯೋಳ್ತಿದ್ರು. ಆತ್ಮ ಎಂಗೂ ನಮ್ನ ಬಿಟ್ ಓಗಿ ಯಾವ್ದೋ ಕಾಲ ಆಗ್ಯತೆ ಅಂತ ನಾವೂ ಪಂಚೆಗೆ ಒರುಸ್ಕೊಂಡ್ ಸುಮ್ಕಿದ್ವಿ. ಈಗ ನೋಡುದ್ರೆ ಆತ್ಮಹತ್ಯೆ ವಿಮರ್ಶೆ ಮಾಡ್ಕಳ್ಳಿ ಅಂತ ಯೋಳ್ತಾವ್ರೆ'.

'ಅತ್ತ ಟಗರು ಗುಮ್ಮಕ್ಕೇ ಬತ್ತದೆ, ಮಧ್ಯೆ ಬಂಡೆ ಢಿಶುಂ ಅಂತದೆ. ಮಣ್ಣಿನ್ ಮಕ್ಕಳು ಬೇರೆ ಕಣ್ಣಿಗೆ ಉಫ್ ಅಂತ ಅವಾಗವಾಗ ಮಳ್ಳು ಊದ್ತಾ ಇರ್ತಾರೆ. ಇವರೂ ಊದು ಕೊಳಪೆ ತಗಂಡು ನವರಂಧ್ರಕ್ಕೂ ಊದುದ್ರೆ ನಾವ್ ಎಂಗ್ ತಡ್ಕಳಾದು?'

'ನಾವು ಎಸ್ಸೆಸ್ಸೆಲ್ಸಿ ಪಾಸಾಗಕ್ಕೇ ತಿಪ್ಪುರ್ಲಾಗ ಹಾಕಿ ಡುಮ್ಕಿ ಒಡ್ದಿದೀವಿ... ಅಂತಾದ್ರಲ್ಲಿ ಇವ್ರು ಇಲ್ ಮತ್ ಮೌಲ್ಯಮಾಪನ ಮಾಡ್ತೀವಿ, ಪರೀಕ್ಷೆ ಮಾಡ್ತೀವಿ ಅಂತ ಒಂಟವ್ರೆ. ವ್ಯವಸ್ಥೆನೇ ಲೀಕು, ಕ್ವಶ್ಚನ್ ಪೇಪರ‍್ರೂ ಲೀಕು...'

'ಒಂದು ವಿಕೆಟ್ ಬಿತ್ತು ತುಂಟ ಮುತ್ತಿಗೆ, ಇನ್ನೊಂದಕ್ಕೆ ಕಾರಣ ತುಂಡು ಗುತ್ತಿಗೆ ಅನ್ನೋದೇನೋ ಎಲ್ರಿಗೂ ಗೊತ್ತಾಗೈತೆ. ಅಂಗೇ ನಮ್ದೂ ತಾರಾತಿಗಡಿ ಎಲ್ಲಾ ಗೊತ್ತಾಗಿ ಕುತ್ತಿಗೆಗ್ ಬಂದ್ರೆ ಎಂಗೆ?'

'ಒಟ್ನಾಗೆ ಕಾರ್ಯಕಾರಿಣಿ ಅಂದ್ರೆ ನಮ್ ಬಾಯ್ಗೆ ಅಗಣಿ ಜಡಿದು ಚಲ್ಲಣಕ್ಕೆ ತಗಣಿ ಬಿಟ್ ಓಗೋ ಅಂಗಾಗೈತೆ' ಎಂದು ಪಂಚೆ ಕೊಡವಿ ಮೇಲೆದ್ದರು ಗೆದ್ಲಪ್ಪ.

ಸಂಗತ

ಪ್ಲಾಸ್ಟಿಕ್ ವಿಷ: ನವ ಗಂಡಾಂತರ

ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಪ್ಲಾಸ್ಟಿಕ್ ಕಣಗಳು ಮಾನವ ದೇಹದ ಜೀವಕೋಶಗಳನ್ನು ಹೇಗೆ ಪರಿವರ್ತಿಸುತ್ತವೆ ಎಂಬುದರ ಬಗ್ಗೆ ಹೆಚ್ಚು ಸಂಶೋಧನೆ ನಡೆಯಬೇಕಾಗಿದೆ

● ಡಾ. ಎಂ.ವೆಂಕಟಸ್ವಾಮಿ

ಭೂಮಿಯನ್ನೇ ಆವರಿಸಿಕೊಂಡಿರುವ ಪ್ಲಾಸ್ಟಿಕ್ ಮಾಲಿನ್ಯದ ಬಗ್ಗೆ ಎಷ್ಟು ಬರೆದರೂ ಸಾಲದು. ಮಾನವನ ದೇಹದಲ್ಲಿ ಮೊದಲ ಬಾರಿಗೆ ಪತ್ತೆಯಾಗಿರುವ ಸೂಕ್ಷ್ಮ ಪ್ಲಾಸ್ಟಿಕ್ ಕಣಗಳು ರಕ್ತದ ಮೂಲಕ ದೇಹದಲ್ಲೆಲ್ಲ ಹರಿದಾಡುತ್ತಿರುವುದು ಕಂಡುಬಂದಿದೆ. ಈ ವಿಷಕಾರಿಯಾದ ಕಣಗಳು ಅಂಗಾಂಗಗಳಲ್ಲೇ ನೆಲೆಸಿದರೆ ಆರೋಗ್ಯದ ಮೇಲೆ ಯಾವ ರೀತಿಯ ಪರಿಣಾಮಗಳನ್ನು ಬೀರುತ್ತವೆ ಎನ್ನುವುದರ ಬಗ್ಗೆ ಸಂಶೋಧನೆಗಳು ನಡೆಯುತ್ತಿವೆ. ವಾಯುಮಾಲಿನ್ಯದ ಕಣಗಳು ಈಗಾಗಲೇ ಮನುಷ್ಯನ ದೇಹ ಹೊಕ್ಕು ಜೀವಕೋಶಗಳಿಗೆ ಹಾನಿ ಮಾಡುತ್ತಾ ಲಕ್ಷಾಂತರ ಜನರ ಸಾವಿಗೆ ಕಾರಣವಾಗಿವೆ. ಇದರ ಜೊತೆಗೆ ಇದೀಗ ಸೂಕ್ಷ್ಮ ಪ್ಲಾಸ್ಟಿಕ್ ಕಣಗಳೂ ಸೇರಿಕೊಂಡಿವೆ.

ಎವರೆಸ್ಟ್ ಶಿಖರದಿಂದ ಹಿಡಿದು ಆಳವಾದ ಸಾಗರಗಳವರೆಗೂ ಪ್ಲಾಸ್ಟಿಕ್ ತ್ಯಾಜ್ಯದಿಂದ ಕಲುಷಿತಗೊಂಡಿದ್ದು, ನೀರು, ಗಾಳಿ ಮತ್ತು ಆಹಾರದ ಮೂಲಕ ಪ್ಲಾಸ್ಟಿಕ್ ಸೂಕ್ಷ್ಮ ಕಣಗಳು ದಿನನಿತ್ಯ ಪಕ್ಷಿ-ಪ್ರಾಣಿಗಳು ಹಾಗೂ ಮನುಷ್ಯನ ದೇಹ ಸೇರುತ್ತಿವೆ. ಈ ವಿಷ ಕಣಗಳು ವಯಸ್ಕರು ಮತ್ತು ಶಿಶುಗಳ ಮಲದಲ್ಲಿ ಹೆಚ್ಚಾಗಿ ಕಂಡುಬಂದಿವೆ. ವಿಜ್ಞಾನಿಗಳು 22 ಅನಾಮಧೇಯ ಆರೋಗ್ಯವಂತ ದಾನಿಗಳಿಂದ ರಕ್ತದ ಮಾದರಿ ಸಂಗ್ರಹಿಸಿ ಸಂಶೋಧನೆ ನಡೆಸಿದಾಗ, 17 ಮಾದರಿಗಳಲ್ಲಿ ಪ್ಲಾಸ್ಟಿಕ್ ಸೂಕ್ಷ್ಮ ಕಣಗಳು ಮತ್ತು ಅರ್ಧದಷ್ಟು ಮಾದರಿಗಳಲ್ಲಿ ಪಾಲಿಥಿಲೀನ್ ಟೆರೆಫ್ಥಾಲೇಟ್ (ಪಿಇಟಿ) ಪ್ಲಾಸ್ಟಿಕ್ ಕಂಡುಬಂದಿದೆ. ಪಿಇಟಿ ಅನ್ನು ಸಾಮಾನ್ಯವಾಗಿ ನೀರಿನ ಬಾಟಲಿಗಳ ತಯಾರಿಕೆಯಲ್ಲಿ ಉಪಯೋಗಿಸಲಾಗುತ್ತದೆ. ಆಹಾರ ಮತ್ತು ಇತರ ಉತ್ಪನ್ನಗಳ ಪ್ಯಾಕಿಂಗ್‌ನಲ್ಲೂ ಬಳಸಲಾಗುತ್ತದೆ. ಕಾಲು ಭಾಗದಷ್ಟು ರಕ್ತದ ಮಾದರಿಗಳಲ್ಲಿ ಪಾಲಿಥಿಲೀನ್ ಕಂಡುಬಂದಿದ್ದು ಇದನ್ನು ಪ್ಲಾಸ್ಟಿಕ್ ಚೀಲಗಳ ತಯಾರಿಕೆಯಲ್ಲಿ ಬಳಸಲಾಗುತ್ತದೆ.

ವಯಸ್ಕರಿಗೆ ಹೋಲಿಸಿದರೆ ಶಿಶುಗಳ ಮಲದಲ್ಲಿ 10 ಪಟ್ಟು ಹೆಚ್ಚು ಪ್ಲಾಸ್ಟಿಕ್ ಸೂಕ್ಷ್ಮ ಕಣಗಳು ಕಂಡುಬಂದಿವೆ. ಮಕ್ಕಳಿಗೆ ಪ್ಲಾಸ್ಟಿಕ್ ಬಾಟಲಿಗಳಲ್ಲಿ ಹಾಲು, ನೀರು, ಟಾನಿಕ್‌ಗಳನ್ನು ಉಣಿಸುವ ಕಾರಣ, ಲಕ್ಷಾಂತರ ಸೂಕ್ಷ್ಮ ಪ್ಲಾಸ್ಟಿಕ್ ಕಣಗಳು ಶಿಶುಗಳ ದೇಹ ಸೇರುತ್ತವೆ.

ವಿಜ್ಞಾನಿಗಳ ಹಲವು ಗುಂಪುಗಳ ಮೂಲಕ ಈ ಸಂಬಂಧದ ಸಂಶೋಧನೆಯನ್ನು ಇನ್ನಷ್ಟು ತೀವ್ರಗೊಳಿಸಲಾಗಿದೆ ಎಂದು ನೆದರ್‌ಲ್ಯಾಂಡ್ಸ್‌ನ ಪ್ರೊ. ಡಿಕ್ ವೆಥಾಕ್ ಹೇಳಿದ್ದಾರೆ. ರಕ್ತದ ಮಾದರಿ ಸಂಗ್ರಹದ ಸಂದರ್ಭದಲ್ಲಿ ಉಂಟಾಗುವ ಪ್ಲಾಸ್ಟಿಕ್ ಮಾಲಿನ್ಯವನ್ನು ತಪ್ಪಿಸಲು ಪ್ರಯೋಗಾಲಯಗಳಲ್ಲಿ ಸ್ಟೀಲ್ ಸಿರಿಂಜ್‌ಗಳು ಮತ್ತು ಗಾಜಿನ ಟ್ಯೂಬ್‌ಗಳನ್ನು ಬಳಸಲಾಗುತ್ತಿದೆ.

'ಮನುಷ್ಯ ದೇಹದಲ್ಲಿ ಏನಾಗುತ್ತಿದೆ ಎಂಬುದೇ ದೊಡ್ಡ ಪ್ರಶ್ನೆಯಾಗಿದೆ. ಸೂಕ್ಷ್ಮ ಪ್ಲಾಸ್ಟಿಕ್ ಕಣಗಳು ದೇಹದಲ್ಲಿಯೇ ಉಳಿದುಕೊಳ್ಳುತ್ತವೆಯೇ? ರಕ್ತ, ಮೆದುಳಿನ ತಡೆಗೋಡೆಗಳನ್ನು ದಾಟಿ ಅಂಗಾಂಗಗಳಲ್ಲಿ ಹಾದು-ಹೋಗುತ್ತವೆಯೇ? ಇದರಿಂದ ಇನ್ನಷ್ಟು ಹೊಸ ರೋಗಗಳಿಗೆ ಮನುಷ್ಯನ ದೇಹ ಈಡಾಗುತ್ತದೆಯೇ ಅಥವಾ ಈಗಾಗಲೇ ದೇಹದಲ್ಲಿ ಮನೆಮಾಡಿರುವ ರೋಗಗಳನ್ನು ಪ್ರಚೋದಿಸಲು ಕಾರಣವಾಗುತ್ತವೆಯೇ ಎಂಬುದನ್ನು ತುರ್ತಾಗಿ ತಿಳಿದುಕೊಳ್ಳಬೇಕಾದ ಅವಶ್ಯಕತೆ ಇದೆ' ಎಂದು ಡಿಕ್ ವೆಥಾಕ್ ಹೇಳಿದ್ದಾರೆ.

ಯಾವುದು ಏನೇ ಆಗಲಿ 2040ರ ವೇಳೆಗೆ ಪ್ಲಾಸ್ಟಿಕ್ ಉತ್ಪಾದನೆಯಂತೂ ದ್ವಿಗುಣಗೊಳ್ಳಲಿದೆ ಎಂದು 'ಚಾರಿಟಿ ಕಾಮನ್ ಸೀಸ್' ಸ್ಥಾಪಕ ಜೋ ರಾಯ್ಲೆ ಹೇಳಿದ್ದಾರೆ. ಈ ಸಂಸ್ಥೆಯ ಜೊತೆಗೆ ಇನ್ನೂ 80 ಎನ್‌ಜಿಒಗಳ ವಿಜ್ಞಾನಿಗಳು ಮತ್ತು ಯು.ಕೆ. ಜನಪ್ರತಿನಿಧಿಗಳು, ಪ್ಲಾಸ್ಟಿಕ್ ಮಾಲಿನ್ಯವು ಜನರ ಆರೋಗ್ಯದ ಮೇಲೆ ಬೀರುವ ಪರಿಣಾಮಗಳ ಬಗೆಗಿನ ಸಂಶೋಧನೆಗೆ ಅಗತ್ಯವಾದ ಹಣ ಬಿಡುಗಡೆ ಮಾಡುವಂತೆ ಯು.ಕೆ. ಸರ್ಕಾರವನ್ನು ಕೇಳಿಕೊಂಡಿದ್ದಾರೆ. ಪ್ಲಾಸ್ಟಿಕ್ ಮಾಲಿನ್ಯದಿಂದ ಭ್ರೂಣ ಮತ್ತು ಶಿಶುಗಳ ಮೇಲೆ ಆಗುತ್ತಿರುವ ವ್ಯತಿರಿಕ್ತ ಪರಿಣಾಮಗಳ ಅಧ್ಯಯನಕ್ಕಾಗಿ ಯುರೋಪ್ ಒಕ್ಕೂಟ ಈಗಾಗಲೇ ಧನಸಹಾಯ ಮಾಡುತ್ತಿದೆ.

ಕೆಂಪು ರಕ್ತಕಣಗಳ ಹೊರ ಪೊರೆಗಳಿಗೆ ಪ್ಲಾಸ್ಟಿಕ್ ಕಣಗಳು ಅಂಟಿಕೊಳ್ಳುತ್ತಿರುವುದು ಮತ್ತು ರಕ್ತ ಸಾಗಿಸುವ ಸಾಮರ್ಥ್ಯವನ್ನು ಕಡಿಮೆ ಮಾಡುತ್ತಿರುವುದು ತಿಳಿದುಬಂದಿದೆ. ಈ ವಿಷ ಪ್ಲಾಸ್ಟಿಕ್ ಕಣಗಳು ಗರ್ಭಿಣಿಯರ ಜರಾಯುಗಳಲ್ಲಿಯೂ ಕಂಡುಬಂದಿವೆ. ಗರ್ಭಿಣಿ ಇಲಿಗಳಲ್ಲಿ ಈ ವಿಷ ಕಣಗಳನ್ನು ಹಾಯಿಸಿದಾಗ ಅವು ಹೃದಯ, ಮಿದುಳು, ಭ್ರೂಣ ಇತರ ಅಂಗಾಂಗಗಳ ಮೂಲಕ ವೇಗವಾಗಿ ಹಾದುಹೋಗುವುದು ಕಂಡುಬಂದಿದೆ. ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಪ್ಲಾಸ್ಟಿಕ್ ಕಣಗಳು ಮಾನವ ದೇಹದ ಜೀವಕೋಶಗಳನ್ನು ಹೇಗೆ ಪರಿವರ್ತಿಸುತ್ತವೆ ಮತ್ತು ಕ್ಯಾನ್ಸರ್ ರೋಗಕ್ಕೆ ಯಾವ ರೀತಿ ಪ್ರಚೋದಿಸುತ್ತವೆ ಎಂಬುದರ ಬಗ್ಗೆ ಹೆಚ್ಚು ಸಂಶೋಧನೆಗಳನ್ನು ನಡೆಸುವ ಅಗತ್ಯ ಇದೆ. ಒಟ್ಟಿನಲ್ಲಿ, ಮಾಡಿದ್ದುಣ್ಣೋ ಮಹರಾಯ ಎಂಬಂತೆ ಇನ್ನೊಂದು ಗಂಡಾಂತರ ಈಗ ಮಾನವನ ದೇಹ ಹೊಕ್ಕು ಕುಳಿತಿದೆ.

ಈಗ ನಡೆಯುತ್ತಿರುವ ಉಕ್ರೇನ್-ರಷ್ಯಾ ಯುದ್ಧದಿಂದ ಭೂಮಿ ತಲ್ಲಣಗೊಂಡಿದೆ. ಅಭಿವೃದ್ಧಿ ಹೊಂದಿದ, ಹೊಂದುತ್ತಿರುವ ದೇಶಗಳು ತಮ್ಮ ಜನರಿಗೆ ಅಗತ್ಯ ಆಹಾರ, ನೀರು ಒದಗಿಸಲು ಶಕ್ತವಾಗದಿದ್ದರೂ ಅಣುಬಾಂಬು ಮತ್ತು ಯುದ್ಧ ಸಾಮಗ್ರಿಗಳ ತಯಾರಿಕೆಗೆ ಅಪಾರ ಹಣವನ್ನು ತೊಡಗಿಸುತ್ತಿವೆ. ಭೀಕರ, ವಿಷಕಾರಕ ಅಣುಬಾಂಬುಗಳು ಮತ್ತು ಜೈವಿಕ ಯುದ್ಧ ಸಾಮಗ್ರಿಗಳನ್ನು ಗುಡ್ಡೆ ಹಾಕಿಕೊಂಡಿರುವ ದೇಶಗಳು ಜ್ವಾಲಾಮುಖಿಗಳ ಮೇಲೆ ಕುಳಿತುಕೊಂಡು ಉಸಿರುಬಿಡುತ್ತಿವೆ. ಕೂಡಲೇ ಎಚ್ಚೆತ್ತುಕೊಳ್ಳದಿದ್ದರೆ ಆ ಜ್ವಾಲಾಮುಖಿಗಳಿಗೆ ಸ್ವಯಂ ಆಪೋಶನವಾಗುವ ಅರಿವೇ ಅವುಗಳಿಗೆ ಇದ್ದಂತಿಲ್ಲ.

ವಾಚಕರ ವಾಣಿ

ಮಠಾಧೀಶರಿಗೂ ವಿಸ್ತರಿಸಿತೇ ಪಿಡುಗು?

ಇತ್ತೀಚೆಗೆ ನಡೆಯುತ್ತಿರುವ ಕೆಲವು ಮಠಾಧೀಶರ ಆರೋಪ- ಪ್ರತ್ಯಾರೋಪಗಳನ್ನು ನೋಡಿದರೆ ಮನಸ್ಸಿಗೆ ಹಿಂಸೆಯಾಗುತ್ತದೆ. ಪರಸ್ಪರ ಕೆಸರೆರೆಚಾಟ, ವೈಯಕ್ತಿಕ ತೇಜೋವಧೆಯಂಥ ಪ್ರಕರಣಗಳು ರಾಜಕೀಯ ನಾಯಕರಿಗೆ ಮಾತ್ರ ಸೀಮಿತವಾಗಿದ್ದವು. ಆದರೆ ಈಗ ಅವು ಮಠಾಧೀಶರಿಗೂ ವಿಸ್ತರಿಸಿರುವಂತೆ ಗೋಚರಿಸುತ್ತಿದೆ. ಇದು ನಿಜಕ್ಕೂ ಒಳ್ಳೆಯ ಬೆಳವಣಿಗೆಯಲ್ಲ. ಯಾವ ಮಠಾಧೀಶರು ಸಮಾಜಕ್ಕೆ ಮಾರ್ಗದರ್ಶಕರಾಗಿ ಇರಬೇಕೋ ಅಂಥವರೇ ಸಾಮಾನ್ಯ ಜನರಂತೆ ನಡೆದುಕೊಂಡರೆ ಹೇಗೆ? ಇತ್ತೀಚಿನ ವರ್ಷಗಳಲ್ಲಿ ಕೆಲವು ಮಠಾಧೀಶರು ರಾಜಕೀಯದಲ್ಲಿ ಅನಗತ್ಯವಾಗಿ ಮೂಗು ತೂರಿಸುವ ಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದಾರೆ. ಅದರಿಂದ ರಾಜಕೀಯ ನಾಯಕರಿಗೆ ಸಹಜವಾದ ವಿದ್ಯಮಾನಗಳು ಮಠಾಧೀಶರಿಗೂ ಅನ್ವಯಿಸುತ್ತಿರುವಂತೆ ಕಾಣಿಸುತ್ತಿದೆ. ಮಠಾಧೀಶರು ಸಮಸ್ತ ಭಕ್ತರ ಕಲ್ಯಾಣಕ್ಕಾಗಿ ದೇವರನ್ನು ಪ್ರಾರ್ಥಿಸುವ ಪದ್ಧತಿ ತಿರುಗಾ ಮುರುಗಾ ಆಗಿ, ಈಗ ಭಕ್ತರು ಈ ಮಠಾಧೀಶರಿಗೆ ಒಳ್ಳೆಯ ಬುದ್ಧಿ ಕರುಣಿಸುವಂತೆ ದೇವರನ್ನು ಪ್ರಾರ್ಥಿಸಬೇಕಾಗಿದೆ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ರೈಲು ಪ್ರಯಾಣ: ಪುನರಾರಂಭವಾಗಲಿ ರಿಯಾಯಿತಿ

ರೈಲ್ವೆ ಇಲಾಖೆಯು ಹಿರಿಯ ನಾಗರಿಕರಿಗೆ ಪ್ರಯಾಣ ದರದಲ್ಲಿ ನೀಡುತ್ತಿದ್ದ ರಿಯಾಯಿತಿ ಸೌಲಭ್ಯವನ್ನು ಕೋವಿಡ್ ಸಾಂಕ್ರಾಮಿಕದ ನೆಪ ಒಡ್ಡಿ ಸುಮಾರು ಎರಡು ವರ್ಷಗಳಿಂದ ಸ್ಥಗಿತಗೊಳಿಸಿದೆ. ಈ ಹಿಂದೆ ಪುರುಷರಿಗೆ ಶೇಕಡ 33, ಮಹಿಳಾ ಪ್ರಯಾಣಿಕರಿಗೆ ಶೇಕಡ 50ರಷ್ಟು ರಿಯಾಯಿತಿಯನ್ನು ನೀಡಲಾಗುತ್ತಿತ್ತು. ಇದರಿಂದ ಸದರಿಯವರಿಗೆ, ಅದರಲ್ಲೂ ಆರ್ಥಿಕವಾಗಿ ಸಬಲರಲ್ಲದ ಪ್ರಯಾಣಿಕರಿಗೆ ತುಂಬಾ ಸಹಾಯವಾಗುತ್ತಿತ್ತು. ಈ ಮಧ್ಯೆ ನಮ್ಮ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಹಿರಿಯ ನಾಗರಿಕರಿಗೆ ರಿಯಾಯಿತಿ ಸೌಲಭ್ಯವನ್ನು ನಿರಂತರವಾಗಿ ಒದಗಿಸುತ್ತಿದೆ. ಈಗ ಕೊರೊನಾ ಸಮಸ್ಯೆ ಇಲ್ಲದಿರುವುದರಿಂದ, ಹಿರಿಯ ನಾಗರಿಕರಿಗೆ ಒದಗಿಸುತ್ತಿದ್ದ ರಿಯಾಯಿತಿ ಸೌಲಭ್ಯವನ್ನು ಪುನಃ ಜಾರಿಗೊಳಿಸಲು ಭಾರತೀಯ ರೈಲ್ವೆಯು ಬದ್ಧವಾಗಬೇಕಾಗಿದೆ.

ಅ.ಸಿ.ಸಿದ್ದೇಗೌಡ ಅರಳಕುಪ್ಪೆ, ಪಾಂಡವಪುರ

ಅನುದಾನ ಕೊಟ್ಟರಷ್ಟೇ ಸಾಲದು

ಇತ್ತೀಚೆಗೆ ನಾನು ಕೂಡಲಸಂಗಮಕ್ಕೆ ಹೋದಾಗ ಗಮನಕ್ಕೆ ಬಂದದ್ದು, ಬಸವಣ್ಣನ ಐಕ್ಯ ಸ್ಥಳದಲ್ಲಿ ಇರುವ ಜೇಡರಬಲೆಯ ದೃಶ್ಯ. ಪ್ರವಾಸಿಗರು ಹೋಗಲು ಇರುವ ಇಳಿಜಾರಿನ ಮೆಟ್ಟಿಲುಗಳ ಕಂಬಿಗಳಿಗೆ ಜೇಡರಬಲೆ ಅಂಟಿತ್ತು. ದೂಳು ಮೆತ್ತಿತ್ತು. ಬಸವಣ್ಣನ ಐಕ್ಯ ಸ್ಥಳದಲ್ಲಿ ಅವರ ವಚನಗಳ ಧ್ವನಿಮುದ್ರಿತ ಸಾಲುಗಳು ಕೇಳುವಂತಹ ವ್ಯವಸ್ಥೆ ಮಾಡುವುದು ಒಳ್ಳೆಯದು. ಸರ್ಕಾರ ಇಂತಹ ಸ್ಥಳಗಳ ಅಭಿವೃದ್ಧಿಗೆ ಕೋಟ್ಯಂತರ ರೂಪಾಯಿ ಅನುದಾನ ಕೊಟ್ಟರಷ್ಟೇ ಸಾಲದು, ಪ್ರವಾಸಿಗರಿಗೆ ಖುಷಿಯಾಗುವ ರೀತಿಯಲ್ಲಿ ಅವುಗಳನ್ನು ನಿರ್ವಹಿಸುವುದೂ ಮುಖ್ಯ.

ಸಿರಿಗೇರಿ ಯರಿಸ್ವಾಮಿ, ಸಿರುಗುಪ್ಪ, ಬಳ್ಳಾರಿ

ನಾಯಕರಿಗೇಕೆ ಬಸ್ಸುಗಳಲ್ಲಿ ಮೀಸಲಾತಿ?

ರಾಜ್ಯದ ಸಾರಿಗೆ ನಿಗಮಗಳ ಸಾಮಾನ್ಯ ಬಸ್ಸುಗಳಲ್ಲೂ ವಿಧಾನಸಭೆ ಮತ್ತು ಲೋಕಸಭೆ ಸದಸ್ಯರಿಗೆ ಒಂದೆರಡು ಸೀಟುಗಳನ್ನು ಮೀಸಲಿಟ್ಟು, ಆ ಸಂಬಂಧದ ಫಲಕ ಹಾಕಿರುವುದು ಗಮನಾರ್ಹ. ನಿಜಕ್ಕೂ ನಮ್ಮ ನಾಯಕರು ಸಾಮಾನ್ಯರೊಂದಿಗೆ ಸಾಮಾನ್ಯರಾಗಿ ಸರ್ಕಾರಿ ಬಸ್ಸುಗಳಲ್ಲಿ ಪ್ರಯಾಣ ಮಾಡುವರೇ? ಇಲ್ಲವಾದರೆ ಈ ತರಹದ ಮೀಸಲಾತಿ ಏಕೆ? ಇನ್ನು ಐಷಾರಾಮಿ ಸರ್ಕಾರಿ ಬಸ್ಸುಗಳಲ್ಲೂ ಅವರಿಗೆ ಉತ್ತಮ ಸೀಟುಗಳ ಮೀಸಲಾತಿ ಇರುತ್ತದೆ. ಇದರಿಂದ ಸಾಮಾನ್ಯ ಜನರಿಗೆ ಆ ಸೀಟುಗಳು ಅಲಭ್ಯವಾಗುತ್ತವೆ. ಕೆಲವೊಮ್ಮೆ ನಾಯಕರ ಹೆಸರಿನಲ್ಲಿ ಅವರ ಹಿಂಬಾಲಕರು ಈ ಮೀಸಲಾತಿಯ ದುರುಪಯೋಗ ಮಾಡಿಕೊಳ್ಳುವುದು ಉಂಟು. ವಾಸ್ತವದಲ್ಲಿ ನಮ್ಮ ನಾಯಕರ ಬಳಿ ಐಷಾರಾಮಿ ಕಾರುಗಳು ಇರುತ್ತವೆ. ಅದಕ್ಕೆ ತಕ್ಕುದಾದ ಸರ್ಕಾರಿ ಭತ್ಯೆ ಸಹ ಇರುತ್ತದೆ. ಮತ್ತೇಕೆ ಅವರಿಗೆ ಸಾರಿಗೆ ನಿಗಮಗಳ ಬಸ್‌ಗಳಲ್ಲಿ ಆಸನಗಳ ಮೀಸಲಾತಿ?

ಮಹಾಂತೇಶ ಮಾಗನೂರ, ಬೆಂಗಳೂರು

ಜಲಜಾಗೃತಿಯ ಹೊಸ ಮಾರ್ಗ ಬೇಕು ನಮಗೆ

ಜೆಡಿಎಸ್ ಧುರೀಣರು 'ಜನತಾ ಜಲಧಾರೆ ಯಾತ್ರೆ' ಕೈಗೊಂಡಿರುವುದಕ್ಕೆ ಭಾರಿ ಜಾಹೀರಾತುಗಳು, ಸಚಿತ್ರ ಸುದ್ದಿಗಳು ಪ್ರಕಟವಾಗುತ್ತಿವೆ. ಆದರೆ 15 ಜೀವನದಿಗಳಿಂದ ನೀರನ್ನು ಬಿಂದಿಗೆಗಳಲ್ಲಿ ಸಂಗ್ರಹಿಸಿ ನೂರಾರು ವಾಹನಗಳಲ್ಲಿ 180 ವಿಧಾನಸಭಾ ಕ್ಷೇತ್ರಗಳಿಗೆ ಹೋಗಿ ಏನು ಮಾಡಲಿದ್ದಾರೆ ಎಂಬ ವಿವರ ಮಾತ್ರ ಎಲ್ಲೂ ಲಭ್ಯವಿಲ್ಲ. ಮಳೆನೀರ ಸಂಗ್ರಹಣೆಯ ಮಹತ್ವದ ಬಗ್ಗೆ, ನೀರಿನ ಮರುಬಳಕೆಯ ಬಗ್ಗೆ, ಅಂತರ್ಜಲದ ರಕ್ಷಣೆಯ ಬಗ್ಗೆ, ನೀರಿನ ಮಿತವ್ಯಯದ ಬಗ್ಗೆ ಜನರಿಗೆ ಪಾಠ ಹೇಳಿದ್ದಿದ್ದರೆ ಚೆನ್ನಾಗಿರುತ್ತಿತ್ತು. ಬದಲಿಗೆ, ಇವರ ಜಾಹೀರಾತುಗಳಲ್ಲಿ ಬರೀ ಕನ್ನಡಿಗರ ಅಸಹಾಯಕತೆ, ನೆರೆರಾಜ್ಯಗಳಿಂದ ಆಗುತ್ತಿರುವ ಅನ್ಯಾಯದ ಬಗ್ಗೆ ಕಣ್ಣೀರಿನ ಧಾರೆ ಇದೆಯೇ ವಿನಾ ಗ್ರಾಮಮಟ್ಟದ ಜಲಸಾಕ್ಷರತೆ ಕುರಿತು ಏನೂ ಇಲ್ಲ.

ಇದುವರೆಗೂ ನಮ್ಮ ರಾಜಕೀಯ ಪಕ್ಷಗಳು ಎಲ್ಲ ನೆರೆರಾಜ್ಯಗಳೊಂದಿಗೆ ಹೋರಾಡುತ್ತೇವೆಂದು ಕಾನೂನು ತಜ್ಞರಿಗೆ ಧನಧಾರೆ ಹರಿಸುತ್ತ, ತಂತಮ್ಮ ಬಲವರ್ಧನೆಗೆ ನೀರನ್ನು ಬಳಸುತ್ತಿವೆ ಹೊರತೂ ಆಕಾಶದಿಂದ ಬರುವ ನೀರಿನ ಸದ್ಬಳಕೆಯ ಕುರಿತು, ಕೆರೆಯ ಹೂಳೆತ್ತಿಸುವ ಕುರಿತು ಯಾವ ನಾಯಕರೂ ಮಾತಾಡುತ್ತಿಲ್ಲ. ಆ ಬಗ್ಗೆ ಒಂದೂ ಜಾಹೀರಾತು ಇಲ್ಲ; ಒಂದು ಕರಪತ್ರವೂ ಇಲ್ಲ. ಪಕ್ಷದ ಪ್ರಣಾಳಿಕೆಯಲ್ಲಿ ಒಂದು ವಾಕ್ಯವೂ ಇಲ್ಲ. ಮಳೆನೀರನ್ನು ಅಳೆಯುವ ಸರಳ ಸಾಧನಗಳನ್ನು ಶಾಲಾ ಮಕ್ಕಳಿಗೆ ವಿತರಿಸಿದ ಒಂದು ಉದಾಹರಣೆಯೂ ಇಲ್ಲ. ಆದರೆ ನೀರಿನ ಪ್ರಶ್ನೆ ಬಂದಾಗಲೆಲ್ಲ ದೊಡ್ಡ ಡ್ಯಾಮ್ ಕಟ್ಟುವ, ನದಿ ತಿರುಗಿಸುವ, ನೆರೆ ರಾಜ್ಯದೊಂದಿಗೆ ಹೋರಾಡುವ ಮಾತಷ್ಟೇ ಇವರ ಬಾಯಿಂದ ಬರುತ್ತಿದೆ. ಜೆಡಿಎಸ್ ಈಗ ತನ್ನ 'ಗಂಗಾಯಾತ್ರೆ'ಯನ್ನು ಬೇರೆ ದಾರಿಯಲ್ಲಿ ಕೊಂಡೊಯ್ದೀತೆ? ಎಚ್.ಡಿ.ಕುಮಾರ-ಸ್ವಾಮಿ ಅವರು ತಾವು ಇಸ್ರೇಲ್ ಭೇಟಿಯಲ್ಲಿ ಕಲಿತ ಪಾಠಗಳನ್ನು ಜನರೆದುರು ಇಟ್ಟರೆ ಚೆನ್ನಾಗಿತ್ತು. ಇಸ್ರೇಲ್ ತನ್ನ ಗಡಿಯಾಚಿನ ಜೋರ್ಡಾನ್ ಜೊತೆ ಹೇಗೆ ಕೈಜೋಡಿಸಿ ಕೆಲಸ ಮಾಡುತ್ತಿದೆ, ಹೇಗೆ ಹನಿಹನಿ ನೀರನ್ನೂ ರಕ್ಷಿಸುತ್ತ, ಮರುಬಳಕೆ ಮಾಡುತ್ತಿದೆ ಎಂಬುದನ್ನು ಹೇಳುತ್ತ ಜಾಥಾ ನಡೆಸಲೆಂದು ಆಶಿಸೋಣವೆ?

ನಾಗೇಶ ಹೆಗಡೆ, ಸಿದ್ರಾಮಪ್ಪ ದಿನ್ನಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಹುಬ್ಬಳ್ಳಿ–ಧಾರವಾಡ ಪಾಲಿಕೆ ವಿಭಜನೆಗೆ ಕೂಗು

• ಇ.ಎಸ್. ಸುಧೀಂದ್ರ ಪ್ರಸಾದ್

ಜನಪ್ರತಿನಿಧಿಗಳು ಹಾಗೂ ಆಡಳಿತ ವರ್ಗದ ಮಲತಾಯಿ ಧೋರಣೆಯಿಂದ ಬೇಸತ್ತ ಧಾರವಾಡದ ಜನರು ಅಭಿವೃದ್ಧಿಗಾಗಿ ಬೀದಿಗಿಳಿದು ಹೋರಾಟ ನಡೆಸುತ್ತಿದ್ದಾರೆ. ಹುಬ್ಬಳ್ಳಿ-ಧಾರವಾಡ ಅವಳಿ ನಗರವಾಗಿದ್ದರೂ ಅಭಿವೃದ್ಧಿಯಲ್ಲಿ ಸಮಾನತೆ ಇಲ್ಲವೆಂಬ ಆರೋಪ ಕೇಳಿ ಬರುತ್ತಿರುವುದರಿಂದ ಪ್ರತ್ಯೇಕತೆಯ ಕೂಗು ಈಗ ಇನ್ನಷ್ಟು ಹೆಚ್ಚಾಗಿದೆ.

ಉತ್ತರ ಕರ್ನಾಟಕದ ವಾಣಿಜ್ಯ ಕೇಂದ್ರ ಹುಬ್ಬಳ್ಳಿ ಹಾಗೂ ಶಿಕ್ಷಣ ಕಾಶಿ ಧಾರವಾಡ ಸುಮಾರು 50 ವರ್ಷಗಳಿಂದ ಅವಳಿ ನಗರಗಳಾಗಿಯೇ ಗುರುತಿಸಿಕೊಂಡಿವೆ. ಆದರೆ ಈ ಅರ್ಧ ಶತಮಾನದಲ್ಲಿ ಎರಡೂ ನಗರಗಳು ನಿರೀಕ್ಷೆಯಂತೆ ಬೆಳವಣಿಗೆ ಕಂಡಿಲ್ಲ. ಕೆಲವೇ ವರ್ಷಗಳ ಹಿಂದೆ ಅಸ್ತಿತ್ವಕ್ಕೆ ಬಂದ ಕೆಲವು ಮಹಾನಗರ ಪಾಲಿಕೆಗಳ ಜನಸಂಖ್ಯೆಗಿಂತ ನಾಲ್ಕು ಪಟ್ಟು ಜನಸಂಖ್ಯೆ ಹುಬ್ಬಳ್ಳಿ ಧಾರವಾಡದಲ್ಲಿ ಇದೆ. ಹೀಗಿದ್ದರೂ ಧಾರವಾಡ ಈಗಲೂ ಒಂದು 'ಸುಧಾರಿಸಿದ ಹಳ್ಳಿ' ಎಂದೇ ಕರೆಯಿಸಿಕೊಳ್ಳುತ್ತಿದೆ.

ಈ ಅವಳಿ ನಗರಗಳಿಗೆ ಸರ್ಕಾರ ನೀಡುತ್ತಿರುವ ಅನುದಾನ ಏತಕ್ಕೂ ಸಾಲುತ್ತಿಲ್ಲ. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಆಡಳಿತ ಯಂತ್ರ ನಿಭಾಯಿಸುವುದಕ್ಕೇ ದೊಡ್ಡ ಮೊತ್ತ ಖರ್ಚಾಗುತ್ತಿದೆ. ಅನುದಾನದ ಸಿಂಹ ಪಾಲು ಹುಬ್ಬಳ್ಳಿಗೆ ಮಾತ್ರ ವೆಚ್ಚವಾಗುತ್ತಿದೆ ಎಂಬುದು ಧಾರವಾಡದ ಜನರಲ್ಲಿ ಅತೃಪ್ತಿ ಮೂಡಿಸಿದೆ.

1962ರಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಅಸ್ತಿತ್ವಕ್ಕೆ ಬಂತು. ಹುಬ್ಬಳ್ಳಿಯನ್ನು ಮಾತ್ರವೇ ಪಾಲಿಕೆ ಮಾಡುವ ಯೋಜನೆ ಇತ್ತಾದರೂ ಪಾಲಿಕೆ ರಚನೆಗೆ ಅಗತ್ಯ ಇರುವಷ್ಟು ಜನಸಂಖ್ಯೆ ಇಲ್ಲದ ಕಾರಣ ಜಿಲ್ಲಾ ಕೇಂದ್ರವಾದ ಧಾರವಾಡವನ್ನು ಸೇರಿಸಿಕೊಳ್ಳಲಾಯಿತು. ಆಗ ಅವಳಿ ನಗರದ ಒಟ್ಟು ಜನಸಂಖ್ಯೆ 3.80 ಲಕ್ಷ ಇತ್ತು. ಆದರೆ 2011ರ ಜನಗಣತಿಯಂತೆ ಅವಳಿ ನಗರದ ಜನಸಂಖ್ಯೆ 11.50ಲಕ್ಷ.

ನಗರೀಕರಣ, ನಗರಗಳತ್ತ ಜನರ ವಲಸೆ ಹಾಗೂ ಕೈಗಾರಿಕೆಗಳ ಸ್ಥಾಪನೆಯಿಂದಾಗಿ ಈಗ ಅವಳಿ ನಗರದ ಜನಸಂಖ್ಯೆ 16 ಲಕ್ಷ ದಾಟಿದೆ ಎಂದು ಅಂದಾಜು ಮಾಡಲಾಗಿದೆ. ಎರಡೂ ನಗರಗಳು ಒಟ್ಟು 244 ಚದರ ಕಿಲೋ ಮೀಟರ್ ವ್ಯಾಪ್ತಿಗೆ ವಿಸ್ತರಿಸಿಕೊಂಡಿವೆ. ಪಾಲಿಕೆಯ ವಾರ್ಡ್‌ಗಳ ಸಂಖ್ಯೆಯೂ ಕಳೆದ ಚುನಾವಣೆ ಸಂದರ್ಭದಲ್ಲಿ 82ಕ್ಕೆ ಏರಿಕೆಯಾಗಿದೆ. (2021ರ ಸೆ. 3ರಂದು ಚುನಾವಣೆ ನಡೆದಿತ್ತು. ಆದರೆ ಇಂದಿಗೂ ಚುನಾಯಿತರಿಗೆ ಅಧಿಕಾರ ಸಿಕ್ಕಿಲ್ಲ. ಮೇಯರ್, ಉಪಮೇಯರ್ ಆಯ್ಕೆಯೂ ಆಗಿಲ್ಲ). ಹೀಗಿದ್ದರೂ ರಾಜ್ಯದಲ್ಲಿರುವ ಇತರ ಹತ್ತು ಚಿಕ್ಕ ಮಹಾನಗರ ಪಾಲಿಕೆಗಳಿಗೆ ಸಿಗುವಷ್ಟೇ ಅನುದಾನ ಈ ಅವಳಿ ನಗರಕ್ಕೂ ಸಿಗುತ್ತಿರುವುದು ಬಕಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಎಂಬಂತಾಗಿದೆ.

ಜನವಸತಿ, ಸಂಚಾರ ಎಲ್ಲವೂ ಹೆಚ್ಚಳ...

ನಗರೀಕರಣದಿಂದಾಗಿ ಎರಡೂ ನಗರಗಳಲ್ಲಿ ಅನೇಕ ವಸತಿ ಬಡಾವಣೆಗಳು ಅಸ್ತಿತ್ವಕ್ಕೆ ಬಂದಿವೆ. ಅದರಲ್ಲೂ ಧಾರವಾಡದಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳು, ವಿಶ್ವವಿದ್ಯಾಲಯ, ಐಐಟಿ ಹಾಗೂ ಐಐಐಟಿಯಂತಹ ಉನ್ನತ ಶಿಕ್ಷಣ ಸಂಸ್ಥೆಗಳು, ಹೈಕೋರ್ಟ್, ಆಸ್ಪತ್ರೆಗಳು, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡುವ ಕೇಂದ್ರಗಳು, ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಕಚೇರಿಗಳು ಸ್ಥಾಪನೆಗೊಂಡ ಪರಿಣಾಮ ಜನವಸತಿ, ಸಂಚಾರ ಎಲ್ಲವೂ ಹೆಚ್ಚಿದೆ.

ಕಲೆ, ಸಾಹಿತ್ಯ, ಸಂಗೀತದಿಂದ ಸಮೃದ್ಧವಾಗಿರುವ ಸಾಂಸ್ಕೃತಿಕ ನಗರವಾಗಿಯೂ ದೇಶ, ವಿದೇಶಗಳಲ್ಲಿ ಧಾರವಾಡ ಜನಪ್ರಿಯವಾಗಿದೆ. ಈ ಎಲ್ಲಾ ಕಾರಣಗಳಿಂದ ಧಾರವಾಡ ಇನ್ನಷ್ಟು ಅಭಿವೃದ್ಧಿ ಆಗಬೇಕು. ಅದಕ್ಕಾಗಿ ಪ್ರತ್ಯೇಕ ಪಾಲಿಕೆ ಘೋಷಿಸಬೇಕು ಎಂಬ ಕೂಗು ದಿನದಿಂದ ದಿನಕ್ಕೆ ಬಲವಾಗುತ್ತಿದೆ. ಇದರ ಪರಿಣಾಮ ಧಾರವಾಡದ ಪ್ರತಿ ಬಡಾವಣೆ, ಸಂಘಟನೆ, ವೇದಿಕೆಗಳು ನಿರಂತರ ಧರಣಿ ಆರಂಭಿಸಿವೆ.

ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಗೆ ಹೋಲಿಸಿದರೆ ಇತರ ನಗರಪಾಲಿಕೆಗಲ್ಲಿ ಜನಸಂಖ್ಯೆ ಬಹಳ ಕಡಿಮೆ. ಹೀಗಿದ್ದರೂ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯಷ್ಟೇ ಅನುದಾನವನ್ನು ಎಲ್ಲಾ ಪಾಲಿಕೆಗಳೂ ಪಡೆಯುತ್ತಿವೆ. ಹೀಗಾಗಿ, ಹುಬ್ಬಳ್ಳಿ-ಧಾರವಾಡ ಪಾಲಿಕೆಯನ್ನು ವಿಭಜಿಸಿದರೆ ಎರಡೂ ನಗರಗಳೂ ಸಮಾನವಾಗಿ ಬೆಳವಣಿಗೆ ಕಾಣಲಿವೆ ಎಂಬುದು 'ಪ್ರತ್ಯೇಕ ಪಾಲಿಕೆ' ಹೋರಾಟದ ಮುಖ್ಯ ಅಂಶವಾಗಿದೆ.

ಪಾಲಿಕೆಗಳಿಗೆ ಸಿಗುತ್ತಿರುವ ಪ್ರಮುಖ ಅನುದಾನಗಳು ಹೀಗಿವೆ: ಮೂರು ವರ್ಷ ನೀಡುವ ಮುಖ್ಯಮಂತ್ರಿಗಳ ಅನುದಾನ ₹100 ಕೋಟಿ, ಮಹಾತ್ಮಾ ಗಾಂಧಿ ನಗರ ವಿಕಾಸ ಯೋಜನೆಯಲ್ಲಿ ₹150 ಕೋಟಿ, ಸ್ಮಾರ್ಟ್ ಸಿಟಿ ಯೋಜನೆಯಲ್ಲಿ ಒಂದು ಅವಧಿಗೆ ₹1 ಸಾವಿರ ಕೋಟಿ, ಅಮೃತ ಯೋಜನೆಯಲ್ಲಿ ₹150ರಿಂದ ₹200 ಕೋಟಿ, ಕೇಂದ್ರ ಹಣಕಾಸು ಯೋಜನೆಯಲ್ಲಿ ₹50 ಕೋಟಿ, ರಾಜ್ಯ ಹಣಕಾಸು ಯೋಜನೆಯಲ್ಲಿ ವಾರ್ಷಿಕ ₹10 ಕೋಟಿ.

ಸ್ಮಾರ್ಟ್ ಸಿಟಿ ಅಡಿ ಯೋಜನೆಗಳಿಲ್ಲ...:

ಒಂದು ಅವಧಿಗೆ ನೀಡಲಾದ ಸ್ಮಾರ್ಟ್ ಸಿಟಿ ಅನುದಾನದಲ್ಲಿ ಧಾರವಾಡಕ್ಕೆ ಒಂದು ಯೋಜನೆಯನ್ನೂ ಮಂಜೂರು ಮಾಡದಿರುವುದು ಧಾರವಾಡದ ಜನರ ಅಸಮಾಧಾನಕ್ಕೆ ಕಾರಣವಾಗಿದೆ. ಇಷ್ಟು ಮಾತ್ರವಲ್ಲ, 2018ರ ವಿಧಾನಸಭಾ ಚುನಾವಣೆ ಹೊಸ್ತಿಲಲ್ಲಿ ಅವಳಿ ನಗರಕ್ಕೆ ಮೂರು ಟೆಂಡರ್ ಶೂರ್ ರಸ್ತೆ ಮಂಜೂರಾಗಿತ್ತು. ಅದರಲ್ಲಿ ಒಂದು ಧಾರವಾಡಕ್ಕೆ ಮೀಸಲಾಗಿತ್ತು. ಹುಬ್ಬಳ್ಳಿಯ ರಸ್ತೆಗಳ ಕಾಮಗಾರಿ ಪೂರ್ಣಗೊಂಡು ಸಂಚಾರಕ್ಕೆ ಮುಕ್ತವಾದವು. ಆದರೆ ಧಾರವಾಡ ಟೆಂಡರ್ ಶೂರ್ ರಸ್ತೆ ಇಂದಿಗೂ ಪೂರ್ಣಗೊಂಡಿಲ್ಲ. ಕಾಲಮಿತಿಯೊಳಗೆ ಕಾಮಗಾರಿ ಪೂರ್ಣಗೊಳ್ಳದ ಕಾರಣ ವಿಶ್ವ ಬ್ಯಾಂಕ್ ನೆರವೂ ಮರಳಿದೆ. ಈ ಎಲ್ಲವೂ ಧಾರವಾಡದ ಬಗ್ಗೆ ಮಲತಾಯಿ ಧೋರಣೆ ತಳೆಯಲಾಗಿದೆ ಎಂಬ ಭಾವನೆ ಹೆಚ್ಚಾಗಲು ಕಾರಣವಾಗಿವೆ.

ಪಾಲಿಕೆ ಆಯುಕ್ತರು ವಾರದಲ್ಲಿ ಎರಡು ದಿನ (ಮಂಗಳವಾರ, ಶುಕ್ರವಾರ) ಧಾರವಾಡ ಕಚೇರಿಯಲ್ಲಿ ಲಭ್ಯವಿರಬೇಕು ಎಂಬ ನಿರ್ಣಯವನ್ನು ಧಾರವಾಡದ ಸದಸ್ಯರ ಆಗ್ರಹದ ಮೇಲೆ ಸಾಮಾನ್ಯ ಸಭೆಯಲ್ಲಿ ತೆಗೆದುಕೊಳ್ಳಲಾಗಿತ್ತು. ಹೀಗಿದ್ದರೂ ಈ ಎರಡು ದಿನಗಳಲ್ಲಿ ಧಾರವಾಡ ಜನರಿಗೆ ಆಯುಕ್ತರ ಲಭ್ಯತೆ ವಿರಳಾತಿವಿರಳ. ಆಯುಕ್ತರು ಕೈಗೆ ಸಿಗುವುದಿಲ್ಲ ಎಂದು ಜನರು ದೂರುವುದು ಸಾಮಾನ್ಯ.

ಜಿಲ್ಲೆಯ ಪ್ರಮುಖ ನಾಯಕರಾದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಚಿವ ಶಂಕರ ಪಾಟೀಲ ಮುನೇನಕೊಪ್ಪ, ಶಾಸಕ ಜಗದೀಶ ಶೆಟ್ಟರ್, ಹುಬ್ಬಳ್ಳಿ ಧಾರವಾಡ ಪಶ್ಚಿಮ ಕ್ಷೇತ್ರದ ಶಾಸಕ ಅರವಿಂದ ಬೆಲ್ಲದ ನೆಲೆಸಿರುವುದು ಹುಬ್ಬಳ್ಳಿಯಲ್ಲಿ. ಜಿಲ್ಲೆಗೆ ಸಂಬಂಧಿಸಿದ ಪ್ರಮುಖ ಸಭೆಗಳೂ ಹುಬ್ಬಳ್ಳಿಯಲ್ಲೇ ನಡೆದ ಉದಾಹರಣೆಗಳಿವೆ. ಈ ಎಲ್ಲಾ ಸಂಗತಿಗಳು ಧಾರವಾಡದ ಜನತೆಯಲ್ಲಿ ನಿರ್ಲಕ್ಷ್ಯ ಭಾವ ಮೂಡಿಸಿವೆ ಎಂಬುದು ಇಲ್ಲಿನ ಜನರ ಮಾತು.

ಹಿರಿಯ ಕವಿ ದಿವಂಗತ ಡಾ. ಚೆನ್ನವೀರ ಕಣವಿ ಅವರ ನೇತೃತ್ವದಲ್ಲಿ ಧಾರವಾಡ ಪ್ರತ್ಯೇಕ ಪಾಲಿಕೆಗೆ ಆಗ್ರಹಿಸಿ ಈ ಹಿಂದೆ ಸಹಿ ಸಂಗ್ರಹ ಅಭಿಯಾನವೂ ನಡೆದಿತ್ತು. ಶಾಸಕರು, ಸಂಸದ, ಸಚಿವ ಹಾಗೂ ಮುಖ್ಯಮಂತ್ರಿಗೂ ಮನವಿಯನ್ನು ಸಲ್ಲಿಸಲಾಗಿದೆ. ಪ್ರಸಕ್ತ ಬಜೆಟ್‌ನಲ್ಲಿ ಧಾರವಾಡ ಪ್ರತ್ಯೇಕ ಪಾಲಿಕೆ ಘೋಷಣೆಯ ನಿರೀಕ್ಷೆ ಹುಸಿಯಾದ ಬೆನ್ನಲ್ಲೇ, ಹೋರಾಟದ ಕಾವು ಹೆಚ್ಚಿದೆ. ನಿತ್ಯ ತಂಡೋಪತಂಡವಾಗಿ ಪಾಲಿಕೆ ಕಚೇರಿ ಪಕ್ಕದಲ್ಲಿ ಜನರು ಹೋರಾಟದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಆದರೆ ಪಾಲಿಕೆ ವಿಭಜಿಸಲು ಹುಬ್ಬಳ್ಳಿ ಜನತೆಯ ವಿರೋಧವಿಲ್ಲ ಎಂಬ ಸಂಗತಿಯೂ ಇಲ್ಲಿ ಗಮನಾರ್ಹ. ಅಭಿವೃದ್ಧಿ ದೃಷ್ಟಿಯಿಂದ ಎರಡೂ ನಗರಗಳು ಸಮನಾಗಿ ಬೆಳವಣಿಗೆ ಕಾಣಬೇಕು ಎಂಬ ಅಭಿಪ್ರಾಯವನ್ನು ಹುಬ್ಬಳ್ಳಿ ಜನರೂ ವ್ಯಕ್ತಪಡಿಸುತ್ತಿದ್ದಾರೆ.

ಹೀಗಾಗಿ ಹೈಕೋರ್ಟ್, ಐಐಟಿ ಇರುವ ಮುಮ್ಮಿಗಟ್ಟಿ, ಬೇಲೂರು ಕೈಗಾರಿಕಾ ಪ್ರದೇಶಗಳನ್ನು ಸೇರಿಸಿಕೊಂಡು ಧಾರವಾಡವನ್ನು ಪ್ರತ್ಯೇಕ ಪಾಲಿಕೆ ಮಾಡಬಹುದು. ಪಾಲಿಕೆ ರಚನೆಗೆ ಬೇಕಾದಷ್ಟು ಜನಸಂಖ್ಯೆಯೂ ಇಲ್ಲಿ ಇದೆ. ಇದು ಅಭಿವೃದ್ಧಿಗೆ ನೆರವಾಗಲಿದೆ ಎಂಬ ಸಲಹೆ ಕೇಳಿಬಂದಿದೆ.

ಪ್ರತ್ಯೇಕಗೊಂಡರೆ ನೌಕರರಿಗೆ ಮನೆ ಬಾಡಿಗೆ ಭತ್ಯೆ ಕಡಿಮೆ ಸಿಗಲಿದೆ ಎಂಬ ಚರ್ಚೆಯೂ ಇದೆ. ಪ್ರಸಕ್ತ 5ರಿಂದ 25ಲಕ್ಷ ಜನಸಂಖ್ಯೆ ಇರುವ ನಗರಗಳಲ್ಲಿ ಕೆಲಸ ಮಾಡುವ ನೌಕರರಿಗೆ ಮೂಲ ವೇತನದ ಶೇ 20ರಷ್ಟು ಮನೆ ಬಾಡಿಗೆ ಭತ್ಯೆ ನೀಡಬೇಕು. ಆದರೆ ಪ್ರತ್ಯೇಕಗೊಂಡರೆ ಧಾರವಾಡದಲ್ಲಿ ಭತ್ಯೆ ಶೇ 10ಕ್ಕೆ ಕುಸಿಯುವ ಆತಂಕವೂ ನೌಕರರಲ್ಲಿದೆ.

ಇದರ ನಡುವೆ 21 ಹಳ್ಳಿ ಹೊಂದಿರುವ ಅಣ್ಣಿಗೇರಿ ಹಾಗೂ 11 ಹಳ್ಳಿ ಒಳಗೊಂಡ ಅಳ್ನಾವರ ತಾಲ್ಲೂಕು ರಚನೆಗೆ ತೋರಿದ ರಾಜಕೀಯ ಹಿತಾಸಕ್ತಿಯನ್ನು ಹುಬ್ಬಳ್ಳಿ ಹಾಗೂ ಧಾರವಾಡ ನಗರಗಳಿಗೆ ಪ್ರತ್ಯೇಕ ಪಾಲಿಕೆ ಮಾಡಲು ರಾಜಕಾರಣಿಗಳು ತೋರುತ್ತಿಲ್ಲ ಎಂಬ ಬಗ್ಗೆಯೂ ಧಾರವಾಡದ ಜನರಲ್ಲಿ ಆಕ್ರೋಶ ಇದೆ.

ಧಾರವಾಡದಲ್ಲಿರುವ ಪಾಲಿಕೆ ಕಚೇರಿ ಕಟ್ಟಡ

ರಾಜ್ಯದಲ್ಲಿರುವ ಕೆಲ ಪಾಲಿಕೆಗಳ ಗಾತ್ರ

ಪಾಲಿಕೆ	ಜನಸಂಖ್ಯೆ (2011ರ ಜನಗಣತಿ)	ಪ್ರದೇಶ (ಚದರ ಕಿ.ಮೀ)	ವಾರ್ಡ್
ಹುಬ್ಬಳ್ಳಿ ಧಾರವಾಡ	11.23 ಲಕ್ಷ	244	82
ಮೈಸೂರು	8.93	128.42	65
ಕಲಬುರ್ಗಿ	6.56	64	55
ಬೆಳಗಾವಿ	5.86	94.07	58
ದಾವಣಗೆರೆ	5.65	141	45
ವಿಜಯಪುರ	3.45	102.38	35

ಪ್ರತ್ಯೇಕ ಪಾಲಿಕೆಯಿಂದ ಎರಡೂ ನಗರಗಳ ಅಭಿವೃದ್ಧಿ

ಜನಪ್ರತಿನಿಧಿಗಳೇ ಈ ವಿಷಯವನ್ನು ಆಸಕ್ತಿಯಿಂದ ನಿಭಾಯಿಸಬೇಕು. ಎರಡು ಪ್ರತ್ಯೇಕ ಪಾಲಿಕೆ ಆದಲ್ಲಿ ಪ್ರತ್ಯೇಕ ಅನುದಾನ ಸಿಗಲಿದೆ. ಇದರಿಂದ ಎರಡೂ ನಗರಗಳು ಹೆಚ್ಚಿನ ಅಭಿವೃದ್ಧಿ ಕಾಣಲಿವೆ. ಬೆಳಗಾವಿ, ಶಿವಮೊಗ್ಗ, ಬೀದರ್ ನಗರಗಳೂ ಉತ್ತಮವಾಗಿ ಅಭಿವೃದ್ಧಿ ಕಂಡಿವೆ. ಆದರೆ ಧಾರವಾಡದಂತಹ ಜಿಲ್ಲಾ ಕೇಂದ್ರದ ರಸ್ತೆಗಳು ಕಳೆದ 15 ವರ್ಷಗಳಿಂದ ಅಭಿವೃದ್ಧಿ ಕಂಡಿಲ್ಲ. ಹೀಗಿದ್ದರೂ ಪಾಲಿಕೆಯು ಕೊರತೆ ಬಜೆಟ್ ಮಂಡಿಸುತ್ತಿದೆ. ಹೀಗಾದರೆ ಧಾರವಾಡಿಗರು ಯಾವ ರೀತಿಯ ಅಭಿವೃದ್ಧಿಯನ್ನು ನಿರೀಕ್ಷಿಸಬಹುದು?

ಧಾರವಾಡದ ಪಾಲಿಕೆ ಕಚೇರಿಗೆ ಅಧಿಕಾರಿ ಇಲ್ಲ. ಸದ್ಯ ಪಾಲಿಕೆಗೆ ಇಬ್ಬರು ಐಎಎಸ್ ಅಧಿಕಾರಿಗಳು ಇದ್ದರೂ, ಅವರು ಹುಬ್ಬಳ್ಳಿ ಕಚೇರಿಯಲ್ಲೇ ಇರುತ್ತಾರೆ. ವಲಯಾಧಿಕಾರಿಗಳಿಂದ ದಬ್ಬಾಳಿಕೆ ಹಾಗೂ ಭ್ರಷ್ಟಾಚಾರದ ನಡೆಯುತ್ತಿರುವ ಕುರಿತು ಜನರು ಬಹಿರಂಗವಾಗಿ ಮಾತನಾಡುತ್ತಿದ್ದಾರೆ. ಧಾರವಾಡದ ನಾಗರಿಕರ ಸಂಕಷ್ಟಗಳನ್ನು ಯಾರ ಬಳಿ ಹೇಳಬೇಕೆನ್ನುವ ಪ್ರಶ್ನೆಗೆ ಉತ್ತರವೇ ಸಿಗುತ್ತಿಲ್ಲ. ಜನಪ್ರತಿನಿಧಿಗಳು ಈ ವಿಷಯದಲ್ಲಿ ನಿರ್ಲಕ್ಷ್ಯ ವಹಿಸಿದ್ದಾರೆ. ಹಳೆಯ ಪಾಲಿಕೆಯಾದರೂ ದೂರದೃಷ್ಟಿಯ ಕೊರತೆಯಿಂದಾಗಿ ಅಭಿವೃದ್ಧಿಯಲ್ಲಿ ಹಿಂದೆ ಉಳಿದಿದೆ.

ವೆಂಕಟೇಶ ಮಾಚಕನೂರ
ಧಾರವಾಡ ಪ್ರತ್ಯೇಕ ಮಹಾನಗರಪಾಲಿಕೆ ಹೋರಾಟ ವೇದಿಕೆ, ಧಾರವಾಡ

ಸಣ್ಣ ಸಂಸ್ಥೆಗಳಿಂದ ಉತ್ತಮ ಆಡಳಿತ



ಒಂದು ಕಾಲದಲ್ಲಿ ಧಾರವಾಡ, ಹಾವೇರಿ, ಗದಗ ಸೇರಿ ಒಂದು ಜಿಲ್ಲೆಯಾಗಿತ್ತು. ಧಾರವಾಡದಿಂದ ಜಿಲ್ಲಾಧಿಕಾರಿ ರಾಣೆಬೆನ್ನೂರಿಗೆ ಹೋದರೆ, ಅಲ್ಲಿ ಒಂದು ದಿನ ಉಳಿದು ಮರುದಿನ ಬರಬೇಕಾದ ಸ್ಥಿತಿ ಇತ್ತು. ಇದರಿಂದ ಎರಡೂ ಪ್ರದೇಶದ ಜನರಿಗೆ ಒಬ್ಬ ಅಧಿಕಾರಿ ನ್ಯಾಯ ದೊರಕಿಸುವುದು ಕಷ್ಟದ ಮಾತಾಗಿತ್ತು. ಹೀಗಾಗಿ ಮೂರು ಜಿಲ್ಲೆಗಳನ್ನಾಗಿ ಮಾಡಲಾಯಿತು. ಅದರಂತೆಯೇ ಹುಬ್ಬಳ್ಳಿ ಮತ್ತು ಧಾರವಾಡ ಎರಡೂ ಜನಸಂಖ್ಯೆ ಮತ್ತು ಆದಾಯ ಸಂಗ್ರಹದಲ್ಲಿ ಉತ್ತಮವಾಗಿವೆ. ಎರಡನ್ನೂ ಪ್ರತ್ಯೇಕ ಪಾಲಿಕೆ ಮಾಡಿದರೆ ಆಡಳಿತ ಇನ್ನಷ್ಟು ಬಿಗಿಯಾಗಲಿದೆ. ಎರಡೂ ನಗರಗಳ ಜನರಿಗೆ ತಮ್ಮ ಬಳಿಯೇ ಆಡಳಿತ ಸಿಗಲಿದೆ. ಇದನ್ನು 2011ರಲ್ಲೇ ಪ್ರಸ್ತಾಪಿಸಲಾಗಿತ್ತು. ಈಗ ಅದು ಚುರುಕು ಪಡೆದಿದೆ. ಈಗಲಾದರೂ ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ನೀಡಿದರೆ ಉತ್ತರ ಕರ್ನಾಟಕದ ಪ್ರಮುಖ ನಗರಗಳು ಇನ್ನಷ್ಟು ಉತ್ತಮವಾಗಿ ಬೆಳೆಯುವ ಸಾಧ್ಯತೆ ಹೆಚ್ಚು.

ಡಾ. ಪಾಂಡುರಂಗ ಪಾಟೀಲ
ಮಾಜಿ ಮೇಯರ್, ಹುಬ್ಬಳ್ಳಿ

ಶಿವಪೂಜಾ ವಿಧಾನ

ಸೃಷ್ಟಿಖಂಡದ ಶಿವಪೂಜಾವರ್ಣನ ಎಂಬ ಹದಿಮೂರನೆ ಅಧ್ಯಾಯದಲ್ಲಿ ಬ್ರಹ್ಮ ತನಗೆ ವಿಷ್ಣು ಹೇಳಿದ ಶಿವಪೂಜಾ ವಿಧಾನವನ್ನು ದೇವತೆಗಳಿಗೆ ತಿಳಿಸಿದ್ದನ್ನು ನಾರದನಿಗೆ ಹೇಳುತ್ತಾನೆ.

ಎಲೈ ಋಷಿಗಳಿರಾ, ದೇವತೆಗಳಿರಾ, ಎಲ್ಲ ಅಭೀಷ್ಟಗಳನ್ನೂ ಸುಖಗಳನ್ನೂ ಕೊಡುವಂಥ ಶ್ರೇಷ್ಠವಾದ ಶಿವಪೂಜಾ ವಿಧಾನವನ್ನು ಹೇಳುತ್ತೇನೆ, ಕೇಳಿರಿ; ಬ್ರಾಹ್ಮಿಮುಹೂರ್ತದಲ್ಲಿ ಎದ್ದು ಪಾರ್ವತಿಯಿಂದೊಡಗೂಡಿದ ಶಿವನನ್ನು ಸ್ಮರಣೆಮಾಡಬೇಕು. 'ಓ ದೇವಶ್ರೇಷ್ಠ, ಏಳು, ಎದ್ದೇಳು. ಓ ಪಾರ್ವತೀಕಾಂತ, ಬ್ರಹ್ಮಾಂಡದಲ್ಲಿ ಎಲ್ಲರಿಗೂ ಮಂಗಳವನ್ನು ಕರುಣಿಸು. ಧರ್ಮವು ಇಂಥಾದ್ದೆಂದು ತಿಳಿದಿದ್ದರೂ ನನಗೆ ಅದರಲ್ಲಿ ಪ್ರವೃತ್ತಿಯಿಲ್ಲ. ಅಧರ್ಮವು ಇಂಥದೆಂದು ಗೊತ್ತು. ಆದರೆ ನಾನದನ್ನು ಬಿಟ್ಟಿಲ್ಲ. ನಮ್ಮ ಹೃದಯದಲ್ಲಿ ನೆಲಸಿರುವ ನೀನು ನಮ್ಮನ್ನು ಹೇಗೆ ಪ್ರೇರೇಪಿಸುವಿಯೋ ಆ ರೀತಿ ಮಾಡುತ್ತೇನೆ' – ಈ ರೀತಿ ಭಕ್ತಿಯಿಂದ ಪ್ರಾರ್ಥನೆಯನ್ನು ಮಾಡಿ, ಗುರುಪಾದುಕೆಗಳನ್ನು ನೆನೆದು, ನಂತರ ಮಲಮೂತ್ರಾದಿ ಶೌಚಕರ್ಮಗಳಿಗೋಸ್ಕರ ಹೊರಗೆ ದಕ್ಷಿಣಾಭಿಮುಖವಾಗಿ ಹೋಗಬೇಕು. ಬಳಿಕ ಮಣ್ಣು, ನೀರುಗಳಿಂದ ದೇಹಶುದ್ಧಿಯನ್ನು ಮಾಡಿಕೊಂಡು, ಕೈಕಾಲುಗಳನ್ನು ಚೆನ್ನಾಗಿ ತೊಳೆದು, ಹಲ್ಲುಗಳನ್ನು ಉಜ್ಜಿಕೊಳ್ಳಬೇಕು.

ಭಕ್ತನಾದವನು ಷಷ್ಠೀ, ಅಮಾವಾಸ್ಯೆ, ನವಮೀ ಮುಂತಾದ ತಿಥಿಗಳೂ, ಭಾನುವಾರದಂದು ಕಡ್ಡಾಯವಾಗಿ ಹಲ್ಲುಗಳನ್ನುಜ್ಜಬಾರದು. ತನಗೆ ಅವಕಾಶ ದೊರೆತಂತೆ ನದೀ ಮೊದಲಾದ ಜಲಾಶಯಗಳಲ್ಲೋ, ಮನೆಯಲ್ಲಿಯೋ, ದೇಹಕ್ಕೂ ಕಾಲಕ್ಕೂ ವಿರೋಧವಿಲ್ಲದಂತೆ ಚೆನ್ನಾಗಿ ಸ್ನಾನವನ್ನು ಮಾಡಬೇಕು. ಭಾನುವಾರ, ಶ್ರಾದ್ಧದಿವಸ, ಸಂಕ್ರಮಣ, ಗ್ರಹಣದಿನ, ಮಹಾದಾನಗಳನ್ನು ಮಾಡುವ ಸಮಯ. ತೀರ್ಥಕ್ಷೇತ್ರಗಳಲ್ಲಿ, ಏಕಾದಶಿ ಮುಂತಾದ ಉಪವಾಸದಿವಸಗಳಲ್ಲಿ, ಅಶೌಚಾದಿಗಳಲ್ಲಿ ಬಿಸಿನೀರಿನಲ್ಲಿ ಸ್ನಾನಮಾಡಬಾರದು. ಪುಣ್ಯತೀರ್ಥ ನದಿಗಳಲ್ಲಿ ಭಕ್ತಿಯುಕ್ತನಾಗಿ ನಿಂತು, ನೀರು ತನಗೆ ಅಭಿಮುಖವಾಗಿ ಹರಿದುಬರುವ ಕಡೆ ಸ್ನಾನಮಾಡಬೇಕು.

ವಾರಗಳನ್ನು ಪರಿಶೀಲಿಸಿ ಕ್ರಮವಾಗಿ ಎಣ್ಣೆಯನ್ನೊತ್ತಿ ನೀರೆರೆದುಕೊಳ್ಳಬೇಕು. ನಿತ್ಯವೂ ಹಾಗೆ ತೈಲಾಭ್ಯಂಗನವನ್ನು ಮಾಡಿಕೊಳ್ಳುವ ಅಭ್ಯಾಸವಿದ್ದಲ್ಲಿ ಸುವಾಸನೆಯ ಎಣ್ಣೆ ದೂಷಿತವಲ್ಲ. ಶ್ರಾದ್ಧ, ಗ್ರಹಣ, ಉಪವಾಸ, ಪಾಡ್ಯಮಿ ಮತ್ತು ಗ್ರಹಣದಿನವೊಂದನ್ನು ಬಿಟ್ಟು, ಉಳಿದ ದಿನಗಳಲ್ಲಿ ಸಾಸಿವೆಯ ಎಣ್ಣೆಗೆ ದೋಷವಿಲ್ಲ. ಈ ರೀತಿ ವಿಧಿಗನುಸಾರವಾಗಿ, ಉತ್ತರಾಭಿಮುಖವಾಗಿಯೇ ಪೂರ್ವಾಭಿಮುಖವಾಗಿಯೋ ಸ್ನಾನವನ್ನಾಚರಿಸಬೇಕು.

ಸಾಧಕನು ಎಂದಿಗೂ ಉಟ್ಟ ಬಟ್ಟೆಯನ್ನು ಒಗೆಯದೆ ಹಾಗೆಯೇ ಸ್ನಾನಮಾಡಬಾರದು. ಶುದ್ಧವಾದ ವಸ್ತ್ರವನ್ನುಟ್ಟು ಆಯಾ ದೇವರನ್ನು ಸ್ಮರಿಸುತ್ತಾ ಸ್ನಾನಮಾಡಬೇಕು. ಇನ್ನೊಬ್ಬರ ಬಟ್ಟೆ, ರಾತ್ರಿ ಹೊದ್ದಿದ್ದ ಬಟ್ಟೆ, ಇವು ಉಚ್ಛಿಷ್ಟವೆನಿಸುವುವು. ಅವುಗಳನ್ನುಟ್ಟು ಸ್ನಾನ ಮಾಡಬಾರದು. ಸ್ನಾನವಾದ ಮೇಲೆ ಒದ್ದೆಬಟ್ಟೆಗಳನ್ನು ಬಿಚ್ಚಿಬಿಡಬೇಕು. ದೇವತೆಗಳು, ಋಷಿಗಳು, ಪಿತೃಗಳುಗಳಿಗೆ ತೃಪ್ತಿಯನ್ನುಂಟುಮಾಡುವುದಕ್ಕಾಗಿ ತರ್ಪಣವನ್ನು ಮಾಡಿ, ಮಡಿಬಟ್ಟೆಯನ್ನುಟ್ಟ ಬಳಿಕ ಆಚಮನವನ್ನು ಮಾಡಬೇಕು.

ನಂತರ ಗೋಮಯವನ್ನು ತಂದು ಸಾರಿಸಿ ಶುದ್ಧಮಾಡಿ, ಶುಭಕರವಾದ ಆಸನವನ್ನು ಏರ್ಪಡಿಸಬೇಕು. ಶುದ್ಧವಾದ ಮರದಿಂದ ಮಾಡಲ್ಪಟ್ಟ ಮಣೆಯನ್ನಾಗಲೀ, ಅಗಲವಾದ ಪೀಠವನ್ನಾಗಲೀ, ಕೋರಿದುದೆಲ್ಲವನ್ನೂ ಕೊಡುವ ಚಿತ್ರಾಸನವನ್ನಾಗಲೀ, ಉಪಯೋಗಿಸಬೇಕು. ಅಥವಾ ತನ್ನ ಆಶ್ರಮಕ್ಕೆ ಉಚಿತವಾದ ಕೃಷ್ಣಾಜಿನ ಮುಂತಾದುವನ್ನು ಉಪಯೋಗಿಸಬಹುದು. ಭಸ್ಮದಿಂದ ತ್ರಿಪುಂಡ್ರ ಧಾರಣವನ್ನು ಮಾಡಬೇಕು. ಭಸ್ಮದ ಮೂರು ಎಳೆಗಳಿಂದ ತಾನು ಮಾಡಿದ ಜಪವೂ ತಪಸ್ಸೂ ದಾನವೂ ಸಫಲವಾಗುವುದು. ಭಸ್ಮವು ದೊರೆಯದೆ ಹೋದರೆ ನೀರು ಮುಂತಾದುವುಗಳಿಂದ ತ್ರಿಪುಂಡ್ರವನ್ನು ಧರಿಸಬಹುದು.

ತ್ರಿಪುಂಡ್ರವನ್ನು ಧರಿಸಿದಮೇಲೆ ರುದ್ರಾಕ್ಷಿಗಳನ್ನು ಧರಿಸಬೇಕು. ಬಳಿಕ ತನ್ನ ನಿತ್ಯಕರ್ಮಗಳನ್ನು ಪೂರೈಸಿಕೊಂಡು ಶಿವನನ್ನು ಪೂಜಿಸಬೇಕು. ಮಂತ್ರಪೂರ್ವಕವಾಗಿ ಮೂರು ಸಲ ಆಚಮನವನ್ನು ಮಾಡಬೇಕು. ಅಥವಾ ಇದೇ ಗಂಗಾಜಲವೆಂದು ಉಚ್ಚರಿಸುತ್ತಾ ಒಂದು ಸಲವಾದರೂ ಆಚಮನವನ್ನು ಮಾಡಬೇಕು. ಹಾಗೆಯೇ, ಶಿವನ ಪೂಜೆಗೆಂದು ಅನ್ನೋದಕಗಳನ್ನೂ, ತನ್ನ ಶಕ್ತಿಯಿದ್ದಷ್ಟು ಇತರ ವಸ್ತುಗಳನ್ನೂ ಬಳಿಯಲ್ಲಿ ಇಟ್ಟುಕೊಳ್ಳಬೇಕು. ಗಂಧ, ಮಂತ್ರಾಕ್ಷತೆ, ನೀರು ತುಂಬಿದ ಅರ್ಘ್ಯಪಾತ್ರವೊಂದನ್ನು, ಉಪಚಾರಗಳನ್ನು ನೆರವೇರಿಸಲು ತನ್ನ ಬಲತೋಳಿನ ಕಡೆ ಇಟ್ಟುಕೊಳ್ಳಬೇಕು. ಗುರುವಿನ ಅಪ್ಪಣೆ ಪಡೆಯಬೇಕು. ತಾನು ಇಂತಹ ಇಷ್ಟಪ್ರಾಪ್ತಿಗಾಗಿ ಈ ಪೂಜೆಯನ್ನು ಮಾಡುವೆನು ಎಂಬುದಾಗಿ ಸಂಕಲ್ಪವನ್ನು ವಿಧಿವತ್ತಾಗಿ ಮಾಡಿ, ಶಿವನನ್ನು ಅತಿಶಯವಾದ ಭಕ್ತಿಯಿಂದ ಪೂಜಿಸಬೇಕು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಪೊಲೀಸ್ ಅಧಿಕಾರಿ ಮತ್ತು ಮುಸ್ಲಿಂ ವ್ಯಕ್ತಿ ಮಧ್ಯೆ ವಾಗ್ವಾದ ನಡೆಯುತ್ತಿರುವ ವಿಡಿಯೊವೊಂದು ವೈರಲ್ ಆಗಿದೆ. ದೆಹಲಿಯ ಜಹಾಂಗೀರ್‌ಪುರಿಯಲ್ಲಿ ನಡೆದ ಕೋಮು ಗಲಭೆ ಜೊತೆ ಈ ವಿಡಿಯೊವನ್ನು ತಳಕು ಹಾಕಲಾಗಿದೆ. 'ಮುಸ್ಲಿಂ ವ್ಯಕ್ತಿಯೊಬ್ಬರು ಪೊಲೀಸ್ ಅಧಿಕಾರಿಗೇ ಬೆದರಿಕೆ ಒಡ್ಡುತ್ತಿದ್ದಾರೆ. ಅವರಿಬ್ಬರ ನಡುವೆ ನಡೆದ ಸಂಭಾಷಣೆ ಸಂಪೂರ್ಣವಾಗಿ ಕೇಳಿಸುವುದಿಲ್ಲ. ಆದರೆ ಸಮವಸ್ತ್ರ ತೆಗೆದು ನನ್ನನ್ನು ಭೇಟಿ ಆಗು ಎಂದು ವ್ಯಕ್ತಿಯು ಪೊಲೀಸ್ ಅಧಿಕಾರಿಗೆ ಬೆದರಿಕೆ ಒಡ್ಡಿದ್ದಾರೆ. ದೆಹಲಿಯಲ್ಲಿ ಪರಿಸ್ಥಿತಿ ಕೈಮೀರಿದೆ' ಎಂದು ವಿಡಿಯೊ ಜೊತೆ ಮಾಹಿತಿ ಹಂಚಲಾಗಿದೆ.

ವಿಡಿಯೊ ಜೊತೆ ಹಂಚಲಾಗಿರುವ ಮಾಹಿತಿ ಸುಳ್ಳು ಎಂದು 'ದಿ ಲಾಜಿಕಲ್ ಇಂಡಿಯನ್' ವೇದಿಕೆ ವರದಿ ಮಾಡಿದೆ. ಈ ವಿಡಿಯೊ ಸೆರೆ ಆಗಿರುವುದು ಜಹಾಂಗೀರ್‌ಪುರಿಯಲ್ಲಿ ಅಲ್ಲ ಬದಲಾಗಿ ಮಹಾರಾಷ್ಟ್ರದ ಜಲ್‌ಗಾಂವ್ ಜಿಲ್ಲೆಯಲ್ಲಿ. ವಿಡಿಯೊವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಪೊಲೀಸ್ ಮತ್ತು ವ್ಯಕ್ತಿ ಮರಾಠಿಯಲ್ಲಿ ಸಂಭಾಷಣೆ ನಡೆಸುತ್ತಿರುವುದು ತಿಳಿದುಬಂದಿದೆ. 'ಬಂಧಿಸುತ್ತೇನೆ ಎಂದು ನನ್ನನ್ನು ಹೆದರಿಸಬೇಡಿ' ಎಂದು ವ್ಯಕ್ತಿ ಏರುಸ್ವರದಲ್ಲಿ ಮಾತನಾಡುತ್ತಿರುವುದು ಕೇಳುತ್ತಿದೆ. 2021ರ ಮಾರ್ಚ್ 21ರಲ್ಲೇ ಈ ವಿಡಿಯೊವನ್ನು ಟ್ವೀಟ್ ಮಾಡಲಾಗಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಮನೆ - ಪಾಠಶಾಲೆ

ಮನೆಯೆ ಮಠವೆಂದು ತಿಳಿ, ಬಂಧು ಬಳಗವೆ ಗುರುವು |
ಅನವರತಪರಿಚರ್ಯೆಯವರೊರೆವ ಪಾಠ ||
ನಿನಗುಳಿದ ಜಗವ ಮುಟ್ಟಿಪ ಸೇತು ಸಂಸಾರ |
ಮನಕೆ ಪುಟಸಂಸ್ಕಾರ – ಮಂಕುತಿಮ್ಮ || 611 ||

ಪದ-ಅರ್ಥ: ಅನವರತಪರಿಚರ್ಯೆಯವರೊರೆದ = ಅನವರತ(ಸದಾಕಾಲದ) + ಪರಿಚರ್ಯೆಯ (ಉಪಚಾರ, ಸೇವೆ) + ಅವರು + ಒರೆವ(ಹೇಳುವ), ನಿನಗುಳಿದ = ನಿನಗೆ + ಉಳಿದ, ಮುಟ್ಟಿಪ = ಮುಟ್ಟಿಸುವ, ಪುಟಸಂಸ್ಕಾರ = ಪುನಃಪುನಃ ಕಾಯಿಸಿ, ಕುದಿಸಿ ಕಸ ತೆಗೆಯುವ ಕ್ರಿಯೆ.

ವಾಚ್ಯಾರ್ಥ: ಮನೆಯನ್ನೇ ಒಂದು ಪಾಠಶಾಲೆಯೆಂದು ತಿಳಿ. ಅಲ್ಲಿ ನಮ್ಮ ಬಂಧು-ಬಳಗದವರೆ ಗುರುಗಳು. ನಾವು ಸದಾಕಾಲ ಮಾಡುವ ಸೇವೆಗಳೇ ಪಾಠ. ಈ ಸಂಸಾರವೇ ನಮ್ಮನ್ನು ಉಳಿದ ಜಗತ್ತಿಗೆ ಜೋಡಿಸುವ ಸೇತುವೆ. ಅದರಿಂದಲೇ ಮನಸ್ಸಿನ ಶುದ್ಧಿ, ಸಂಸ್ಕಾರ.

ವಿವರಣೆ: ಜೀವನವೆನ್ನುವುದು ಮನುಷ್ಯನಿಗೆ ಯಾವಾಗಲೂ ನಿಗೂಢವೇ. ಅದರ ಉಗಮ, ಬೆಳವಣಿಗೆ, ಅವನತಿ ಮತ್ತು ಅಂತ್ಯಗಳು ಅವನ ಚಿಂತನೆಗಳನ್ನು ಕೆರಳಿಸಿವೆ. ಈ ನಿಗೂಢ ಜೀವನ ಪ್ರವಾಹವನ್ನು ಅರಿತುಕೊಂಡು ಅದನ್ನು ಸುಲಭಗಮ್ಯವಾಗಿಸಲು ಪ್ರಯತ್ನಗಳೇ ಸಂಸ್ಕಾರಗಳು. ಯುಗ ಯುಗಗಳ ಏಳುಬೀಳುಗಳ, ಸರಿತಪ್ಪುಗಳ ಅನುಭವದಿಂದ ನಮ್ಮ ಪೂರ್ವಿಕರು, ಪರಿಷ್ಕಾರವನ್ನು, ಪರಿಣಿತಿಯನ್ನು ಅಪೇಕ್ಷಿಸುವ ಉಳಿದ ಕಲೆಗಳ ಹಾಗೆ ಜೀವನವೂ ಒಂದು ಶ್ರೇಷ್ಠ ಕಲೆ ಎಂಬುದನ್ನು ಕಂಡುಕೊಂಡರು. ಮನುಷ್ಯನನ್ನು ಹಾಗೆಯೇ ಬಿಟ್ಟರೆ ಅವನು ಕಾಡುಪ್ರಾಣಿಗಳ ಹಾಗೆಯೇ ಆದಾನು ಎಂದುಕೊಂಡು ಅವನನ್ನು ತಿದ್ದಿ, ತೀಡಿ, ಸಮಾಜದಲ್ಲಿ ಗೌರವದಿಂದ, ನಡತೆಯಿಂದ ಬದುಕುವ ಹಾಗೆ ಮಾಡುವ ಪ್ರಯತ್ನ ಸಂಸ್ಕಾರ.

ಈ ಸಂಸ್ಕಾರವನ್ನು ಮನುಷ್ಯ ಪಡೆಯುವುದು ಎಲ್ಲಿಂದ, ಯಾರಿಂದ ಮತ್ತು ಯಾವಾಗ? ಮಗು ಹುಟ್ಟಿದ ತಕ್ಷಣ ಸಂಸ್ಕಾರ ಶಿಕ್ಷಣ ಪ್ರಾರಂಭವಾಗುತ್ತದೆ. ಮಗು, ತಾಯಿ, ತಂದೆ, ಅಣ್ಣ, ತಮ್ಮ, ತಂಗಿ ಮತ್ತುಳಿದ ಪರಿವಾರದ ಸದಸ್ಯರೊಡನೆ ವ್ಯವಹರಿಸುತ್ತದೆ. ಆಗ ಅದಕ್ಕೆ ಯಾವಾಗ, ಹೇಗೆ ನಡೆದುಕೊಳ್ಳಬೇಕು ಎನ್ನುವುದರ ಅರಿವು ಮೂಡುತ್ತದೆ. ಹಿರಿಯರು ಮಗುವಿಗೆ ಶಿಸ್ತು ಕಲಿಸುತ್ತಾರೆ, ಸಂಯಮ ಕಲಿಸುತ್ತಾರೆ. ಇದಕ್ಕಾಗಿ ಶಿಕ್ಷೆ, ಶಿಕ್ಷಣ ಎರಡೂ ಆಗುತ್ತವೆ. ಮನೆಯ ಎಲ್ಲ ಸದಸ್ಯರಿಂದ ಮಗು ಕಲಿಯುವುದರಿಂದ ಅವರೇ ಮೊದಲ ಗುರುವಾಗುತ್ತಾರೆ. ವ್ಯಕ್ತಿ ಸಂಸಾರದಲ್ಲಿ ಬರುವ ಕಷ್ಟ-ಸುಖಗಳನ್ನು ಅನುಭವಿಸುತ್ತ, ತನ್ನ ನಡವಳಿಕೆಯನ್ನು ಸರಿಪಡಿಸುತ್ತ ಬೆಳೆಯುವುದೇ ಅವನಿಗೆ ದೊರೆಯುವ ಪಾಠ. ಯಾವ ಮನೆಯಲ್ಲಿ ಮಗುವಿಗೆ ಸರಿಯಾದ ಸಂಸ್ಕಾರ ದೊರೆಯುತ್ತದೋ, ಅದು ಮುಂದೆ ಜವಾಬ್ದಾರಿ ಪ್ರಜೆಯಾಗಿ, ನಾಯಕನಾಗುತ್ತದೆ. ತಾಯಿ ಪುತಲೀಬಾಯಿ ಮಗ ಮೋಹನದಾಸನಿಗೆ, ಜೀಜಾಬಾಯಿ ಶಿವಾಜಿಗೆ, ಭುವನೇಶ್ವರಿ ದೇವಿ ನರೇಂದ್ರನಿಗೆ, ತಾಯಿ ರ‍್ಯಾಂಬೆ ಬಾಲಕ ಶಂಕರನಿಗೆ ನೀಡಿದ ಜೀವನಪಾಠ ಅವರನ್ನು ಮೇರುವ್ಯಕ್ತಿಗಳನ್ನಾಗಿಸಿತು.

ಸಂಸಾರದಲ್ಲಿ ಸರಿಯಾಗಿ ಪಾಠಗಳನ್ನು ಪಡೆದು ಬೆಳೆದ ಬಾಲಕ ಮುಂದೆ ಉಳಿದ ಜಗತ್ತಿನೊಡನೆ ಬೆರೆಯುತ್ತಾನೆ. ಆಗ ಸಂಸಾರವೇ ಮತ್ತು ಸಂಸಾರದಲ್ಲಿ ಪಡೆದ ಶಿಕ್ಷಣವೇ, ವ್ಯಕ್ತಿಯನ್ನು ಸಮಾಜಕ್ಕೆ ಜೋಡಿಸುವ ಸೇತುವೆಯಾಗುತ್ತದೆ. ಸೇತುವೆ ಎಷ್ಟು ಗಟ್ಟಿಯಾದದ್ದು ಎನ್ನುವುದು, ಮನೆಯಲ್ಲಿ ಕಲಿತ ಪಾಠದ ಗಟ್ಟಿತನದ ಮೇಲೆ ಅವಲಂಬಿತವಾಗಿದೆ. ಕಗ್ಗ, ಮನೆಯಲ್ಲಿ ಕಲಿತ ಪಾಠವನ್ನು 'ಪುಟಸಂಸ್ಕೃತಿ' ಎನ್ನುತ್ತದೆ. ಪುಟಸಂಸ್ಕಾರವೆಂದರೆ, ಮೇಲಿಂದ ಮೇಲೆ, ಕಾಯಿಸಿ, ಕುದಿಸಿ, ಸೋರಿ ಪರಿಷ್ಕಾರ ಮಾಡುವ ಕಾರ್ಯ. ಎಷ್ಟು ಬಾರಿ ಸೋಸುತ್ತೇವೋ ಅಷ್ಟು ಬದುಕು ಶುದ್ಧವಾಗುತ್ತದೆ. ಅದಕ್ಕೇ ಮನೆಯನ್ನು ಪಾಠಶಾಲೆ ಎನ್ನುವುದು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಏಪ್ರಿಲ್ 21, 2022

ಶ್ರೀಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ಚೈತ್ರ ಕೃಷ್ಣ ಪಂಚಮಿ ಗಂ. 11-13 ನಕ್ಷತ್ರ: ಮೂಲಾ ಗಂ. 21-52 ಯೋಗ: ಪರಿಘ ಗಂ. 10-21, ಕರಣ: ತೈತಿಲ ಗಂ. 11-13, ಮೇಷ ಮಾಸದ 07 ನೇ ದಿನ. ರಾಹುಕಾಲ: ಮಧ್ಯಾಹ್ನ 01:30 – 03:00 ಸೂರ್ಯೋದಯ : 06-18 ಸೂರ್ಯಾಸ್ತ : 06-41 ಮುಸ್ಲಿಂ ದಿನಾಂಕ : 19 ರಂಜಾನ್ ಅದೃಷ್ಟ ಸಂಖ್ಯೆ: 1, 7

ಮೇಷ: ಹಣಕಾಸಿನ ವ್ಯವಹಾರ ನಡೆಸುವವರು ತಮ್ಮ ನೂತನ ಯೋಜನೆಗಳನ್ನು ಇನ್ನೂ ಕೆಲವು ಕಡೆಯಲ್ಲಿ ವಿಸ್ತರಿಸಬಹುದು. ಸಂಪರ್ಕ ಸಾಧನದಂತಹ ಉದ್ಯೋಗದಲ್ಲಿ ನಿರತರಾದ ವ್ಯಕ್ತಿಗಳಿಗೆ ವಿಶೇಷ ಗೌರವ ಲಭಿಸುವುದು.

ವೃಷಭ: ಉನ್ನತ ಅಧಿಕಾರಿಗಳ ಸಂಪರ್ಕ ಉಂಟಾಗುವುದು. ಕೈಗಾರಿಕಾ ಕ್ಷೇತ್ರದಲ್ಲಿ ಹೆಚ್ಚಿನ ಲಾಭ. ಆಧ್ಯಾತ್ಮಿಕ ಚಿಂತನೆಗಳಿಂದ ಮಾನಸಿಕ ನೆಮ್ಮದಿ ಪ್ರಾಪ್ತಿಯಾಗಲಿದೆ. ಗುಪ್ತಚರ ದಳ ಮಂದಿಗೆ ಕಾರ್ಯಭಾರಗಳು ಹೆಚ್ಚಲಿವೆ.

ಮಿಥುನ: ನಿಮ್ಮ ಬಹಳ ದಿನಗಳ ಮಹತ್ವಾಕಾಂಕ್ಷೆ ಈಡೇರಿಸಿಕೊಳ್ಳುವ ಪ್ರಯತ್ನದಲ್ಲಿ ಸಕಾರಾತ್ಮಕ ದೃಷ್ಟಿಕೋನವಿರಲಿ. ಯಾವುದೇ ತರಹದ ವಾಮಮಾರ್ಗವು ಸರಿಯಲ್ಲ. ಗುತ್ತಿಗೆ ವ್ಯವಹಾರಗಳಲ್ಲಿ ಎಡವುವಂತಾಗಬಹುದು, ಜಾಗ್ರತರಾಗಿರಿ.

ಕರ್ಕಾಟಕ: ವಿದ್ಯಾರ್ಥಿಗಳು ತಮ್ಮ ವಿಶೇಷ ಅಧ್ಯಯನ ಕ್ಷೇತ್ರಗಳಲ್ಲಿ ಮುಂದುವರೆಯಲು ಬಹಳಷ್ಟು ಅವಕಾಶಗಳು ಸೃಷ್ಟಿಯಾಗುತ್ತವೆ. ನಿಮ್ಮ ಸ್ವಂತ ಪ್ರಯತ್ನದಿಂದ ಆಸ್ತಿ ಸಂಪಾದನೆ ಮಾಡಬಹುದು. ಆಕಸ್ಮಿಕ ಧನಲಾಭ.

ಸಿಂಹ: ಉದ್ಯೋಗ ಕ್ಷೇತ್ರದಲ್ಲಿ ಬಂದಿರುವ ಸಮಸ್ಯೆಗಳಿಗೆ ಪರಿಹಾರಗಳು ದೊರೆಯಲಿದೆ. ಮಾತೃವರ್ಗದವರ ಸಹಾಯದಿಂದ ಆರ್ಥಿಕತೆಯಲ್ಲಿನ ಭಯ ನಿವಾರಣೆಯಾಗುವುದು. ಶಿವನ ಆರಾಧನೆಯಿಂದ ನೆಮ್ಮದಿ.

ಕನ್ಯಾ: ನವದಂಪತಿಗಳಿಗೆ ಸಂತಾನದ ಶುಭ ಸುದ್ದಿ ಕೇಳಿ ಬರುವುದು. ಆಪ್ತರಿಂದ ಬರುವ ಸಲಹೆ ಸೂಚನೆಗಳಿಗೆ ಗಮನ ನೀಡಿ. ಮನೆಯಲ್ಲಿ ಸೌಹಾರ್ದಯುತವಾದ ವಾತಾವರಣ ಸೃಷ್ಟಿಯಾಗಲಿದೆ. ಚಿನ್ನಾಭರಣ ವ್ಯಾಪಾರಿಗಳಿಗೆ ಲಾಭ.

ತುಲಾ: ಕೀಳರಿಮೆ, ಹಿಂಜರಿಕೆಯ ಸ್ವಭಾವ ಅಥವಾ ಅಹಂಕಾರದ ನಡವಳಿಕೆಯನ್ನು ಬಿಟ್ಟು ಕಾರ್ಯ ಕೈಗೊಳ್ಳಲು ಮುಂದಾಗಿ, ಗೆಲುವು ನಿಮ್ಮದಾಗುತ್ತದೆ. ಪಾಲುದಾರರಿಂದ ಉತ್ತೇಜನಕಾರಿ ಪ್ರತಿಕ್ರಿಯೆ ದೊರೆಯಲಿದೆ.

ವೃಶ್ಚಿಕ: ಸ್ವಪ್ರಯತ್ನದಿಂದ ಕೆಲಸಗಳನ್ನು ಸಾಧಿಸಿ, ಆರ್ಥಿಕ ಬೆಳವಣಿಗೆ ಉಂಟಾಗುವುದು. ಎಲೆಕ್ಟ್ರಿಕಲ್ ಕಂಟ್ರಾಕ್ಟ್ ಮಾಡುವವರಿಗೆ ಉತ್ತಮ ಉದ್ಯೋಗ ದೊರೆತು ಸಂತೋಷ.

ಧನು: ಹತ್ತಿ ಬಟ್ಟೆಗಳ ತಯಾರಕರಿಗೆ ಹೆಚ್ಚಿನ ಬೇಡಿಕೆ ಸಿಗಲಿದೆ. ಕಳೆದು ಹೋಗಿದ್ದ ವಸ್ತುಗಳು ಪತ್ತೆಯಾಗಿ ಕೈ ಸೇರುವುದು. ಬಹಳ ದಿನಗಳಿಂದಲೂ ಆರಂಭಿಸಬೇಕೆಂದಿದ್ದ ನೂತನ ಕಾರ್ಯ ಆರಂಭಿಸಲು ಇದು ಸಕಾರ.

ಮಕರ: ಅವಶ್ಯಕತೆ ಇರುವ ಜಾಗದಲ್ಲಿ ಅತ್ಯಂತ ಜಿಪುಣತನವನ್ನು ತೋರಿಸಿ ಸಮಾಜದಲ್ಲಿ ಗೌರವವನ್ನು ಕಳೆದುಕೊಳ್ಳುವಂತಾಗಬಹುದು. ಚಂಚಲ ಮನೋಭಾವದಿಂದಾಗಿ ತೀರ್ಮಾನ ತೆಗೆದುಕೊಳ್ಳುವುದು ಕಷ್ಟ ಎನಿಸುವುದು.

ಕುಂಭ: ಹಣವನ್ನು ಪೂರ್ಣ ಪ್ರಮಾಣದಲ್ಲಿ ಖಾಲಿ ಮಾಡಿಕೊಳ್ಳುವುದು ಸರಿಯಲ್ಲ. ದೈಹಿಕ ಮತ್ತು ಆರ್ಥಿಕ ಶಕ್ತಿಯನ್ನು ವ್ಯಯಿಸದೇ ಸಮಯಕ್ಕಾಗಿ ಕಾದು ಸಿಕ್ಕ ಸಮಯದಲ್ಲಿ ಕಾರ್ಯವೆಸಗುವ ಚಾಣಾಕ್ಷತನ ನಿಮ್ಮಲ್ಲಿ ಇರುವುದು.

ಮೀನ: ಸಾಲದ ಹೊರೆ ಕಡಿಮೆಯಾಗಲಿದೆ. ಷೇರುಪೇಟೆ ವಹಿವಾಟಿನಲ್ಲಿ ಪ್ರಗತಿ. ಹಿರಿಯರ ಮಧ್ಯಸ್ಥಿಕೆಯಿಂದ ಭೂ ವಿವಾದ ಬಗೆಹರಿಯುವುದು. ಸರ್ಕಾರದ ಕೆಲಸಗಳು ಮುಕ್ತಾಯದ ಹಂತಕ್ಕೆ ತಲುಪಲಿದೆ.

ಪದಬಂಧ 4934

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಏರುಪೇರಿಲ್ಲದ ಸ್ಥಿತಿ (4)
3.ಮುಗುಳುನಗೆ ಈ ರೀತಿ ಕಾಣುತ್ತಿದೆ (4)
5.ಅಸ್ಪಷ್ಟವಾಗಿರುವುದನ್ನು ಹೀಗೆನ್ನಿ (3)
7.ವಿರೋಧದ ವಿರುದ್ಧ ಪದ ಉಲ್ಟಾ ಆಗಿದೆ (2)
9.ಆಸ್ಥಾನದಲ್ಲಿ ಸಿಕ್ಕಿರುವ ನೆಲೆ (2)
10.ಆಮೇಲೂ ಏರಿದ ಮತ್ತು! (3)
11.ವಿಮಾನ ಏರಿದವನ ಮರ್ಯಾದೆ! (2)
12.ಅಭಿನಯಿಸುವವ ಉಲ್ಟಾ ನಿಂತಿರುವನಲ್ಲಾ? (2)
14.ವನದ ಹತ್ತಿರ ಬೀಸಿದ ಗಾಳಿ (3)
16.ಅತೀ ಜಾಣನಿವನು (4)
17.ಅನ್ಯ ಮಾರ್ಗವಿದು (4)

ಮೇಲಿಂದ ಕೆಳಕ್ಕೆ
1.ಸಲೀಸು ಎಂದು ಹೀಗೆನ್ನಿ (3)
2.ಬುದ್ಧಿಯಿಲ್ಲಿ ತಿರುವುಮುರುವಾಗಿದೆ! (2)
3.ಹೆಡ್ಡತನ ಇಲ್ಲಿ ಕಾಣುತ್ತಿದೆ (2)
4.ದನವಿರುವ ಮನೆ! (3)
6.ಗೋಲ್ಡನ್ ಜುಬಿಲಿಯ ಕನ್ನಡೀಕರಣ! (7)
8.ವಿದ್ಯಾರ್ಹತೆ ಪ್ರಶಸ್ತಿ ನೀಡುವುದು (5)
9.ಬೇರೊಂದು ಸ್ಥಳಕ್ಕೆ ಹೋಗುವಿಕೆ (5)
11.ಇದು ಮತ್ತು ಬರಿಸುವಂಥದ್ದು! (3)
13.ಪಟ್ಟಣ ಇಲ್ಲಿ ಕಾಣುತ್ತಿದೆ (3)
14.ಪಯಣದಲ್ಲಿ ಕೈಗೊಂಡ ಪ್ರತಿಜ್ಞೆ (2)
15.ನಗರದಲ್ಲಿ ಖರೀದಿಸಿದ ಒಡವೆ (2)



4933ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬಲಿಪಶು 3.ದಮ್ಮಡಿ
4.ಕಶೇರುಕ 6.ಅಕಳಂಕ
7.ಕಾಮನೆ 8.ಪರದಾಡು
11.ಗಡಿಯಾರ 13.ಜಗಲಿ
14.ವಿನಿಮಯ

ಮೇಲಿಂದ ಕೆಳಕ್ಕೆ:
1.ಬಡಿವಾರ 2.ಶುಕ
3.ದಶಕ 5.ಕಣಕ
6.ಆನೆ 7.ಕಾಡು
8.ಪರಾಗ 9.ಪರಾಜಯ
10.ಜೋಕಾಲಿ 12.ರವಿ

ಸುಡೊಕು 5320

		4	9		2	1		6
1		6					8	
	8			6				5
7								
	5		7	1	4	2		8
4					6			7
2		5		7			6	
	6					8		
8		1	6		3			9

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5319 ಸುಡೊಕು

4	3	8	2	1	9	5	6	7
1	2	9	6	5	7	3	4	8
7	6	5	8	4	3	2	9	1
3	4	2	9	6	1	8	7	5
8	7	6	3	2	5	9	1	4
5	9	1	7	8	4	6	3	2
9	1	7	5	3	2	4	8	6
6	5	3	4	7	8	1	2	9
2	8	4	1	9	6	7	5	3

ಶ್ರೀಲಂಕಾ: ಬೆಂಬಲ ಹಿಂಪಡೆದ 3 ಸಂಸದರು

ಕೊಲಂಬೊ(ಪಿಟಿಐ): ಶ್ರೀಲಂಕಾದ ಅಧ್ಯಕ್ಷ ಗೋಟಬಯ ರಾಜಪಕ್ಸ ಅವರು ರಾಜೀನಾಮೆ ಸಲ್ಲಿಸಬೇಕೆಂಬ ಒತ್ತಾಯಗಳ ಬೆನ್ನಲ್ಲೇ, ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಮತ್ತೆ ಮೂವರು ಸಂಸದರು ಹಿಂಪಡೆದಿದ್ದಾರೆ. ಇದರಿಂದ ಗೋಟಬಯ ಸರ್ಕಾರಕ್ಕೆ ಭಾರಿ ಹಿನ್ನಡೆಯಾಗಿದೆ.

ಇತ್ತೀಚೆಗಷ್ಟೇ 39 ಸಂಸದರು ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಹಿಂಪಡೆದು, ಸರ್ಕಾರದಿಂದ ಹೊರ ನಡೆದಿದ್ದರು. ಸರ್ಕಾರಕ್ಕೆ ನೀಡಿದ್ದ ಬೆಂಬಲ ವಾಪಸ್ ಪಡೆದ ಸಂಸದರು ತಾವು ಪ್ರತಿಪಕ್ಷ ಸೇರಿದಂತೆ ಯಾವುದೇ ಪಕ್ಷದ ಜೊತೆ ಮೈತ್ರಿಗೆ ಸಿದ್ಧವಿಲ್ಲ. ಅಧ್ಯಕ್ಷ ಗೋಟಬಯ ರಾಜಪಕ್ಸ ಅವರು ರಾಜೀನಾಮೆ ಸಲ್ಲಿಸಬೇಕು. ಅಲ್ಲದೆ ದೇಶದಲ್ಲಿ ಎಲ್ಲ ಪಕ್ಷಗಳನ್ನು ಒಳಗೊಂಡ ಮಧ್ಯಂತರ ಸರ್ಕಾರ ರಚನೆಯಾಗಬೇಕು ಎಂದು ಪಟ್ಟು ಹಿಡಿದಿದ್ದಾರೆ.

ಅಮೆರಿಕಕ್ಕೆ ಅಸ್ಸಾಂಜೆ ಗಡಿಪಾರು: ಬ್ರಿಟನ್ ಕೋರ್ಟ್ ಆದೇಶ

ಲಂಡನ್(ಎಎಫ್‌ಪಿ): ಇರಾಕ್ – ಅಫ್ಗಾನಿಸ್ತಾನದ ಯುದ್ಧಗಳಿಗೆ ಸಂಬಂಧಿಸಿದಂತೆ ರಹಸ್ಯ ಕಡತಗಳನ್ನು ಬಹಿರಂಗಪಡಿಸಿದ್ದಕ್ಕಾಗಿ ವಿಚಾರಣೆ ಎದುರಿಸಲು ವಿಕಿಲೀಕ್ಸ್ ಸಂಸ್ಥಾಪಕ ಜೂಲಿಯನ್ ಅಸ್ಸಾಂಜ್ ಅವರನ್ನು ಅಮೆರಿಕಕ್ಕೆ ಗಡೀಪಾರು ಮಾಡಬೇಕು ಎಂದು ಬ್ರಿಟನ್ ನ್ಯಾಯಾಲಯವೊಂದು ಬುಧವಾರ ಆದೇಶ ಹೊರಡಿಸಿದೆ. ಇದೀಗ ಅಸ್ಸಾಂಜೆ ಅವರನ್ನು ಗಡೀಪಾರು ಮಾಡುವ ವಿಚಾರದ ನಿರ್ಧಾರ ಕೈಗೊಳ್ಳುವ ಜವಾಬ್ದಾರಿ ಆಂತರಿಕ ಸಚಿವೆ ಪ್ರೀತಿ ಪಟೇಲ್ ಮೇಲಿದೆ. ಅವರು ಗಡಿಪಾರಿಗೆ ಅನುಮೋದನೆ ನೀಡಿದಲ್ಲಿ, ಅಸ್ಸಾಂಜೆ ವಕೀಲರು ಹೈಕೋರ್ಟ್ ಮೊರೆ ಹೋಗುವ ಸಾಧ್ಯತೆ ಇದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಪುಣ್ಯಸ್ಮರಣೆ



ಶ್ರೀ ಜಿ. ಹೆಚ್. ಮುನಿರೆಡ್ಡಿ
ದಿ. ಗೌಡರ ಹನುಮರೆಡ್ಡಿರವರ ಮಗ (ಗೋಣಿಘಟ್ಟಪುರ)
ಇವರು ದಿನಾಂಕ 11-03-2018 ರಂದು ದೈವಾಧೀನರಾದರು

ಶ್ರೀಮತಿ ಗೌರಮ್ಮ
ದಿ. ಜಿ. ಹೆಚ್. ಮುನಿರೆಡ್ಡಿಯವರ ಧರ್ಮಪತ್ನಿ
ಇವರು ದಿನಾಂಕ 21-4-2021 ರಂದು ದೈವಾಧೀನರಾದರು

ನೀವು ನಮ್ಮನ್ನಗಲಿ 4 ವರ್ಷ ಕಳೆದರೂ ಹಾಗೂ ನೀವು ನಮ್ಮನ್ನಗಲಿ 1 ವರ್ಷ ಕಳೆದರೂ ನಿಮ್ಮಿಬ್ಬರ ಸವಿನೆನಪು ನಮ್ಮ ಹೃದಯಗಳಲ್ಲಿ ಹಚ್ಚ ಹಸಿರಾಗಿ ಉಳಿದಿದೆ. ನಿಮ್ಮಿಬ್ಬರ ಆತ್ಮಕ್ಕೆ ಚಿರಶಾಂತಿ ಕರುಣಿಸಲೆಂದು ಭಗವಂತನಲ್ಲಿ ಸದಾ ಪ್ರಾರ್ಥಿಸುವ

ನಿಮ್ಮ ಮಕ್ಕಳು, ಅಳಿಯಂದಿರು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು

ಮೊದಲನೇ ವರ್ಷದ ಪುಣ್ಯ ಸ್ಮರಣೆ



ಶ್ರೀ ಪಿ.ರಾಮು
ಮಾವಳ್ಳಿ ರಾಮಣ್ಣ
(Retd. BDA Class-I Contractor)
ಜನನ: 09.11.1941 – ಮರಣ :21.04.2021
ನೀವು ನಮ್ಮನ್ನು ಅಗಲಿ ಇಂದಿಗೆ ಒಂದು ವರ್ಷ ಕಳೆದರೂ ನಿಮ್ಮ ಸವಿನೆನಪು ಹೃದಯಾಂತರಾಳದಲ್ಲಿ ಅಚ್ಚಳಿಯದೆ ಉಳಿದಿದೆ.
ತಮ್ಮ ಸ್ಮರಣೆಯಲ್ಲಿರುವ
ಪತ್ನಿ, ಮಕ್ಕಳು ಮತ್ತು ಮೊಮ್ಮಕ್ಕಳು

3ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಗೋವೇನಹಳ್ಳಿ ಶಿವಣ್ಣರವರು
05-06-1957 – 21-04-2019
ನೆಲಮಂಗಲದ ಪ್ರಥಮ ದರ್ಜೆ ಗುತ್ತಿಗೆದಾರರು,
ಖುಷಿ ಆರ್.ಎಂ.ಸಿ ನಿರ್ದೇಶಕರು ಹಾಗೂ ಹರ್ಷ ಆಸ್ಪತ್ರೆ ಪಾಲುದಾರರು
ನಿಮ್ಮ ಆದರ್ಶಗಳೇ ನಮಗೆ ದಾರಿ ದೀಪ, ನಿಮ್ಮ ಆಶೀರ್ವಾದ ಎಂದೆಂದೂ ನಮ್ಮ ಮೇಲಿರಲಿ ಎಂದು ಕೋರುವ
ದುಃಖತಪ್ತರು : ಎಚ್. ಗಿರಿಜಾ ಶಿವಕುಮಾರ್ ಮತ್ತು ಕುಟುಂಬದವರು ಹಾಗೂ ಸಿಬ್ಬಂದಿ ವರ್ಗ ಹರ್ಷ ವಿದ್ಯಾಸಂಸ್ಥೆಗಳು, ಹರ್ಷ ಆಸ್ಪತ್ರೆ, ನೆಲಮಂಗಲ

3ನೇ ವರ್ಷದ ಪುಣ್ಯಸ್ಮರಣೆ

ದಿ. ಕೆ. ಜಿ. ಹನುಮಂತರಾಯಪ್ಪರವರು
ಮಾತೃಶ್ರೀ ಡೆವಲಪರ್ಸ್, T ದಾಸರಹಳ್ಳಿ
ನಿಧನ: 21-4-2019
ನೀವು ನಮ್ಮನ್ನು ಅಗಲಿ ಇಂದಿಗೆ ಮೂರು ವರ್ಷಗಳು ಸಂದರೂ ನಿಮ್ಮ ಸವಿನೆನಪು ಹೃದಯಾಂತರಾಳದಲ್ಲಿ ಅಚ್ಚಳಿಯದೆ ಉಳಿದಿದೆ. ನಿಮ್ಮ ದಿವ್ಯ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ
ಸಿ.ಎನ್.ಆರ್ ಗ್ರೂಪ್ ಹಾಗೂ ಕುಟುಂಬದವರು.

ಮರಿಯುಪೊಲ್ ಅಜೋವ್ ಉಕ್ಕಿನ ಸ್ಥಾವರದ ಮೇಲೆ ಭಾರಿ ಬಾಂಬ್ ದಾಳಿ

ಉಕ್ರೇನ್ ವಿಭಜನೆಗೆ ರಷ್ಯಾ ಸರ್ವಪ್ರಯತ್ನ

ಕೀವ್ (ಎಪಿ)/ ಮಾಸ್ಕೊ (ಎಎಫ್‌ಪಿ): ಸೇನಾ ಕಾರ್ಯಾಚರಣೆ ಹೊಸ ಘಟ್ಟ ತಲುಪಿದೆ ಎಂದು ರಷ್ಯಾದ ನಾಯಕರು ಹೇಳಿದ ಬೆನ್ನಲ್ಲೇ, ರಷ್ಯಾ ಪಡೆಗಳು, ಬುಧವಾರ ಕೂಡ ಉಕ್ರೇನ್ ನಗರಗಳು ಮತ್ತು ಪಟ್ಟಣಗಳ ಮೇಲೆ ಬಾಂಬ್ ಮತ್ತು ಕ್ಷಿಪಣಿಗಳ ಭೀಕರ ದಾಳಿ ನಡೆಸಿದವು.

ಸೇನಾ ಕಾರ್ಯಾಚರಣೆಗೆ ಮತ್ತಷ್ಟು ಸೈನಿಕರನ್ನು ನಿಯೋಜಿಸಿ, ಕಲ್ಲಿದ್ದಲು ಗಣಿಗಳು ಮತ್ತು ಕಾರ್ಖಾನೆಗಳು ಆವರಿಸಿರುವ ಪೂರ್ವ ಕೈಗಾರಿಕಾ ಹೃದಯಭಾಗ ನಿಯಂತ್ರಣಕ್ಕೆ ಮುಂದಾಗಿರುವ ರಷ್ಯಾ ಪಡೆಗಳು, ಉಕ್ರೇನ್ ಇಭ್ಭಾಗಿಸಲು ಸರ್ವ ಪ್ರಯತ್ನ ನಡೆಸುತ್ತಿವೆ.

‘ಡಾನ್‌ಬಾಸ್ ಪ್ರಾಂತ್ಯದಲ್ಲಿ ಧ್ವಂಸಗೊಂಡ ಮರಿಯುಪೊಲ್ ನಗರದ ವಿಸ್ತಾರ ಉಕ್ಕಿನ ಸ್ಥಾವರ ಛಿದ್ರಗೊಳಿಸಲು ರಷ್ಯಾ ಭಾರಿ ಬಾಂಬ್‌ಗಳನ್ನು ಹಾಕಿ, ಸ್ಫೋಟಿಸಿದೆ. ನೂರಾರು ಮಂದಿ ಆಶ್ರಯ ಪಡೆದಿದ್ದ ಆಸ್ಪತ್ರೆಯ ಮೇಲೂ ಬಾಂಬ್ ದಾಳಿ ನಡೆಸಿದೆ. ಅಜೋವ್ ಉಕ್ಕಿನ ಸ್ಥಾವರದ ಹಿಡಿತ ಕೈತಪ್ಪುವ ಕೊನೇ ಘಟ್ಟದಲ್ಲಿದ್ದೇವೆ’ ಎಂದು ಉಕ್ರೇನ್ ಸೇನಾ ಮುಖ್ಯಸ್ಥರು ಬುಧವಾರ ತಿಳಿಸಿದರು.

‘ಪೂರ್ವದ ವಿವಿಧೆಡೆ ರಷ್ಯಾ ಆಕ್ರಮಣ ಮುಂದುವರಿಸಿದೆ. ಉಕ್ರೇನ್ ಗಡಿ ರೇಖೆಯಲ್ಲಿ ದುರ್ಬಲ ಕೇಂದ್ರಗಳ ಮೇಲೆ ರಷ್ಯಾ ಪಡೆಗಳ ದಾಳಿ ತೀವ್ರಗೊಂಡಿದೆ. ಅಜೋವ್ ಉಕ್ಕಿನ ಸ್ಥಾವರದಲ್ಲಿ ಅಂತಿಮ ಪ್ರತಿರೋಧವನ್ನು ಹತ್ತಿಕ್ಕುವುದು ರಷ್ಯಾದ ಪ್ರಮುಖ ಆದ್ಯತೆ’ ಎಂದು ಉಕ್ರೇನ್ ಸೇನಾ ಮುಖ್ಯಸ್ಥರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಹಾರ್ಕಿವ್ ಮತ್ತು ಕ್ರಾಮಾರೊಸ್ಕಿ ನಗರಗಳ ಮೇಲೂ ಮಾರಕ ದಾಳಿ ನಡೆದಿದ್ದು, ಡಾನ್‌ಬಾಸ್‌ನ ಪಶ್ಚಿಮದ ಝಪೊರಿಝಿಯಾ ಮತ್ತು ನಿಪ್ರೊ ನಗರಗಳ ಸುತ್ತಮುತ್ತಲಿನ ಪ್ರದೇಶಗಳ ಮೇಲೂ ಕ್ಷಿಪಣಿಗಳ ದಾಳಿಯಾಗಿದೆ ಎಂದು ಅವರು ತಿಳಿಸಿದ್ದಾರೆ.

ಉಕ್ರೇನಿನ ಹಲವು ನಗರಗಳು ಮತ್ತು ಹಳ್ಳಿಗಳ ಸಮೀಪದಲ್ಲಿ ಜಮಾವಣೆಗೊಂಡಿದ್ದ ಸೈನಿಕರ ಶಿಬಿರಗಳು, ಕ್ಷಿಪಣಿಗಳು, ಯುದ್ಧಾಸ್ತ್ರಗಳ ಶಸ್ತ್ರಕೋಠಿಗಳು ಸೇರಿ ಹಲವು ಸೇನಾ ನೆಲೆಗಳ ಮೇಲೆ ಬಾಂಬ್ ದಾಳಿ ನಡೆಸಲಾಗಿದೆ ಎಂದು ರಷ್ಯಾ ರಕ್ಷಣಾ ಸಚಿವಾಲಯದ ವಕ್ತಾರ ಮೇಜರ್ ಜನರಲ್ ಐಗೊರ್ ಕೊನಶೆಂಕವ್ ಬುಧವಾರ ತಿಳಿಸಿದರು.

‘ಸರ್‌ಮ್ಯಾಟ್’ ಕ್ಷಿಪಣಿ ಪ್ರಯೋಗ ಯಶಸ್ವಿ: ಅಣ್ವಸ್ತ್ರ ಸಾಗಿಸಬಲ್ಲ, ಮುಂದಿನ ತಲೆಮಾರಿನ ಅತ್ಯಾಧುನಿಕ ‘ಸರ್‌ಮ್ಯಾಟ್’ ಖಂಡಾಂತರ ಬ್ಯಾಲೆಸ್ಟಿಕ್ ಕ್ಷಿಪಣಿಯ ಪ್ರಯೋಗವನ್ನು ಬುಧವಾರ ರಷ್ಯಾ ಸೇನೆ ಯಶಸ್ವಿಯಾಗಿ ನಡೆಸಿದೆ.



ಚೆರ್ನಿವ್‌ನ ಹೆಗ್ಗುರುತಾದ ಗ್ರಂಥಾಲಯದ ಮೇಲೆ ರಷ್ಯಾ ಪಡೆಗಳು 500 ಕೆ.ಜಿ.ಯ ಬಾಂಬ್ ದಾಳಿ ನಡೆಸಿದ್ದು, ಕಟ್ಟಡ ಧ್ವಂಸಗೊಂಡಿದೆ (ಉಕ್ರೇನ್ ರಕ್ಷಣಾ ಸಚಿವಾಲಯ ಬುಧವಾರ ಬಿಡುಗಡೆ ಮಾಡಿರುವ ಟ್ವಿಟರ್ ಚಿತ್ರ)

> **ಈ ಯುದ್ಧದಲ್ಲಿ ರಷ್ಯಾದ ಸೇನೆ, ವಿಶ್ವದ ಅತ್ಯಂತ ಅನಾಗರಿಕ, ಅಮಾನವೀಯ ಸೇನೆಯಾಗಿ ವಿಶ್ವದ ಇತಿಹಾಸದಲ್ಲಿ ಗುರುತಿಸಲ್ಪಡಲಿದೆ**
> **ವೊಲೊಡಿಮಿರ್ ಝೆಲೆನ್‌ಸ್ಕಿ,** ಉಕ್ರೇನ್ ಅಧ್ಯಕ್ಷ

ಬುಧವಾರದ ಬೆಳವಣಿಗೆ

- ಡಾನ್‌ಬಾಸ್‌ನಲ್ಲಿನ ದುರಂತವೇ ಉಕ್ರೇನ್‌ನಲ್ಲಿ ವಿಶೇಷ ಸೇನಾ ಕಾರ್ಯಾಚರಣೆ ನಡೆಸಲು ಪ್ರೇರಣೆ. ಡಾನ್‌ಬಾಸ್‌ನಲ್ಲಿ ಶೀಘ್ರ ಶಾಂತಿ ನೆಲೆಸಲಿದೆ– ಸಂವಾದದಲ್ಲಿ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಪ್ರತಿಪಾದನೆ
- ನಮಗೆ ಸೇನಾ ನೆರವು ನೀಡಿ, ಬುಲೆಟ್ಸ್, ಯುದ್ಧ ವಿಮಾನಗಳನ್ನು ಪೂರೈಸಿ– ಬಲ್ಗೇರಿಯಾಕ್ಕೆ ಉಕ್ರೇನ್ ವಿದೇಶಾಂಗ ಸಚಿವ ಡಿಮಿತ್ರ ಕುಲೆಬಾ ಮನವಿ
- ಉಕ್ರೇನ್ ಸಂಘರ್ಷ ಶಮನದ ಬದ್ಧತೆಯಿಂದ ಹಿಂದೆ ಸರಿದು, ಮಾತುಕತೆಯ ರಾಗ ಬದಲಿಸಿದೆ. ಹಾಗಾಗಿ ಶಾಂತಿ ಮಾತುಕತೆ ಪ್ರಗತಿ ಮಂದಗತಿಯಲ್ಲಿದೆ– ರಷ್ಯಾ ವಕ್ತಾರ ಡೆಮಿಟ್ರಿ ಪೆಸ್ಕೊವ್ ಆರೋಪ
- ಈವರೆಗೆ ಯುದ್ಧಪೀಡಿತ ಉಕ್ರೇನ್‌ನಿಂದ 50 ಲಕ್ಷಕ್ಕೂ ಹೆಚ್ಚು ನಿರಾಶ್ರಿತರು ದೇಶ ತೊರೆದಿದ್ದಾರೆ– ವಿಶ್ವಸಂಸ್ಥೆಯ ನಿರಾಶ್ರಿತರ ಏಜೆನ್ಸಿ
- ಮರಿಯುಪೊಲ್ ನಗರದಿಂದ ನಾಗರಿಕರ ಸ್ಥಳಾಂತರಕ್ಕೆ ಸುರಕ್ಷಿತ ಮಾರ್ಗ ತೆರೆಯಲು ರಷ್ಯಾ ಪಡೆ ಸಮ್ಮತಿಸಿದೆ. –ಉಕ್ರೇನ್ ಉಪ ಪ್ರಧಾನಿ ಇರಿನಾ
- ಫ್ರಾನ್ಸ್ ನಿರ್ಮಿತ ಸುಮಾರು 100 ಮಿಸ್ತ್ರಾಲ್ ವಾಯು ರಕ್ಷಣಾ ಕ್ಷಿಪಣಿಗಳನ್ನು ಉಕ್ರೇನ್‌ಗೆ ಕಳುಹಿಸಿಕೊಡಲಾಗಿದೆ– ನಾರ್ವೆ ರಕ್ಷಣಾ ಸಚಿವಾಲಯ

ಶರಣಾಗತಿಗೆ ಮತ್ತೊಮ್ಮೆ ರಷ್ಯಾ ಗಡುವು

ಮರಿಯುಪೊಲ್ ರಕ್ಷಣೆಗೆ ನಿಂತಿರುವ ಉಕ್ರೇನ್ ಸೈನಿಕರು ಮತ್ತು ಬಾಡಿಗೆ ಸೈನಿಕರು ಶಸ್ತ್ರ ತ್ಯಜಿಸಿ, ಶರಣಾಗಲು ರಷ್ಯಾ ರಕ್ಷಣಾ ಸಚಿವಾಲಯ ಸೋಮವಾರ ನೀಡಿದ್ದ ಅಂತಿಮ ಗಡುವನ್ನು ಉಕ್ರೇನ್ ಸೇನೆ ತಿರಸ್ಕರಿಸಿದ್ದರಿಂದ ಮಂಗಳವಾರ ಮತ್ತೊಂದು ಅವಕಾಶ ನೀಡಿತ್ತು. ಉಕ್ಕಿನ ಸ್ಥಾವರದ ಮೇಲೆ ಬುಧವಾರ ಬಾಂಬ್ ದಾಳಿ ಮಾಡುವ ಜತೆಗೆ, ಪ್ರತಿರೋಧ ಬಿಟ್ಟು, ಶರಣಾಗತಿಗೆ ಮತ್ತೊಮ್ಮೆ ಅಂತಿಮ ಗಡುವು ನೀಡಿದೆ. ಶರಣಾಗುವವರಿಗೆ ಜೀವದಾನದ ಜತೆಗೆ, ಸೂಕ್ತ ವೈದ್ಯಕೀಯ ಚಿಕಿತ್ಸೆ ಕೊಡಿಸುವ ಅಭಯವನ್ನೂ ನೀಡಿದೆ.

ಬುಲ್ಡೋಜರ್ ಚಲಾಯಿಸಿ: ಬಿಜೆಪಿ ಪತ್ರ

ನವದೆಹಲಿ (ಪಿಟಿಐ): ಜಹಾಂಗೀರ್‌ಪುರಿಯಲ್ಲಿ ಏಪ್ರಿಲ್ 16ರಂದು ಹನುಮ ಜಯಂತಿ ಮೆರವಣಿಗೆ ನಡೆಯುತ್ತಿದ್ದ ವೇಳೆ ಕಲ್ಲು ತೂರಾಟ ನಡೆಸಿದ ಸಮಾಜಘಾತುಕರ ಅಕ್ರಮ ಸ್ವತ್ತುಗಳನ್ನು ಪತ್ತೆ ಮಾಡಿ, ಅವುಗಳನ್ನು ಧ್ವಂಸ ಮಾಡಿ ಎಂದು ದೆಹಲಿ ಬಿಜೆಪಿ ಘಟಕದ ಅಧ್ಯಕ್ಷ ಆದೇಶ್ ಗುಪ್ತಾ ಅವರು ಉತ್ತರ ದೆಹಲಿ ನಗರ ಪಾಲಿಕೆ ಮೇಯರ್‌ಗೆ ಮಂಗಳವಾರ ಪತ್ರ ಬರೆದಿದ್ದಾರೆ. ಈ ಪತ್ರದ ಪ್ರತಿಯನ್ನು ಸ್ವತಃ ಆದೇಶ್ ಗುಪ್ತಾ ಅವರು ಟ್ವೀಟ್ ಮಾಡಿದ್ದಾರೆ.

‘ಪ್ರಿಯ ರಾಜಾ ಇಕ್ಬಾಲ್ ಅವರೇ, ಏಪ್ರಿಲ್ 16ರಂದು ಜಹಾಂಗೀರ್‌ಪುರಿಯಲ್ಲಿ ಹನುಮಾನ್ ಜಯಂತಿಯ ಅಂಗವಾಗಿ ಶೋಭಾಯಾತ್ರೆ ನಡೆಯುತ್ತಿದ್ದ ವೇಳೆ ಕೆಲವು ಸಮಾಜಘಾತುಕರು ಮತ್ತು ಗಲಭೆಕೋರರು ಕಲ್ಲು ತೂರಿದ್ದು ನಿಮಗೆ ನೆನಪಿರಬಹುದು. ಈ ಗಲಭೆಕೋರರಿಗೆ ಸ್ಥಳೀಯ ಎಎಪಿ ಶಾಸಕರ ರಕ್ಷಣೆ ಇದೆ. ಇದೇ ರಕ್ಷಣೆಯಲ್ಲಿ ಜಹಾಂಗೀರ್‌ಪುರಿಯ ಹಲವೆಡೆ ಈ ಗಲಭೆಕೋರರು ಭಾರಿ ಸಂಖ್ಯೆಯಲ್ಲಿ ಅಕ್ರಮ ಕಟ್ಟಡಗಳನ್ನು ನಿರ್ಮಿಸಿದ್ದಾರೆ. ಈ ಗಲಭೆಕೋರರ ಅಕ್ರಮ ನಿರ್ಮಾಣಗಳು ಮತ್ತು ಒತ್ತುವರಿಗಳ ಮೇಲೆ ಬುಲ್ಡೋಜರ್ ಚಲಾಯಿಸಿ, ನೆಲಸಮ ಮಾಡುವ ಕಾರ್ಯಾಚರಣೆಯನ್ನು ಶೀಘ್ರವೇ ಮಾಡಿ’ ಎಂದು ಆದೇಶ್ ಗುಪ್ತಾ ತಮ್ಮ ಪತ್ರದಲ್ಲಿ ಹೇಳಿದ್ದರು.

ವಾಯವ್ಯ ದೆಹಲಿ ಡಿಸಿಪಿಗೆ ಪತ್ರ

‘ಜಹಾಂಗೀರ್‌ಪುರಿಯಲ್ಲಿ ಅಕ್ರಮ ನಿರ್ಮಾಣಗಳು ಮತ್ತು ಒತ್ತುವರಿ ತೆರವು ಜಂಟಿ ಕಾರ್ಯಾಚರಣೆಯನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಾಚರಣೆ ನಡೆಸಲು 400 ಪೊಲೀಸ್ ಸಿಬ್ಬಂದಿಯ ಭದ್ರತೆ ನೀಡಿ’ ಎಂದು ಉತ್ತರ ದೆಹಲಿ ನಗರ ಪಾಲಿಕೆ ಸಹಾಯಕ ಆಯುಕ್ತರು ಮಂಗಳವಾರ, ವಾಯವ್ಯ ದೆಹಲಿ ಡಿಸಿಪಿಗೆ ಮನವಿ ಪತ್ರ ಬರೆದಿದ್ದಾರೆ.

ಜಹಾಂಗೀರ್‌ಪುರಿಯಲ್ಲಿ ಅಕ್ರಮ ನಿರ್ಮಾಣಗಳನ್ನು ನೆಲಸಮ ಮಾಡಿ ಎಂದು ಬಿಜೆಪಿ ದೆಹಲಿ ಘಟಕದ ಅಧ್ಯಕ್ಷ ಆದೇಶ್ ಗುಪ್ತಾ ಅವರು ಉತ್ತರ ದೆಹಲಿ ಮೇಯರ್‌ಗೆ ಪತ್ರ ಬರೆದ ನಂತರ, ತೆರವು ಕಾರ್ಯಾಚರಣೆಗೆ ಪೊಲೀಸರನ್ನು ನಿಯೋಜಿಸಿ ಎಂದು ಪಾಲಿಕೆಯು ಪೊಲೀಸರಿಗೆ ಪತ್ರ ಬರೆದಿದೆ.

‘ಈ ಕಾರ್ಯಾಚರಣೆ ವೇಳೆ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು 400 ಪೊಲೀಸ್ ಸಿಬ್ಬಂದಿ (ಮಹಿಳಾ ಸಿಬ್ಬಂದಿಯೂ ಸೇರಿ) ಅವಶ್ಯಕತೆ ಇದೆ. ಏಪ್ರಿಲ್ 19ರ ಮಧ್ಯಾಹ್ನ 2ರ ನಂತರ, 20 ಮತ್ತು 21ರ ಬೆಳಗ್ಗೆ 9.30ರ ನಂತರ ಕಾರ್ಯಾಚರಣೆ ನಡೆಸಲು ಮೂರು ದಿನ ಭದ್ರತೆಯ ಅವಶ್ಯಕತೆ ಇದೆ. ನಿಮ್ಮ ಅನುಕೂಲ ನೋಡಿಕೊಂಡು ವ್ಯವಸ್ಥೆ ಮಾಡಿ’ ಎಂದು ಪತ್ರದಲ್ಲಿ ಕೋರಲಾಗಿದೆ.

> **ಬಿಜೆಪಿ ಮತ್ತು ಅಮಿತ್ ಶಾ ದೇಶದೆಲ್ಲೆಡೆ ಸಾಮರಸ್ಯದ ವಾತಾವರಣವನ್ನು ಹಾಳು ಮಾಡಿಯಾಗಿದೆ. ಈಗ ದೆಹಲಿಯಲ್ಲಿ ಶಾಂತಿ ಕದಡಲು ಯತ್ನಿಸುತ್ತಿದ್ದಾರೆ**
> **ಅಮಾನತ್ ಉಲ್ಲಾ ಖಾನ್,** ಎಎಪಿ ಶಾಸಕ

> **ಗಲಭೆಕೋರರ ಸ್ವತ್ತುಗಳನ್ನು ಧ್ವಂಸ ಮಾಡುತ್ತೇವೆ ಎಂಬು ಬಿಜೆಪಿ ಹೇಳುತ್ತಿದೆ. ಗಲಭೆ, ದಂಗೆಗೆ ಕುಮ್ಮಕ್ಕು ನೀಡುತ್ತಿರುವ ಬಿಜೆಪಿಯ ಕೇಂದ್ರ ಕಚೇರಿ ಮತ್ತು ಅಮಿತ್ ಶಾ ಅವರ ನಿವಾಸವನ್ನು ನೆಲಸಮ ಮಾಡಿ**
> **ಎಎಪಿ**

> **ರಾಹುಲ್ ಗಾಂಧಿ ದೇಶದಲ್ಲಿ ದ್ವೇಷದ ಬೀಜ ಬಿತ್ತುತ್ತಿದ್ದಾರೆ. ಭ್ರಷ್ಟಾಚಾರ, ಗಲಭೆಯ ಹಿನ್ನೆಲೆ ಇದ್ದವರಿಂದ ಬೇರೇನು ನಿರೀಕ್ಷಿಸಲು ಸಾಧ್ಯ**
> **ಅನುರಾಗ್ ಠಾಕೂರ್,** ಕೇಂದ್ರ ಸಚಿವ

ಯಂತ್ರಕ್ಕೆ ಅಡ್ಡನಿಂತ ಬೃಂದಾ ಕಾರಟ್

ನವದೆಹಲಿ: ಜಹಾಂಗೀರ್‌ಪುರಿಯಲ್ಲಿ ನೆಲಸಮ ಕಾರ್ಯಾಚರಣೆಯನ್ನು ನಿಲ್ಲಿಸುವಂತೆ ಸುಪ್ರೀಂ ಕೋರ್ಟ್ ಆದೇಶಿಸಿದ್ದರೂ, ಪಾಲಿಕೆ ಅಧಿಕಾರಿಗಳು ಕಾರ್ಯಾಚರಣೆಯನ್ನು ಮುಂದುವರೆಸಿದ್ದರು. ಆಗ ಮಧ್ಯಪ್ರವೇಶಿಸಿದ ಸಿಪಿಎಂ ನಾಯಕಿ ಬೃಂದಾ ಕಾರಟ್ ಅವರು, ಬುಲ್ಡೋಜರ್ ಯಂತ್ರಗಳಿಗೆ ಅಡ್ಡವಾಗಿ ನಿಂತರು.

ಕಾರ್ಯಾಚರಣೆ ಸ್ಥಗಿತಗೊಳಿಸುವಂತೆ ಸುಪ್ರೀಂ ನೀಡಿದ್ದ ಆದೇಶದ ಪ್ರತಿಯನ್ನು ಅಧಿಕಾರಿಗಳಿಗೆ, ಬುಲ್ಡೋಜರ್ ಯಂತ್ರಗಳ ಚಾಲಕರಿಗೆ ತೋರಿಸಿದರು. ಜತೆಗೆ ಅಧಿಕಾರಿಗಳ ಜತೆಗೆ ವಾಗ್ವಾದ ನಡೆಸಿದರು. ಕಾರ್ಯಾಚರಣೆ ನಡೆಸುತ್ತಿರುವ ಯಂತ್ರಗಳನ್ನು ಬೃಂದಾ ತಡೆಯುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ.

ಬೃಂದಾ ಕಾರಟ್ ಮಾತ್ರವೇ ಈ ಕಾರ್ಯಾಚರಣೆ ವಿರುದ್ಧ ನಿಂತಿದ್ದಾರೆ. ವಿರೋಧ ಪಕ್ಷಗಳ ಉಳಿದ ನಾಯಕರೆಲ್ಲಾ ಎಲ್ಲಿ ಹೋಗಿದ್ದಾರೆ ಎಂದು ಹಲವರು ಸಾಮಾಜಿಕ ಜಾಲತಾಣಗಳಲ್ಲಿ ಪ್ರಶ್ನಿಸಿದ್ದಾರೆ.

ದೆಹಲಿಯಲ್ಲಿ ಮಾಸ್ಕ್ ಕಡ್ಡಾಯ: ತಪ್ಪಿದರೆ ದಂಡ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿರುವ ಕಾರಣ ದೆಹಲಿ ಸರ್ಕಾರ, ರಾಜಧಾನಿಯಲ್ಲಿ ಮಾಸ್ಕ್ ಧರಿಸುವುದನ್ನು ಕಡ್ಡಾಯಗೊಳಿಸಿದೆ. ಅಲ್ಲದೆ ಈ ನಿಯಮ ಉಲ್ಲಂಘಿಸಿದಲ್ಲಿ ₹ 500 ದಂಡ ವಿಧಿಸಲಾಗುವುದು ಎಂದೂ ಎಚ್ಚರಿಸಿದೆ.

ಪ್ರಕರಣಗಳು ಏರುಮುಖವಾಗಿದ್ದರೂ ಶಾಲೆಗಳು ಎಂದಿನಂತೆ ಕಾರ್ಯನಿರ್ವಹಿಸಲಿವೆ. ಪರಿಣತರ ಸಲಹೆ ಆಧರಿಸಿ ಕೋವಿಡ್ ಮಾರ್ಗಸೂಚಿಯನ್ನು ನೀಡಲಾಗುವುದು ಎಂದು ಸರ್ಕಾರ ಬುಧವಾರ ತಿಳಿಸಿದೆ.

ಲೆಫ್ಟಿನೆಂಟ್ ಗವರ್ನರ್ ಅನಿಲ್ ಬೈಜಲ್ ನೇತೃತ್ವದಲ್ಲಿ ನಡೆದ ದೆಹಲಿ ಪ್ರಾಕೃತಿಕ ವಿಕೋಪ ನಿರ್ವಹಣಾ ಪ್ರಾಧಿಕಾರದ ಸಭೆಯು ಮಾದರಿ ಪರೀಕ್ಷೆಗಳನ್ನು ಹೆಚ್ಚಿಸಬೇಕು ಮತ್ತು ಗುಂಪು ಸೇರದಂತೆ ಎಚ್ಚರಿಕೆ ವಹಿಸಬೇಕು ಎಂದು ತೀರ್ಮಾನಿಸಿತು.

ಉತ್ತರ ಪ್ರದೇಶ ಮತ್ತು ಹರಿಯಾಣ ಕೂಡಾ ಇತ್ತೀಚೆಗೆ ಸಾರ್ವಜನಿಕವಾಗಿ ಮಾಸ್ಕ್ ಧರಿಸುವುದನ್ನು ಕಡ್ಡಾಯಗೊಳಿಸಿ ಆದೇಶಿಸಿತ್ತು.ರಾಜಧಾನಿಯಲ್ಲಿ ಭೌತಿಕ ತರಗತಿಗಳು ಮುಂದುವರಿಯಲಿವೆ. ಆದರೆ, ಮಾರ್ಗಸೂಚಿಗಳ ಕಟ್ಟುನಿಟ್ಟಿನ ಪಾಲನೆ ಅಗತ್ಯ ಎಂದು ಅಧಿಕಾರಿಗಳು ತಿಳಿಸಿದರು. ಕಲಿಕೆಯ ಮೇಲೆ ಪರಿಣಾಮ ಬೀರುವುದರಿಂದ ಶಾಲೆ ಬಂದ್ ಮಾಡದಂತೆ ತಜ್ಞರು ಸಲಹೆ ಮಾಡಿದ್ದಾರೆ.

ಶಾಲೆಗಳನ್ನು ಬಂದ್ ಮಾಡಿಸುವುದಿಲ್ಲ. ಆದರೆ, ಪ್ರಕರಣ ಪತ್ತೆಯಾದರೆ ತಕ್ಷಣ ವರದಿ ಮಾಡಲು ಸೂಚಿಸಲಾಗಿದೆ. ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸಲಾಗುತ್ತಿದೆ ಎಂದು ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯ ಅವರು ಹೇಳಿದರು.

ಶೇ 97 ಪ್ರಕರಣಗಳಲ್ಲಿ ಓಮೈಕ್ರಾನ್

ನವದೆಹಲಿ (ಪಿಟಿಐ): ದೆಹಲಿಯಲ್ಲಿ ಜನವರಿ –ಮಾರ್ಚ್‌ನಲ್ಲಿ ಸಂಭವಿಸಿದ್ದ ಕೋವಿಡ್ ಸಾವಿನ ಶೇ 97ರಷ್ಟು ಪ್ರಕರಣಗಳಲ್ಲಿ ಓಮೈಕ್ರಾನ್ ಸೋಂಕು ಇತ್ತು ಎಂಬುದು ದೃಢಪಟ್ಟಿದೆ. ಒಟ್ಟು 578 ಪ್ರಕರಣಗಳಲ್ಲಿ ಸಂಗ್ರಹಿಸಿದ್ದ ಮಾದರಿಗಳ ಜಿನೋಮ್ ಸೀಕ್ವೆನ್ಸಿಕ್ ಪರೀಕ್ಷೆ ನಡೆದಿತ್ತು. ಈ ಪೈಕಿ 560 ಪ್ರಕರಣಗಳಲ್ಲಿ ಓಮೈಕ್ರಾನ್ ತಳಿ, ಉಳಿದ ಪ್ರಕರಣಗಳಲ್ಲಿ ಡೆಲ್ಟಾ ಸೇರಿ ಇತರೆ ತಳಿಗಳು ಪತ್ತೆಯಾಗಿವೆ. 3ನೇ ಅಲೆಗೆ ಓಮೈಕ್ರಾನ್ ತಳಿಯು ಕಾರಣವಾಗಿತ್ತು. ಆಗ ಆಸ್ಪತ್ರೆಗಳಲ್ಲಿ ದಾಖಲಾತಿ ಪ್ರಮಾಣವೂ ಕಡಿಮೆ ಇತ್ತು. ಹೆಚ್ಚಿನ ಸಾವಿನ ಪ್ರಕರಣಗಳಿಗೆ ಈ ತಳಿ ಮುಖ್ಯ ಕಾರಣವಲ್ಲ ಎಂಬುದು ತಿಳಿದುಬಂದಿದೆ.

ಕೋವಿಡ್ 4 ನೇ ಅಲೆ ಬಂದಿಲ್ಲ: ಸುಧಾಕರ್

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ನಾಲ್ಕನೇ ಅಲೆ ಬಂದಿಲ್ಲ. ಮುನ್ನೆಚ್ಚರಿಕೆ ಕ್ರಮವಾಗಿ ಮಾಸ್ಕ್ ಧರಿಸಬೇಕು ಮತ್ತು ಲಸಿಕೆ ಪಡೆಯಬೇಕು ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಸಲಹೆ ನೀಡಿದ್ದಾರೆ. ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, ದೆಹಲಿ ಸೇರಿದಂತೆ ಕೆಲ ರಾಜ್ಯಗಳಲ್ಲಿ ಕಳೆದೊಂದು ವಾರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಾಗಿದೆ. ಇದನ್ನು ಗಮನಿಸಿ ರಾಜ್ಯದಲ್ಲೂ ಮುನ್ನೆಚ್ಚರಿಕೆ ಕ್ರಮ ವಹಿಸಲಾಗುತ್ತಿದೆ. ಆರೋಗ್ಯ ಇಲಾಖೆ ಅಧಿಕಾರಿಗಳ ಸಭೆ ನಡೆಸಿ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಿದರು.

2,067 ಹೊಸ ಪ್ರಕರಣ ದೃಢ

ನವದೆಹಲಿ (ಪಿಟಿಐ): ದೇಶದಲ್ಲಿ 24 ಗಂಟೆಗಳಲ್ಲಿ 2,067 ಕೋವಿಡ್ ಪ್ರಕರಣ ದೃಢಪಟ್ಟಿದ್ದು, ಒಟ್ಟು ಸಂಖ್ಯೆ 4,30,47,594ಕ್ಕೆ ಏರಿದೆ. ಸಕ್ರಿಯ ಪ್ರಕರಣಗಳು ಒಟ್ಟು ಪ್ರಕರಣಗಳ ಶೇ 0.03ರಷ್ಟಿವೆ. ದೈನಿಕ ದೃಢೀಕರಣ ಪ್ರಮಾಣ ಶೇ 0.49 ಹಾಗೂ ವಾರದ ದೃಢೀಕರಣ ಪ್ರಮಾಣ ಶೇ 0.38ರಷ್ಟಿದೆ.

ಶಾಂಘೈನಲ್ಲಿ 7 ಮಂದಿ ಸಾವು

ಬೀಜಿಂಗ್ (ಪಿಟಿಐ): ಚೀನಾದ ವಾಣಿಜ್ಯ ನಗರಿ ಶಾಂಘೈನಲ್ಲಿ ಲಾಕ್‌ಡೌನ್ ಬಳಿಕ ಹೊಸ ಪ್ರಕರಣಗಳು ಇಳಿಕೆಯಾಗಿವೆ. ಆದರೆ ಕೋವಿಡ್‌ನಿಂದ ಮೃತಪಡುವವರ ಸಂಖ್ಯೆ ಹೆಚ್ಚುತ್ತಿದೆ. ಮಂಗಳವಾರ 7 ಮಂದಿ ಮೃತಪಟ್ಟಿರುವುದು ವರದಿಯಾಗಿದೆ. ಈ ಮೂಲಕ ಸಾವಿನ ಸಂಖ್ಯೆ 17ಕ್ಕೆ ಏರಿಕೆಯಾಗಿದೆ ಎಂದು ಚೀನಾ ರಾಷ್ಟ್ರೀಯ ಆರೋಗ್ಯ ಆಯೋಗ ತಿಳಿಸಿದೆ.

ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆಯ ಸೂಚನೆ: ಎಚ್ಚರಿಕೆ

1ರ ಗಡಿ ದಾಟಿದ ಹರಡುವಿಕೆ ಪ್ರಮಾಣ

ನವದೆಹಲಿ (ಪಿಟಿಐ): ದೇಶದಲ್ಲಿ ಕೋವಿಡ್ ಹರಡುವಿಕೆಯನ್ನು ಸೂಚಿಸುವ ಆರ್–ಸಂಖ್ಯೆ ಮೂರು ತಿಂಗಳಲ್ಲಿ ಇದೇ ಮೊದಲ ಬಾರಿಗೆ 1ರ ಗಡಿಯನ್ನು ದಾಟಿದೆ ಎಂದು ಚೆನ್ನೈನ ಇನ್‌ಸ್ಟಿಟ್ಯೂಟ್ ಆಫ್ ಮ್ಯಾಥಮೆಟಿಕಲ್ ಸೈನ್ಸ್‌ನ (ಐಎಂಎಸ್) ತಜ್ಞರು ಹೇಳಿದ್ದಾರೆ. ಒಬ್ಬ ಸೋಂಕಿತ ವ್ಯಕ್ತಿಯು ಎಷ್ಟು ಮಂದಿಗೆ ಸೋಂಕು ಹರಡುತ್ತಿದ್ದಾನೆ ಎಂಬುದನ್ನು ಈ ಸಂಖ್ಯೆ ಸೂಚಿಸುತ್ತದೆ. ಈ ಸಂಖ್ಯೆ ಹೆಚ್ಚಾದಷ್ಟು ಸೋಂಕು ಹರಡುವ ವೇಗ ಹೆಚ್ಚಾಗುತ್ತದೆ.

‘ಕೆಲವು ವಾರಗಳಿಂದ ದೇಶದ ಆರ್–ಸಂಖ್ಯೆ ಸತತವಾಗಿ ಏರಿಕೆಯಾಗುತ್ತಿದೆ. ಏಪ್ರಿಲ್ 12–18ರ ನಡುವೆ ಇದು 1.07ಕ್ಕೆ ತಲುಪಿದೆ. ಏಪ್ರಿಲ್ 5–11ರ ನಡುವೆ ಈ ಸಂಖ್ಯೆ 0.93ರಷ್ಟು ಇತ್ತು. ಜನವರಿ 16–22ರ ನಡುವೆ ಆರ್–ಸಂಖ್ಯೆ 1.28ರಷ್ಟು ಇತ್ತು. ಅನಂತರ ಇದೇ ಮೊದಲ ಬಾರಿಗೆ ಅದು 1ರ ಗಡಿ ದಾಟಿದೆ’ ಎಂದು ಐಎಂಎಸ್‌ನ ಸಿತಾಭ್ರ ಸಿನ್ಹಾ ವಿವರಿಸಿದ್ದಾರೆ.

‘ದೇಶದಾದ್ಯಂತ ಒಟ್ಟು ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿದೆ. ಉತ್ತರದಲ್ಲಿ ಒಂದು ಕ್ಲಸ್ಟರ್ (ದೆಹಲಿ, ಹರಿಯಾಣ ಮತ್ತು ಉತ್ತರ ಪ್ರದೇಶ) ಮತ್ತು ದಕ್ಷಿಣದಲ್ಲಿ ಒಂದು ಕ್ಲಸ್ಟರ್‌ನಲ್ಲಿ (ಕರ್ನಾಟಕ) ಪತ್ತೆಯಾಗುತ್ತಿರುವ ಪ್ರಕರಣ ಕಾರಣ, ದೇಶದಲ್ಲಿನ ಒಟ್ಟು ಪ್ರಕರಣಗಳು ಏರಿಕೆಯಾಗುತ್ತಿವೆ. ಏಪ್ರಿಲ್ 12–18ರ ವಾರದಲ್ಲಿ, ದೆಹಲಿಯಲ್ಲಿ ಆರ್–ಸಂಖ್ಯೆ 2.12, ಉತ್ತರ ಪ್ರದೇಶದಲ್ಲಿ 2.12 ಮತ್ತು ಹರಿಯಾಣದಲ್ಲಿ 1.70 ಇದೆ. ಕರ್ನಾಟಕದಲ್ಲಿ ಆರ್–ಸಂಖ್ಯೆ 1ರ ಗಡಿ ದಾಟಿದೆ’ ಎಂದು ಅವರು ವಿವರಿಸಿದ್ದಾರೆ.

‘ಇದೇ ಅವಧಿಯಲ್ಲಿ ಮುಂಬೈನಲ್ಲಿ ಆರ್–ಸಂಖ್ಯೆ 1.13, ಚೆನ್ನೈನಲ್ಲಿ 1.18 ಮತ್ತು ಬೆಂಗಳೂರಿನಲ್ಲಿ 1.04ರಷ್ಟು ಇತ್ತು. ಇಡೀ ರಾಜ್ಯದಲ್ಲಿ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿರುವುದು ಗೋಚರವಾಗದೇ ಇದ್ದರೂ, ನಗರಗಳಲ್ಲಿ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವುದನ್ನು ಇದು ಸೂಚಿಸುತ್ತದೆ’ ಎಂದು ಅವರು ವಿವರಿಸಿದ್ದಾರೆ.

‘2021ರಲ್ಲಿ ಕೋವಿಡ್ ಎರಡನೇ ಅಲೆ ಆರಂಭವಾಗುವುದಕ್ಕೂ ಮುನ್ನ ಫೆಬ್ರುವರಿ 14ರಿಂದ ಮಾರ್ಚ್ 11ರ ನಡುವೆ ದೇಶದ ಆರ್–ಸಂಖ್ಯೆ 1.08ರಷ್ಟು ಇತ್ತು. ಈಗಿನ ಆರ್–ಸಂಖ್ಯೆ ಸಹ ಸರಿಸುಮಾರು ಇಷ್ಟೇ ಪ್ರಮಾಣದಲ್ಲಿ ಇದೆ. ಎರಡನೇ ಅಲೆ ಉತ್ತುಂಗದಲ್ಲಿ (ಮಾರ್ಚ್ 9ರಿಂದ ಏಪ್ರಿಲ್ 21ರ ನಡುವೆ) ಇದ್ದಾಗ ಅದು 1.37ರಷ್ಟಾಗಿತ್ತು. ಏಪ್ರಿಲ್ 29ರಿಂದ ಮೇ 7ರ ನಡುವೆ 1.10ಕ್ಕೆ ಇಳಿಕೆಯಾಗಿತ್ತು. ನಂತರ ಮೇ 9ರ ವೇಳೆಗೆ 0.98ಕ್ಕೆ ಇಳಿಕೆಯಾಗಿತ್ತು.’ ಎಂದು ಅವರು ವಿವರಿಸಿದ್ದಾರೆ.

ಮುಖ್ಯಾಂಶಗಳು

- ದೆಹಲಿ, ಉತ್ತರ ಪ್ರದೇಶದಲ್ಲಿ 2ರ ಗಡಿದಾಟಿದ ಆರ್–ಸಂಖ್ಯೆ
- ಮುಂಬೈ, ಬೆಂಗಳೂರು, ಚೆನ್ನೈನಲ್ಲೂ ಆರ್–ಸಂಖ್ಯೆ ಏರಿಕೆ
- ಉತ್ತರದಲ್ಲಿ ಒಂದು ಕ್ಲಸ್ಟರ್, ದಕ್ಷಿಣದಲ್ಲಿ ಒಂದು ಕ್ಲಸ್ಟರ್‌ನಲ್ಲಿ ಏರಿಕೆ

> **ಮಾಸ್ಕ್ ಧರಿಸುವುದನ್ನು, ಕೈ ತೊಳೆಯುವುದನ್ನು ಮತ್ತು ಮುಖ–ಕಣ್ಣುಗಳನ್ನು ಮುಟ್ಟಿಕೊಳ್ಳದೇ ಇರುವುದನ್ನು ಮರುರೂಢಿಸಿಕೊಳ್ಳಬೇಕಾದ ಅವಶ್ಯಕತೆ ಇದೆ**
> **ಸಿತಾಭ್ರ ಸಿನ್ಹಾ,** ಐಎಂಎಸ್ ಗಣಿತ ತಜ್ಞ

ಗುಜರಾತ್‌ಗೆ ಇಂದು ಬ್ರಿಟನ್ ಪ್ರಧಾನಿ: ಅದಾನಿ ಜತೆ ಚರ್ಚೆ

ಅಹಮದಾಬಾದ್: ವ್ಯಾಪಾರ– ವಾಣಿಜ್ಯ ಸಂಬಂಧ ಮಾತುಕತೆಗಾಗಿ ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಅವರು ಗುರುವಾರ ಅಹಮದಾಬಾದ್‌ಗೆ ಭೇಟಿ ನೀಡಲಿದ್ದಾರೆ.

ಬೋರಿಸ್ ಜಾನ್ಸನ್

ಬ್ರಿಟನ್ ವಾಣಿಜ್ಯ ಸಚಿವ ಜೆರಾಲ್ಡ್ ಎಡ್ಗರ್ ಗ್ರಿಮ್ ಸ್ಟೋನ್ ಮತ್ತು ಪತ್ರಕರ್ತರು ಸೇರಿ ಸುಮಾರು 70 ಮಂದಿಯ ನಿಯೋಗದೊಂದಿಗೆ ವಿಶೇಷ ವಿಮಾನದಲ್ಲಿ ಬರುತ್ತಿರುವ ಅವರು, ಇಲ್ಲಿನ ಸರ್ದಾರ್ ವಲ್ಲಭಭಾಯ್ ಪಟೇಲ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಳಿಯಲಿದ್ದಾರೆ.

ಅದಾನಿ ಸಮೂಹದ ಮುಖ್ಯಸ್ಥ ಗೌತಮ್ ಅದಾನಿ ಸೇರಿ ಹಲವು ಉದ್ಯಮಿಗಳ ಜತೆಗೆ ಜಾನ್ಸನ್ ಅವರು ವಾಣಿಜ್ಯ ಸಂಬಂಧ ಮಾತುಕತೆ ನಡೆಸಲಿದ್ದಾರೆ. ನಂತರ ಅಹಮದಾಬಾದ್‌ನಲ್ಲಿರುವ ಸಾಬರಮತಿ ಆಶ್ರಮ ಮತ್ತು ಗಾಂಧಿನಗರದಲ್ಲಿನ ಅಕ್ಷರಧಾಮ ದೇವಸ್ಥಾನಕ್ಕೂ ಜಾನ್ಸನ್ ಭೇಟಿ ನೀಡಲಿದ್ದಾರೆ ಎಂದು ಮೂಲಗಳು ಹೇಳಿವೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

General

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

REQUIRED URGENTLY BABY SITTERS, HOUSE MADE/HOME NURSE Male/ Female, 24/12 Hours Duty. Contact: 6366883838, 7022399993

Marketing & Sales

POSITION: SENIOR Sales Executive Bike is Must Preference to insurance background candidates. Salary: 20,000+ Plus incentive Job Location: Bangalore Send CV to richard.emmanuel@letstransport.team / 7259837095

WANTEDFILEDOFFICER AND Marketing ManagerAny degree at least 2 or 3 years experienceinSecurity Service field Preferable Salary & working Location Bangalore only Contact Us e-mail ensafeguard@gmail.com/ zubi_aha@yahoo.com Ph no. 974230843/ 9448534370 ENSAFEGUARDSECURITY PVT LTD

Wanted

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ OT. 17800-68000. 9538811223, 9538811104

ಭವಿಷ್ಯ

Astrology

ನಂ.1 ವಶೀಕರಣ ಸ್ಪೆಷಲಿಸ್ಟ್ ತಾಂತ್ರಿಕ್: ಸ್ತ್ರೀಪುರುಷ ವಶೀಕರಣ, ಪ್ರೀತಿಯಲ್ಲಿ ನಂಬಿಮೋಸ, ಗಂಡಹೆಂಡತಿ ಕಲಹ, ನಾಗಸಾಧುಗಳಿಂದ ವಶೀಕರಣ 3ದಿನಗಳಲ್ಲಿ ಪರಿಹಾರ 6360611244

★॥ಶ್ರೀಕೇದರನಾಥ॥★ ಆರಾಧನೆಯಿಂದ ಆರಾಧನೆಯಿಂದ ಪ್ರೀತಿಪ್ರೇಮ,ಸ್ತ್ರೀಪುರುಷ ವಶೀಕರಣ, ದಾಂಪತ್ಯ, ಜನವಶೀಕರಣ, ಧನವಶೀಕರಣ, ಕೋರ್ಟ್‌ಕಛೇರಿ ಸಾಲಬಾಧೆ, ಯಾವುದೇ ಸಮಸ್ಯೆಯಿದ್ದರೂ. 100% ಶಾಶ್ವತಪರಿಹಾರ. 9148773459

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ ಭವಿಷ್ಯ ಖಚಿತ ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಧರ್ಮಸ್ಥಳ: 7022443071

ಪ್ರವಾಸ

Travel

ಹಿಮಾಚಲ ಸ್ಪೆಶಲ್ ಸಿಮ್ಲಾ,ಕುಲು,ಮನಾಲಿ ಚಂಡಿಘಡ್ ನೈನಾದೇವಿ ಚಾಮುಂಡಾ ವಜ್ರೇಶ್ವರಿ ವೈಷ್ಣವಿದೇವಿ ಅಮೃತ್-ಸರ್ ಕುರುಕ್ಷೇತ್ರ ಹಾಗು ಚಾರ್-ಧಾಮ್ ಯಾತ್ರೆ. ಬದರಿನಾಥ್ ಕೇದಾರನಾಥ್ ಗಂಗೋತ್ರಿ,ಯುಮುನೋತ್ರಿ, ಹರಿದ್ವಾರ್,ರಿಷಿಕೇಶ್ ಬುಕಿಂಗ್ಗಳಿಗಾಗಿ ಸಂಪರ್ಕಿಸಿ ಆರ್ಕಿಡ್ ಟ್ರಾವಲ್ ಅಂಡ್ ಟೂರ್ಸ್ 9900080793 9880079588

11.05.2022ರಿಂದ ರೈಲು ಮತ್ತು ಏಸಿ ಬಸ್ಸಿನಲ್ಲಿ 30ದಿನಗಳ ಚಾರ್ಧಾಮ್ ಸಮೇತ ವೈಷ್ಣೋದೇವಿ,ಅಮೃತಸರ್, ಕಾಶಿ,ಗಯಾ,ಹರಿದ್ವಾರ್. 27.05.2022ರಿಂದ ವಿಮಾನ, ಬಸ್ಸಿನಲ್ಲಿ 13ದಿನಗಳ ಚಾರೋಧಾಮ್,ಮಸ್ಸೂರಿ ಗುಪ್ತಕಾಶಿ,ನವದೆಹಲಿ. 25.6.2022ರಿಂದ 19ದಿನಗಳ ಅಮರನಾಥ್,ಕಾಶ್ಮೀರ್, ವೈಷ್ಣೋದೇವಿ ಜ್ವಾಲಾಮುಖಿ. ಏಷ್ಯನ್ ಟ್ರಾವೆಲ್ ಲೈನ್ಸ್ #164/3, ಆರ್.ವಿ.ರಸ್ತೆ (ಮಿನರ್ವ ಬಸ್‌ಸ್ಟಾಪ್ ಎದುರು) ಬೆಂಗಳೂರು4. ಫೋನ್ 08026565085/ 9480182865/ 8105657052.

03.05.2022 6ದಿನಗಳು ದಕ್ಷಿಣಕನ್ನಡ ಪ್ರವಾಸ. 10.05.2022, 4 ದಿನಗಳು ಗೋವಾ ದೂದ್‌ಸಾಗರ್ ಪ್ರವಾಸ. 11.05.2022, 4 ದಿನಗಳು ಮಂತ್ರಾಲಯ,ಶ್ರೀಶೈಲ ಪ್ರವಾಸ 10.5.2022 7 ದಿನಗಳು ಕೇರಳ ಪ್ರವಾಸ. 11.05.2022, 5 ದಿನಗಳು ತಮಿಳುನಾಡು ಪ್ರವಾಸ.12.05.2022 3 ದಿನಗಳು ಚಿಕ್ಕಮಂಗಳೂರು ಪ್ರವಾಸ 04.05,2022 6 ದಿನಗಳು ಕಾಶಿಯಾತ್ರೆ. 05.07.2022 12.07.2022 19.07.2022 6 ದಿನಗಳು ಅಮರನಾಥಯಾತ್ರೆ ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್ ಬೆಂಗಳೂರು-40. 9880847001 9342848791

ಪಶುಪತಿ, ಸ್ವಯಂಭೂ, ಮನಕಾಮನ, ಚಂದ್ರಗಿರಿ, ಗುಪ್ತೇಶ್ವರ, ಮುಕ್ತಿನಾಥ್, ಚಿತ್ವಾನ್ ಇತ್ಯಾದಿ ನೇಪಾಳದ ಯಾವುದೇ ಸ್ಥಳಗಳಿಗೂ ಪ್ರವಾಸ ಏರ್ಪಡಿಸುವ ಏಕೈಕ ಸಂಸ್ಥೆ ನಾಲಂದಾ ಟ್ರಾವೆಲ್ಸ್ ಕುಂದಾಪುರ. ಸಂಪರ್ಕಿಸಿ: 8310028157.

★13.5.2022 ರಿಂದ★ 16ದಿನಗಳ ಯಾತ್ರೆ ಭುವನೇಶ್ವರ, ಕಾಶಿ, ಗಯಾ, ಅಲಹಾಬಾದ್, ಅಯೋಧ್ಯೆ, ಅಮೃತಸರ, ವೈಷ್ಣೋದೇವಿ. ಜೈ ಕರ್ನಾಟಕ ಟೂರ್ಸ್: 9480588568

Pilgrimage Tours

ಶ್ರೀಮಹಾಲಕ್ಷ್ಮೀ ಟ್ರಾವೆಲ್ಸ್. 02/05/22 ವೈಷ್ಣೋದೇವಿ, ಕುಲು, ಮನಾಲಿ, ಶಿಮ್ಲಾ, ಅಮೃತಸರ. 26/05/22 ಕಾಶಿ ವಿಶ್ವನಾಥ, ಜಾರ್ಖಂಡ್ ವೈದ್ಯನಾಥ, ಆಯೋಧ್ಯ. 9964527782

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ

BOOK YOUR CLASSIFIEDS ADVERTISEMENT

PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	60	85	70	115

CD Per Sqcm	Single Col	Double Col	Multi Col
	430	450	475

SPECIAL OFFER

PAY	2	And	GET	1	Free
PAY	3	And	GET	2	Free
PAY	5	And	GET	5	Free

condition apply*

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com

ಮಿಂಚಿದ ಪಂತ್ ಬಳಗದ ಬೌಲರ್‌ಗಳು; ಪಂಜಾಬ್ ಬ್ಯಾಟರ್‌ಗಳ ವೈಫಲ್ಯ

ಡೆಲ್ಲಿ ಕ್ಯಾಪಿಟಲ್ಸ್‌ಗೆ ಮಣಿದ ಕಿಂಗ್ಸ್

ಮುಂಬೈ(ಪಿಟಿಐ): ಕೋವಿಡ್ ಪೀಡಿತ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಎದೆಗುಂದಲಿಲ್ಲ. ರಿಷಭ್ ಪಂತ್ ಬಳಗವು ಬುಧವಾರ ಪಂಜಾಬ್ ಕಿಂಗ್ಸ್ ಎದುರು ಜಯಭೇರಿ ಬಾರಿಸಿತು.

ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಡೆಲ್ಲಿ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮಯಂಕ್ ಅಗರವಾಲ್ ನಾಯಕತ್ವದ ಪಂಜಾಬ್ ತಂಡವು 20 ಓವರ್‌ಗಳಲ್ಲಿ 115 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಖಲೀಲ್ (21ಕ್ಕೆ2) ಮತ್ತು ಅಕ್ಷರ್ (10ಕ್ಕೆ2) ಪಂಜಾಬ್ ತಂಡದ ಮಧ್ಯಮ ಕ್ರಮಾಂಕದ ಬ್ಯಾಟಿಂಗ್‌ಗೆ ಪೆಟ್ಟುಕೊಟ್ಟರು. ಗುರಿ ಬೆನ್ನಟ್ಟಿದ ಡೆಲ್ಲಿ ತಂಡವು 10.3 ಓವರ್‌ಗಳಲ್ಲಿ 1 ವಿಕೆಟ್‌ಗೆ 119 ರನ್ ಗಳಿಸಿ, 9 ವಿಕೆಟ್‌ಗಳಿಂದ ಜಯಿಸಿತು. ಡೇವಿಡ್ ವಾರ್ನರ್ (ಔಟಾಗದೆ 60, 30ಎಸೆತ, 10ಬೌಂಡರಿ, 1ಸಿಕ್ಸರ್) ಮಿಂಚಿನ ಅರ್ಧಶತಕ ಗಳಿಸಿದರು. ವಾರ್ನರ್ ಮತ್ತು ಪೃಥ್ವಿ ಶಾ ಮೊದಲ ವಿಕೆಟ್ ಜೊತೆಯಾಟದಲ್ಲಿ 83 ರನ್ ಸೇರಿಸಿದರು.

ಮಯಂಕ್, ಜಿತೇಶ್ ಹೋರಾಟ: ಪಂಜಾಬ್ ತಂಡದ ಇನಿಂಗ್ಸ್‌ನಲ್ಲಿ ಆರಂಭಿಕ ಬ್ಯಾಟರ್ ಮಯಂಕ್ (24; 15ಎ) ಮತ್ತು ಜಿತೇಶ್ ಶರ್ಮಾ (32; 23ಎ) ಅವರಿಬ್ಬರು ಮಾತ್ರ ತುಸು ಹೋರಾಟ ತೋರಿದರು. ಅದರಿಂದಾಗಿ ತಂಡವು ನೂರು ರನ್‌ಗಳ ಗಡಿ ದಾಟಲು ಸಾಧ್ಯವಾಯಿತು. ಆದರೆ ಉಳಿದ ಬ್ಯಾಟರ್‌ಗಳು ನಿರೀಕ್ಷೆ ಹುಸಿಗೊಳಿಸಿದರು.

ಮಯಂಕ್ 15 ಎಸೆತಗಳಲ್ಲಿ 24 ರನ್ ಗಳಿಸಿದರು. ಆದರೆ, ಅವರೊಂದಿಗೆ ಇನಿಂಗ್ಸ್ ಆರಂಭಿಸಿದ ಶಿಖರ್ ಧವನ್ (9ರನ್) ವಿಕೆಟ್ ಅನ್ನು ಲಲಿತ್ ಯಾದವ್ ನಾಲ್ಕನೇ ಓವರ್‌ನಲ್ಲಿ ಗಳಿಸಿದರು. ನಂತರದ ಓವರ್‌ನಲ್ಲಿ ಮುಸ್ತಫಿಜುರ್ ರೆಹಮಾನ್ ಎಸೆತದಲ್ಲಿ ಮಯಂಕ್ (24; 15ಎ) ಕ್ಲೀನ್‌ಬೌಲ್ಡ್ ಆದರು. ಜಾನಿ ಬೆಸ್ಟೊ, ಲಿವಿಂಗ್‌ಸ್ಟೋನ್ ಅವರನ್ನು ಕಟ್ಟಿಹಾಕುವಲ್ಲಿ ಖಲೀಲ್ ಮತ್ತು ಅಕ್ಷರ್ ಯಶಸ್ವಿಯಾದರು. ಈ ನಡುವೆ 32 ರನ್ ಗಳಿಸಿ ಇನಿಂಗ್ಸ್‌ನಲ್ಲಿ ಜೀವ ತುಂಬಲು ಪ್ರಯತ್ನಿಸಿದ ಜಿತೇಶ್ ಶರ್ಮಾ ವಿಕೆಟ್ ಅನ್ನು ಅಕ್ಷರ್ ಕಬಳಿಸಿದರು. ಇದರಿಂದಾಗಿ ರನ್ ಗಳಿಕೆಯ ವೇಗಕ್ಕೆ ತಡೆಯೊಡ್ಡಿದರು.

ಟಿಮ್ ಸೀಫರ್ಟ್‌ಗೆ ಕೋವಿಡ್

ಡೆಲ್ಲಿ ಕ್ಯಾಪಿಟಲ್ಸ್ ತಂಡದ ಟಿಮ್ ಸೀಫರ್ಟ್ ಅವರಿಗೆ ಕೋವಿಡ್ ಇರುವುದು ಖಚಿತವಾಗಿದೆ. ಇದರೊಂದಿಗೆ ಡೆಲ್ಲಿ ತಂಡದಲ್ಲಿ ಸೋಂಕಿಗೊಳಗಾದವರ ಸಂಖ್ಯೆಯು ಆರಕ್ಕೆ ಏರಿದೆ.

ಬುಧವಾರ ಬೆಳಿಗ್ಗೆ ನಡೆಸಿದ ಆರ್‌ಟಿಪಿಸಿಆರ್ ಟೆಸ್ಟ್‌ನಲ್ಲಿ ಟಿಮ್‌ಗೆ ಕೋವಿಡ್ ಇರುವುದು ಖಚಿತವಾಯಿತು. ಅವರನ್ನು ಪ್ರತ್ಯೇಕವಾಸಕ್ಕೆ ಕಳುಹಿಸಿ, ಚಿಕಿತ್ಸೆ ನೀಡಲಾಗುತ್ತಿದೆ.

ಡೆಲ್ಲಿ ತಂಡದಲ್ಲಿ ಈಗಾಗಲೇ ಮಿಚೆಲ್ ಮಾರ್ಷ್ ಸೇರಿದಂತೆ ಐವರಿಗೆ ಕೋವಿಡ್ ಖಚಿತವಾಗಿತ್ತು. ಆದ್ದರಿಂದ ಪುಣೆಯಲ್ಲಿ ನಡೆಯಬೇಕಿದ್ದ ಪಂದ್ಯವನ್ನು ಮಂಗಳವಾರ ಮುಂಬೈನ ಬ್ರೆಬೋರ್ನ್ ಕ್ರೀಡಾಂಗಣಕ್ಕೆ ಸ್ಥಳಾಂತರಿಸಲಾಗಿತ್ತು. ಟಿಮ್‌ಗೆ ಕೋವಿಡ್ ಖಚಿತವಾದ ಮೇಲೆ ಪಂಜಾಬ್ ಎದುರಿನ ಪಂದ್ಯವು ರದ್ದಾಗುವ ಸುದ್ದಿಗಳು ಹರಿದಾಡಿದ್ದವು. ಆದರೆ, ಪಂದ್ಯ ನಡೆಯಲಿದೆ ಎಂದು ಬಿಸಿಸಿಐ ಖಚಿತಪಡಿಸಿತು.

ಸ್ಕೋರ್ ಕಾರ್ಡ್

ಪಂಜಾಬ್ ಕಿಂಗ್ಸ್ 115 (20 ಓವರ್)
ಮಯಂಕ್ ಬಿ ಮುಸ್ತಫಿಜುರ್ 24 (15ಎ, 4X4), ಶಿಖರ್ ಸಿ ಪಂತ್ ಬಿ ಲಲಿತ್ 9 (10ಎ, 4X1), ಬೆಸ್ಟೊ ಸಿ ಮುಸ್ತಫಿಜುರ್ ಬಿ ಖಲೀಲ್ 9 (8ಎ, 4X2), ಲಿವಿಂಗ್‌ಸ್ಟೋನ್ ಸ್ಟಂಪ್ಡ್ ಪಂತ್ ಬಿ ಅಕ್ಷರ್ 2 (3ಎ), ಜಿತೇಶ್ ಎಲ್‌ಬಿಡಬ್ಲ್ಯು ಅಕ್ಷರ್ 32 (23ಎ, 4X5), ಶಾರೂಕ್ ಖಾನ್ ಸಿ ಪಂತ್ ಬಿ ಖಲೀಲ್ 12 (20ಎ), ರಬಾಡ ಬಿ ಕುಲದೀಪ್ 2 (6ಎ), ನೇಥನ್ ಬಿ ಕುಲದೀಪ್ 0 (2ಎ), ರಾಹುಲ್ ಚಾಹರ್ ಸಿ ಪೊವೆಲ್ ಬಿ ಲಲಿತ್ 12 (12ಎ, 4X1, 6X1), ಅರ್ಷದೀಪ್ ರನೌಟ್ 9 (17ಎ, 4X2), ವೈಭವ್ ಔಟಾಗದೆ 2 (4ಎ))
ಇತರೆ : (ಲೆಗ್‌ಬೈ 1, ವೈಡ್ 1) 2
ವಿಕೆಟ್ ಪತನ: 1 1-33 (ಶಿಖರ್ ಧವನ್, 3.4), 2-35 (ಮಯಂಕ್ ಅಗರವಾಲ್, 4.3), 3-46 (ಲಿಯಾಮ್ ಲಿವಿಂಗ್‌ಸ್ಟೋನ್, 5.3), 4-54 (ಜಾನಿ ಬೆಸ್ಟೊ, 6.4), 5-85 (ಜಿತೇಶ್ ಶರ್ಮಾ, 12.1), 6-90 (ಕಗಿಸೊ ರಬಾಡ, 13.4), 7-90 (ನೇಥನ್ ಎಲಿಸ್, 13.6), 8-92 (ಎಂ. ಶಾರೂಕ್ ಖಾನ್, 14.3), 9-108 (ರಾಹುಲ್ ಚಾಹರ್, 17.4), 10-115 (ಅರ್ಷದೀಪ್ ಸಿಂಗ್, 19.6)
ಬೌಲಿಂಗ್: ಶಾರ್ದೂಲ್ ಠಾಕೂರ್ 2-0-20-0, ಖಲೀಲ್ ಅಹಮದ್ 4-0-21-2, ಲಲಿತ್ ಯಾದವ್ 2-0-11-2, ಮುಸ್ತಫಿಜುರ್ ರೆಹಮಾನ್ 4-0-28-1, ಅಕ್ಷರ್ ಪಟೇಲ್ 4-0-10-2, ಕುಲದೀಪ್ ಯಾದವ್ 4-0-24-2

ಡೆಲ್ಲಿ ಕ್ಯಾಪಿಟಲ್ಸ್ 1ಕ್ಕೆ 119 (10.3 ಓವರ್)
ಪೃಥ್ವಿ ಸಿ ಎಲಿಸ್ ಬಿ ಚಾಹರ್ 41 (20ಎ, 4X7, 6X1), ವಾರ್ನರ್ ಔಟಾಗದೆ 60 (30ಎ, 4X10, 6X1), ಸರ್ಫರಾಜ್ ಔಟಾಗದೆ 12 (13ಎ, 4X1)
ಇತರೆ : (ವೈಡ್ 6) 6
ವಿಕೆಟ್ ಪತನ: 1-83 (ಪೃಥ್ವಿ ಶಾ, 6.3)
ಬೌಲಿಂಗ್: ವೈಭವ್ ಅರೋರ 2-0-31-0, ಕಗಿಸೊ ರಬಾಡ 3-0-35-0, ಅರ್ಷದೀಪ್ ಸಿಂಗ್ 1-0-17-0, ನೇಥನ್ ಎಲಿಸ್ 2-0-15-0, ರಾಹುಲ್ ಚಾಹರ್ 2.3-0-21-1

ಫಲಿತಾಂಶ: ಡೆಲ್ಲಿ ಕ್ಯಾಪಿಟಲ್ಸ್‌ಗೆ 9 ವಿಕೆಟ್‌ಗಳ ಜಯ

ವಿಕೆಟ್ ಗಳಿಸಿದ ಖಲೀಲ್ ಅಹಮದ್ ಅವರನ್ನು ಅಭಿನಂದಿಸಿದ ವಾರ್ನರ್ –ಪಿಟಿಐ

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯಜುವೇಂದ್ರ	ರಾಜಸ್ಥಾನ	17
ಕುಲದೀಪ್	ಡೆಲ್ಲಿ	13
ನಟರಾಜನ್	ಹೈದರಾಬಾದ್	12

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	375
ರಾಹುಲ್	ಲಖನೌ	265
ಡುಪ್ಲೆಸಿ	ಬೆಂಗಳೂರು	250

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ	ರನ್‌ರೇಟ್
ಗುಜರಾತ್	6	5	1	0	0	10	0.395
ಬೆಂಗಳೂರು	7	5	2	0	0	10	0.251
ರಾಜಸ್ಥಾನ	6	4	2	0	0	8	0.380
ಲಖನೌ	7	4	3	0	0	8	0.124
ಹೈದರಾಬಾದ್	6	4	2	0	0	8	-0.077
ಡೆಲ್ಲಿ	6	3	3	0	0	6	0.942
ಕೋಲ್ಕತ್ತ	7	3	4	0	0	6	0.160
ಪಂಜಾಬ್	7	3	4	0	0	6	-0.562
ಚೆನ್ನೈ	6	1	5	0	0	2	-0.638
ಮುಂಬೈ	6	0	6	0	0	0	-1.048

*ಬುಧವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ಮುಂಬೈ– ಚೆನ್ನೈಗೆ ಜಯದ ತವಕ

ನವಿ ಮುಂಬೈ(ಪಿಟಿಐ): ಈ ಬಾರಿಯ ಐಪಿಎಲ್‌ನಲ್ಲಿ ಗೆಲುವಿನ ಖಾತೆಯನ್ನೇ ತೆರೆಯದ ಮುಂಬೈ ಇಂಡಿಯನ್ಸ್ ಮತ್ತು ಆರರಲ್ಲಿ ಐದು ಪಂದ್ಯಗಳನ್ನು ಸೋತಿರುವ ಚೆನ್ನೈ ಸೂಪರ್ ಕಿಂಗ್ಸ್ ಗುರುವಾರ ಡಿ.ವೈ. ಪಾಟೀಲ ಕ್ರೀಡಾಂಗಣದಲ್ಲಿ ಮುಖಾಮುಖಿಯಾಗಲಿವೆ.

ಹಾಲಿ ಚಾಂಪಿಯನ್ ಚೆನ್ನೈ ತಂಡವು ಟೂರ್ನಿಯಲ್ಲಿ ತನ್ನ ಮೊದಲ ನಾಲ್ಕು ಪಂದ್ಯಗಳಲ್ಲಿ ಸತತ ಸೋಲು ಅನುಭವಿಸಿತ್ತು. ಐದನೇ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ ಜಯಿಸಿತ್ತು. ಆದರೆ ನಂತರದ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ಎದುರು ಮುಗ್ಗರಿಸಿತ್ತು. ಇದೀಗ ಮತ್ತೆ ಜಯದ ಹಾದಿ ಹಿಡಿಯುವ ತವಕದಲ್ಲಿದೆ.

ರವೀಂದ್ರ ಜಡೇಜ ನಾಯಕತ್ವದ ತಂಡದಲ್ಲಿ ಋತುರಾಜ್ ಗಾಯಕವಾಡ್ ಲಯಕ್ಕೆ ಮರಳಿರುವುದು ಸಮಾಧಾನಕರ ಸಂಗತಿ. ರಾಬಿನ್ ಉತ್ತಪ್ಪ, ಅಂಬಟಿ ರಾಯುಡು, ಶಿವಂ ದುಬೆ ಮತ್ತು ಮಹೇಂದ್ರಸಿಂಗ್ ಧೋನಿ ರನ್‌ಗಳ ಕಾಣಿಕೆ ನೀಡುತ್ತಿದ್ದಾರೆ. ಬೌಲಿಂಗ್‌ನಲ್ಲಿ ದೀಪಕ್ ಚಾಹರ್ ಕೊರತೆ ಕಾಡುತ್ತಿದೆ. ಕ್ರಿಸ್ ಜೋರ್ಡಾನ್, ಮೋಯಿನ್ ಅಲಿ ಮತ್ತು ಬ್ರಾವೊ ಅವರ ಮೇಲೆ ನಿರೀಕ್ಷೆಯ ಭಾರವಿದೆ. ನಾಯಕ ರೋಹಿತ್ ಶರ್ಮಾ, ಇಶಾನ್ ಕಿಶನ್, ಡಿವಾಲ್ಡ್ ಬ್ರೆವಿಸ್, ಸೂರ್ಯಕುಮಾರ್ ಯಾದವ್, ಕೀರನ್ ಪೊಲಾರ್ಡ್ ಮುಂಬೈನ ಸ್ಫೋಟಕ ಶೈಲಿಯ ಬ್ಯಾಟರ್‌ಗಳಾಗಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಕೀರನ್ ಪೊಲಾರ್ಡ್ ವಿದಾಯ

ಮುಂಬೈ (ಪಿಟಿಐ): ವೆಸ್ಟ್ ಇಂಡೀಸ್ ಏಕದಿನ ಕ್ರಿಕೆಟ್ ತಂಡದ ನಾಯಕ ಕೀರನ್ ಪೊಲಾರ್ಡ್ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಬುಧವಾರ ನಿವೃತ್ತಿ ಘೋಷಿಸಿದ್ದಾರೆ.

ಐಪಿಎಲ್‌ನಲ್ಲಿ ಮುಂಬೈ ಇಂಡಿಯನ್ಸ್ ತಂಡದ ಪರವಾಗಿ ಅವರು ಆಡುತ್ತಿದ್ದಾರೆ. ಟಿ20 ಫ್ರ್ಯಾಂಚೈಸಿ ಮತ್ತು ಟಿ10 ಲೀಗ್ ಟೂರ್ನಿಗಳಲ್ಲಿ ಆಡುವುದನ್ನು ಮುಂದುವರಿಸುವರು.

ಪೊಲಾರ್ಡ್ 2007ರಲ್ಲಿ ಏಕದಿನ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು.

‘ಹತ್ತು ವರ್ಷದ ಬಾಲಕನಿದ್ದಾಗಿನಿಂದಲೂ ವೆಸ್ಟ್ ಇಂಡೀಸ್ ತಂಡದಲ್ಲಿ ಆಡುವ ಕನಸಿತ್ತು. ಸುಮಾರು 15 ವರ್ಷ ತಂಡದಲ್ಲಿ ಆಡುವ ಅವಕಾಶ ಪಡೆದೆ. ವಿಂಡೀಸ್ ಬಳಗದ ನಾಯಕತ್ವ ವಹಿಸಿದೆ. ಇದೀಗ ನಿರ್ಣಯದ ಸಮಯ ಬಂದಿದೆ. ನಿವೃತ್ತಿಯಾಗುವ ನಿರ್ಧಾರ ಮಾಡಿದ್ದೇನೆ’ ಎಂದು ಪೊಲಾರ್ಡ್ ಇನ್ಸ್ಟಾಗ್ರಾಮ್‌ನಲ್ಲಿ ಬರೆದಿದ್ದಾರೆ.

ವಿಶ್ವ ಕ್ರಿಕೆಟ್‌ನಲ್ಲಿ ದೊಡ್ಡ ಹೊಡೆತವಾಡುವ ಆರು ಬ್ಯಾಟರ್‌ಗಳಲ್ಲಿ ಕೀರನ್ ಪೊಲಾರ್ಡ್ ಕೂಡ ಒಬ್ಬರು. ಫುಲ್ಲರ್ ಎಸೆತಗಳು ಮತ್ತು ಯಾರ್ಕರ್‌ಗಳಲ್ಲಿ ಸಿಕ್ಸರ್ ಎತ್ತುವ ಅವರ ಕೌಶಲ ಅಮೋಘವಾದದ್ದು.

ಕೀರನ್ ಪೊಲಾರ್ಡ್

ಟಿ20 ಪಂದ್ಯವೊಂದರಲ್ಲಿ ಪೊಲಾರ್ಡ್ ಅವರು ಶ್ರೀಲಂಕಾದ ಅಖಿಲ ಧನಂಜಯ ಬೌಲಿಂಗ್‌ನಲ್ಲಿ ಆರೂ ಎಸೆತಗಳಲ್ಲಿ ಸಿಕ್ಸರ್ ಹೊಡೆದಿದ್ದರು. ದಕ್ಷಿಣ ಆಫ್ರಿಕಾದ ಹರ್ಷಲ್ ಗಿಬ್ಸ್ ಮತ್ತು ಭಾರತದ ಯುವರಾಜ್ ಸಿಂಗ್ ಅವರ ನಂತರ ಈ ಸಾಧನೆ ಮಾಡಿದ ಆಟಗಾರನಾಗಿದ್ದಾರೆ.

ಅಂತರರಾಷ್ಟ್ರೀಯ ಕ್ರಿಕೆಟ್ ಸಾಧನೆ

ಮಾದರಿ	ಪಂದ್ಯ	ರನ್	ಶ್ರೇಷ್ಠ	ಅರ್ಧಶತಕ	ಶತಕ
ಏಕದಿನ	123	2706	119	13	3
ಟಿ20	101	1569	75	6	0

ಕೊಹ್ಲಿ ನೂರು ಪಂದ್ಯ; ದಾಖಲಾಗದ ಶತಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆಟಗಾರ ವಿರಾಟ್ ಕೊಹ್ಲಿ ಶತಕವಿಲ್ಲದ ಶತಕ ಪೂರೈಸಿದ್ದಾರೆ!

ಹೌದು; ಕಳೆದ ಎರಡು ವರ್ಷಗಳಿಂದ ಕೊಹ್ಲಿ ಯಾವ ಮಾದರಿಯ ಕ್ರಿಕೆಟ್‌ನಲ್ಲಿಯೂ ಶತಕ ಗಳಿಸಿಲ್ಲ. ಆದರೆ, ಈ ಅವಧಿಯಲ್ಲಿ ಅವರು ಒಟ್ಟು ನೂರು ಪಂದ್ಯಗಳನ್ನು ಆಡಿದ್ದಾರೆ. ಇದೊಂದು ದಾಖಲೆಯೂ ಹೌದು!

ಈ ವಿಷಯದ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆ ಗರಿಗೆದರಿದೆ. ಲಾಹೋರ್‌ನ ಕ್ರಿಕೆಟ್ ಅಂಕಿ ಅಂಶ ಸಂಗ್ರಹಕಾರ ಮಜರ್ ಅರ್ಷದ್ ಹಾಕಿರುವ ಟ್ವೀಟ್ ಭಾರಿ ಸುದ್ದಿ ಮಾಡಿದೆ.

17 ಟೆಸ್ಟ್, 21 ಏಕದಿನ, 25 ಟ್ವೆಂಟಿ-20 ಮತ್ತು 37 ಐಪಿಎಲ್ ಪಂದ್ಯಗಳನ್ನು ಕೊಹ್ಲಿ ಈ ಅವಧಿಯಲ್ಲಿ ಆಡಿದ್ದಾರೆ. ಯಾವ ಪಂದ್ಯದಲ್ಲಿಯೂ ಶತಕ ಬಾರಿಸಿಲ್ಲ. 2019ರ ನವೆಂಬರ್‌ನಲ್ಲಿ ನಡೆದಿದ್ದ ಬಾಂಗ್ಲಾದೇಶದ ಎದುರಿನ ಹೊನಲು ಬೆಳಕಿನ ಟೆಸ್ಟ್‌ನಲ್ಲಿ ಅವರು ಶತಕ ಬಾರಿಸಿದ್ದು ಕೊನೆಯದ್ದು. ಲಖನೌ ಎದುರಿನ ಪಂದ್ಯದಲ್ಲಿ ಅವರು ಎದುರಿಸಿದ ಮೊದಲ ಎಸೆತದಲ್ಲಿ ಔಟಾಗಿದ್ದರು.

ವಿಶ್ರಾಂತಿ ಅವಶ್ಯ(ಪಿಟಿಐ): ವಿರಾಟ್ ಕೊಹ್ಲಿ ಅವರು ಸದ್ಯ ಕ್ರಿಕೆಟ್‌ನಿಂದ ತುಸು ವಿಶ್ರಾಂತಿ ಪಡೆಯಬೇಕು. ಅತಿಯಾದ ಒತ್ತಡ ಅನುಭವಿಸಿರುವ ಅವರು ನಿರಾಳರಾಗಿದ್ದು, ದೇಶದ ಕ್ರಿಕೆಟ್ ತಂಡಕ್ಕೆ ಮರಳಬೇಕು ಎಂದು ವೀಕ್ಷಕ ವಿವರಣೆಗಾರ ರವಿಶಾಸ್ತ್ರಿ ಸಲಹೆ ನೀಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ಚಿನ್ನ ₹ 915, ಬೆಳ್ಳಿ ₹ 2,221ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ಚಿನ್ನದ ದರ 10 ಗ್ರಾಂಗೆ ₹ 915ರಷ್ಟು ಇಳಿಕೆ ಆಗಿದ್ದು ₹ 52,367ರಂತೆ ಮಾರಾಟ ಆಗಿದೆ. ಬೆಳ್ಳಿ ಧಾರಣೆ ಕೆ.ಜಿ.ಗೆ ₹ 2,221ರಷ್ಟು ಇಳಿಕೆಯಾಗಿ ₹ 67,969ಕ್ಕೆ ತಲುಪಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆ ಮತ್ತು ರೂಪಾಯಿ ಮೌಲ್ಯ ಏರಿಕೆಯಿಂದಾಗಿ ದೇಶಿ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆ ಕಾಣುವಂತಾಯಿತು ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಷೇರುಪೇಟೆ ವಹಿವಾಟು ▲574



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,958
ಇಂದಿನ ಅಂತ್ಯ	17,136
▲	178
ದಿನದ ಗರಿಷ್ಠ	17,186

ವಿನಿಮಯ ದರ

$ ಡಾಲರ್	76.30
£ ಪೌಂಡ್	99.29
€ ಯೂರೊ	82.71
¥ ಯೆನ್ (100ಕ್ಕೆ)	60

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹405
12 ಮೊಟ್ಟೆಗೆ	₹56
ಮೈಸೂರು	
100 ಮೊಟ್ಟೆಗೆ	₹407

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1630 (1640)
ಸೋಯಾ (ರಿಫೈನ್ಡ್)	₹1565 (1570)
ಸೂರ್ಯಕಾಂತಿ (ರಿಫೈನ್ಡ್)	₹1875 (1900)
ಪಾಮೋಲಿನ್	₹1482 (1500)

IN REVERENCE & REMEMBERANCE



Prof. N. ANANTHACHAR
Founder Secretary
ACHARYA PATHASALA EDUCATIONAL TRUST
(Established in 1935)
N. R. Colony,
Bengaluru - 560 019.
05-09-1910 21-04-1976
"A FOUNTAIN HEAD OF KNOWLEDGE AND ALWAYS A SOURCE OF INSPIRATION",
who left us 46 years ago,
but his Memories of Strong Leadership and Hardwork will continue to guide us
EVER REMEMBERING HIS SERVICES
President & Board of Trustees, APSET.

ಹಣದುಬ್ಬರ ದರ ಏರಿಕೆ ಅತಿಯಾಗಿಲ್ಲ: ನಿರ್ಮಲಾ

ಪ್ರಜಾವಾಣಿ ವಾರ್ತೆ

ನವದೆಹಲಿ/ಬೆಂಗಳೂರು: ಚಿಲ್ಲರೆ ಹಣದುಬ್ಬರ ದರವು ಗರಿಷ್ಠ ಮಿತಿಯನ್ನು ಮೀರಿದ್ದರೂ, ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಹಣದುಬ್ಬರ ದರ ‘ಅತಿಯಾಗಿಲ್ಲ’ ಎಂದು ಹೇಳಿದ್ದಾರೆ.

ವಾಷಿಂಗ್ಟನ್‌ನಲ್ಲಿ ಒಂದು ಕಾರ್ಯಕ್ರಮದಲ್ಲಿ ಅವರು ಈ ಮಾತು ಹೇಳಿದ್ದಾರೆ. ‘ಜಾಗತಿಕ ಮಟ್ಟದಲ್ಲಿ ಸವಾಲುಗಳಿವೆ. ಭಾರತದಲ್ಲಿ ಹಣದುಬ್ಬರ ದರವು ಮಾರ್ಚ್‌ನಲ್ಲಿ ಶೇ 6.9ರಷ್ಟಿದೆ. ಹಣದುಬ್ಬರವು ಗರಿಷ್ಠ ಶೇ 6ರವರೆಗೆ ತಲುಪಲು ಅವಕಾಶವಿದೆ. ಆ ಗಡಿಯನ್ನು ನಾವು ದಾಟಿದ್ದೇವೆ. ಆದರೆ ಹಣದುಬ್ಬರದ ಈ ಏರಿಕೆ ಅತಿಯಲ್ಲ’ ಎಂದು ನಿರ್ಮಲಾ ಅಭಿಪ್ರಾಯಪಟ್ಟಿದ್ದಾರೆ.

ಮಾರ್ಚ್‌ನಲ್ಲಿ ದೇಶದ ಚಿಲ್ಲರೆ ಹಣದುಬ್ಬರ ದರ 17 ತಿಂಗಳ ಗರಿಷ್ಠ ಮಟ್ಟ ತಲುಪಿದೆ (ಶೇ 6.95). ಮುಂದಿನ ತಿಂಗಳುಗಳಲ್ಲಿ ಚಿಲ್ಲರೆ ಹಣದುಬ್ಬರವು ಇನ್ನಷ್ಟು ಜಾಸ್ತಿ ಆಗಲಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಜನಸಾಮಾನ್ಯರ ಮೇಲೆ ಇರುವ ಬೆಲೆ ಏರಿಕೆಯ ಹೊರೆಯು ಸರ್ಕಾರದ ಗಮನದಲ್ಲಿ ಇದೆ, ಹೊರೆಯನ್ನು ತಗ್ಗಿಸಲು ಸರ್ಕಾರ ಯತ್ನಿಸುತ್ತಿದೆ ಎಂದು ನಿರ್ಮಲಾ ಹೇಳಿದ್ದಾರೆ. ‘ಆದರೆ, ಈಗ ಸವಾಲುಗಳು ಏನೇ ಇದ್ದರೂ ವ್ಯವಸ್ಥೆಯಲ್ಲಿ ಸುಧಾರಣೆ ತರುವ ಉದ್ದೇಶದಿಂದ ಮುಂದಕ್ಕೆ ಸಾಗಲು ನಮಗೆ ಸಾಧ್ಯವಾಗಿದೆ’ ಎಂದು ಅವರು ಹೇಳಿದ್ದಾರೆ.

ಚಿಲ್ಲರೆ ಹಣದುಬ್ಬರ ದರವು ತೀವ್ರವಾಗಿ ಹೆಚ್ಚಾಗುತ್ತಿರುವ ಕಾರಣದಿಂದಾಗಿ, ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರು ತಮ್ಮ ಮುಂದಿನ ಗುರಿಯು ಹಣದುಬ್ಬರವನ್ನು ನಿಯಂತ್ರಿಸುವುದಾಗಿರಲಿದೆ ಎಂದು ಈಚೆಗೆ ಹೇಳಿದ್ದಾರೆ.

ದೇಶದಲ್ಲಿ ಸಗಟು ಹಣದುಬ್ಬರ ದರವು ನಾಲ್ಕು ತಿಂಗಳ ಗರಿಷ್ಠ ಮಟ್ಟವಾದ ಶೇ 14.55ಕ್ಕೆ ತಲುಪಿದೆ. ಸಗಟು ಹಣದುಬ್ಬರ ದರದಲ್ಲಿನ ಹೆಚ್ಚಳವು ಮುಂದಿನ ತಿಂಗಳುಗಳಲ್ಲಿ ಚಿಲ್ಲರೆ ಹಣದುಬ್ಬರ ದರದ ಏರಿಕೆಯ ರೂಪದಲ್ಲಿ ಕಾಣಿಸಿಕೊಳ್ಳಬಹುದು ಎಂದೂ ಕೆಲವು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಐದು ದಿನಗಳ ಕರಡಿ ಕುಣಿತಕ್ಕೆ ಕೊನೆ

ನವದೆಹಲಿ (ಪಿಟಿಐ): ದೇಶದ ಷೇರುಪೇಟೆಗಳು ಐದು ದಿನಗಳ ನಕಾರಾತ್ಮಕ ಚಲನೆಯಿಂದ ಹೊರ ಬಂದು, ಬುಧವಾರ ಏರಿಕೆಯೊಂದಿಗೆ ವಹಿವಾಟು ಅಂತ್ಯಗೊಳಿಸಿವೆ. ಜಾಗತಿಕ ಮಾರುಕಟ್ಟೆಯ ಬೆಂಬಲದೊಂದಿಗೆ ಐ.ಟಿ. ಮತ್ತು ಹಣಕಾಸು ವಲಯದ ಷೇರುಗಳ ಗಳಿಕೆಯಿಂದಾಗಿ ಸೂಚ್ಯಂಕಗಳು ಏರಿಕೆ ಕಂಡವು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 574 ಅಂಶ ಏರಿಕೆ ಕಂಡು 57,037 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 178 ಅಂಶ ಹೆಚ್ಚಾಗಿ 17,136 ಅಂಶಗಳಿಗೆ ಏರಿಕೆ ಆಯಿತು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರ ಬ್ಯಾರಲ್‌ಗೆ 0.89ರಷ್ಟು ಹೆಚ್ಚಾಗಿ ಒಂದು ಬ್ಯಾರಲ್‌ಗೆ 108.2 ಡಾಲರ್‌ಗಳಂತೆ ಮಾರಾಟವಾಯಿತು.

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹168
ಆರ್‌ಎಸ್‌ಎಸ್-5	₹162.50
ಗುಡ್ ಲಾಟ್	₹158.50

ಪರಸ್ಪರ ಅಂತರ ಕಾಯ್ದುಕೊಳ್ಳಿ

ರಷ್ಯಾ ಜೊತೆ ವಹಿವಾಟು ಸ್ಥಗಿತ: ಟಾಟಾ ಸ್ಟೀಲ್

ನವದೆಹಲಿ (ಪಿಟಿಐ): ರಷ್ಯಾ ಜೊತೆ ವಾಣಿಜ್ಯ ವಹಿವಾಟು ಸ್ಥಗಿತಗೊಳಿಸುತ್ತಿರುವುದಾಗಿ ಟಾಟಾ ಸ್ಟೀಲ್ ಬುಧವಾರ ಹೇಳಿದೆ. ರಷ್ಯಾ-ಉಕ್ರೇನ್ ಯುದ್ಧದ ಸಂದರ್ಭದಲ್ಲಿ ಕಂಪನಿ ಈ ತೀರ್ಮಾನ ಕೈಗೊಂಡಿದೆ.

‘ರಷ್ಯಾದಲ್ಲಿ ಟಾಟಾ ಸ್ಟೀಲ್‌ನ ವಹಿವಾಟು ಇಲ್ಲ, ಅಲ್ಲಿ ಕಂಪನಿಯ ನೌಕರರೂ ಇಲ್ಲ. ನಾವು ರಷ್ಯಾ ಜೊತೆ ವಾಣಿಜ್ಯ ವಹಿವಾಟು ಸ್ಥಗಿತಗೊಳಿಸುವ ತೀರ್ಮಾನವನ್ನು ಪ್ರಜ್ಞಾಪೂರ್ವಕವಾಗಿ ಕೈಗೊಂಡಿದ್ದೇವೆ’ ಎಂದು ಕಂಪನಿಯ ವಕ್ತಾರರು ಹೇಳಿದ್ದಾರೆ.

ರಷ್ಯಾ ಮೇಲಿನ ಅವಲಂಬನೆ ತಗ್ಗಿಸಲು ಕಂಪನಿಯು ಭಾರತ, ಬ್ರಿಟನ್ ಮತ್ತು ನೆದರ್ಲೆಂಡ್ಸ್‌ನಲ್ಲಿ ಹೊಂದಿರುವ ಎಲ್ಲ ಘಟಕಗಳಿಗೆ ಕಚ್ಚಾ ವಸ್ತುಗಳನ್ನು ಪರ್ಯಾಯ ಮೂಲಗಳಿಂದ ತರಿಸಿಕೊಳ್ಳಲು ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದೆ. ಭಾರತದಲ್ಲಿ ಪ್ರಧಾನ ಕಚೇರಿಯನ್ನು ಹೊಂದಿರುವ ಟಾಟಾ ಸ್ಟೀಲ್ ಕಂಪನಿಯು ರಷ್ಯಾದಿಂದ ಸೀಮಿತ ಪ್ರಮಾಣದಲ್ಲಿ ಕಲ್ಲಿದ್ದಲು ತರಿಸಿಕೊಳ್ಳುತ್ತಿತ್ತು.

ಭಾರತದಲ್ಲಿ ಡಾಟ್ಸನ್ ತಯಾರಿಕೆ ಸ್ಥಗಿತ

ನವದೆಹಲಿ (ಪಿಟಿಐ): ಜಪಾನ್ ಮೂಲದ ಆಟೊಮೊಬೈಲ್ ತಯಾರಿಕಾ ಕಂಪನಿ ನಿಸಾನ್ ತನ್ನ ಡಾಟ್ಸನ್ ಬ್ರ್ಯಾಂಡ್ ವಾಹನಗಳ ತಯಾರಿಕೆಯನ್ನು ಭಾರತದಲ್ಲಿ ಸ್ಥಗಿತಗೊಳಿಸಿದೆ. ಭಾರತದಲ್ಲಿ ಈ ಬ್ರ್ಯಾಂಡ್‌ನ ವಾಹನಗಳ ಮಾರಾಟ ಆರಂಭವಾದ 9 ವರ್ಷಗಳ ನಂತರ ಕಂಪನಿ ಈ ತೀರ್ಮಾನ ಕೈಗೊಂಡಿದೆ.

ಡಾಟ್ಸನ್ ಬ್ರ್ಯಾಂಡ್‌ಅನ್ನು ಜಾಗತಿಕ ಮಟ್ಟದಲ್ಲಿ ಮತ್ತೆ ಮೇಲಕ್ಕೆತ್ತುವ ಮಹತ್ವಾಕಾಂಕ್ಷೆ ಕಂಪನಿಗೆ ಇತ್ತು. ಕಂಪನಿಯು 2020ರಲ್ಲಿ ಈ ಬ್ರ್ಯಾಂಡ್‌ನ ವಾಹನಗಳ ಮಾರಾಟವನ್ನು ರಷ್ಯಾ ಮತ್ತು ಇಂಡೊನೇಷ್ಯಾದಲ್ಲಿ ಸ್ಥಗಿತಗೊಳಿಸಿತು. ಭಾರತ, ದಕ್ಷಿಣ ಆಫ್ರಿಕಾ, ರಷ್ಯಾ ಮತ್ತು ಇಂಡೊನೇಷ್ಯಾ ದೇಶಗಳ ಆರಂಭಿಕ ಹಂತದ ಕಾರು ಮಾರುಕಟ್ಟೆ ಈ ಬ್ರ್ಯಾಂಡ್‌ಗೆ ಮಹತ್ವದ್ದು ಎಂದು ಕಂಪನಿ ಗುರುತಿಸಿತ್ತು.

‘ಡಾಟ್ಸನ್ ರೆಡಿ-ಗೊ ಕಾರಿನ ಉತ್ಪಾದನೆಯು ಚೆನ್ನೈ ಘಟಕದಲ್ಲಿ ಸ್ಥಗಿತವಾಗಿದೆ. ಆದರೆ ಮಾರಾಟವು ಮುಂದುವರಿಯಲಿದೆ (ದಾಸ್ತಾನು ಇರುವವರೆಗೆ). ಡಾಟ್ಸನ್ ಕಾರುಗಳ ಗ್ರಾಹಕರಿಗೆ ತೃಪ್ತಿಯಾಗುವಂತೆ ಸೇವೆ ಒದಗಿಸುವುದು ನಮ್ಮ ಆದ್ಯತೆ. ಮಾರಾಟ ನಂತರದ ಸೇವೆಗಳನ್ನು, ಬಿಡಿಭಾಗಗಳು ಸಿಗುವಂತೆ ನೋಡಿಕೊಳ್ಳುವುದನ್ನು ನಾವು ಮುಂದುವರಿಸಲಿದ್ದೇವೆ’ ಎಂದು ನಿಸಾನ್ ಇಂಡಿಯಾ ತಿಳಿಸಿದೆ.

ಸಣ್ಣ ಕಾರು ‘ಗೊ’ ಮತ್ತು ಬಹು ಉಪಯೋಗಿ ಸಣ್ಣ ಕಾರು ‘ಗೋ+’ನ ತಯಾರಿಕೆಯನ್ನು ಕಂಪನಿಯು ಈಗಾಗಲೇ ಸ್ಥಗಿತಗೊಳಿಸಿದೆ. ನಿಸಾನ್ ಕಂಪನಿಯು 2013ರಲ್ಲಿ ಡಾಟ್ಸನ್ ಬ್ರ್ಯಾಂಡ್‌ಗೆ ಜಾಗತಿಕ ಮಟ್ಟದಲ್ಲಿ ಮತ್ತೆ ಚಾಲನೆ ನೀಡಿತ್ತು.

ಅತ್ಯಂತ ಸ್ಪರ್ಧಾತ್ಮಕವಾಗಿರುವ ಭಾರತದ ಕಾಂಪ್ಯಾಕ್ಟ್ ಕಾರುಗಳ ಮಾರುಕಟ್ಟೆಯಲ್ಲಿ ತನ್ನದೇ ಆದ ಛಾಪು ಮೂಡಿಸುವಲ್ಲಿ ಡಾಟ್ಸನ್ ಬ್ರ್ಯಾಂಡ್ ಯಶಸ್ಸು ಕಾಣಲಿಲ್ಲ. ಈ ಮಾರುಕಟ್ಟೆಯಲ್ಲಿ ಮಾರುತಿ ಸುಜುಕಿ ಮತ್ತು ಹುಂಡೈ ಪ್ರಾಬಲ್ಯ ಇದೆ.

50 ಸಾವಿರ ಚಾರ್ಜಿಂಗ್ ಕೇಂದ್ರ

ನವದೆಹಲಿ (ಪಿಟಿಐ): ಒಂದು ವರ್ಷದಲ್ಲಿ 50 ಸಾವಿರ ಚಾರ್ಜಿಂಗ್ ಕೇಂದ್ರಗಳನ್ನು ತೆರೆಯಲು ಉದ್ದೇಶಿಸಿದ್ದು, ಇದಕ್ಕಾಗಿ ಚಾರ್ಜಿಂಗ್ ಮೂಲಸೌಕರ್ಯ ಒದಗಿಸುವ ಬೋಲ್ಟ್ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಹೀರೊ ಎಲೆಕ್ಟ್ರಿಕ್ ತಿಳಿಸಿದೆ.

ಹೀರೊ ಎಲೆಕ್ಟ್ರಿಕ್‌ನ ಅಧಿಕ ಟಚ್ ಪಾಯಿಂಟ್‌ಗಳಲ್ಲಿ ಬೋಲ್ಟ್ ಕಂಪನಿಯ ಚಾರ್ಜರ್ ಅಳವಡಿಸಲಾಗುತ್ತದೆ. ಅಲ್ಲದೆ ಹೀರೊ ಎಲೆಕ್ಟ್ರಿಕ್ ದ್ವಿಚಕ್ರ ವಾಹನ ಹೊಂದಿರುವ 2 ಸಾವಿರ ಸವಾರರಿಗೆ ಬೋಲ್ಟ್ ಕಂಪನಿಯು ಉಚಿತವಾಗಿ ಚಾರ್ಜಿಂಗ್ ಯುನಿಟ್ ನೀಡಲಿದೆ.

ಫ್ರೀಡಂ ಶೇಂಗಾ ಎಣ್ಣೆಯ 5 ಲೀಟರ್ ಜಾರ್ ಬಿಡುಗಡೆ

ಬೆಂಗಳೂರು: ಜೆಮಿನಿ ಎಡಿಬಿಲ್ಸ್ ಆ್ಯಂಡ್ ಫ್ಯಾಟ್ಸ್ ಇಂಡಿಯಾ ಲಿಮಿಟೆಡ್, ಫ್ರೀಡಂ ಶೇಂಗಾ ಎಣ್ಣೆಯ ಹೊಸ 5 ಲೀಟರ್ ಜಾರ್ ಬಿಡುಗಡೆ ಮಾಡಿದೆ.

‘ವಿಶಿಷ್ಟ ಸ್ವಾದ ಮತ್ತು ಪರಿಮಳದಿಂದಾಗಿ ಕರ್ನಾಟಕ, ತೆಲಂಗಾಣ ಮತ್ತು ಆಂಧ್ರಪ್ರದೇಶದಲ್ಲಿ ಉಪ್ಪಿನಕಾಯಿ ತಯಾರಿಕೆಗೆ ಶೇಂಗಾ ಎಣ್ಣೆ ಬಳಸಲಾಗುತ್ತಿದೆ. ಉಪ್ಪಿನಕಾಯಿಯ ಸೀಸನ್‌ನಲ್ಲಿ ಶೇಂಗಾ ಎಣ್ಣೆ ಬೇಡಿಕೆಯು ನಾಲ್ಕು ಪಟ್ಟು ಹೆಚ್ಚಾಗುವುದನ್ನು ಗಮನಿಸಿದ್ದೇವೆ. ಹೀಗಾಗಿ ಈಗ 5 ಲೀಟರ್‌ನ ಜಾರ್ ಬಿಡುಗಡೆ ಮಾಡಲಾಗಿದೆ’ ಎಂದು ಫ್ರೀಡಂ ಹೆಲ್ದಿ ಕುಕಿಂಗ್ ಆಯಿಲ್ಸ್‌ನ ಮಾರುಕಟ್ಟೆ ವಿಭಾಗದ ಹಿರಿಯ ಉಪಾಧ್ಯಕ್ಷ ಪಿ. ಚಂದ್ರಶೇಖರ ರೆಡ್ಡಿ ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	500
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-54000
ಪುತ್ತೂರು	
ಕೋಕ	11000-26000
ಹೊಸತು	27500-45000
ಕುಮಟ	
ಚಿಪ್ಪು	26699-31119
ಕೋಕ	17019-30399
ಫ್ಯಾಕ್ಟರಿ	10109-20169
ಹಳೆಚಾಲಿ	49209-50499
ಹೊಸಚಾಲಿ	36899-40129
ಶಿವಮೊಗ್ಗ	
ಬೆಟ್ಟೆ	47899-52569
ಗೊರಬಲು	22259-35889
ರಾಶಿ	43999-48689
ಸರಕು	55509-77600
ಸಿದ್ದಾಪುರ	
ಬಿಳಿಗೋಟು	24911-31219
ಕೋಕ	21699-30809
ಹೊಸಚಾಲಿ	36089-40399
ಕೆಂಪುಗೋಟು	28612-31389
ರಾಶಿ	45019-48799
ತಟ್ಟಿಬೆಟ್ಟೆ	34609-45099
ರಾಮನಗರ ರೇಷ್ಮೆಗೂಡು	
ಮಿಶ್ರ ತಳಿ	349-683
ದ್ವಿತಳಿ	285-822

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16000	15800	15800	223.50 ಸೆಂಟ್ಸ್
ಎಸಿ	8400	8000	8425	
ಆರ್‌ಪಿ	9300	9200	9300	ಲಂಡನ್
ಆರ್‌ಸಿ	4275	6050	4225	2087 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

20-4-2022

ಜಾವಾ 70/80(ಹೊಸ)	10300-10350
ಜಾವಾ 80/90(ಹೊಸ)	9700-9750
ದಪ್ಪ ಮಧ್ಯಪ್ರದೇಶ(ಹೊಸ)	11000-11050
ದಪ್ಪ ಗುಜರಾತ್(ಹೊಸ)	9900-9950

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1640 (1650)
ಒಂದು ವಾರದ ಡೆಲಿವರಿ	1635 (1645)
ಸೋಯಾ ಕಚ್ಚಾ	1525 (1545)
ಪಾಮ್ ವಾರದ ಡೆಲಿವರಿ	1480 (1500)
ಸೂರ್ಯಕಾಂತಿ ಎಣ್ಣೆ ಕಚ್ಚಾ	1840 (1850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
52,500 (53,000)
ಬೆಳ್ಳಿ ಕೆ.ಜಿ 68,600 (69,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ವರಮಾನ ಹೆಚ್ಚಳ: ಮಲಬಾರ್ ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಕಂಪನಿಯು ಪ್ರಸಕ್ತ ಹಣಕಾಸು ವರ್ಷದಲ್ಲಿ ₹ 45 ಸಾವಿರ ಕೋಟಿ ವರಮಾನ ಗಳಿಸುವ ಗುರಿ ಇಟ್ಟುಕೊಂಡಿದೆ.

2021–22ನೇ ಹಣಕಾಸು ವರ್ಷದಲ್ಲಿ ವರಮಾನವು ₹ 30 ಸಾವಿರ ಕೋಟಿ ಆಗಿದೆ. 2020–21ನೇ ಹಣಕಾಸು ವರ್ಷಕ್ಕೆ ಹೋಲಿಸಿದರೆ ವರಮಾನದಲ್ಲಿ ಶೇಕಡ 35ರಷ್ಟು ಏರಿಕೆ ಆಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ದೇಶದಾದ್ಯಂತ ಹೊಸ ರಿಟೇಲ್ ಮಾರಾಟ ಮಳಿಗೆಗಳನ್ನು ತೆರೆಯುತ್ತಿರುವುದರಿಂದ ಹೆಚ್ಚಿನ ಗ್ರಾಹಕರನ್ನು ತಲುಪಲು ಸಾಧ್ಯವಾಗಿದೆ. ಇದರಿಂದಾಗಿ ವಹಿವಾಟಿನಲ್ಲಿ ಉತ್ತಮ ಪ್ರಗತಿ ಸಾಧ್ಯವಾಗಿದೆ ಎಂದು ಹೇಳಿದೆ.

ಸಂಕ್ಷಿಪ್ತ ಸುದ್ದಿ

ಪೆಲೆ ಆಸ್ಪತ್ರೆಗೆ ದಾಖಲು



ಪೆಲೆ

ಸಾವೊಪೌಲೊ (ಎಎಫ್‌ಪಿ): ಫುಟ್‌ಬಾಲ್ ಕ್ರೀಡೆಯ ದಂತಕಥೆ ಪೆಲೆ ಕರುಳಿನ ಕ್ಯಾನ್ಸರ್ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ.

81 ವರ್ಷದ ಪೆಲೆ ಸೋಮವಾರ ಆಸ್ಪತ್ರೆಗೆ ದಾಖಲಾಗಿದ್ದಾರೆ. ಅವರು ಚಿಕಿತ್ಸೆಗೆ ಉತ್ತಮವಾಗಿ ಸ್ಪಂದಿಸುತ್ತಿದ್ದಾರೆ. ಆರೋಗ್ಯ ಸ್ಥಿರವಾಗಿದೆ ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ.

ಬ್ರೆಜಿಲ್‌ನಲ್ಲಿ 'ದ ಕಿಂಗ್' ಎಂದೇ ಪ್ರಸಿದ್ಧರಾಗಿರುವ ಪೆಲೆ ಮೂರು ಬಾರಿ ಫಿಫಾ ವಿಶ್ವಕಪ್ ವಿಜೇತರಾಗಿದ್ದಾರೆ.

ಶೂಟಿಂಗ್: ವಿಜಯವೀರ್‌ಗೆ ಜಯ

ನವದೆಹಲಿ (ಪಿಟಿಐ): ಪಂಜಾಬ್‌ನ ವಿಜಯವೀರ್ ಸಿಧು ಬುಧವಾರ ಇಲ್ಲಿ ನಡೆದ ರಾಷ್ಟ್ರೀಯ ಆಯ್ಕೆ ಟ್ರಯಲ್ಸ್ ಶೂಟಿಂಗ್‌ನ ಪುರುಷರ 25 ಮೀಟರ್ಸ್ ರ‍್ಯಾಪಿಡ್ ಫೈರ್ ಪಿಸ್ತೂಲ್ ವಿಭಾಗದಲ್ಲಿ ಜಯಿಸಿದರು. ಹರಿಯಾಣದ ರಿಧಂ ಸಂಗ್ವಾನ್ ಮಹಿಳಾ ಮತ್ತು ಜೂನಿಯರ್ ಬಾಲಕಿಯರ ವಿಭಾಗಗಳಲ್ಲಿ ಚಿನ್ನ ಗೆದ್ದರು.

ವಿಜಯವೀರ್ ಅವರು 32 ಹಿಟ್ಸ್ ಮಾಡಿ ಚಿನ್ನ ಗೆದ್ದರು. ಕರ್ಣಿ ಸಿಂಗ್ ಶೂಟಿಂಗ್ ರೇಂಜ್‌ನಲ್ಲಿ ನಡೆದ ಸ್ಪರ್ಧೆಯಲ್ಲಿ ಅವರು ಅಂತರರಾಷ್ಟ್ರೀಯ ಶೂಟರ್‌ಗಳಾದ ಅನೀಶ್ ಭಾನವಾಲಾ ಮತ್ತು ಆದರ್ಶ ಸಿಂಗ್ ಅವರ ಪೈಪೋಟಿಯನ್ನು ಎದುರಿಸಿದರು.

ಕ್ರಿಕೆಟ್: ಸಿಕ್ಸ್ ಅಕಾಡೆಮಿಗೆ ಜಯ

ಬೆಂಗಳೂರು: ಸಿಕ್ಸ್ ಅಕಾಡೆಮಿಯು ಟೈಗರ್ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಬುಧವಾರ 12 ವರ್ಷ ಮತ್ತು 14 ವರ್ಷದೊಳಗಿನವರ ವಿಭಾಗಗಳಲ್ಲಿ ಆರ್‌ಎಕ್ಸ್‌ಸಿಎ ವಿರುದ್ಧ ಜಯಿಸಿತು.

ಸಂಕ್ಷಿಪ್ತ ಸ್ಕೋರು: 12 ವರ್ಷದೊಳಗಿನವರು: ಆರ್‌ಎಕ್ಸ್‌ಸಿಎ: 30 ಓವರ್‌ಗಳಲ್ಲಿ 7ಕ್ಕೆ140 (ವಿಶಾಲ್ ಜಾರ್ಜ್ 55, ಪನ್ಷುಲ್ ಶರ್ಮಾ 25ಕ್ಕೆ2), ಸಿಕ್ಸ್ ಅಕಾಡೆಮಿ: 27 ಓವರ್‌ಗಳಲ್ಲಿ 4ಕ್ಕೆ141 (ಆತ್ರೇಯ ಭಟ್ 70, ರಫಾ ಪೂಣಚ್ಚ 37). ಫಲಿತಾಂಶ: ಸಿಕ್ಸ್ ಅಕಾಡೆಮಿಗೆ 6 ವಿಕೆಟ್‌ಗಳ ಜಯ.

14 ವರ್ಷದೊಳಗಿನವರು: ಆರ್‌ಎಕ್ಸ್‌ಸಿಎ: 30 ಓವರ್‌ಗಳಲ್ಲಿ 4ಕ್ಕೆ138 (ವಿಶಾಲ್ ಜಾರ್ಜ್ 45, ಶೌರ್ಯಾ ಮುರಳಿ 17ಕ್ಕೆ2), ಸಿಕ್ಸ್ ಅಕಾಡೆಮಿ: 22.4 ಓವರ್‌ಗಳಲ್ಲಿ 2ಕ್ಕೆ 139 (ಅನ್ವಯ್ ದ್ರಾವಿಡ್ ಔಟಾಗದೆ 42, ಅಹಾನ್ ಕೌಶಿಕ್ 26, ಧ್ರುವ ಕೃಷ್ಣನ್ 34) ಫಲಿತಾಂಶ: ಸಿಕ್ಸ್ ಅಕಾಡೆಮಿಗೆ 8 ವಿಕೆಟ್‌ಗಳ ಜಯ.

ಡ್ಯಾನಿಲ್ ಮೆಡ್ವೆಡೆವ್–ಎಎಫ್‌ಪಿ ಚಿತ್ರ

ವಿಂಬಲ್ಡನ್: ರಷ್ಯಾ, ಬೆಲಾರೂಸ್ ಆಟಗಾರರಿಗೆ ನಿಷೇಧ

ಲಂಡನ್ (ಎಎಫ್‌ಪಿ): ರಷ್ಯಾ ಹಾಗೂ ಬೆಲಾರೂಸ್ ದೇಶಗಳ ಆಟಗಾರರನ್ನು ಈ ಬಾರಿಯ ವಿಂಬಲ್ಡನ್ ಟೆನಿಸ್ ಟೂರ್ನಿಯಲ್ಲಿ ಆಡದಂತೆ ನಿಷೇಧಿಸಲಾಗಿದೆ.

ಫೆಬ್ರುವರಿ 24ರಿಂದ ಉಕ್ರೇನ್ ಮೇಲೆ ರಷ್ಯಾ ಯುದ್ಧ ನಡೆಸುತ್ತಿದೆ. ಬೆಲಾರೂಸ್ ಬೆಂಬಲ ನೀಡಿದೆ. ಆದ್ದರಿಂದ ವಿವಿಧ ಕ್ರೀಡಾಕೂಟಗಳಲ್ಲಿ ಎರಡೂ ದೇಶಗಳ ಆಟಗಾರರನ್ನು ನಿಷೇಧಿಸಲಾಗಿದೆ. ಆದರೆ ಅವರು ಐಒಸಿ ಧ್ವಜದಡಿಯಲ್ಲಿ ಸ್ಪರ್ಧಿಸಬಹುದಾಗಿದೆ.

ವಿಂಬಲ್ಡನ್ ಆಯೋಜಕರ ಈ ನಿರ್ಣಯದಿಂದಾಗಿ ಅಗ್ರಶ್ರೇಯಾಂಕದ ಟೆನಿಸ್ ಆಟಗಾರ ಡ್ಯಾನಿಲ್ ಮೆಡ್ವೆಡೆವ್ ಸ್ಪರ್ಧಿಸುವುದು ಅನುಮಾನವಾಗಿದೆ ಎಂದೂ ಟೈಮ್ಸ್ ವರದಿ ಮಾಡಿದೆ. ಮಹಿಳೆಯರ ವಿಭಾಗದಲ್ಲಿ ಹೋದ ಸಲ ಸೆಮಿಫೈನಲ್ ಪ್ರವೇಶಿಸಿದ್ದ ಬೆಲಾರೂಸ್‌ನ ಅರ್ಯಾನಾ ಸಬಲೆಂಕಾ ಕೂಡ ಈ ಟೂರ್ನಿಯನ್ನು ತಪ್ಪಿಸಿಕೊಳ್ಳಲಿದ್ದಾರೆ.

ಈಚೆಗೆ ನಡೆದ ಡೇವಿಸ್ ಕಪ್ ಮತ್ತು ಬಿಲಿ ಜೀನ್ ಕಿಂಗ್ ಕಪ್ ಟೂರ್ನಿಗಳಲ್ಲಿಯೂ ಈ ಎರಡೂ ದೇಶಗಳ ಆಟಗಾರರನ್ನು ಐಟಿಎಫ್ ನಿಷೇಧಿಸಿತ್ತು.

ಕ್ರೆಮ್ಲಿನ್ ವಿರೋಧ: ವಿಂಬಲ್ಡನ್ ಟೆನಿಸ್ ಟೂರ್ನಿಯಿಂದ ತಮ್ಮ ಹಾಗೂ ಬೆಲಾರೂಸ್ ಆಟಗಾರರನ್ನು ನಿಷೇಧಿಸಿರುವುದನ್ನು ರಷ್ಯಾ ಖಂಡಿಸಿದೆ.

'ಇದು ಖಂಡಿತವಾಗಿಯೂ ಸ್ವೀಕಾರಾರ್ಹವಲ್ಲ' ಎಂದು ಕ್ರೆಮ್ಲಿನ್ ವಕ್ತಾರ ಡಿಮಿಟ್ರಿ ಪೆಸ್ಕೊವಾ ವರದಿಗಾರರಿಗೆ ಹೇಳಿದ್ದಾರೆ.

'ಮತ್ತೊಮ್ಮೆ ಅಥ್ಲೀಟ್‌ಗಳನ್ನು ಒತ್ತೆಯಾಳುಗಳಂತೆ ನಡೆಸಿಕೊಳ್ಳಲಾಗುತ್ತಿದೆ. ರಾಜಕೀಯ ಪೂರ್ವಗ್ರಹ ಮತ್ತು ಹತಾಶೆ ಇಲ್ಲಿ ಕಾಣುತ್ತಿದೆ' ಎಂದು ಡಿಮಿಟ್ರಿ ಕುಟುಕಿದ್ದಾರೆ

ಭಾರತ ಬ್ಯಾಡ್ಮಿಂಟನ್ ತಂಡದ ಆಯ್ಕೆ ಟ್ರಯಲ್ಸ್: ಅಶ್ವಿನಿ ಜಯಭೇರಿ

ಆಕರ್ಷಿಗೆ ಕಾಮನ್‌ವೆಲ್ತ್ ಟಿಕೆಟ್

ನವದೆಹಲಿ (ಪಿಟಿಐ): ಆಕರ್ಷಿ ಕಶ್ಯಪ್ ಅವರು ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಭಾರತ ಬ್ಯಾಡ್ಮಿಂಟನ್ ತಂಡವನ್ನು ಪ್ರತಿನಿಧಿಸಲಿದ್ದಾರೆ. ಪ್ರಿಯಾಂಶು ರಾಜಾವತ್ ಅವರು ಏಷ್ಯನ್ ಗೇಮ್ಸ್‌ನಲ್ಲಿ ಆಡುವ ಅವಕಾಶ ಪಡೆದಿದ್ದಾರೆ.

ಇಲ್ಲಿಯ ಇಂದಿರಾಗಾಂಧಿ ಕ್ರೀಡಾಂಗಣದಲ್ಲಿ ನಡೆದ ಕ್ರೀಡಾಕೂಟಗಳ ಆಯ್ಕೆ ಟ್ರಯಲ್ಸ್‌ನಲ್ಲಿ ಬುಧವಾರ ಆಕರ್ಷಿ ಹಾಗೂ ಪ್ರಿಯಾಂಶು ಅವರು ಕ್ರಮವಾಗಿ ಮಹಿಳಾ ಮತ್ತು ಪುರುಷರ ಸಿಂಗಲ್ಸ್ ವಿಭಾಗಗಳಲ್ಲಿ ಅಗ್ರಸ್ಥಾನ ಗಳಿಸಿದರು.

ಕನ್ನಡತಿ ಅಶ್ವಿನಿ ಹಾಗೂ ಸುಮೀತ್ ರೆಡ್ಡಿ ಮಿಶ್ರ ಡಬಲ್ಸ್ ವಿಭಾಗದಲ್ಲಿ ಜಯ ಸಾಧಿಸಿದರು. ಈ ಜೋಡಿಗೆ ಕಾಮನ್‌ವೆಲ್ತ್, ಏಷ್ಯನ್ ಮತ್ತು ಥಾಮಸ್ ಮತ್ತು ಊಬರ್ ಕಪ್ ಮೂರೂ ಟೂರ್ನಿಗಳಲ್ಲಿ ಆಡುವ ಅವಕಾಶ ಸಿಗುವ ಸಾಧ್ಯತೆಯಿದೆ.

ಆಕರ್ಷಿ ಕಶ್ಯಪ್– ಪ್ರಜಾವಾಣಿ ಸಂಗ್ರಹ ಚಿತ್ರ

ಅಂತಿಮ ಸುತ್ತಿನ ಪಂದ್ಯದಲ್ಲಿ ಆಕರ್ಷಿ 21–10, 17–21, 21–15ರಿಂದ ಅಸ್ಮಿತಾ ಚಲಿಹಾ ಅವರನ್ನು ಪರಾಭವಗೊಳಿಸಿದರೆ, ಪ್ರಿಯಾಂಶು 21-15, 18-21, 21-10ರಿಂದ ಒಡಿಶಾ ಓಪನ್ ಪ್ರಶಸ್ತಿ ವಿಜೇತ ಕಿರಣ್ ಜಾರ್ಜ್ ಅವರಿಗೆ ಸೋಲುಣಿಸಿದರು.

ಟೂರ್ನಿಯಲ್ಲಿ ಅಜೇಯರಾಗುಳಿದ ಆಕರ್ಷಿ, ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಪಿ.ವಿ.ಸಿಂಧು ಅವರ ಜೊತೆ ಭಾರತ ತಂಡದ ಪರ ಆಡಲಿದ್ದಾರೆ. ಅಗ್ರ 15ರೊಳಗಿನ ರ‍್ಯಾಂಕಿಂಗ್‌ನಲ್ಲಿರುವುದರಿಂದ ಲಕ್ಷ್ಯ ಸೇನ್ ಮತ್ತು ಕಿದಂಬಿ ಶ್ರೀಕಾಂತ್ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ನೇರ ಅರ್ಹತೆ ಗಳಿಸಿದ್ದಾರೆ. ಪ್ರಿಯಾಂಶು ಅವರು ಥಾಮಸ್ ಕಪ್ ಟೂರ್ನಿಯಲ್ಲೂ ಆಡುವ ಅವಕಾಶ ಗಿಟ್ಟಿಸಿದ್ದಾರೆ. ಪ್ರಿಯಾಂಶು, ಕಿರಣ್, ರವಿ ಮತ್ತು ಸಮೀರ್ ವರ್ಮಾ ಅವರು ಟ್ರಯಲ್ಸ್‌ನ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಕ್ರಮವಾಗಿ 1ರಿಂದ 4ನೇ ಸ್ಥಾನ ಗಳಿಸಿದರು. ಆಕರ್ಷಿ, ಅಶ್ಮಿತಾ, ಉನ್ನತಿ ಹೂಡಾ ಮತ್ತು ಅದಿತಿ ಭಟ್ ಮಹಿಳೆಯರ ಸಿಂಗಲ್ಸ್ ಅಗ್ರ ನಾಲ್ಕು ಸ್ಥಾನ ಗಳಿಸಿದ್ದಾರೆ.

ಏಷ್ಯನ್ ಗೇಮ್ಸ್ ಮತ್ತು ಊಬರ್ ಕಪ್ ತಂಡಗಳಿಗೆ ಮೂರು ಸ್ಥಾನಗಳು ಲಭ್ಯವಿರುವುದರಿಂದ ಅಗ್ರ ಮೂರು ಮಹಿಳಾ ಸಿಂಗಲ್ಸ್ ಆಟಗಾರರು ದೇಶವನ್ನು ಪ್ರತಿನಿಧಿಸುವ ಅವಕಾಶವನ್ನು ಪಡೆಯುತ್ತಾರೆ.

ಮಿಶ್ರ ಡಬಲ್ಸ್‌ನ ಅಂತಿಮ ಸುತ್ತಿನಲ್ಲಿ ಅಶ್ವಿನಿ– ಸುಮೀತ್ 11-21, 22-20, 21-18ರಿಂದ ಇಶಾನ್ ಭಟ್ನಾಗರ್ ಮತ್ತು ತನಿಶಾ ಕ್ರಾಸ್ಟೊ ಅವರನ್ನು ಸೋಲಿಸಿದರು.

ವಿವಿ ಖೇಲೊ ಇಂಡಿಯಾಗೆ ಒಲಿಂಪಿಯನ್ನರ ಮೆರಗು

ನವದೆಹಲಿ (ಪಿಟಿಐ): ಬೆಂಗಳೂರಿನಲ್ಲಿ ಇದೇ 24ರಿಂದ ಮೇ 3ರವರೆಗೆ ನಡೆಯಲಿರುವ ಖೇಲೊ ಇಂಡಿಯಾ ವಿಶ್ವವಿದ್ಯಾಲಯಗಳ ಕ್ರೀಡಾಕೂಟಕ್ಕೆ (ಕೆಐಯುಜಿ) ಒಲಿಂಪಿಯನ್ ಅಥ್ಲೀಟ್‌ಗಳು ಮೆರಗು ತುಂಬಲಿದ್ದಾರೆ. ಶೂಟರ್ ಮನು ಭಾಕರ್, ವೇಗದ ಓಟಗಾರ್ತಿ ದ್ಯುತಿ ಚಾಂದ್ ಮತ್ತು ಈಜುಪಟು ಶ್ರೀಹರಿ ನಟರಾಜ್ ಸ್ಪರ್ಧಿಸಲಿದ್ದಾರೆ.

ಶೂಟರ್‌ಗಳಾದ ದಿವ್ಯಾಂಶ್ ಸಿಂಗ್ ಪನ್ವರ್ ಮತ್ತು ಐಶ್ವರ್ಯಪ್ರತಾಪ್ ಸಿಂಗ್ ತೋಮರ್ ಕೂಡ ಪದಕ ಬೇಟೆಗೆ ಸಜ್ಜಾಗಿದ್ದಾರೆ.

'ಅತ್ಯಾಧುನಿಕ ಸೌಲಭ್ಯಗಳುಳ್ಳ ತಾಣದಲ್ಲಿ ಕ್ರೀಡಾಕೂಟ ನಡೆಯಲಿದ್ದು, ದೊಡ್ಡ ಸಂಖ್ಯೆಯಲ್ಲಿ ಅಥ್ಲೀಟ್‌ಗಳು ಭಾಗವಹಿಸಲಿದ್ದಾರೆ. ಇದು ದೇಶದ ಅತಿ ದೊಡ್ಡ ವಿಶ್ವವಿದ್ಯಾಲಯ ಮಟ್ಟದ ಕ್ರೀಡಾಕೂಟವಾಗಲಿದೆ' ಎಂದು ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

ಶ್ರೀಹರಿ ನಟರಾಜ

ಮನು ಭಾಕರ್– ಪಿಟಿಐ ಚಿತ್ರ

'ಖೇಲೊ ಇಂಡಿಯಾ ವಿವಿ ಕೂಟದ ಮೂಲಕ ಇನ್ನಷ್ಟು ಚಾಂಪಿಯನ್‌ಗಳು ಹೊರಹೊಮ್ಮಲಿದ್ದಾರೆ' ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

'ಡೋಪಿಂಗ್ ತಡೆಗೆ ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಘಟಕವು (ನಾಡಾ) ಜಾಗೃತಿ ನಡೆಸಲಿದೆ. ಮಾಹಿತಿ, ಶಿಕ್ಷಣ, ಸಂವಹನ ಈ ಎಲ್ಲ ವಿಷಯಗಳಲ್ಲಿ ನಾಡಾದ ಕಾರ್ಯಚಟುವಟಿಕೆಗಳು ಡಿಜಿಟಲ್ ಆಗಿರಲಿವೆ. ಕ್ರೀಡಾಕೂಟಕ್ಕೆ ₹ 34.97 ಕೋಟಿ ಮಂಜೂರು ಮಾಡಲಾಗಿದೆ' ಎಂದು ಅನುರಾಗ್ ಮಾಹಿತಿ ನೀಡಿದ್ದಾರೆ.

ಮೇಘನಾಗೆ ಮಣಿದ ಶ್ರೀತನ್ವಿ

ಎಐಟಿಎ 18 ವರ್ಷದೊಳಗಿನವರ ಟೆನಿಸ್ ಟೂರ್ನಿ

ಬೆಂಗಳೂರು: ಎರಡನೇ ಶ್ರೇಯಾಂಕದ ಶ್ರೀತನ್ವಿ ದಾಸರಿ ಅವರಿಗೆ ಸೋಲುಣಿಸಿದ ಮೇಘನಾ ಜಿ.ಡಿ, ಇಲ್ಲಿ ನಡೆಯುತ್ತಿರುವ ಎಐಟಿಎ ಸಿಎಸ್7 18 ವರ್ಷದೊಳಗಿನವರ ಟೆನಿಸ್ ಟೂರ್ನಿಯ ನಾಲ್ಕರ ಘಟ್ಟಕ್ಕೆ ಲಗ್ಗೆಯಿಟ್ಟರು.

ಬುಧವಾರ ನಡೆದ ಬಾಲಕಿಯರ ವಿಭಾಗದ ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ಮೇಘನಾ 6-1, 6-3ರಿಂದ ಶ್ರೀತನ್ವಿ ವಿರುದ್ಧ ಗೆದ್ದರು. ಎಂಟರಘಟ್ಟದ ಮತ್ತೊಂದು ಪಂದ್ಯದಲ್ಲಿ ಅನುಷ್ಕಾ ಗೆರಿಮೆಲ್ಲಾ 5–7, 2–6ರಿಂದ ವರುಣ್ಯಾ ನವೀನ್ ಎದುರು ಸೋತರು.

ಬಾಲಕಿಯರ ವಿಭಾಗದ ಇನ್ನುಳಿದ ಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ಅಮೋದಿನಿ ನಾಯಕ್ 6-0, 6-4ರಿಂದ ಧರಣಿ ಧನ್ಯಾಟ ಎದುರು, ಸುಶ್ಮಿತಾ ರವಿ 3-6, 6-4, 6-3ರಿಂದ ಭಾರತೀಯಾನಾ ಬಿ. ರೆಡ್ಡಿ ಎದುರು ಗೆದ್ದು ಮುನ್ನಡೆದರು.

ಬಾಲಕರ ವಿಭಾಗದಲ್ಲಿ ಮನದೀಪ್ ರೆಡ್ಡಿ ಕುದುಮಾಲ 5-7, 6-2, 6-4ರಿಂದ ವಿಶಾಲ್ ವಾಸುದೇವ್ ಎದುರು, ಆರ್ಯ ಗಣಪತಿ ಕಳ್ಳಂಬೆಳ್ಳ 6-3, 6-2ರಿಂದ ಅಕ್ಷಯ್ ಪ್ರಸಾದ್ ಎದುರು, ಆರಾಧ್ಯ ದ್ವಿವೇದಿ 7-6 (3), 6-4ರಿಂದ ಸೆಹವಾಗ್ ಎಂ. ಗೊವಿನ್ ವಿರುದ್ಧ, ಖಾಂಡವೇಲ್ ಎಂ. 6-2, 6-0ರಿಂದ ಯಶ್ ಪಂಚಾಕ್ಷರಿ ವಿರುದ್ಧ ಗೆದ್ದು ಸೆಮಿಫೈನಲ್ ತಲುಪಿದರು.

ಹರಪ್ರೀತ್, ಸಚಿನ್‌ಗೆ ಕಂಚು

ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್; ಜ್ಞಾನೇಂದ್ರಗೆ ಸೋಲು

ಉಲಾನ್‌ಬಾತರ್, ಮಂಗೋಲಿಯಾ (ಪಿಟಿಐ): ಸಚಿನ್ ಸಹ್ರಾವತ್ ಮತ್ತು ಹರ್‌ಪ್ರೀತ್ ಸಿಂಗ್ ಅವರು ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನ ಗ್ರೀಕೊ ರೋಮನ್ ವಿಭಾಗದಲ್ಲಿ ಬುಧವಾರ ಕಂಚಿನ ಪದಕ ಜಯಿಸಿದ್ದಾರೆ.

ಇದರೊಂದಿಗೆ ಈ ಚಾಂಪಿಯನ್‌ಷಿಪ್‌ನಲ್ಲಿ ಭಾರತ ತಂಡದವರು ಜಯಸಿದ ಪದಕಗಳ ಸಂಖ್ಯೆ ಐದಕ್ಕೇರಿದೆ.

67 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ಸಚಿನ್, ಕಂಚಿನ ಪದಕದ ಬೌಟ್‌ನಲ್ಲಿ 7-3ರಿಂದ ಉಜ್ಬೆಕಿಸ್ತಾನದ ಮಹಮೂದ್ ಬಕ್ಷಿಲ್ಲೊವ್ ಅವರನ್ನು ಸೋಲಿಸಿಸಿದರು.

82 ಕೆಜಿ ವಿಭಾಗದಲ್ಲಿ ಹರ್‌ಪ್ರೀತ್ ಸಿಂಗ್ ಸ್ಪರ್ಧಿಸಿದ್ದರು. ಕಂಚಿನ ಪದಕದ ಸುತ್ತಿನಲ್ಲಿ ಅವರ ಎದುರಾಳಿಯಾಗಿದ್ದ ಕತಾರ್‌ನ ಜಾಫರ್ ಖಾನ್ ಎಂ. ಖಾನ್ ಗಾಯದ ಕಾರಣ ಕಣಕ್ಕಿಳಿಯಲಿಲ್ಲ. ಹೀಗಾಗಿ ಅವರಿಗೆ ಪದಕ ಒಲಿಯಿತು.

60 ಕೆಜಿ ವಿಭಾಗದ ಕಂಚಿನ ಪದಕದ ಬೌಟ್‌ನಲ್ಲಿ ಜ್ಞಾನೇಂದ್ರ, ತಾಂತ್ರಿಕ ಶ್ರೇಷ್ಠತೆಯ ಆಧಾರದಲ್ಲಿ ಜಪಾನ್‌ನ ಆಯಾಟ ಸುಜುಕಿ ಎದುರು ಸೋತರು. ಕ್ವಾರ್ಟರ್‌ಫೈನಲ್‌ಗಳಲ್ಲಿ ವಿಕಾಸ್ (72 ಕೆಜಿ) ಉಜ್ಬೆಕಿಸ್ತಾನದ ಮಿರ್ಜಾಬೆಕ್ ರಖ್ಮತೊವ್ ಎದುರು, ರವಿ (97 ಕೆಜಿ) ಅವರು 1–3ರಿಂದ ಕಿರ್ಗಿಸ್ತಾನದ ಪೈಲ್ವಾನ ಯು. ಜುಜುಬೆಕೊವ್ ಎದುರು ನಿರಾಸೆ ಅನುಭವಿಸಿದರು.

ಗುರುವಾರದಿಂದ ಮಹಿಳೆಯರ ಸ್ಪರ್ಧೆಗಳು ಆರಂಭವಾಗಲಿವೆ. ಸರಿತಾ ಮೋರ್ ಮತ್ತು ಅನ್ಶು ಮಲಿಕ್ ಕಣದಲ್ಲಿದ್ದಾರೆ.

ಮಂಗಳವಾರ ಸುನಿಲ್ ಕುಮಾರ್ (87 ಕೆಜಿ), ಅರ್ಜುನ್ ಹಲಕುರ್ಕಿ (55 ಕೆಜಿ) ಮತ್ತು ನೀರಜ್ (63 ಕೆಜಿ) ಗ್ರೀಕೊ ರೋಮನ್ ವಿಭಾಗಗಳಲ್ಲೇ ಕಂಚು ಜಯಿಸಿದ್ದರು.

ಬಾಂಗ್ಲಾ ಕ್ರಿಕೆಟಿಗ ಮುಶ್ರಫ್ ನಿಧನ

ಢಾಕಾ (ಪಿಟಿಐ): ಬಾಂಗ್ಲಾದೇಶದ ಮಾಜಿ ಎಡಗೈ ಸ್ಪಿನ್ನರ್ ಮೊಶ್ರಫ್ ಹುಸೇನ್ (40) ಮಿದುಳು ಕ್ಯಾನ್ಸರ್‌ನಿಂದಾಗಿ ನಿಧನರಾದರು. ಬಾಂಗ್ಲಾದೇಶ ಕ್ರಿಕೆಟ್ ಮಂಡಳಿ (ಬಿಸಿಬಿ) ಮಂಗಳವಾರ ಟ್ವೀಟ್ ಮಾಡಿ ಈ ವಿಷಯ ತಿಳಿಸಿದೆ. ಅವರಿಗೆ ಪತ್ನಿ ಮತ್ತು ಮಗು ಇದೆ.

'ಎರಡು ದಶಕಗಳ ವೃತ್ತಿಜೀವನದಲ್ಲಿ ಎಲ್ಲ ಮಾದರಿಗಳು ಸೇರಿ ಮುಶ್ರಫ್ 550 ವಿಕೆಟ್ ಗಳಿಸಿದ್ದರು' ಎಂದು ಬಿಸಿಬಿ ಟ್ವೀಟ್ ಮಾಡಿದೆ.

2008ರಿಂದ 2016ರ ಅವಧಿಯಲ್ಲಿ ಮುಶ್ರಫ್ ಬಾಂಗ್ಲಾ ಪರ ಐದು ಏಕದಿನ ಪಂದ್ಯಗಳನ್ನು ಆಡಿ ನಾಲ್ಕು ವಿಕೆಟ್ ಗಳಿಸಿದ್ದರು. '2019ರ ಮಾರ್ಚ್‌ನಲ್ಲಿ ಮುಶ್ರಫ್ ಅವರಿಗೆ ಮಿದುಳು ಕ್ಯಾನ್ಸರ್ ಇರುವುದು ಪತ್ತೆಯಾಗಿತ್ತು' ಎಂದು ಕ್ರಿಕ್‌ಇನ್ಫೊ ವರದಿ ಮಾಡಿದೆ.

24ರಂದು ಬ್ಯಾಡ್ಮಿಂಟನ್ ಟೂರ್ನಿ

ಬೆಂಗಳೂರು: ಫ್ರೆಂಡ್ಸ್ ಅಸೋಸಿಯೇಷನ್ ಇದೇ 24ರಂದು ಮಾಗಡಿಯಲ್ಲಿ ರಾಜ್ಯಮಟ್ಟದ ಮುಕ್ತ ಷಟಲ್ ಬ್ಯಾಡ್ಮಿಂಟನ್ ಟೂರ್ನಿಯನ್ನು ಆಯೋಜಿಸಿದೆ.

ಮಾಗಡಿಯ ಟಿ.ಎ. ರಂಗಪ್ಪ ಲೇಔಟ್‌ನಲ್ಲಿ ಟೂರ್ನಿ ನಡೆಯಲಿದೆ. ನೋಂದಣಿ ಮತ್ತು ಹೆಚ್ಚಿನ ಮಾಹಿತಿಗಾಗಿ ಕಿರಣ್ (ಮೊ. ಸಂಖ್ಯೆ 6380005739), ಗೋವಿಂದರಾಜು (9740868894) ಅವರನ್ನು ಸಂಪರ್ಕಿಸಬೇಕು.

ಹೃದಯ ಸಂಬಂಧಿ ಕಾಯಿಲೆ: ಪ್ಯಾರಾ ಈಜುಪಟು ಅಮರ್ತ್ಯ ಸಾವು

ಕೋಲ್ಕತ್ತ (ಪಿಟಿಐ): ಮೂರು ಬಾರಿಯ ರಾಷ್ಟ್ರೀಯ ಪ್ಯಾರಾ ಈಜು ಚಾಂಪಿಯನ್ ಅಮರ್ತ್ಯ ಚಕ್ರವರ್ತಿ (19) ಅನಾರೋಗ್ಯದಿಂದ ಬುಧವಾರ ನಿಧನರಾದರು. ಐದು ವರ್ಷಗಳ ಹಿಂದೆ ಅವರನ್ನು ಸ್ಪರ್ಧೆಗೆ ಅನರ್ಹ ಎಂದು ಘೋಷಿಸಲಾಗಿತ್ತು.

2015, 2016 ಮತ್ತು 2017ರಲ್ಲಿ ಸಬ್‌ಜೂನಿಯರ್ ಮತ್ತು ಜೂನಿಯರ್ ವಿಭಾಗಗಳಲ್ಲಿ ಅಮರ್ತ್ಯ ಪ್ರಶಸ್ತಿ ಗೆದ್ದಿದ್ದರು.

ಪಶ್ಚಿಮ ಬಂಗಾಳದ ಹೌರಾ ಜಿಲ್ಲೆಯ ಸಾಲ್ಕಿಯಾದ ಅಮರ್ತ್ಯ ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದರು. ದೆಹಲಿಯ ಜಿ.ಬಿ. ಪಂತ್ ಆಸ್ಪತ್ರೆಯಲ್ಲಿ 'ಹಠಾತ್ ಹೃದಯ– ಉಸಿರಾಟ ಸ್ತಂಭನ'ದಿಂದ ನಿಧನರಾಗಿದ್ದಾರೆ.

ಅಮರ್ತ್ಯ ತಂದೆ ಅಮಿತೋಷ್, ತಮ್ಮ ಉದ್ಯೋಗದ ಉಳಿತಾಯದ ಹಣವನ್ನು ಖರ್ಚು ಮಾಡಿದರೂ ಮಗನನ್ನು ಉಳಿಸಿಕೊಳ್ಳಲಾಗದ ದುಃಸ್ಥಿತಿ ನೆನೆದು ಕಣ್ಣೀರಿಟ್ಟಿದ್ದಾರೆ. ಶವವನ್ನು ಕೋಲ್ಕತ್ತಕ್ಕೆ ಸಾಗಿಸಲೂ ತನ್ನ ಬಳಿ ಹಣವಿಲ್ಲ ಎಂದು ಅವರು ಅಲವತ್ತುಕೊಂಡಿದ್ದಾರೆ.

ಚಿಕಿತ್ಸೆಗಾಗಿ ಕ್ರೀಡಾ ಸಚಿವಾಲಯ ಕ್ಕೆ ಮನವಿ ಮಾಡಿಕೊಂಡಿದ್ದರೂ ನೆರವಿಗೆ ಬರಲಿಲ್ಲ ಎಂದು ಆರೋಪಿಸಿದ್ದಾರೆ.